ಸಂವಾದ

ಮೇ ೨೦೦೫ ರೂ. ೧೦

ಬುದ್ಧನ ಅರ್ಥಶಾಸ್ತ್ರ

ಸಂವಾದ

ಮಾಸ ಪತ್ರಿಕೆ

ಸಂಪುಟ ೩   ಸಂಚಿಕೆ ೭

ಮೇ ೨೦೦೫

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಕೆ. ಪುಟ್ಟಸ್ವಾಮಿ

ಡಿ. ಡೊಮಿನಿಕ್

ಬಿ.ಯು. ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ : ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿರಸ್ತೆ,

ವಿಶ್ವನೀಡಂ ಅಂಚೆ

ಬೆಂಗಳೂರು - ೫೬೦ ೦೯೧

✆ ೨೩೨೮೭೯೪೩ / ೯೪೪೮೦ ೪೮೩೦೬

ಇ-ಮೇಲ್ ವಿಳಾಸ : **samvaada@yahoo.co.in**

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANANAGAR, MAGADI ROAD

VISHWANEEDAM POST

BANGALORE - 560 091

✆ 080-23287943, 94480 48306

e- mail : samvaada@yahoo.co.in

EDITOR :

INDUDHARA HONNAPURA

ಒಳಪುಟಗಳಲ್ಲಿ...



❑ ವಿಶೇಷಾಂಕ ಪತ್ರಗಳು ೩

❑ ಪತ್ರಗಳು ೪

❑ ಅಂತರಂಗ ೫

❑ ಅಮೆರಿಕಾ : ಪ್ರಜಾಸತ್ತೆಯ ಅಣಕ ೬

○ ರಾಯ್ ಮತ್ತು ಜಯ

❑ ಪುರೋಹಿತಶಾಹಿಯ ಒಡಂಬಡಿಕೆ ೮

○ ಸದಾನಂದ ಸಿ. ಗಂಗನಬೀಡು

❑ ಸುನಾಮಿಯ ಸುತ್ತ... ೧೦

○ ನಾ. ದಿವಾಕರ

❑ ಧರ್ಮ ಮತ್ತು ಮೂಲಭೂತವಾದದ ತಿಕ್ಕಲುತನಗಳು ೧೪

○ ಡಾ॥ ಸೂರಮ್ಮನಹಳ್ಳಿ ಉಮೇಶ

❑ ದಲಿತರು ಮತ್ತು ಪರ್ಯಾಯ ರಾಜಕಾರಣ : ಪರ್ಯಾಯ ರಾಜಕಾರಣದ ತಾತ್ವಿಕತೆ ೧೮

○ ಡಾ॥ ಮೊಗಳ್ಳಿ ಗಣೇಶ್

❑ ಕುಸಿಯುತ್ತಿರುವ ಶಿವಸೇನೆ ! ೨೪

○ ಪಿ.ಎಂ.ಎನ್. ಮೂರ್ತಿ

❑ 'ನನಗೆ ಡಿಫೆನ್ಸ್ ಕೋರಿ ತಪ್ಪು ಮಾಡಿದ್ದೀರಿ' ಶಾಹಿದ್ ಭಗತ್‌ಸಿಂಗ್ ತಂದೆಗೆ ಬರೆದ ಪತ್ರ ೨೭

❑ ದಲಿತ್ ಡೈರಿ : ಜಾತಿ ಗಣರಾಜ್ಯಗಳ ರಾಜಕಾರಣ ೨೮

○ ಚಂದ್ರಭಾನ್ ಪ್ರಸಾದ್

❑ ಬುದ್ಧನ ಅರ್ಥಶಾಸ್ತ್ರ ೩೧

○ ಜಿ.ಎನ್. ಮಲ್ಲಿಕಾರ್ಜುನ

❑ ಮಹಿಳೆ ಮತ್ತು ಲೈಂಗಿಕ ಕಿರುಕುಳ ೩೪

○ ಶಿವರಾಜ ಬಿ.ಕೆ. ಮತ್ತು ವಿಠೋಬ ಭೀಮಣ್ಣ

❑ ದಲಿತರು ಸುಭದ್ರರಾಗಿರುವುದೆಲ್ಲಿ ? ೩೯

○ ಸಣ್ಣಂಗಿ ರಾಜ

❑ ಹೊಸ ಪುಸ್ತಕ ೪೩

ಕವನಗಳು : ❑ ಕಂದನಿಗೆ - ೧೬ ❑ ಹೆಜ್ಜೆಗಳು - ೧೭

❑ ಯಾವುದು ದೇವರ ಸೃಷ್ಟಿ - ೨೬ ❑ 'ಕನಕ' - ೩೩ ❑ ಕಂಗಾಲು - ೪೨

ಮುಖಪುಟ ಕಲೆ: ಹನ್ನೆರಡನೇ ಶತಮಾನದಲ್ಲಿ (1252) ಜಪಾನ್‌ನಲ್ಲಿ ಸ್ಥಾಪಿಸಲಾದ ಅಮಿತಾಭ (ಅಮಿದ ಬುದ್ಧ) ಪ್ರತಿಮೆ. ಕಂಚಿನ ಈ ಪ್ರತಿಮೆ 37.4 ಅಡಿ ಎತ್ತರವಿದ್ದು 93 ಟನ್ ತೂಕವುಳ್ಳದ್ದಾಗಿದೆ. ಇದರ ಶಿಲ್ಪಿ ಆಗಿನ ಪ್ರಸಿದ್ಧ ಶಿಲ್ಪಿಗಳಾದ ಓನೊ ಗೊರೊಮೋನ್ ಅಥವಾ ತ್ಸಂಜಿ ಹಿಸಾತೊಮೊ ಇರಬಹುದೆಂದು ನಂಬಲಾಗಿದೆ. ವಿನ್ಯಾಸ: ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ನಮ್ಮೊಳಗಿನ ಮೌನಕ್ಕೆ ಮಾತು ಕಲಿಸುವುದು : ಸಂವಾದ

'ಸಂವಾದ'ದಲ್ಲಿ ಏನಿದೆ ಎಂದು ಕೇಳಬೇಡಿ.
'ಸಂವಾದ'ದಲ್ಲಿ ಏನಿಲ್ಲ ಮೊದಲು ಯೋಚಿಸಿ ನೋಡಿ.
ಸತ್ಯವಿದೆ, ಸೌಂದರ್ಯವಿದೆ, ಸಂಸ್ಕೃತಿಯ ಸೃಷ್ಟಿಯಿದೆ, ವ್ಯಷ್ಟಿಯಿದೆ, ಸಮಷ್ಟಿಯಿದೆ, ಸಮಗ್ರ ಜೀವನ ದೃಷ್ಟಿಯಿದೆ'-

ಆತ್ಮೀಯ ಇಂದೂಧರ ಹೊನ್ನಾಪುರರಿಗೆ ವಂದನೆಗಳು.

ತಾವು ವಿಶ್ವಾಸವಿಟ್ಟು ಕಳುಹಿಸಿದ 'ಸಂವಾದ' ವಿಶೇಷಾಂಕ ತಲುಪಿತು. ವಿಶೇಷಾಂಕ ಸೊಗಸಾಗಿ ಮೂಡಿ ಬಂದಿದೆ. ಓದಿ ಸಂತೋಷವಾಯಿತು.

'ಸಂವಾದ' ಹುಟ್ಟಿದಾಗಿನಿಂದ ಅದರ ಮುಖದೊಳಗೆ ನನ್ನ ಮುಖ ನೋಡಿಕೊಳ್ಳುತ್ತಿರುವೆ. ಮೂರು ವರ್ಷಗಳಲ್ಲಿ 'ಸಂವಾದ' ನೂರಾರು ಅಲ್ಲ ಸಹಸ್ರಾರು ಜನರ ಕಣ್ಣು ತೆರೆಸಿದೆ ಎಂದರೆ ತಪ್ಪಾಗಲಾರದು.

'ಸಂವಾದ' ವಿಶೇಷಾಂಕದಲ್ಲಿ ಪ್ರಕಟಗೊಂಡ ವೈಚಾರಿಕ ಲೇಖನಗಳು ವಿಶಿಷ್ಟವಾಗಿದ್ದು ಅಧ್ಯಯನಕ್ಕೆ ಯೋಗ್ಯವೆನಿಸಿವೆ.

ತರೀಕೆರೆಯವರ 'ಮುಸ್ಲಿಮರ ಮುಂದಿರುವ ಆಯ್ಕೆಗಳು, ವಿ.ಎಸ್.ಶ್ರೀಧರರ ಪರ್ಯಾಯ ಸಂಸ್ಕೃತಿಯ ಲೇಖನ, ಡಾ|| ರಾಮಕೃಷ್ಣರ ಇತಿಹಾಸ ಅಧ್ಯಯನ, ಹಿರೇಮಠರ 'ದರ್ಶನಗಳಲ್ಲಿ ಕೆಳವರ್ಗದ ಆಶಯಗಳು' ಅಲ್ಲದೆ ಅಲ್ಲಮಪ್ರಭು ಬೆಟ್ಟದೂರ, ಕೆ.ಷರೀಫಾ, ಡಾ||ಬಂಜಗೆರೆ, ಡಾ|| ಮಲ್ಲಿಕಾ ಘಂಟಿ, ಡಾ|| ಮಲ್ಲೇಪುರಂ ಇವರ ಲೇಖನಗಳು ಹೊಸ ಒಳನೋಟಗಳನ್ನೊಳಗೊಂಡಿದ್ದು ಸಂಗ್ರಹಯೋಗ್ಯವಾಗಿದೆ. ಸಾರಾ ಅಬೂಬಕ್ಕರ್, ಮೊಗಳ್ಳಿ ಗಣೇಶ್, ಎಚ್.ನಾಗವೇಣಿ, ಪ್ರಹ್ಲಾದ ಅಗಸನಕಟ್ಟೆ, ಅಬ್ದುಲ್ ರಶೀದರ ಕತೆಗಳು ಮನೋಜ್ಞವಾಗಿವೆ. ಅನಂತಮೂರ್ತಿಯವರ ಸಂದರ್ಶನ ಚೆನ್ನಾಗಿದೆ. ಕವನಗಳು ವೈವಿಧ್ಯತೆಯಿಂದ ಕೂಡಿದ್ದು ಮನಸ್ಸನ್ನು ಸೆರೆ ಹಿಡಿಯುತ್ತವೆ. ಒಟ್ಟಿನಲ್ಲಿ ವಿಶೇಷಾಂಕ ಸಂಗ್ರಹ ಯೋಗ್ಯವೆನಿಸಿತು.

'ಸಂವಾದ' ತನ್ನ ಮೂರು ವರ್ಷದ ಅವಧಿಯಲ್ಲಿ ಪ್ರಚಲಿತ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ವಿಷಯಗಳ ಕುರಿತು ಸಂವಾದ ನಡೆಸಿ ಜನರ ಮನಸ್ಸನ್ನು ಹದಗೊಳಿಸಿದೆ.

ಚಂದ್ರಭಾನ್ ಪ್ರಸಾದರ ದಲಿತ್ ಡೈರಿ ಅದ್ಭುತವಾಗಿ ಮೂಡಿಬಂದಿದ್ದು ಅದೊಂದು ದಲಿತರ ಹೃದಯ ಡೈರಿಯಾಗಿದೆ. ಅನುಭವದ ಗಣಿಯಾಗಿದೆ.

ಪ್ರತಿ ಸಂಚಿಕೆಯಲ್ಲಿ ತಮ್ಮ ಅಂತರಂಗದಿಂದ ಮೂಡಿಬರುತ್ತಿರುವ ಸಂಪಾದಕೀಯ ಟೀಕೆ, ಟಿಪ್ಪಣಿಗಳು ತಮ್ಮ ವೈಚಾರಿಕ ಹೃದಯದ ಸಂಪನ್ಮೂಲಗಳಾಗಿವೆ. ದಲಿತ್ ಡೈರಿ, ಮತ್ತು ಸಂಪಾದಕೀಯ ಬರಹಗಳು ಗ್ರಂಥರೂಪದಲ್ಲಿ ಬಂದರೆ ಅಮೂಲ್ಯ ವೈಚಾರಿಕ ಗ್ರಂಥಗಳಾಗಿ ಜನರ ಮನೆ ಮತ್ತು ಮನಗಳಲ್ಲಿ ಉಳಿಯಬಹುದು.

'ಸಂವಾದ' ವೈಚಾರಿಕ, ರಾಜಕೀಯ ಚಳವಳಿಗಳಿಗೆ ಇಂಬು ನೀಡಿದೆ. ಪರ್ಯಾಯ ರಾಜಕಾರಣ ಕುರಿತು ಸುದೀರ್ಘ ಸಂವಾದ ನಡೆಸಿ, ದಲಿತ ಮತ್ತು ರೈತಸಂಘಟನೆಗಳನ್ನು ಒಗ್ಗೂಡಿಸಿ 'ಸರ್ವೋದಯ ಕರ್ನಾಟಕ' ಹುಟ್ಟು ಹಾಕುವಲ್ಲಿ 'ಸಂವಾದ' ಗಟ್ಟಿ ಕಾರ್ಯ ಮಾಡಿದೆ. ಅಲ್ಲದೆ ಅನೇಕ ಹಿರಿಯ, ಕಿರಿಯ ಲೇಖಕರು 'ಸಂವಾದ'ದಿಂದ ಹೊಸಹುಟ್ಟು ಪಡೆದಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು.

ಕರ್ನಾಟಕದಲ್ಲಿ ವೈಚಾರಿಕವಾಗಿ ಗಮನ ಸೆಳೆಯುವ ಪತ್ರಿಕೆಗಳೆಂದರೆ ಹೊಸತು ಮತ್ತು ಸಂವಾದ ಪತ್ರಿಕೆಗಳೆನ್ನಬಹುದು. ಇಂಥ ಪತ್ರಿಕೆಗಳು ಜೀವಂತವಿದ್ದರೆ ನಾಡಿನ ಯುವ ಚೇತನ ಜಾಗೃತವಾಗಿರುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ವೈಚಾರಿಕ ಜಗತ್ತು ಇಂಥ ಪತ್ರಿಕೆಗಳಿಗೆ ತನುಮನಧನದಿಂದ ಸಹಾಯ ಮಾಡಿ ಜೀವಂತವಾಗಿರಿಸಬೇಕು. ಪತ್ರಿಕೆಗಳು ಜೀವಂತವಿದ್ದರೆ ನಾವು ಜೀವಂತವಾಗಿರುತ್ತೇವೆ. ಇವುಗಳ ಉಳಿವು ನಮ್ಮ ವೈಚಾರಿಕ ಜಗತ್ತಿನ ಉಳಿವು.

'ನಮ್ಮೊಳಗಿನ ಮೌನಕ್ಕೆ ಮಾತು ಕಲಿಸುವುದು 'ಸಂವಾದ'
ನಮ್ಮೊಳಗಿನ ವಿಕಾರಕ್ಕೆ ಸುಂದರ ಆಕಾರ ನೀಡುವುದು 'ಸಂವಾದ'
ಚದುರಿದ ಮನಗಳನು ಒಗ್ಗೂಡಿಸುವುದು 'ಸಂವಾದ'
ಕತ್ತಲೆಯಲ್ಲಿ ಬೆಳಕಿನ ಗೂಡು ಕಟ್ಟುವುದು 'ಸಂವಾದ'

ಇಂಥ 'ಸಂವಾದ' ಸದಾ ನಮ್ಮ ನಿಮ್ಮ ಹೃದಯದ ಸಂವಾದವಾಗಿ ಚಿರಕಾಲ ಬಾಳಲಿ.

ಜಂಬಣ್ಣ ಅಮರಚಿಂತ, ರಾಯಚೂರು

ವಿಶೇಷಾಂಕ ಪತ್ರಗಳು

ನನ್ನ ಪ್ರಜ್ಞೆಯ ಒಂದು ಭಾಗ

ಪ್ರೀತಿಯ ಇಂದೂಧರ್ ಸಾರ್‌ಗೆ,

ವಾರ್ಷಿಕ ವಿಶೇಷಾಂಕದ ಬಗ್ಗೆ ಹಿಂದೆಯೇ ಬರೆಯಬೇಕೆಂದುಕೊಂಡಿದ್ದೆ ಸಾಧ್ಯವಾಗಲಿಲ್ಲ. ವರ್ಣರಂಜಿತ, ರಂಗೋಲಿ, ಹೊಸರುಚಿ ಫ್ಯಾಷನ್-ಡಿಸೈನ್ ವಿಶೇಷಾಂಕಗಳ ನಡುವೆ ನಿಜವಾದ ತಿಳವಳಿಕೆ ಹುಟ್ಟಿಸುವ 'ಸಂವಾದ'ದಂತಹ ವಿಶೇಷಾಂಕಗಳು ಇತರರಿಗೂ ಸ್ಫೂರ್ತಿಯಾದರೆ ಎಷ್ಟು ಚೆನ್ನ? ಹೊಸ ಸಾಧ್ಯತೆಗಳತ್ತ ನಡೆಯುತ್ತಲೇ ಇರುವ 'ಸಂವಾದ' ನನ್ನ ಪ್ರಜ್ಞೆಯ ಒಂದು ಭಾಗವಾಗಿದೆ ಎಂಬುದನ್ನು ಮತ್ತೊಮ್ಮೆ ನೆನಪಿಸುತ್ತಾ...

ಪ್ರೀತಿ ಇರಲಿ,

ಮಂಜುನಾಥ್ ಗೀತಾ, ನಂಜನಗೂಡು

ಮತ್ತೆ ಮತ್ತೆ ಓದುವಂತಹ ಲೇಖನಗಳು

ಪ್ರಿಯ ಶ್ರೀ ಇಂದೂಧರ ಹೊನ್ನಾಪುರ ಅವರಿಗೆ ನಮಸ್ಕಾರ.

ನಿಮ್ಮ ಪತ್ರ ತಲುಪಿದೆ. 'ಸಂವಾದ' ವಿಶೇಷಾಂಕ ಹಾಗೂ ಏಪ್ರಿಲ್ ಸಂಚಿಕೆ ಕೂಡ ತಲುಪಿದೆ. ಮತ್ತೆ ಮತ್ತೆ ಓದುವಂತಹ ಲೇಖನಗಳನ್ನೇ ನೀಡಿರುವಿರಿ. ಏಕೋ ಸುತ್ತಲಿನ ಪರಿಸ್ಥಿತಿ ತೃಪ್ತಿಕರವಾಗಿಲ್ಲ. ನಮ್ಮ ದಲಿತರೆಲ್ಲ ಪುರೋಹಿತ ಶಾಹಿಯ ಆಕರ್ಷಣೆಗೆ ಒಳಗಾಗುತ್ತಿದ್ದಾರೆ. ಅವರ ಮಾತು ಸಂಸ್ಕೃತಿ ಮರೆಯಾಗುತ್ತಿದೆ. ಬುದ್ಧಿ ಜೀವಿಗಳು ಪ್ರಶಸ್ತಿ ಪುರಸ್ಕಾರ, ರಾಜಕಾರಣಿಗಳ ಓಲೈಕೆಯಲ್ಲಿ ಮಗ್ನರಾಗಿದ್ದಾರೆ. ಕೋಮುಶಕ್ತಿಗಳು ದಿನದಿಂದ ದಿನಕ್ಕೆ ಪ್ರಬಲವಾಗುತ್ತ ಹೋಗುತ್ತಿವೆ.

ಇಂತಹ ಸಂದರ್ಭದಲ್ಲಿ ಸ್ಪಷ್ಟವಾಗಿ ಚಿಂತನೆ ಮಾಡುವ, ಮಾತನಾಡುವ ಪತ್ರಿಕೆಗಳು, ಜನ ಬೇಕಾಗಿದೆ. 'ಸಂವಾದ'ದಲ್ಲಿ ಅಂತಹ ಮಾತುಗಳನ್ನು ನೋಡಿ ಕೊಂಚ ನೆಮ್ಮದಿಯಾಗಿದೆ. ಕೆಲ ಲೇಖನಗಳು ೩-೪ ಪುಟಗಳಿಗೆ ವ್ಯಾಪಿಸಿಬಿಡುತ್ತವೆ. ಈ ಬಗ್ಗೆ ಕೊಂಚ ಗಮನಿಸಿ.

ಲೇಖನಗಳನ್ನು ಕಳುಹಿಸುತ್ತೇನೆ. ನನ್ನ ಕತೆಗೆ ಗೌರವಧನವನ್ನು ನೀವು ಕಳುಹಿಸುವ ಅವಶ್ಯಕತೆ ಇರಲಿಲ್ಲ.

ವಿಶ್ವಾಸವಿರಲೆಂದು,

ನಾ. ಡಿಸೋಜ,
ಸಾಗರ

ವಿಚಾರ ಶೂನ್ಯರ ಅದೃಷ್ಟ

ಹೃದಯ ಸ್ಪರ್ಶಿ ಇಂದೂಧರ ರವರಿಗೆ,

ನಿಮ್ಮ ಪತ್ರ ತಲುಪಿತು. ಸಂವಾದ ವಿಶೇಷಾಂಕಕ್ಕೆ ಬರೆದ ನನ್ನ ಲೇಖನಕ್ಕೆ ಸಂಭಾವನೆ ಕಳುಹಿಸುವುದಾಗಿ ತಿಳಿಸಿದ್ದೀರಿ. ದಯವಿಟ್ಟು ಕಳುಹಿಸಬೇಡಿ. ಪತ್ರಿಕೆಗೆ ಅದನ್ನು ಉಪಯೋಗಿಸಿಕೊಳ್ಳಿ. ಏಕೆಂದರೆ ಇಂತಹ ಧ್ವನಿ ಹುಟ್ಟಲಾರದೆಂಬ ನಿರಾಸೆಯಲ್ಲಿ ಇಂತಹ ಪತ್ರಿಕೆ ಹೊರಬರುತ್ತಿರುವುದು ನನ್ನಂತಹ ವಿಚಾರ ಶೂನ್ಯರ ಅದೃಷ್ಟ. ಸತ್ಯವು ಇಲ್ಲಿ ಜೀವಂತವಾಗಿರಬೇಕು! ಈ ಪತ್ರಿಕೆಯ ಸ್ಥಿತಿ ಉತ್ತಮವಾಗಿರಬೇಕೆಂದೂ ಹಲವು ಕಾಲ ಇದು ಬಾಳಬೇಕೆಂದೂ ನನ್ನ ಆಶಯ. ಈ ಆಶಯ ಅರ್ಧದಾರಿಯಲ್ಲಿ ಎಲ್ಲಿ ನಿಂತು ಹೋಗುವುದೋ ಎಂಬ ಭಯವೂ ನನ್ನನ್ನು ಕಾಡದೇ ಇಲ್ಲ. ದುಃಖಿತ, ಶೋಷಿತ, ಅಸಹಾಯಕಿತಪರ ಸಂವೇದನೆಗಳು ಈ ಪತ್ರಿಕೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕೈ ಜೋಡಿಸಬೇಕಾದ ಅವಶ್ಯಕತೆ ಜಾಸ್ತಿ ಇದೆ. ಇದರಲ್ಲಿ ಪ್ರಕಟಗೊಳ್ಳುತ್ತಿರುವ ಲೇಖನಗಳ ಓದು ದಲಿತರಲ್ಲಿ ಬೆಳೆಯಬೇಕಿದೆ. ಇನ್ನು ಮುಂದೆಯಾದರೂ ಹೀಗೆ ಆಗುವುದೇ ಎಂದು ಕಾದು ನೋಡಬೇಕು.

ವಂದನೆಗಳೊಂದಿಗೆ,

ಪದ್ಮಾಲಯಾ ನಾಗರಾಜ್,
ಮಾಲೂರು

ಧರ್ಮಕ್ಕಂಟಿರುವ ಮೂಲಭೂತವಾದದ ಸೋಂಕು

ಮಾನ್ಯರೇ,

ಇತ್ತೀಚೆಗಷ್ಟೇ ತಮಿಳುನಾಡಿನ ಮುನೆಲವು ಎಂಬಲ್ಲಿ ನಡೆದಿರುವಂತಹ ಹೃದಯ ವಿದ್ರಾವಕ ಘಟನೆಯ ಬಗ್ಗೆ ಪಿ.ಎಂ.ಎನ್. ಮೂರ್ತಿ ತಮ್ಮ ಲೇಖನದಲ್ಲಿ ತಿಳಿಸಿರುವುದನ್ನು ನೋಡಿದೆ.

ಮುನೆಲವು ಪಂಚಾಯಿತಿಯಲ್ಲಿ ನಡೆದಿರುವ ಹತ್ಯಾಕಾಂಡದ ಬಗ್ಗೆ ಪೊಲೀಸರಾಗಲೀ, ಸರ್ಕಾರವಾಗಲೀ, ಏನೂ ಕ್ರಮ ಕೈಗೊಳ್ಳದೆ ಕೋಮುವಾದಿಗಳೊಡನೆ ಕೈ ಜೋಡಿಸಿ ಕೇಸನ್ನು ಮುಚ್ಚಿ ಹಾಕಿರುವುದು ದಿಗ್ಭ್ರಮೆಯನ್ನುಂಟುಮಾಡಿದೆ.

ಎಂತಹ ಕ್ರೂರ ನಮ್ಮ ಈ ವ್ಯವಸ್ಥೆ. ಸ್ವಾತಂತ್ರ್ಯ ಬಂದು ಐದು ದಶಕಗಳೇ ಕಳೆದರೂ ದಲಿತರು ಇನ್ನೂ ವಿಮೋಚನೆಗೆ ಒಳಗಾಗಿಲ್ಲದಿರುವುದು ಏನನ್ನು ಸೂಚಿಸುತ್ತದೆ. ಇದನ್ನೆಲ್ಲಾ ನೋಡಿಕೊಂಡು, ಕೇಳಿಕೊಂಡು ಸುಮ್ಮನಿರಬೇಕೆ.

ಹಿಂದೂ ಮೂಲಭೂತವಾದಿಗಳು ದಲಿತರನ್ನು ಪ್ರಾಣಿಗಳಿಗಿಂತ ಕಡೆಯಾಗಿ ನಡೆಸಿಕೊಳ್ಳುತ್ತಿದ್ದರೂ ಬಹುತೇಕ ದಲಿತರು ನಾವೂ ಹಿಂದೂಗಳೇ ಎಂಬ ಭ್ರಮೆಯಲ್ಲಿ ಪುರೋಹಿತಶಾಹಿ ತಂತ್ರಗಳನ್ನು ಉಳಿಸಿಕೊಂಡು, ಬೆಳಸಿಕೊಂಡು ಹೋಗುತ್ತಿದ್ದಾರೆ.

'ಧರ್ಮ' ಎಂಬ ಪವಿತ್ರ ಕಲ್ಪನೆಗೆ ಮೂಲಭೂತವಾದದ ನಿವಾರಿಸಲಾಗದ ಸೋಂಕುರೋಗ ತಗುಲಿದೆ. 'ಧರ್ಮ' ಎಂದರೇನು? ಎಂಬ ಬಗ್ಗೆ ಚಿಂತಿಸದೆ ನಾನು ಹುಟ್ಟಿದ ಧರ್ಮ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಂದು ಹೇಳಿಕೊಂಡು ಕಿತ್ತಾಡುತ್ತಿರುವ ನಮಗೆ ಮುಕ್ತಿ ಎಲ್ಲಿಂದ ಸಾಧ್ಯ.

ಎಲ್ಲರೂ ತಮ್ಮ ನೈತಿಕ ಜವಾಬ್ದಾರಿಯನ್ನು ಮರೆತು ಸೀಮಿತ ಕಾರ್ಯದಲ್ಲಿ ತೊಡಗಿಕೊಂಡಿರುವ ಈ ಕಾಲದಲ್ಲಿ ಇಂತಹ ಘಟನೆಗಳ ವಿರುದ್ಧ ಹೋರಾಡಲು ಸಮಯವಾದರೂ ಎಲ್ಲಿ? ಹೋರಾಟವೂ ಒಂದು ಪ್ರೊಫೆಷನ್ ಆಗಿ ಬದಲಾಗಿರುವ ಕಾಲ ಇದು.

'ಕಾಳಿಂದಿಯ ಪ್ರವಾಹದಲಿ ಬಿದ್ದ ಬಡ ನರಿಯೊಂದು, ಊಳಿಡುತ್ತಿದೆ ಪ್ರಪಂಚ ಹಾಳಾಯ್ತು ಹಾಳಾಯ್ತೆಂದು, ಕ್ಷೇಮ ದಡದಲಿ ನಿಂತ ಜನ ನೋಡಿ ಗದರಿದರು, ಎಲ್ಲಿ ಹಾಳಾಯ್ತು ಮೂರ್ಖ ನರಿ ಬಾಯ್ಮುಚ್ಚೆಂದು' ಎಂಬ ಪ್ರೊ|| ಶಿವರಾಮಯ್ಯನವರ ಪದ್ಯ ನಮ್ಮ ವ್ಯವಸ್ಥೆಯ ಸ್ವರೂಪವನ್ನು ತಿಳಿಸುತ್ತದೆ.

ವೈಚಾರಿಕ ಕ್ರಾಂತಿ ಇನ್ನೂ ದೊಡ್ಡ ಮಟ್ಟದಲ್ಲಿ ಆಗಬೇಕು. ಆಗಷ್ಟೇ ಎಲ್ಲರೂ ಜಾಗೃತರಾಗಲು ಸಾಧ್ಯ ಎಂದೆನಿಸುತ್ತದೆ.

ವಂದನೆಗಳೊಂದಿಗೆ,

ಕಮಲ ತನಯ,
ಬೆಂಗಳೂರು

ಪತ್ರಾಗಾರ

ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

	೧ ವರ್ಷಕ್ಕೆ	೨ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ	ರೂ. ೧೦೦/-	ರೂ. ೨೦೦/-	ರೂ. ೫೦೦/-
ನೌಕರರು ಮತ್ತು ವೃತ್ತಿಪರರಿಗೆ	ರೂ. ೨೦೦/-	ರೂ. ೫೦೦/-	ರೂ. ೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ. ೨೫೦/-	ರೂ. ೬೦೦/-	ರೂ. ೧೦೦೦/-
ವಿಶೇಷ ಹಿತೈಷಿ ಚಂದಾದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಅಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ. /ಡಿ.ಡಿ. ಮಾತ್ರ ಕಳುಹಿಸಬೇಕು.

ಮಹತ್ಕಾರ್ಯಕ್ಕೆ ಅಭಿನಂದನೆ

ಪ್ರೀತಿಯ ಸಂಪಾದಕರೇ,

ಸಾವಿರ ಪಾಲಾಗಿರುವ ಪ್ರಗತಿಪರ ಸಂಘಟನೆಗಳನ್ನು ಒಗ್ಗೂಡಿಸಲೆತ್ನಿಸಿರುವ ನಿಮ್ಮ ಮಹತ್ಕಾರ್ಯಕ್ಕೆ ಅಭಿನಂದನೆಗಳು. ಎಡಪಂಥೀಯ ಸಂಘಟನೆಗಳೊಡಗೂಡಿ ಹೋರಾಟ/ಚಳವಳಿ ರೂಪಿಸಿದಲ್ಲಿ ಸಂಘಟನೆ ಹೆಚ್ಚು ಶಕ್ತಿಯುತವಾಗಿರುತ್ತದಲ್ಲವೇ'.

ಜಯ, ರಾಯಚೂರು

ಆದಿ ಉಡುಪಿ ಘಟನೆ ಮರುಕಳಿಸದಿರಲಿ

ಮಾನ್ಯ ಸಂಪಾದಕರಿಗೆ ವಂದನೆಗಳು.

ಆದಿ ಉಡುಪಿಯಲ್ಲಿ ನಡೆದ ಬೆತ್ತಲೆ ಪ್ರಕರಣವನ್ನು ಖಂಡಿಸಿ 'ಉಡುಪಿಯ ನಾಝಿಗಳು' ಎಂಬ ಸಂಪಾದಕೀಯ ಬರೆದಿದ್ದಕ್ಕೆ ಧನ್ಯವಾದಗಳು.

ಇಂತಹ ಘಟನೆಗಳು ನಮ್ಮ ದೇಶದಲ್ಲಿ ಇದೇ ಮೊದಲು ಕೊನೆಯದೇನಲ್ಲ. ಇವರಿಗೆಲ್ಲ ತಕ್ಕ ಪಾಠ ಕಲಿಸಬೇಕು.

ಬಾಬು, ತುರುವೇಕೆರೆ

ಪರ್ಯಾಯ ಸಮಾಜದ ಪರಿಕಲ್ಪನೆ ಸೂಚಿಸುವ 'ಸಂವಾದ'

ಮಾನ್ಯರೆ,

ನಿಮ್ಮ ಪತ್ರ ತಲುಪಿದೆ. 'ಸಂವಾದ' ವಿಶೇಷಾಂಕವನ್ನು ಚೆನ್ನಾಗಿಯೇ ರೂಪಿಸಿದ್ದೀರಿ. ನಿಮ್ಮೊಂದಿಗೆ ಪ್ರಗತಿಪರ ಗೆಳೆಯರ ಪಡೆಯೇ ಇರುವುದನ್ನು ಹಿಂದೆಯೇ ಗಮನಿಸಿದ್ದೆ.

ಇವತ್ತಿನ ಸ್ಥಿತ್ಯಂತರದ ಸಂದರ್ಭದಲ್ಲಿ 'ಸಂವಾದ' ದಂಥ ವೇದಿಕೆಯ ಅಗತ್ಯ ತುಂಬಾ ಇದೆ ಎಂದು ನನ್ನಂಥವರು ನಂಬಿದ್ದೇವೆ.

ಹೊಸ ತಲೆಮಾರಿನ ಓದುಗರಿಗೆ ಪರ್ಯಾಯ ಸಮಾಜದ ಪರಿಕಲ್ಪನೆಯನ್ನು ಸೂಚಿಸಲು; ಜಾಗತೀಕರಣದ ತೆಕ್ಕೆಯಲ್ಲಿ ಸಾಕಷ್ಟು ಗೊಂದಲಕ್ಕೊಳಗಾದ ಹೊಸ ಜನಾಂಗಕ್ಕೆ ಜನಪರ ಕಾಳಜಿಯನ್ನು ಇಂಜೆಕ್ಟ್ ಮಾಡುವ ಮೂಲಕ ಸೂಕ್ತ ರೀತಿಯಲ್ಲಿ ಆಲೋಚನೆ ಮಾಡ ಹಚ್ಚುವ ಜವಾಬ್ದಾರಿ 'ಸಂವಾದ' ಹೊತ್ತಿದೆ. ಈ ತೆರನಾದ ಪತ್ರಿಕಾ ಬರಹಗಳ ಜರೂರು ಇದೆ. ಆ ಕಾರಣಕ್ಕಾಗಿ ನಾನು 'ಸಂವಾದ'ವನ್ನು ಬೆಂಬಲಿಸುತ್ತಿರುವೆ. ವಿಶೇಷಾಂಕದ ಮಹತ್ವದ ಲೇಖನಗಳನ್ನು ನಾನಿನ್ನೂ ಓದಿ ಜೀರ್ಣಿಸಿಕೊಂಡಿಲ್ಲ. ಬೇರೆಯವರು ಒಯ್ದು ಈಗ ಹಿಂತಿರುಗಿಸಿದ್ದಾರೆ. ನಿಧಾನವಾಗಿ ಓದಿ ಅರಗಿಸಿಕೊಳ್ಳುವವ ನಾನು. ಹೀಗಾಗಿ ತಿಂಗಳು ಕಳೆದರೂ ಆ ಬಗ್ಗೆ ನಿಮಗೆ ಪ್ರತಿಕ್ರಿಯೆ ಬರೆದು ತಿಳಿಸಲಿಲ್ಲ.

ಸದರಿ ವಿಶೇಷಾಂಕದಲ್ಲಿ ಪ್ರಕಟಿಸಿದ ನನ್ನ ಟಿಪ್ಪಣಿಗೆ ನೀವು ಸಂಭಾವನೆ ಕಳಿಸಬೇಕಾಗಿಲ್ಲ. ನಾನದನ್ನು ನಿರೀಕ್ಷಿಸಿಯೂ ಇಲ್ಲ. ಒಟ್ಟಿನಲ್ಲಿ 'ಸಂವಾದ' ಗಟ್ಟಿಯಾಗಿ ಕಾಲೂರಲಿ, ಹೆಚ್ಚು ಹೆಚ್ಚು ಓದುಗರನ್ನು ಪಡೆದುಕೊಳ್ಳಲಿ ಎಂಬುದೇ ನನ್ನ ನಿರೀಕ್ಷೆ. ಆ ದಾರಿಯಲ್ಲಿ ಪ್ರಯತ್ನಿಸಲಿ ಎಂಬುದೇ ನನ್ನ ಆಪ್ತ ಸಲಹೆ.

ವಂದನೆಗಳೊಂದಿಗೆ,

ನಿಮ್ಮವ,

ಈರಪ್ಪ ಎಂ. ಕಂಬಳಿ, ಬೆಂಗಳೂರು

ರಾಜ್ಯಾದ್ಯಂತ ಪ್ರಚಾರವಾಗಲಿ

ಪ್ರಿಯರೆ, ನಮನಗಳು.

ತಮ್ಮ ಪತ್ರ ಬಂದಿದೆ.

ವಿಶೇಷಾಂಕ ತುಂಬ ಆಕರ್ಷಕವಾಗಿ, ಬೆಲೆಯುಳ್ಳ ವಿಚಾರಗಳಿಂದ ಕೂಡಿ ಮೈತುಂಬಿಕೊಂಡು ಬಂದಿದೆ. ಈ ಬಗೆಯ ಪತ್ರಿಕೆಗಳನ್ನು ಅಪೇಕ್ಷಿಸುತ್ತಿರುವ ಎಷ್ಟೋ ಜನಕ್ಕೆ ಇದು ತಲುಪುತ್ತಿಲ್ಲ ಎಂಬ ಬೇಸರ. ಇದಕ್ಕಾಗಿ ರಾಜ್ಯಾದ್ಯಂತ ಒಂದು ಕಾರ್ಯಕ್ರಮ ಮಾಡಿಕೊಂಡು ಪ್ರಸಾರ ಹೆಚ್ಚುವಂತೆ ಮಾಡುವುದು ಸೂಕ್ತವೇನೋ.

ನನಗೆ ಸಂಭಾವನೆ ಕಳಿಸುವುದಾಗಿ ತಿಳಿಸಿದ್ದೀರಿ. ದಯವಿಟ್ಟು ಸಂಭಾವನೆ ಕಳಿಸಬೇಡಿ. ನಾನೇ ಚಂದಾ ಬಾಕಿ ಇರುವಂತೆ ತೋರುತ್ತದೆ. ಎಷ್ಟೆಂದು ತಿಳಿಸಿದರೆ ಕೂಡಲೆ ಕಳಿಸುತ್ತೇನೆ. ಅನೇಕ ಜನಕ್ಕೆ 'ಸಂವಾದ'ದ ಬಗ್ಗೆ ಚಂದಾದಾರರಾಗುವ ಬಗ್ಗೆ ಹೇಳುತ್ತಿರುತ್ತೇನೆ. ತಮ್ಮ ಪ್ರಯತ್ನಗಳಿಗೆ ಎಲ್ಲ ಬೆಂಬಲ ಸೂಚಿಸುತ್ತ,

ಇತಿ ತಮ್ಮವ,

ಎಸ್.ಎಸ್. ಹಿರೇಮಠ, ಕೊಟ್ಟೂರು

ಸಂಪಾದಕೀಯ



ಅಂತರಂಗ

ನೈಸರ್ಗಿಕ ಕೃಷಿಯ ಪವಾಡ!

ಇದು ಸಾಧ್ಯವೇ ಎಂದು ಆಶ್ಚರ್ಯವಾಗುತ್ತದೆ. ಯಾವುದೇ ಗೊಬ್ಬರವಿಲ್ಲದೆ, ಕೀಟನಾಶಕವಿಲ್ಲದೆ ಸಮೃದ್ಧ ಫಸಲು! ರಾಸಾಯನಿಕ ಗೊಬ್ಬರವಷ್ಟೇ ಅಲ್ಲ, ಕೊಟ್ಟಿಗೆ ಗೊಬ್ಬರ ಕೂಡ ಇಲ್ಲ. ನೀರೂ ಶೇ. ೧೧ರಷ್ಟು. ಇದೇನು ಮಾಯೆಯೋ? ಪವಾಡವೊ? ರಸಗೊಬ್ಬರ, ಕೀಟನಾಶಕಗಳಿಗೆ ಒಗ್ಗಿ ಹೋಗಿರುವ ನಮ್ಮ ರೈತರು ಇದನ್ನು ಕೇಳಿ ನಂಬುವುದಾದರೂ ಹೇಗೆ? ಯಾರೋ ಹೇಳಿದರೆ ನಂಬುವುದೇನೋ ಕಷ್ಟ. ಆದರೆ ಪ್ರತ್ಯಕ್ಷವಾಗಿ ನೋಡಿದರೆ? ನಂಬುವುದಷ್ಟೇ ಅಲ್ಲ, ಹಿರಿ ಹಿರಿ ಹಿಗ್ಗಬೇಕಾಗುತ್ತದೆ. ಇದನ್ನು ಅನುಭವಿಸಬೇಕಾದರೆ ಮೈಸೂರು ಬಳಿಯ ಬನ್ನೂರಿನ ಕೃಷ್ಣಪ್ಪನವರ ತೋಟಕ್ಕೆ ಹೋಗಬೇಕು. ಕೃಷ್ಣಪ್ಪನವರ ತೋಟದ ಮೂರನೇ ಕೂಳೆ ಬಾಳೆ ಗಿಡದ ಗೊನೆ ೨೫ ರಿಂದ ೩೦ ಕೆ.ಜಿ. ತೂಗುತ್ತವೆ. ಬಾಳೆಮರ ಮಾಮೂಲಿ ಬಾಳೆ ಮರದ ಎರಡು ಮೂರರಷ್ಟು ದಪ್ಪ ಇವೆ. ಎಲ್ಲಕ್ಕಿಂತ ಹೆಚ್ಚಾಗಿ ಬಾಳೆ ಹಣ್ಣಿನಲ್ಲಿ ಯಾವುದೇ ರಾಸಾಯನಿಕಗಳು ಇಲ್ಲ, ಅಪ್ಪಟ ನೈಸರ್ಗಿಕ!

ವ್ಯವಸಾಯ ಲಾಭದಾಯಕವಲ್ಲ ಅನ್ನುವವರು ಕೃಷ್ಣಪ್ಪನವರ ಹತ್ತಿರ ಕುಳಿತು ಲೆಕ್ಕ ಹೇಳಿಸಿಕೊಳ್ಳಬೇಕು. ಕೃಷ್ಣಪ್ಪ ಇಷ್ಟು ದೊಡ್ಡ ಬಾಳೆ ಗೊನೆ ಬೆಳೆಯಲು ಮಾಡಿದ ಖರ್ಚೆಷ್ಟು ಗೊತ್ತೆ? ಕೇವಲ ಹದಿನೈದರಿಂದ ಇಪ್ಪತ್ತು ರೂಪಾಯಿ! ಹಸುವಿನ ಸಗಣಿ, ಗಂಜಲ, ಸ್ವಲ್ಪ ಬೆಲ್ಲ ಜತೆಗೆ ಒಂದಷ್ಟು ಕಾಳುಹಿಟ್ಟು ಒಂದು ಹಿಡಿ ಮಣ್ಣು ಮತ್ತು ನೀರು - ಇಷ್ಟಕ್ಕೆ ಎಷ್ಟು ಖರ್ಚಾಗಬಹುದು. ನೀವೇ ಅಂದಾಜು ಮಾಡಿ. ನಿಮಗೆ ಇನ್ನೂ ಮನದಟ್ಟಾಗದಿದ್ದರೆ ಕೃಷ್ಣಪ್ಪನವರ ಜತೆ ನಾಲ್ಕು ದಿನ ಕಳೆಯಿರಿ.

ಸಗಣಿ, ಗಂಜಲ, ಬೆಲ್ಲ, ಕಾಳಿನ ಹಿಟ್ಟು, ಮಣ್ಣು ಮತ್ತು ನೀರು ಇವಿಷ್ಟನ್ನು ಕಲಸಿ, ಕೊಳೆಸಿ 'ಜೀವಾಮೃತ' ಸಿದ್ಧಪಡಿಸಿಕೊಳ್ಳುತ್ತಾರೆ ಕೃಷ್ಣಪ್ಪ. ಅಗತ್ಯ ನೋಡಿಕೊಂಡು ತೋಟಕ್ಕೆ ಜೀವಾಮೃತವನ್ನು ಉಣಿಸುತ್ತಾರೆ. ಯಾರೂ ನಿರೀಕ್ಷಿಸದಷ್ಟು ಉತ್ತಮವಾಗಿ, ರೋಗರಹಿತವಾಗಿ ಗಿಡಗಳು ಬೆಳೆಯುತ್ತವೆ. ಒಂದು ಎಕರೆ ಭೂಮಿಗೆ ಹತ್ತು ಕೆ.ಜಿ ಸಗಣಿ, ಹತ್ತು ಕೆ.ಜಿ. ಗಂಜಲ, ೨ ಕೆ.ಜಿ. ಕಪ್ಪು ಬೆಲ್ಲ, ೨ ಕೆ.ಜಿ. ಬೇಳೆ ಕಾಳುಹಿಟ್ಟು, ಒಂದು ಹಿಡಿ ಜೀವಾಣು ಮಣ್ಣು (ತಾಯಿ ಬೇರಿನ ಹತ್ತಿರದ ಮಣ್ಣು) ಮತ್ತು ೨೦೦ ಲೀಟರ್ ನೀರು ಸಾಕು! ಇದು ಕೇವಲ ಬಾಳೆ ತೋಟಕ್ಕಲ್ಲ, ಯಾವುದೇ ಬೆಳೆಗಾದರೂ ಇದೇ ಪ್ರಯೋಗ!

ಈ ಅಮೂಲ್ಯ ಕೃಷಿ ಪದ್ಧತಿಯ ರೂವಾರಿ ಶ್ರೀ ಸುಭಾಷ್ ಪಾಳೇಕರ್. ಸುಭಾಷ್ ಮಹಾರಾಷ್ಟ್ರದ ಅಮರಾವತಿಯವರು. ಕೃಷಿ ವಿಶ್ವವಿದ್ಯಾಲಯದ ಪದವಿ ಪಡೆದವರು. ಎಲ್ಲ ಕೃಷಿ ಪಂಡಿತರಂತೆ ಸುಭಾಷ್ ಬಹುರಾಷ್ಟ್ರೀಯ ಕಂಪೆನಿಗಳ ವೈಜ್ಞಾನಿಕ ವಕ್ತಾರರಾಗಲಿಲ್ಲ, ಬದಲಾಗಿ ಭಾರತೀಯ ಕೃಷಿ ಪದ್ಧತಿಯನ್ನು ತೀವ್ರವಾಗಿ ಅಧ್ಯಯನ ಮಾಡಿದರು. ಹತ್ತಾರು ವರ್ಷ ತಮ್ಮ ಹೊಲದಲ್ಲೇ ನೈಸರ್ಗಿಕ ಕೃಷಿ ಸಂಶೋಧನೆಯನ್ನು ಕೈಗೊಂಡರು. ಮನುಷ್ಯ ಪ್ರಯತ್ನವೇ ಇಲ್ಲದೆ ಬೆಳೆಯುವ ಗಿಡ ಮರ ಬಳ್ಳಿಗಳ ಬಗ್ಗೆ ಅಧ್ಯಯನ ಮಾಡಿ ನೈಸರ್ಗಿಕ ಕೃಷಿಯ ಹೊಸ ಸಾಧ್ಯತೆಗಳನ್ನು ಕಂಡುಕೊಂಡರು. 'ಜೀವಾಮೃತ'ದ ಆವಿಷ್ಕಾರ ಮಾಡಿದರು.

ಸ್ವಾತಂತ್ರ್ಯಾನಂತರದ ಭಾರತದಲ್ಲಿ 'ಹಸಿರು ಕ್ರಾಂತಿ' ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ಇಡೀ ದೇಶವನ್ನೇ ಆತ್ಮಹತ್ಯೆಗೆ ದೂಡಿದವು. ಹಸಿರು ಕ್ರಾಂತಿ ಹೆಸರಿನಲ್ಲಿ ದೇಶದಲ್ಲಿ ಆಹಾರ ಧಾನ್ಯದ ಉತ್ಪಾದನೆಯೇನೋ ಹೆಚ್ಚಾಯಿತು. ಹಸಿವಿನಿಂದ ಬಳಲುವವರ ಸಂಖ್ಯೆಯೂ ಇಳಿಮುಖವಾಯಿತು. ದೇಶ ಕಂಡು ಕೇಳರಿಯದ ಸಂಕರ ಬೀಜಗಳು ಬಂದವು. ರಸಗೊಬ್ಬರ ಬಂದಿತು. ಕೀಟನಾಶಕ ವಿಷವೂ ಬಂದಿತು. ಅದರೊಂದಿಗೆ ತಿನ್ನುವ ಅನ್ನವೂ ವಿಷವಾಗತೊಡಗಿತು. ಮನುಷ್ಯನ ಆರೋಗ್ಯ ಹದಗೆಡತೊಡಗಿತು. ದೈಹಿಕ ಅಶಕ್ತತೆ, ನ್ಯೂನತೆಗಳು ಹೆಚ್ಚಾಗತೊಡಗಿದವು. ಈಚೆಗಂತೂ ಮರುಹುಟ್ಟಿನ ಶಕ್ತಿಯೇ ಇಲ್ಲದ ಕುಲಾಂತರಿ ತಳಿ ಬೀಜಗಳು ಬಂದು ಇಡೀ ಕೃಷಿ ಪದ್ಧತಿ 'ನಪುಂಸಕ' ಸ್ಥಿತಿ ಮುಟ್ಟುವಂತಾಗಿದೆ.

ಈಗ ರೈತರು ಅನುಸರಿಸುತ್ತಿರುವ ಪದ್ಧತಿಯಲ್ಲಂತೂ ವ್ಯವಸಾಯ ಲಾಭದಾಯಕವಲ್ಲ. ವ್ಯವಸಾಯಕ್ಕೆ ಬೇಕಾದ ಎಲ್ಲ ಮೂಲ ವಸ್ತುಗಳು ರೈತನ ಕೈಗೆ ಎಟುಕದಷ್ಟು ಮೇಲಿವೆ. ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕ ಎಲ್ಲವೂ ರೈತನ ಧೈರ್ಯಗೆಡಿಸುತ್ತವೆ. ಇಷ್ಟೆಲ್ಲದರ ನಡುವೆ ಬದುಕು ತೇದು ರೈತ ಬೆಳೆದ ಬೆಳೆಗೆ ನ್ಯಾಯಯುತವಾದ ಬೆಲೆ ಸಿಗದೆ ಆತ ಕಂಗಾಲಾಗುತ್ತಾನೆ. ಬೀಜಕ್ಕೆ, ರಸಗೊಬ್ಬರಕ್ಕೆ, ಕೀಟನಾಶಕಕ್ಕೆ ಮಾಡಿದ ಸಾಲ ಆತನ ಹೆಗಲಿಗೇರುತ್ತದೆ. ಇದರಿಂದ ಪಾರಾಗಲು ದಾರಿ ಇಲ್ಲದ ಆತ ನೇಣಿಗೆ ಕೊರಳೊಡ್ಡುತ್ತಾನೆ. ಇಲ್ಲವೆ ಅಳಿದುಳಿದ ಕೀಟನಾಶಕ ಕುಡಿದು ಸಾಯುತ್ತಾನೆ.

ಹಾಗಾದರೆ ರೈತರಿಗೆ ಇದರಿಂದ ಮುಕ್ತಿಯೇ ಇಲ್ಲವೆ? ಇದೇ ಪ್ರಶ್ನೆಯನ್ನು ಸುಭಾಷ್ ಪಾಳೇಕರ್ ಅವರಿಗೆ ಕೇಳಿದರೆ ಅವರು ಸಿಟ್ಟಾಗುತ್ತಾರೆ. ಕೃಷಿಗೆ ದೇಶೀಯ ನೈಸರ್ಗಿಕ ಪದ್ಧತಿ ಅಳವಡಿಸುವ ಕುರಿತು ದಿನಗಟ್ಟಲೆ ಮಾಹಿತಿ ಒದಗಿಸುತ್ತಾರೆ. ಗ್ರಾಮೀಣ ಭಾರತ ನಿಜವಾಗಿ ಉಳಿಯಬೇಕಾದರೆ ಇಡೀ ಸಮಾಜ ಈಗ ನೈಸರ್ಗಿಕ ಕೃಷಿಯತ್ತ ಹೊರಳಲೇಬೇಕಾದ ಅನಿವಾರ್ಯತೆಯನ್ನು ಮನದಟ್ಟು ಮಾಡಿಕೊಡುತ್ತಾರೆ. ಕಳೆದ ಹತ್ತಾರು ವರ್ಷಗಳ ತಮ್ಮ ದೀರ್ಘ ಅನುಭವ ಸಂಶೋಧನೆಗಳನ್ನು ಅವರು ಸಮಾಜಕ್ಕೆ ಧಾರೆ ಎರೆಯಲು ದೇಶಾದ್ಯಂತ ಸಂಚರಿಸುತ್ತಿದ್ದಾರೆ.

ಕೃಷಿ ಮೇಲೆ ಬಂಡವಾಳ ಹಾಕಿ ಬೀದಿ ಪಾಲಾಗುವ ರೈತರಿಗೆ ಉಳಿದಿರುವ ಏಕೈಕ ದಾರಿ ಪಾಳೇಕರರ 'ನೈಸರ್ಗಿಕ ಕೃಷಿ'ಯಾಗಿದೆ.

ಮೂರನೇ ಜಗತ್ತಿನ ಎಲ್ಲ ರಾಷ್ಟ್ರಗಳನ್ನು ಬಲಿ ತೆಗೆದುಕೊಳ್ಳುತ್ತಿರುವ ಜಾಗತೀಕರಣಕ್ಕೆ ಬಲವಾದ ಪೆಟ್ಟುಕೊಡಲು ಸುಲಭ ಅಸ್ತ್ರವಾಗಿ ಈ 'ನೈಸರ್ಗಿಕ ಕೃಷಿ' ಪದ್ಧತಿ ಬಳಸುವುದು ಅತ್ಯಂತ ಸೂಕ್ತವಾದುದು. ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಹಲವು ಹುನ್ನಾರಗಳ ಮೂಲಕ ದೇಶದ ಆರ್ಥಿಕ ವಯಲವನ್ನು ಸಂಪೂರ್ಣ ಹಿಡಿತಕ್ಕೆ ತೆಗೆದುಕೊಳ್ಳುವ ಪ್ರಯತ್ನದಲ್ಲಿವೆ. ಅವು ತಮ್ಮ ಪಿತೂರಿಯಲ್ಲಿ ಯಶಸ್ವಿಯಾಗುವ ಮುನ್ನ ಭಾರತ ಸರ್ಕಾರವೂ ಸೇರಿದಂತೆ ಎಲ್ಲ ಜನಪರ ವ್ಯಕ್ತಿ ಶಕ್ತಿ ಸಂಘಟನೆಗಳು ಎಚ್ಚೆತ್ತುಕೊಳ್ಳಬೇಕಾಗಿದೆ. ನೈಸರ್ಗಿಕ ಕೃಷಿಯನ್ನು ರಾಷ್ಟ್ರೀಯ ಆಂದೋಲನವಾಗಿ ರೂಪಿಸಿ ಪ್ರತಿ ಗ್ರಾಮಕ್ಕೂ ಇದು ಮುಟ್ಟುವಂತೆ ನೋಡಿಕೊಳ್ಳಬೇಕಾದ ತುರ್ತು ಮತ್ತು ಅನಿವಾರ್ಯತೆ ನಮ್ಮ ಮುಂದಿದೆ.

ಎಲ್ಲ ಜನಪರ ಸಂಘಟನೆಗಳು, ಸ್ವಯಂ ಸೇವಾ ಸಂಸ್ಥೆಗಳು, ಬುದ್ಧಿಜೀವಿಗಳು, ಸಮಾಜ ಸೇವಾ ಕರ್ತರು, ವಿದ್ಯಾರ್ಥಿ-ಯುವ ಜನರು ಇದಕ್ಕೆ ಮುಂದಾಗಬೇಕೆಂದು 'ಸಂವಾದ' ಹಂಬಲಿಸುತ್ತದೆ.

ನೈಸರ್ಗಿಕ ಕೃಷಿ ಪದ್ಧತಿ ವಿವರಗಳಿಗೆ, ಕರ್ನಾಟಕದಲ್ಲಿ **ಶ್ರೀ ಬಸವರಾಜ ತಂಬಾಕೆ, ತಾಳಮಡಗಿ, ಬೀದರ ಜಿಲ್ಲೆ ದೂರವಾಣಿ : 94483 49823 ಅಥವಾ ಶ್ರೀ ಸುಭಾಷ್ ಪಾಳೇಕರ್, ಲೈನ್ ನಂ.5, ನಮೂನಾ ಪೇಠ, ಅಮರಾವತಿ, ಮಹಾರಾಷ್ಟ್ರ - 444 601, ದೂರವಾಣಿ : 0721-2652 108** ಇವರನ್ನು ಸಂಪರ್ಕಿಸಬಹುದು.

○ ಇಂದೂಧರ ಹೊನ್ನಾಪುರ

ಅಮೆರಿಕಾ : ಪ್ರಜಾಸತ್ತೆಯ ಅಣಕ

ಇರಾಕ್‌ನ ಅಬುಗ್ರಾಯಿಬ್ ಬಂಧೀಖಾನೆಯಲ್ಲಿ ಅಮೆರಿಕಾದ ಸೈನಿಕರು ಮಾನವ ಜನಾಂಗ ಹಿಂದೆಂದೂ ಕೇಳರಿಯದ ನಾಚಿಕೆಗೇಡಿನ ಹಿಂಸಾಕೃತ್ಯಗಳನ್ನು ಬಂಧಿಗಳ ಮೇಲೆ ನಡೆಸುತ್ತಿದ್ದದ್ದು ಜಗಜ್ಜಾಹೀರಾದ ಕೂಡಲೆ 'ಅಮೆರಿಕನ್ ಮೌಲ್ಯಗಳು' ಉಲ್ಲಂಘನೆಯಾಗುತ್ತಿವೆಯೆಂದು ಅಮೆರಿಕನ್ ಪ್ರಭುತ್ವ ಆಶ್ಚರ್ಯಗೊಂಡಂತೆ ನಟಿಸುತ್ತಿರುವುದು ಬೂಟಾಟಿಕೆಯೇ ಸರಿ. ಇರಾಕ್‌ನ ಅಬುಗ್ರಾಯಿಬ್, ಕ್ಯೂಬಾದ ಗ್ವಾಂಟೋನಾಮೊ, ಯುಗೋಸ್ಲೋವಿಯಾದ ಬೆಲ್‌ಗ್ರೇಡ್, ಆಫ್ಘಾನೀಸ್ತಾನ ಮತ್ತು ಜಗತ್ತಿನ ಇತರೆಡೆಯಲ್ಲೆಲ್ಲ ಅಮೆರಿಕಾ ನಡೆಸುತ್ತಿರುವ ಹಿಂಸಾಕೃತ್ಯಗಳು ಗೊತ್ತಿರುವುದೇ ಆದರೂ ಇಂತಹುದೇ ಪಾತಕಿ ಕೃತ್ಯಗಳು ಅಮೆರಿಕಾದ ಹೃದಯ ಭಾಗಗಳಲ್ಲೇ ನಡೆಯುತ್ತಿರುವುದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ.

ಇರಾಕಿ ಜನರಿಗೆ, ಅರಬ್ಬರಿಗೆ, ಮಧ್ಯ ಅಮೆರಿಕಾ, ದಕ್ಷಿಣ ಅಮೆರಿಕಾ, ಲ್ಯಾಟಿನ್ ಅಮೆರಿಕಾ, ಕೆರೆಬಿಯನ್, ಉತ್ತರ ಕೊರಿಯಾ, ವಿಯೆಟ್ನಾಂ ಮತ್ತು ಹಲವು ಇನ್ನಿತರ ಜನರಿಗೆ ನಾಗರಿಕ ಸಮಾಜದ ಲವಲೇಶ ಗಂಧಗಾಳಿಯೂ ಗೊತ್ತಿಲ್ಲದ್ದರಿಂದ ಇವರಿಗೆಲ್ಲ ಪ್ರಜಾಪ್ರಭುತ್ವದ ಪ್ರಾಥಮಿಕ ಪಾಠಗಳನ್ನು ಶ್ವೇತಭವನ, ಪೆಂಟಗಾನ್ ಮತ್ತು ಸಿ.ಐ.ಎಯಲ್ಲಿರುವ ಅಮೆರಿಕಾದ ಪ್ರೊಫೆಸರ್‌ಗಳು ಕಲಿಸಬೇಕಾಗಿದೆಯೆಂದು ಹೇಳಲಾಗುತ್ತಿದೆ. ಕಂದು, ಕಪ್ಪು ಮತ್ತು ಹಳದಿ ಬಣ್ಣದ ಜನರಿಗೆ ತಮ್ಮನ್ನು ತಾವು ಆಳುವ ಕಲೆ ಸ್ವಲ್ಪವೂ ಗೊತ್ತಿಲ್ಲ ಮತ್ತು ಅವರಿಗೆ ಯಾವುದು ಒಳ್ಳೆಯದೆಂಬ ತೀರ್ಮಾನ ಕೂಡ ತೆಗೆದುಕೊಳ್ಳಲಾರದಷ್ಟು ದಡ್ಡರು ! ಲೆನಿನ್, ಸ್ಟಾಲಿನ್, ಮಾವೊ-ತ್ಸೆ-ತುಂಗ್, ಹೊಚಿಮಿನ್, ಕಿಮ್ II ಜಾಂಗ್, ಸ್ಲಪಬೊದನ್ ಮಿಲೊಸೊವಿಕ್, ಫಿಡೆಲ್ ಕ್ಯಾಸ್ಟ್ರೋ ತರಹದ ಕೊಲೆಪಾತಕರು ಮತ್ತು ಕ್ರೂರ ಸರ್ವಾಧಿಕಾರಿಗಳ ತೆಕ್ಕೆಗೆ ಜನರು ಸಿಕ್ಕಿಕೊಳ್ಳುತ್ತಿದ್ದಾರೆಂದು ಪ್ರತಿಬಿಂಬಿಸುತ್ತಾ ಸತ್ಯವನ್ನು ತಿರುಚುತ್ತಿದ್ದಾರೆ. ಆದರೆ ಅಬುಗ್ರಾಯಿಬ್‌ನಲ್ಲಿನ ಮನೋವಿಕೃತ ಹಿಂಸೆ ಮತ್ತು ದೌರ್ಜನ್ಯಗಳು ಅಮೆರಿಕಾದೊಳಗಿನ ಘಟನೆಗಳ ಪ್ರತಿಫಲನವಷ್ಟೇ ಎಂಬುದನ್ನು ಅರಿಯಬೇಕಿದೆ.

೨೮ ಕೋಟಿ ಜನಸಂಖ್ಯೆ ಮಾತ್ರವಿರುವ ರಾಷ್ಟ್ರದಲ್ಲಿ ಜೈಲುಗಳ ಸಂಖ್ಯೆ ೧೦೨೫ ನ್ನು ಮೀರುತ್ತದೆ ಮತ್ತು ೫೦೦ ಹೊಸ ಖಾಸಗಿ ಜೈಲುಗಳನ್ನು ನಿರಂತರವಾಗಿ ನಿರ್ಮಿಸಲಾಗುತ್ತಿದೆ. ಬಂಧಿಗಳ ಸಂಖ್ಯೆ ೨೧ ಲಕ್ಷಕ್ಕಿಂತ ಹೆಚ್ಚಿದೆ. ಜಾರ್ಜ್ ಬುಷ್ ವಂಶಸ್ಥರ ರಾಜ್ಯವಾದ ಟೆಕ್ಸಾಸ್ ಒಂದರಲ್ಲೇ ಇಡಿ ರಷ್ಯಾಕ್ಕಿಂತ ಹೆಚ್ಚು ಬಂಧಿಗಳಿದ್ದಾರೆ. ಓಬ್ರಿಯಾನ್ (ಸಮಾಜದಲ್ಲಿ ಕುಟುಂಬಗಳು ೮೨, ೨೦೦೧) ರವರ ಪ್ರಕಾರ ಜಗತ್ತಿನ ಒಟ್ಟಾರೆ ೮೦ ಲಕ್ಷ ಖೈದಿಗಳಲ್ಲಿ ಅಮೆರಿಕಾವೊಂದೇ ಶೇ ೨೫ ರಷ್ಟನ್ನು ಹೊಂದಿದೆ.

ಜೈಲಿನಲ್ಲಿರುವ ಪುರುಷರು ಮತ್ತು ಮಹಿಳೆಯರಲ್ಲಿ ಬಹುತೇಕರು, ೧೮ ವರ್ಷದೊಳಗಿನ ಮಕ್ಕಳನ್ನು ಹೊಂದಿದವರಾಗಿದ್ದಾರೆ. ಅಂದಾಜು ೧೫ ಲಕ್ಷ ಮಕ್ಕಳ ತಂದೆ ತಾಯಿಗಳು ಜೈಲಿನಲ್ಲಿದ್ದಾರೆ. ಇದೆಲ್ಲವೂ ಮಕ್ಕಳ ಮೇಲೆ ಎಂತಹ ವ್ಯತಿರಿಕ್ತ ಪರಿಣಾಮ ಬೀರುತ್ತದೆಂಬುದನ್ನು ಊಹಿಸಬಹುದು. 'ಕಿರುಚಾಟದ ಮನೆ' ಎಂದೇ ಕುಖ್ಯಾತಿ ಪಡೆದಿರುವ ಇಲ್ಲಿನ ನಾಯ್ಸ್ ಜೈಲಿನಲ್ಲಿ ಜನನಾಂಗಗಳಿಗೆ, ಕಿವಿ ಮತ್ತು ಇತರೆ ಅಂಗಗಳಿಗೆ ವಿದ್ಯುತ್ ಶಾಕ್ ಕೊಡುವುದು, ಉಸಿರುಗಟ್ಟಿಸುವುದು, ಮತ್ತು ನೀರಲ್ಲಿ ಮುಳುಗಿಸುವುದು ನಿರಂತರ ನಡೆವಳಿಯಾಗಿದೆ. ಅಮ್ನೆಸ್ಟಿ ಅಂತರಾಷ್ಟ್ರೀಯ ವರದಿ ಪ್ರಕಾರ ೮ ಸೆಕೆಂಡಿಗೆ ೫೦,೦೦೦ ವೋಲ್ಟ್ ಶಾಕ್ ನೀಡಿ ದಿಢೀರ್ ಸಾಮರ್ಥ್ಯ ಕುಗ್ಗಿಸುವ ವಿದ್ಯುತ್ ಶಾಕ್ ಆಯುಧಗಳನ್ನು ಅಮೆರಿಕಾದ ಖೈದಿಗಳು ಧರಿಸಿಕೊಳ್ಳುವಂತೆ ಮಾಡಲಾಗುತ್ತದೆ. ಅರಿಜೋನಾ ಜೈಲಿನಲ್ಲಿ ಮಹಿಳೆಯರ ಕಂದುಬಣ್ಣದ ಒಳಉಡುಪಿನಲ್ಲಿ ಬೆತ್ತಲೆ ನಿಲ್ಲಿಸಲಾಗುತ್ತದೆ. ಕ್ಯಾಲಿಫೋರ್ನಿಯಾ ಜೈಲಿನಲ್ಲಿ ಪುರುಷ ಖೈದಿಗಳನ್ನು ಅತ್ಯಾಚಾರ ಮಾಡಲು 'ಬೂಟಿ ಬಂಡಿಟ್' ಎಂಬ ವ್ಯಕ್ತಿಗಳನ್ನು ಬಳಸಲಾಗುತ್ತದೆ. ೧೯೯೩ರ ಅಮ್ನೆಸ್ಟಿ ಅಂತರಾಷ್ಟ್ರೀಯ ವರದಿಯು 'ಖೈದಿಗಳು ಬೆಳಕನ್ನೇ ಕಾಣುವುದಿಲ್ಲ, ಅವರನ್ನು ನಿರಂತರ ವಿದ್ಯುತ್ ಪರಿವೀಕ್ಷಣೆಯಲ್ಲಿಡಲಾಗುತ್ತದೆ. ಕೆಲವರು ಗಂಭೀರವಾದ ದೈಹಿಕ ಹಾಗೂ ಮಾನಸಿಕ ಹಿಂಸೆ ಮತ್ತು ಕ್ಷೋಭೆಗೊಳಗಾಗಿ ಹುಚ್ಚರಾಗುತ್ತಾರೆ. ಸಲಿಂಗ ಅತ್ಯಾಚಾರ, ವಿಭಿನ್ನ ಲಿಂಗ ಅತ್ಯಾಚಾರ, ಹಿಂಸಾತ್ಮಕ ವರ್ಣಭೇದ ಬಿಕ್ಕಟ್ಟು ಮತ್ತು ದೌರ್ಜನ್ಯಗಳಿಗೆ ಪ್ರೋತ್ಸಾಹಿಸಲಾಗುತ್ತದೆ' ಎಂದು ತಿಳಿಸಿದೆ.

ಸಿಐಎಯ ಹಿಂಸೆಕೋರ ತಂತ್ರಗಳು ಕಳೆದ ೫೦ ವರ್ಷಗಳಿಂದ ಕಂಡು ಹಿಡಿಯಲಾಗದ ಕ್ಯಾನ್ಸರ್‌ನಂತೆ ವ್ಯಾಪಕವಾಗಿವೆ. ಹುಚ್ಚಿಡಿಸುವ ಮಾದಕ ದ್ರವ್ಯಗಳು, ವಿದ್ಯುತ್ ಶಾಕ್ ಮತ್ತು ಇಂದ್ರಿಯ ನಾಶದ ಪ್ರಯೋಗದ ನಂತರ ನಿದ್ರೆ ನಾಶ ಮತ್ತು ಲೈಂಗಿಕ ಹೀನತೆಗಳಂತಹ ಮಾನಸಿಕ ಹಿಂಸಾ ವಿಧಾನಗಳನ್ನು ಸಿಐಎ ಸಂಶೋಧನೆ ಕಂಡುಕೊಂಡಿತು. ಅಮೆರಿಕಾ ನಾಯಕರ ಮತ್ತು ಅಧಿಕಾರಿಗಳ ಮನೋವಿಕೃತ ಸ್ವಭಾವವನ್ನು ಸವಿಸ್ತಾರವಾಗಿ 'ದಿ ರೋಗ್ ಸ್ಟೇಟ್' ಎಂಬ ಪುಸ್ತಕದಲ್ಲಿ ಎಳೆಎಳೆಯಾಗಿ ವಿಲಿಯಮ್ ಬ್ಲುಮ್‌ರವರು ಬಿಡಿಸಿಟ್ಟಿದ್ದಾರೆ.

ಕಲ್ಲುಗಳಿಂದ ಹೊಡೆದು ತನ್ನ ಹೆತ್ತ ಮಕ್ಕಳನ್ನೇ ಸಾಯಿಸುವ, ತನ್ನ ಮಕ್ಕಳನ್ನು ಹಸಿವಿಂದ ಕೊಲ್ಲುವ, ಕಾರೊಳಗೆ ಮಕ್ಕಳನ್ನು ಮುಗಿಸುವ, ಹೆಂಡತಿಯರು ಗಂಡಂದಿರನ್ನು ಕೊಲ್ಲುವ, ಗಂಡಂದಿರು ಪತ್ನಿಯರನ್ನು ಸಾಯಿಸುವ, ಗಂಡುಮಕ್ಕಳು ಮತ್ತು ಹೆಣ್ಣು ಮಕ್ಕಳು ಹೆತ್ತವರನ್ನು ಸಾಯಿಸುವ - ಇಂತಹ ಹಲವು ಹತ್ತಾರು ಘಟನೆಗಳು ವರದಿಯಾಗದೆ ಅಮೆರಿಕಾದಲ್ಲಿ ಒಂದು ದಿನವೂ ಸಾಗುವುದಿಲ್ಲ. ಮನೋವಿಕೃತರು,



ನೋಟ

ಕಂದು, ಕಪ್ಪು ಮತ್ತು ಹಳದಿ ಬಣ್ಣದ ಜನರಿಗೆ ತಮ್ಮನ್ನು ತಾವು ಆಳುವ ಕಲೆ ಸ್ವಲ್ಪವೂ ಗೊತ್ತಿಲ್ಲ ಮತ್ತು ಅವರಿಗೆ ಯಾವುದು ಒಳ್ಳೆಯದೆಂಬ ತೀರ್ಮಾನ ಕೂಡ ತೆಗೆದುಕೊಳ್ಳಲಾರದಷ್ಟು ದಡ್ಡರು! ಲೆನಿನ್, ಸ್ಟಾಲಿನ್, ಮಾವೊ-ತ್ಸೆ-ತುಂಗ್, ಹೊಚಿಮಿನ್, ಕಿಮ್ II ಜಾಂಗ್, ಸ್ಲಪಬೊದನ್ ಮಿಲೊಸೊವಿಕ್, ಫಿಡೆಲ್ ಕ್ಯಾಸ್ಟ್ರೋ ತರಹದ ಕೊಲೆಪಾತಕರು ಮತ್ತು ಕ್ರೂರ ಸರ್ವಾಧಿಕಾರಿಗಳ ತೆಕ್ಕೆಗೆ ಜನರು ಸಿಕ್ಕಿಕೊಳ್ಳುತ್ತಿದ್ದಾರೆಂದು ಪ್ರತಿಬಿಂಬಿಸುತ್ತಾ ಸತ್ಯವನ್ನು ತಿರುಚುತ್ತಿದ್ದಾರೆ. ಆದರೆ ಅಬುಗ್ರಾಯಿಬ್‌ನಲ್ಲಿನ ಮನೋವಿಕೃತ ಹಿಂಸೆ ಮತ್ತು ದೌರ್ಜನ್ಯಗಳು ಅಮೆರಿಕಾದೊಳಗಿನ ಘಟನೆಗಳ ಪ್ರತಿಫಲನವಷ್ಟೇ ಎಂಬುದನ್ನು ಅರಿಯಬೇಕಿದೆ.

○ ರಾಯ್ ಮತ್ತು ಜಯ

ಸ್ಯಾಡಿಸ್ಟರು, ಕೊಲೆಗಾರರು ಮತ್ತು ಪಾತಕಿಗಳಿರುವುದರಿಂದಲೇ ಅಮೆರಿಕಾ 'ಹುಚ್ಚು ಸಮಾಜ'ವೆಂಬ ಮತ್ತೊಂದು ಹೆಸರು ಪಡೆದಿರುವುದು. ಜಾಗತಿಕ ಮಟ್ಟದಲ್ಲಿ ಬಡರಾಷ್ಟ್ರಗಳ ಜನತೆಯನ್ನು ಆರ್ಥಿಕ ಪಾಶದಿಂದ ಬಿಗಿಯಲು ಅಮೆರಿಕಾದ ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗಳಿವೆ. ಸಮೂಹನಾಶ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸಲು ಅಮೆರಿಕಾದ ಕಂಪನಿಗಳಾದ ರೆಥಿಯಾನ್ಸ್, ಉತ್ತರ ಅಮೆರಿಕಾದ ರಾಕ್‌ವೆಲ್ಸ್, ಜನರಲ್ ಡೈನಾಮಿಕ್ಸ್ ಮುಂತಾದವುಗಳಿದ್ದರೆ, ಇವುಗಳನ್ನು ಮಾರಾಟ ಮಾಡಲು ಟೊಂಕ ಕಟ್ಟಿ ನಿಂತಿರುವ ಅಮೆರಿಕಾದ ರಾಜಕೀಯ ಶಕ್ತಿ ಆಗಾಗ್ಗೆ ತನ್ನ ಮಿಲಿಟರಿ ಶಕ್ತಿಯನ್ನು ಜಳಪಿಸಿ ನಡುಕ ಉಂಟುಮಾಡಲು ಯತ್ನಿಸುತ್ತದೆ. ವಿದೇಶಿ ನಾಯಕರನ್ನು ಕೊಲ್ಲಲು ಬಹಿರಂಗವಾಗಿ ಎಲ್ಲ ನೆರವು ಮತ್ತು ಪ್ರೋತ್ಸಾಹವನ್ನು ನಾವು ಕಂಡಿರುವಂತೆ ಅಮೆರಿಕಾ ಮಾತ್ರ ಒದಗಿಸುತ್ತದೆ.

'ರಾಷ್ಟ್ರ ಕಟ್ಟುವುದು', 'ಪ್ರಜಾಪ್ರಭುತ್ವ', 'ಸ್ವಾತಂತ್ರ್ಯ' ಮುಂತಾದ ಅಲಂಕಾರಿಕ ಪದಗಳನ್ನು ಬಳಸುತ್ತಲೇ ತನ್ನ ಆರ್ಥಿಕ ಹಿತಾಸಕ್ತಿಯ ಬೇಳೆ ಬೇಯಿಸಿಕೊಳ್ಳಲು ಇತರೆ ರಾಷ್ಟ್ರಗಳನ್ನು ಶೋಷಿಸುವುದಷ್ಟೇ ಅಲ್ಲದೆ ತನ್ನ ದೇಶದೊಳಗೆ ತನ್ನ ನೀತಿಯನ್ನು ವಿರೋಧಿಸುವ ಜನತೆಯನ್ನು ಅತ್ಯುಗ್ರವಾಗಿ ದಮನ ಮಾಡುತ್ತಿರುವುದೇ ಅಮೆರಿಕಾದ ಭ್ರಮಾ ಲೋಕದ ಕಟ್ಟಡದ ಹಿಂದಿನ ವಾಸ್ತವತೆ. ಇದನ್ನೇ ಚಾರ್ಲಿ ಚಾಪ್ಲಿನ್‌ರ ವ್ಯಂಗ್ಯ ಮಾತುಗಳಲ್ಲಿ ಹೇಳುವುದಾದರೆ 'ಒಂದು ಕೊಲೆ ಮಾಡಿದರೆ ಆ ವ್ಯಕ್ತಿ ಕೊಲೆಗಾರನಾಗುತ್ತಾನೆ. ಲಕ್ಷ ಕೊಲೆ ಮಾಡಿದರೆ ಹಿರೋ ಆಗುತ್ತಾನೆ. ಸಂಖ್ಯೆಗಳು ವ್ಯಕ್ತಿಯ ಪಾವಿತ್ರ್ಯತೆಯನ್ನು ಹೆಚ್ಚಿಸುತ್ತವೆ!' ಜಗತ್ತಿನ ತುಂಬೆಲ್ಲ ಬಂಡವಾಳಶಾಹಿಯ ಪರಮತತ್ವ ನೀತಿಗಳಾದ 'ಅದರಿಂದ ನನಗಾಗುವ ಲಾಭವೇನು ?, ಅವರವರು ತಂತಮ್ಮ ಕೆಲಸ ನೋಡಿಕೊಳ್ಳಬೇಕಷ್ಟೆ' ಎನ್ನುವಂತಹ ಖಾಸಗಿ ಕಂಪನಿಗಳ ಸಿದ್ಧಾಂತವನ್ನು ಹರಿಯಬಿಡಲಾಗುತ್ತಿದೆ.

೨೦೦೧ರ ಅಕ್ಟೋಬರ್ ೨೬ ರಂದು 'ಯುಎಸ್‌ಎ ರಾಷ್ಟ್ರಾಭಿಮಾನಿ ಕಾಯಿದೆ ೧' ಜಾರಿಯಾದಂದಿನಿಂದ ಅಮೆರಿಕಾ ಪೊಲೀಸ್ ದೇಶವಾಗಿದೆ. ಈ ಕಾಯಿದೆ ಸರ್ಕಾರಕ್ಕೆ ರಾತ್ರೋರಾತ್ರಿ ಹಲವು ಅಧಿಕಾರಗಳನ್ನು ನೀಡಿದೆ. ಅಹಿಂಸಾತ್ಮಕ ಪಿಕೆಟಿಂಗ್, ಪ್ರದರ್ಶನಗಳು, ರ್‍ಯಾಲಿಗಳು, ಅಸಹಕಾರ ಚಳವಳಿ ಮತ್ತು ಕಾರ್ಮಿಕ ಬಂದ್‌ಗಳನ್ನು ಭಯೋತ್ಪಾದಕ ಚಟುವಟಿಕೆಯೆಂದು ಪರಿಗಣಿಸಿ ಕಾನೂನಿನಡಿ ಶಿಕ್ಷಿಸಬಹುದಾಗಿದೆ. ಯಾರೊಬ್ಬರ ಮನೆಯನ್ನು ಯಾವ ಹೊತ್ತಿನಲ್ಲಾದರೂ ಶೋಧಿಸಲು, ಕಾರ್ಮಿಕ ಮುಖಂಡರ ಮೇಲೆ ನಿಗಾವಹಿಸಿ ಟೆಲಿಫೋನ್ ಕದ್ದಾಲಿಸಲು, ವಲಸೆ ಬಂದವರನ್ನು ಏಕಾಏಕಿ ಜೈಲಿನಲ್ಲಿಡಲು ಎಲ್ಲ ಅಧಿಕಾರವನ್ನು ಪೊಲೀಸರು ಹೊಂದಿದ್ದಾರೆ.

ಅಂಕಣಕಾರರೊಬ್ಬರು ಹೇಳುವಂತೆ 'ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರೀತಿಸುತ್ತೇವೆಂದು ನಾವು ಹೇಳಿಕೊಂಡರೂ, ನಾವು ಏನನ್ನು ವ್ಯಕ್ತಪಡಿಸಲೂ ಹಿಂಜರಿಯುತ್ತೇವೆ. ಇಲ್ಲದಿದ್ದಲ್ಲಿ ಮೊದಲ ತಿದ್ದುಪಡಿ ಬೇಕೆಂದು ಕೇಳುವಷ್ಟರಲ್ಲೇ ತೋಳಗಳು ಬಂದೆರಗುತ್ತವೆ. ನಿಮ್ಮ ಇ-ಮೇಲ್ ಕಳುಹಿಸುವಾಗ ಹುಷಾರಾಗಿರಿ ಇಲ್ಲದಿದ್ದಲ್ಲಿ ಅಟಾರ್ನಿ ಜನರಲ್ ಜಾನ್ ಆಶ್‌ಕ್ರಾಪ್ಟ್ ನಿಮ್ಮನ್ನು ದೇಶ-ವಿರೋಧಿಯೆಂದು ಪರಿಗಣಿಸಬಹುದು'. (ದಿ ಬೋಸ್ಟನ್ ಗ್ಲೋಬ್, ಅಕ್ಟೋಬರ್ ೧೨, ೨೦೦೩). ಜನರು ಓದುವ ಪುಸ್ತಕಗಳ ಮೇಲೆ ನಿಗಾ ವಹಿಸಲಾಗುತ್ತಿದೆ.

ಪ್ರಪಂಚದ ಉದ್ದಗಲಕ್ಕೂ ಪ್ರಜಾಪ್ರಭುತ್ವದ ಹರಿಕಾರನೆಂದು ಯಜಮಾನಿಕೆ ಸ್ಥಾಪಿಸುತ್ತಿರುವ ಅಮೆರಿಕಾದ ಪ್ರಭುತ್ವ ತನ್ನ ನೆಲದಲ್ಲಿಯೇ ನಾಗರಿಕರನ್ನು ಬಂಧಿಸಿಟ್ಟಿರುವುದನ್ನು ಅಂಕಿ-ಅಂಶಗಳು, ಜನ-ವಿರೋಧಿ ಧೋರಣೆಗಳು ಎತ್ತಿ ಸಾರುತ್ತಿವೆ.

'ಮಾಲೀಕರನ್ನು ವಿರೋಧಿಸುವುದೇ ಅಮೆರಿಕಾದಲ್ಲಿ ಭಯೋತ್ಪಾದನೆಯಾಗಿದೆ.' ಎಂದು ಪೀಪಲ್ಸ್ ವೀಕ್ಲಿ ವರ್ಲ್ಡ್ (ಸೆಪ್ಟೆಂಬರ್ ೨೦-೨೬, ೨೦೦೩) ಹೇಳಿದೆ. ಪ್ರಪಂಚದ ಉದ್ದಗಲಕ್ಕೂ ಪ್ರಜಾಪ್ರಭುತ್ವದ ಹರಿಕಾರನೆಂದು ಯಜಮಾನಿಕೆ ಸ್ಥಾಪಿಸುತ್ತಿರುವ ಅಮೆರಿಕಾದ ಪ್ರಭುತ್ವ ತನ್ನ ನೆಲದಲ್ಲಿಯೇ ನಾಗರಿಕರನ್ನು ಬಂಧಿಸಿಟ್ಟಿರುವುದನ್ನು ಅಂಕಿ- ಅಂಶಗಳು, ಜನ-ವಿರೋಧಿ ಧೋರಣೆಗಳು ಎತ್ತಿ ಸಾರುತ್ತಿವೆ. □

ಅಮೆರಿಕಾದ ಪರಿಸರ - ವಿರೋಧಿ ಧೋರಣೆ

ಕೈಗಾರಿಕಾ ಕ್ರಾಂತಿಯ ನಂತರ ಕೈಗಾರಿಕಾಭಿವೃದ್ಧಿಯ ಮುಂಚೂಣಿಯಲ್ಲಿರುವ ರಾಷ್ಟ್ರಗಳು ಹೊರಸೂಸುವ ಹಸಿರು ಮನೆ ಅನಿಲಗಳಿಂದಾಗಿ ಜಾಗತಿಕ ತಾಪಮಾನ ಏರುತ್ತಿರುವುದಕ್ಕೆ ಕಡಿವಾಣ ಹಾಕಲು ಕ್ಯೋಟೋ ಒಪ್ಪಂದಕ್ಕೆ ಸಹಿಹಾಕಲು ೧೭೦ಕ್ಕೂ ರಾಷ್ಟ್ರಗಳು ಒಮ್ಮತದಿಂದ ಸಿದ್ಧರಿದ್ದರೆ, ಜಗತ್ತಿನ ಶೇ. ೪ ರಷ್ಟು ಜನಸಂಖ್ಯೆ ಹೊಂದಿರುವ ಅಮೆರಿಕಾ ತಾನು ವಿಶ್ವದ ಶೇ. ೨೫ ರಷ್ಟು ಹಸಿರು ಮನೆ ಅನಿಲಗಳನ್ನು ವಿಸರ್ಜಿಸುತ್ತಿದ್ದರೂ, ಕ್ಯೋಟೋ ಒಪ್ಪಂದಕ್ಕೆ ಸಹಿ ಹಾಕದೆ ಹಿಂದೆ ಸರಿದಿದೆ.

ಪ್ರಥಮ ವರದಿಯಾಗಿ ಸ್ಕ್ರಿಪ್ಸ್ ಸಾಗರಶಾಸ್ತ್ರ ಸಂಸ್ಥೆಯ ವಿಜ್ಞಾನಿಗಳು 'ಮಾನವ ಚಟುವಟಿಕೆಗಳಿಂದ ಹೊರಸೂಸುವ ಹಸಿರು ಮನೆ ಅನಿಲಗಳ ಹೆಚ್ಚಳದ ದರಕ್ಕೆ ಸರಿಸಮನಾಗಿ, ಕಳೆದ ೪೦ ವರ್ಷಗಳಿಂದಲೂ ಶೇ. ೭೦ರಷ್ಟು ಭೂಭಾಗವನ್ನು ಆವರಿಸಿರುವ ಸಮುದ್ರದ ಲಕ್ಷಾಂತರ ಸ್ಥಳಗಳಲ್ಲಿ ಮಾಡಿರುವ ಶಾಖ ಮಾಪನಗಳಿಂದ, ಸಮುದ್ರದ ಶಾಖವು ಹೆಚ್ಚಾಗಿರುವುದು ದೃಢಪಟ್ಟಿದೆ' ಎಂದು ತಿಳಿಸಿದ್ದಾರೆ.

ವುಡ್‌ಹೋಲ್ ಒಶಾನೋಗ್ರಫಿಕ್ ಸಂಸ್ಥೆಯ ಮತ್ತೊಂದು ಅಧ್ಯಯನದಿಂದ 'ಗ್ರೀನ್ ಲ್ಯಾಂಡ್‌ನಲ್ಲಿ ಕರಗುತ್ತಿರುವ ಮಂಜುಗಡ್ಡೆಗಳು ವಾತಾವರಣದ ಕ್ರಿಯೆಯನ್ನು ಬದಲಿಸುತ್ತಿದ್ದು ಮೊದಲು ಸಮುದ್ರ ಮಾರುತಗಳ ಮೇಲೆ ಪರಿಣಾಮ ಬೀರಿ ನಂತರ ಜಾಗತಿಕ ವಾತಾವರಣದ ದಿಕ್ಕನ್ನೇ ಬದಲಿಸುತ್ತವೆ' ಎಂದು ತಿಳಿದು ಬಂದಿದೆ.

ಮೂರನೆಯ ಅಧ್ಯಯನವು ಮಿಯಾಮಿ ವಿಶ್ವವಿದ್ಯಾನಿಲಯದಿಂದ ಮಂಡಿಸಲಾಗಿದ್ದು 'ಶೀತ ವಲಯದಲ್ಲಿ ಆಹಾರ ಸರಪಳಿಯ ಬಹುಮುಖ್ಯ ಕೊಂಡಿಯಾಗಿರುವ ಆಲ್ಗೆಯು, ಕರಗುತ್ತಿರುವ ಆರ್ಕ್‌ಟಿಕ್ ಮಂಜಿನಲ್ಲಿ ಕೊಚ್ಚಿ ಹೋಗುತ್ತಿದೆ' ಎಂದು ದೃಢಪಡಿಸಿದೆ. ಪ್ರತ್ಯೇಕವಾಗಿ ನಡೆಸಿರುವ ಈ ಅಧ್ಯಯನಗಳು, ಮಾರ್ಮಿಕವಾಗಿಯೇನೋ ಎಂಬಂತೆ ಅಮೆರಿಕಾ ಮೂಲದವೇ ಆಗಿದ್ದು ಕಳೆದ ವಾರ ವಾಷಿಂಗ್ಟನ್‌ನಲ್ಲಿ ಘೋಷಿಸಲಾಗಿದೆ.

ವಿಶ್ವದ ೫೦ ಕೋಟಿಗೂ ಹೆಚ್ಚು ಜನ ತಮ್ಮ ಆಹಾರಕ್ಕಾಗಿ ಬೆಳೆ ಬೆಳೆದುಕೊಳ್ಳಲು ಆರೋಗ್ಯಕರವಾದ ಭೂಮಿ ಹೊಂದಿಲ್ಲದವರಾಗಿದ್ದಾರೆ. ಕಲುಷಿತ ಕುಡಿಯುವ ನೀರಿನಿಂದಾಗಿ ೨೦ ಲಕ್ಷ ಮಕ್ಕಳು ಸೇರಿದಂತೆ ೫೦ ಲಕ್ಷ ಜನ ಪ್ರತಿ ವರ್ಷ ಸಾವನ್ನಪ್ಪುತ್ತಿದ್ದಾರೆ. ೨೦೧೦-೧೫ರ ಹೊತ್ತಿಗೆ ಭೂಮಿಯಲ್ಲಿ ದೊರೆಯುವ ೨ ಟ್ರಿಲಿಯನ್ ಬ್ಯಾರೆಲ್ ಪೆಟ್ರೋಲಿಯಂ ಇಂಧನದಲ್ಲಿ ಅರ್ಧದಷ್ಟು ಬಳಕೆಯಾಗಿರುತ್ತದೆ.

೧೯೯೦ರ ಮಟ್ಟಕ್ಕಿಂತ ಶೇ. ೫ ರಷ್ಟು ಕಡಿಮೆ ಪ್ರಮಾಣಕ್ಕೆ ಹಸಿರುಮನೆ ಅನಿಲಗಳ ವಿಸರ್ಜನಾ ಪ್ರಮಾಣವನ್ನು ಇಳಿಸಬೇಕೆಂಬ ಷರತ್ತಿನಿಂದ ಭಾರತ, ಬ್ರೆಜಿಲ್ ಮತ್ತು ಚೀನಾದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳನ್ನು ಹೊರತುಪಡಿಸಿರುವುದು ಆಕ್ಷೇಪಣಾರ್ಹ ಎಂದಿರುವ ಅಮೆರಿಕಾ 'ಕ್ಯೋಟೋ ಒಪ್ಪಂದವು ಅಮೆರಿಕಾದ ಆರ್ಥಿಕ ಪ್ರಗತಿಗೆ ಅಡ್ಡಿಯುಂಟುಮಾಡುತ್ತದಾದ್ದರಿಂದ, ಒಪ್ಪಂದದ ಅನುಷ್ಠಾನಕ್ಕಾಗಿ ವರ್ಷವೊಂದಕ್ಕೆ ೧೫,೦೦೦ ಕೋಟಿ ಡಾಲರ್ ವ್ಯಯಿಸುವ ಬದಲು ಅದೇ ಹಣವನ್ನು ಏಡ್ಸ್ ಮತ್ತು ಮಲೇರಿಯಾ ನಿಯಂತ್ರಣ, ಹಸಿವು ನಿವಾರಣೆ ಮತ್ತು ಅಡೆತಡೆಯಿಲ್ಲದ ವ್ಯಾಪಾರ ಉತ್ತೇಜಿಸುವುದಕ್ಕೆ ವ್ಯಯಿಸುವುದು ಲೇಸು' ಎಂದಿರುವ ಅಮೆರಿಕಾ ಅಧ್ಯಕ್ಷ ಬುಷ್‌ರವರ ಮಾತುಗಳಲ್ಲಿ ಪರಿಸರ ಕಾಳಜಿಯು ಕಿಂಚಿತ್ತೂ ಇಲ್ಲದಿರುವುದು ಸೋಜಿಗವೇನಲ್ಲ.

ವಿಶ್ವದ ೧೮೦ ಬಡರಾಷ್ಟ್ರಗಳ ಸಂಪತ್ತಿಗಿಂತಲೂ ಹೆಚ್ಚು ಸಂಪತ್ತನ್ನು ಹೊಂದಿರುವ, ವಿಶ್ವದಾದ್ಯಂತ ಬಂಡವಾಳ ಹೂಡಿರುವ, ಅಮೆರಿಕಾದ ೨೦೦ ಶ್ರೀಮಂತ ಬಂಡವಾಳಿಗರ ಕೈಗೊಂಬೆಯಾಗಿರುವ ಬುಷ್ ಸರ್ಕಾರ ವಿಶ್ವ ಆರ್ಥಿಕ ವ್ಯವಸ್ಥೆಯನ್ನು ತನ್ನ ಬಿಗಿ ಹಿಡಿತದಲ್ಲಿಟ್ಟುಕೊಂಡು ಯಜಮಾನಿಕೆ ಸ್ಥಾಪಿಸುತ್ತಿರುವ ಹಿತಾಸಕ್ತಿಗೆ ಧಕ್ಕೆ ತರುವ ಯಾವುದೇ ಅಂತರರಾಷ್ಟ್ರೀಯ ಒಪ್ಪಂದಕ್ಕೆ ಮನ್ನಣೆ ನೀಡದಿರುವುದಕ್ಕೆ ಇಂತಹ ಉದಾಹರಣೆಗಳ ಇತಿಹಾಸವೇ ಇದೆ.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಯಾವುದೇ ಷರತ್ತು ವಿಧಿಸಿಲ್ಲವೆಂದು ಆಪಾದಿಸುವ ಅಮೆರಿಕಾ, ಉರುಗ್ವೆ ಸುತ್ತಿನ ಮಾತುಕತೆಗಳಲ್ಲಿ ವಿಶ್ವ ವ್ಯಾಪಾರ ಸಂಸ್ಥೆಯ ಸ್ಥಾಪನೆಗಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ 'ವಿಶೇಷ ಮತ್ತು ಬೇರೆ ತೆರನಾದ ವಿನಾಯಿತಿ'ಯನ್ನು ನೀಡಲಾಗಿರುವುದನ್ನು ಮರೆತಂತೆ ಕಾಣುತ್ತದೆ. ಬರ, ಪ್ರವಾಹಗಳು ಮತ್ತು ಇತರೆ ನೈಸರ್ಗಿಕ ವೈಪರೀತ್ಯ - ವಿಕೋಪಗಳಿಗೆ ಕಾರಣವಾಗಿರುವ ಹಸಿರು ಮನೆ ಅನಿಲಗಳ ಉತ್ಪಾದನೆಗೆ ಕಡಿವಾಣ ಹಾಕುವ ಜಾಗತಿಕ ಪ್ರಯತ್ನಕ್ಕೆ ಕುಂಟು ನೆಪವೊಡ್ಡಿ ಅಮೆರಿಕಾ ಹಿಂದೆ ಸರಿದಿರುವುದನ್ನು ಜಾಗತಿಕ ಮಟ್ಟದಲ್ಲಿ ಅನೇಕ ರಾಷ್ಟ್ರಗಳು ಮತ್ತು ಸರ್ಕಾರೇತರ ಸಂಸ್ಥೆಗಳು ಛೀಮಾರಿ ಹಾಕಿವೆ. 'ಪ್ರಪಂಚದ ಮಾಲಿನ್ಯಕಾರ ಅಮೆರಿಕಾದ ಬುಷ್' ಎಂದು ಆಪಾದಿಸಿವೆ.

- ಜಯ

ಜಾಗತೀಕರಣ ತನ್ನ ಕಬಂಧ ಬಾಹುಗಳನ್ನು ವಿಶ್ವದೆಲ್ಲೆಡೆ, ಮುಖ್ಯವಾಗಿ ಬಡ ತೃತೀಯ ರಾಷ್ಟ್ರಗಳ ಸುತ್ತ ಆದಷ್ಟೂ ಬಿಗಿಯಾಗಿ ಬಂಧಿಸುತ್ತಿದೆ. ಸಮಾಜವಾದದ ಅಪಕ್ವ ಜಾರಿಯಿಂದ ದಿವಾಳಿಯಂಚಿಗೆ ತಲುಪಿದ್ದ ಭಾರತದಂಥ ತೃತೀಯ ರಾಷ್ಟ್ರಗಳು ಜಾಗತೀಕರಣವನ್ನು ವಿಶೇಷ ಕಾಳಜಿ, ಅವಸರದಿಂದ ಬರಮಾಡಿಕೊಂಡಿದ್ದು ತಮ್ಮ ಚರ್ಮ ಉಳಿಸಿಕೊಳ್ಳಲು ಅನಿವಾರ್ಯವಾಗಿತ್ತು. ತಮ್ಮ ಜೀವನ ನಿರ್ವಹಣೆಗೆ ಸರ್ಕಾರಿ ಉದ್ಯೋಗ ಗಿಟ್ಟಿಸಲು ಲಕ್ಷಾಂತರ ರೂಪಾಯಿ ಲಂಚ ತೆರಲು ಆಗದ ಯುವ ಜನತೆಯಲ್ಲಿ ಮಡುಗಟ್ಟಿದ್ದ ಸಿಟ್ಟು, ಸೆಡವು, ಆಕ್ರೋಶಗಳು ಸ್ಫೋಟಗೊಂಡು ತಮ್ಮ ನಿರಂಕುಶ ಆಡಳಿತ ಕೊನೆಗಾಣುವುದು ಪ್ರಭುತ್ವಕ್ಕೆ ಬೇಡವಾಗಿ, ಸರ್ಕಾರಿ ಉದ್ಯೋಗಗಳಿಗೆ ಪರ್ಯಾಯವಾಗಿ ಖಾಸಗಿ ಉದ್ದಿಮೆಗಳನ್ನು ಪ್ರೋತ್ಸಾಹಿಸಬೇಕಾಯಿತು. ಆದರೆ ಅಧಿಕಾರ ಶಾಹಿಯ ಭ್ರಷ್ಟಾಚಾರ, ಲಂಚಕೋರತನದಿಂದ ಸ್ಥಳೀಯ ಸಣ್ಣ ಹಾಗೂ ಮಧ್ಯಮ ವರ್ಗದ ಉದ್ದಿಮೆದಾರರ ಸೃಜನಶೀಲತೆ ಮುಕ್ಕಾಗಿ, ತಮ್ಮ ಸಂಸ್ಥೆಗಳ ಬಾಗಿಲು ಮುಚ್ಚುವ ಹಂತ ತಲುಪಿದರು. ಈ ಹಂತದಲ್ಲಿ ಸೃಷ್ಟಿಯಾದ ಉದ್ಯೋಗ ಶೂನ್ಯತೆ (Employment Vacuum) ನಿವಾರಿಸಲು ಬಂಡವಾಳಶಾಹಿ ಬಹುರಾಷ್ಟ್ರೀಯ ಕಂಪೆನಿಗಳು (MNC) ದೇಶ ಪ್ರವೇಶಿಸುವಂತಾಯಿತು. ಹೀಗೆ ಪ್ರವೇಶಿಸಿದ MNC ಗಳು ಬರಬರುತ್ತಿದ್ದಂತೆಯೇ ಯಕಃಶ್ಚಿತ್ ತಂಪು ಪಾನೀಯ ಘಟಕಗಳನ್ನೂ ಒಂದೇ ಏಟಿಗೆ ಆಪೋಶನ ತೆಗೆದುಕೊಂಡುಬಿಟ್ಟವು.

MNC ಗಳ ಸಾಮ್ರಾಜ್ಯ ವಿಸ್ತರಣೆಯಾಗುತ್ತಿದ್ದಂತೆ ನಮ್ಮ ಬಹುತೇಕ ಯುವ ಜನತೆಯಲ್ಲೂ ಭ್ರಮೆಯೊಂದು ಸೃಷ್ಟಿಯಾಗ ತೊಡಗಿದೆ. ಅದು MNC ಗಳು ಜ್ಞಾನದ ಆಧಾರದಲ್ಲಿ ಉದ್ಯೋಗ ನೀಡುತ್ತವೆ ಮತ್ತು ಮೇಲ್ದರ್ಜೆ ಜೀವನ ನಡೆಸಲು ಅನುವಾಗುವಂಥ ಐದಂಕಿ ಮೊತ್ತದ ಸಂಬಳ ನೀಡುತ್ತಾರೆ ಎನ್ನುವುದು. ಈಗಿನ ಮೇಲ್ಮಧ್ಯಮ, ಮಧ್ಯಮ ವರ್ಗದ ಜನರ ಭೋಗ ಜೀವನಕ್ಕೆ ಐದಂಕಿಯಲ್ಲ, ಆರಂಕಿ ಸಂಬಳವಿದ್ದರೂ ಸಾಲುವುದಿಲ್ಲ. ಅವರು ತಮ್ಮ ದುಡಿಮೆಯ ಬಹುತೇಕ ಹಣವನ್ನು MNC ಗಳೇ ಉತ್ಪಾದಿಸುವ ಭೋಗ ವಸ್ತುಗಳ ಮೇಲೆ ವಿನಿಯೋಗಿಸುತ್ತಾರೆ. ಹೀಗೆ ವ್ಯಯಗೊಂಡ ಹಣವು ನಮ್ಮ ದೇಶದ ಸಂಪತ್ತಾಗಿ ನಮ್ಮಲ್ಲಿಯೇ ಉಳಿಯಬೇಕಾಗುತ್ತದೆ. ವಿಪರ್ಯಾಸವೆಂದರೆ ತೀಕ್ಷ್ಣಮತಿ MNC ಗಳು ನಮ್ಮ ದೇಶದ ಸಂಪತ್ತನ್ನು ನಮಗೇ ಪರಭಾರೆ ಮಾಡಿ ಅದರ ಲಾಭದ ಒಂದಂಶವನ್ನು ತಮ್ಮ ಮೂಲ ತಾಯ್ನಾಡಿಗೆ ವರ್ಗಾಯಿಸಿರುತ್ತಾರೆ. ಅಲ್ಲಿಗೆ ನಮ್ಮವರ ಔದಾರ್ಯದಿಂದಲೇ ನಮ್ಮ ನೆಲದ ಸಂಪತ್ತಿನ ಲೂಟಿಯಾದಂತಲ್ಲವೇ ?

ಜಾಗತೀಕರಣದ ನೇರ ಪರಿಣಾಮ ನಮ್ಮ ಆರ್ಥಿಕತೆ, ಸಂಸ್ಕೃತಿಯ ಮೇಲಷ್ಟೇ ಆಗುತ್ತಿಲ್ಲ; ಆಹಾರ ಪದ್ಧತಿಯ ಮೇಲೂ ಆಗುತ್ತಿದೆ. ನಮ್ಮಲ್ಲಿಯೇ ಉತ್ತರ ಭಾರತದ ಜನಪ್ರಿಯ ಚಪಾತಿಯನ್ನು ದಕ್ಷಿಣ ಭಾರತದ ಮಂದಿ ಅರಗಿಸಿಕೊಳ್ಳುವುದು ಕಷ್ಟಕರವಾಗುವಾಗ, ದೂರದ ಅಮೆರಿಕಾದ ಪಿಜ್ಜಾ ಸಂಸ್ಕೃತಿಯನ್ನು ನಮ್ಮ ಮೇಲೆ ಹೇರಲಾಗುತ್ತಿದೆ. ಐದಂಕಿ ಸಂಬಳ ಪಡೆಯುವ MNC ಉದ್ಯೋಗಿಗಳಿಗೆ ಇದರ ಸೇವನೆ ಪ್ರತಿಷ್ಠೆಯ ವಿಷಯವಾದರೂ ಅದರಿಂದುಂಟಾಗುವ ಆರೋಗ್ಯ ದುಷ್ಪರಿಣಾಮಗಳು ಅಪಾರ. ಮತ್ತು ಅದರ ನಿವಾರಣೆಗೆ ಮತ್ತೆ MNC ಗಳ ಮದ್ದು, ಮಾತ್ರೆಗಳನ್ನು ಅವಲಂಬಿಸುವುದು ಅವರ ಕಿಸೆಗೆ ಮತ್ತಷ್ಟು ಕತ್ತರಿಯಷ್ಟೇ ಅಲ್ಲ, ಈ ನೆಲದ ಸಂಪತ್ತಿನ ಒಂದು ಭಾಗದ ಸರಾಗ ಹರಿವಿಗೆ ಮುಕ್ತ ರಹದಾರಿ.

ಜಾಗತೀಕರಣ ಪಿಜ್ಜಾ ಸಂಸ್ಕೃತಿ ಹೇರಿಕೆಯಷ್ಟಕ್ಕೇ ಸುಮ್ಮನಾಗುವುದಿಲ್ಲ. ಸ್ಥಳೀಯ ಆಹಾರ ಪದ್ಧತಿಯ ಮೇಲೂ ತನ್ನ ಕೈಯಾಡಿಸುತ್ತದೆ. ಉದಾಹರಣೆಗೆ ಇತ್ತೀಚೆಗೆ ಇಲ್ಲಿಯ ಯುವ ಜನರನ್ನು ಹೆಚ್ಚಿಗೆ ಆಕರ್ಷಿಸುತ್ತಿರುವ Lays ಎಂಬ ಆಲೂ ಚಿಪ್ಸ್. ಬೆಳ್ಳಿ ತೆರೆಯ ನಾಲಾಯಕ್, ಸಾಮಾಜಿಕ ಜವಾಬ್ದಾರಿಯ ಪರಿವೆ ಇಲ್ಲದ ನಟ-ನಟಿಯರನ್ನು ತಮ್ಮ ಜಾಹೀರಾತಿನಲ್ಲಿ ತೋರಿಸಿ ಅಭಿರುಚಿ

ಪುರೋಹಿತಶಾಹಿಯ ಒಡಂಬಡಿಕೆ

ವಿಶ್ಲೇಷಣೆ

ಜಾಗತೀಕರಣ ಯುವಜನತೆಯಲ್ಲಿ ಕೊಳ್ಳುಬಾಕ ಸಂಸ್ಕೃತಿಯನ್ನು ಉತ್ತೇಜಿಸುತ್ತಿದೆ. ಮೇಲ್ನೋಟಕ್ಕೆ ಇದರಿಂದ ಸಂಪತ್ತಿನ ಸೃಷ್ಟಿಯಾಗುತ್ತಿದ್ದರೂ ಬಹುಪಾಲು ಸಂಪತ್ತು ಬಹುರಾಷ್ಟ್ರೀಯ ಕಂಪನಿಗಳಿಂದ ಉತ್ಪಾದಿತವಾಗುತ್ತಿದೆ ಮತ್ತು ಈ ಸರಕುಗಳಿಗೆ MNC ಉದ್ಯೋಗಿಗಳೇ ಗ್ರಾಹಕರಾಗುತ್ತಿದ್ದಾರೆ. ಹೀಗೆ ನಮ್ಮ ದೇಶದ ಸಂಪತ್ತು ಸಾಮ್ರಾಜ್ಯಶಾಹಿ ದೇಶಗಳ ತಿಜೋರಿ ತಲುಪುತ್ತಿದೆ. ನಮ್ಮ ಯುವ ಜನತೆ ಈಗಲಾದರೂ ಎಚ್ಚೆತ್ತುಕೊಂಡು ತಮ್ಮ ಕೊಳ್ಳುಬಾಕ ಸಂಸ್ಕೃತಿಗೆ ಕಡಿವಾಣ ಹಾಕಿಕೊಳ್ಳದೆ ಹೋದರೆ ಇನ್ನು ಕೆಲವೇ ವರ್ಷಗಳಲ್ಲಿ ನಮ್ಮ ನೆಲದ ಸಂಪತ್ತು ಲೂಟಿಯಾಗಿ ವಿಶ್ವ ಸಮುದಾಯದ ಎದಿರು ಭಿಕ್ಷುಕರಂತೆ ನಿಲ್ಲಬೇಕಾಗುತ್ತದೆ.

○ ಸದಾನಂದ ಸಿ. ಗಂಗನಬೀಡು

ಹೀನರಾಗುತ್ತಿರುವ ಯುವ ಜನತೆಯನ್ನೇ ಗುರಿಯಾಗಿಸಿ ಕೊಂಡಿರುವ ಈ Lays ನಮ್ಮ ಸ್ಥಳೀಯ ರುಚಿಗೆ ಹೋಲಿಸಿದರೆ ಕಮಟು ರುಚಿ ಮತ್ತು ವಾಸನೆಯದ್ದು. ಅಷ್ಟೇ ಅಲ್ಲ, ಕೃತಕ preservatives ಬಳಸಲಾಗಿರುವ ಈ ಚಿಪ್ಸ್‌ನ್ನು ದೀರ್ಘ ಕಾಲ ಸೇವಿಸಿದರೆ ಪ್ರಾಣಾಂತಿಕವೂ ಆಗಬಹುದು.

ಜಾಗತೀಕರಣ ಜ್ಞಾನಾಧಾರಿತ ವರ್ಗದ ಪಾಲಿಗೆ ಒಂದು ವರದಂತೆ ಬಂದಿದ್ದರೆ ಶ್ರಮಿಕ ವಲಯದ ಬದುಕನ್ನು ಮತ್ತಷ್ಟು ದುರ್ಬಲಗೊಳಿಸುತ್ತದೆ. Merit ಮಾತ್ರ ಮಾನದಂಡವಾದಾಗ ಅರೆ ವಿದ್ಯಾವಂತರು, ಅವಿದ್ಯಾವಂತರು ಸಂಪತ್ತು ಸೃಷ್ಟಿಸುವ ಈ MNC ವಲಯ ಪ್ರವೇಶಿಸಲು ದುಸ್ಸಾಧ್ಯವಾಗುತ್ತದೆ. ಆಗ ಉಳ್ಳವರು ಮತ್ತು ಇಲ್ಲದವರ ನಡುವೆ ಆರ್ಥಿಕ, ಸಾಮಾಜಿಕ ಕಂದರ ಹಿರಿದಾಗುತ್ತಲೇ ಹೋಗುತ್ತದೆ. ಇದು ಉಚ್ಛ್ರಾಯ ಸ್ಥಿತಿ ತಲುಪಿದಾಗ ಇಲ್ಲದವರ ಎದೆಯಲ್ಲಿ ಹುದುಗಿದ್ದ ಕ್ರೋಧಾಗ್ನಿ ಸ್ಫೋಟಗೊಳ್ಳಬಹುದು. ಆ ಹಂತದಲ್ಲಿ ತಲೆದೋರುವ ರಾಜಕೀಯ, ಸಾಮಾಜಿಕ, ಆರ್ಥಿಕ ಅಸ್ಥಿರತೆಯಲ್ಲಿ ಮುಂದುವರೆಯಲು ಇಚ್ಛಿಸದ MNCಗಳು ತಮ್ಮ ಬಂಡವಾಳ ಹಿಂತೆಗೆತಕ್ಕೆ ಖಂಡಿತಾ ಮುಂದಾಗುತ್ತಾರೆ. ಆಗ ಸೃಷ್ಟಿಯಾಗುವ ನಿರುದ್ಯೋಗ ಬಿಕ್ಕಟ್ಟು ನಿವಾರಿಸಲು ಸರ್ಕಾರದ ಬಳಿಯಾಗಲಿ ಅಥವಾ ಸ್ಥಳೀಯ ಖಾಸಗಿ ಉದ್ದಿಮೆದಾರರ ಬಳಿಯಾಗಲಿ ಯಾವುದೇ ಪರ್ಯಾಯ ಮಾರ್ಗೋಪಾಯಗಳು ಉಳಿದಿರುವುದಿಲ್ಲ.

> **ಶ್ರೇಣೀಕೃತ ವ್ಯವಸ್ಥೆ ಪ್ರತಿಪಾದಿಸುವ ಪುರೋಹಿತಶಾಹಿ ಲಾಭಕೋರ ಬಂಡವಾಳಶಾಹಿಗೆ ಸದಾ ಪೂರಕವಾಗಿಯೇ ಕಾರ್ಯ ನಿರ್ವಹಿಸುತ್ತದೆ. ಪ್ರಭುತ್ವ ಮತ್ತು ಬಂಡವಾಳಶಾಹಿಯ ನಡುವೆ ಸಂಪರ್ಕ ಸೇತುವೆಯಂತೆ ಕಾರ್ಯ ನಿರ್ವಹಿಸುವ, ಆ ಮೂಲಕ ತನ್ನ ಹಿತ ಸಾಧಿಸಿಕೊಳ್ಳುವ ಈ ಮಂದಿ, ದೇಶದ ದಟ್ಟ ದಾರಿದ್ರ್ಯವನ್ನೂ ಆನಂದಿಸುವ ಕ್ರೂರತೆ ಬೆಳೆಸಿಕೊಂಡಿದ್ದಾರೆ.**

ಜಾಗತೀಕರಣ ನೆರೆಯ ರಾಷ್ಟ್ರಗಳೊಂದಿಗೆ ವ್ಯವಹಾರಿಕ ಸ್ಪರ್ಧೆಯನ್ನಷ್ಟೇ ಏರ್ಪಡಿಸುವುದಿಲ್ಲ, ವ್ಯವಹಾರಿಕ ಸ್ಪರ್ಧೆ ಬಿರುಸುಗೊಂಡಂತೆಲ್ಲ ದೇಶದ ಆಂತರಿಕ ಭದ್ರತೆ, ರಕ್ಷಣಾ ವಿಷಯಗಳು ತೀರಾ ಸೂಕ್ಷ್ಮವೂ, ಅಸ್ಥಿರತೆ ಸೃಷ್ಟಿಸುವಂಥವೂ ಆಗುತ್ತದೆ. ಸಾಮ್ರಾಜ್ಯಶಾಹಿ ಬ್ರಿಟಿಷರು ನಮ್ಮ ದೇಶವನ್ನು ವ್ಯಾಪಾರಿಗಳಾಗಿ ಪ್ರವೇಶಿಸಿದಂದಿನಿಂದಲೂ ದೇಶದೊಳಗೆ ಮತ್ತು ಹೊರಗೆ ಪ್ರಕ್ಷುಬ್ಧತೆ ಸಹಜವಾಗಿಬಿಟ್ಟಿದೆ. ಈ ಪ್ರಕ್ಷುಬ್ಧತೆಯನ್ನು ನಿವಾರಿಸಿಕೊಳ್ಳಲು ನಾವು ಮತ್ತೆ ಅದೇ ಸಾಮ್ರಾಜ್ಯಶಾಹಿ ಅಮೆರಿಕಾ, ಬ್ರಿಟನ್, ಫ್ರಾನ್ಸ್ ಮುಂತಾದ ದೇಶಗಳ ಮುಂದೆ ಅವರ ಬಳಿ ಅಗತ್ಯ ಮೀರಿ ಉಳಿದಿರುವ ಸಮೂಹ ನಾಶಕ ಶಸ್ತ್ರಾಸ್ತ್ರಗಳ ಖಾಯಂ ಗಿರಾಕಿಗಳಾಗ ಬೇಕಾಗುತ್ತದೆ. ಇದಕ್ಕೆ ಕಣ್ಣೆದುರಿನ ಉದಾಹರಣೆ – ಇರಾನ್, ಇರಾಕ್ ಅನೇಕ ವರ್ಷಗಳ ಕಾಲ ಜಿದ್ದಾಜಿದ್ದಿಯಿಂದ ಕಾದಾಡಿದ್ದು ಮತ್ತು ಇದಕ್ಕೆ ಪಟ್ಟಭದ್ರ ಶಸ್ತ್ರಾಸ್ತ್ರ ಮಾಫಿಯಾದ ಒತ್ತಾಸೆಯಿದ್ದದ್ದು.

ಜಾಗತೀಕರಣದ ಮತ್ತೊಂದು ಪ್ರಮುಖ ಅಪಾಯ – ಅದು ಬಲಪಂಥೀಯ ವಿಚಾರಧಾರೆಯನ್ನು ಪ್ರಚೋದಿಸುವುದು. ಬಂಡವಾಳಶಾಹಿಯ patent ಮತ್ತು designation, ಪುರೋಹಿತ ಶಾಹಿಯ ಜ್ಞಾನದ ಹಕ್ಕು ಮತ್ತು ಶ್ರೇಣೀಕೃತ ವ್ಯವಸ್ಥೆ ಎರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಉದ್ಯೋಗ ಸೃಷ್ಟಿ ನಿರ್ವಹಣೆ, ವಿತರಣೆಯಲ್ಲಿ ಪರಸ್ಪರ ಪೂರಕವಾಗಿ ವರ್ತಿಸುವ ಇವರೀರ್ವರೂ ಜ್ಞಾನವನ್ನಾಗಲಿ, ಸಂಪತ್ತನ್ನಾಗಲಿ ಎಂದಿಗೂ ಕಟ್ಟಕಡೆಯ ವ್ಯಕ್ತಿಗೂ ದಕ್ಕಿದ್ದನ್ನು ನೋಡಿ ಸಹಿಸಿದ್ದಿಲ್ಲ. ಹೀಗಾದಾಗ ಜ್ಞಾನದ ಹಕ್ಕು ನಿರ್ದಿಷ್ಟ ವ್ಯಕ್ತಿ, ಸಮುದಾಯ, ಸಂಸ್ಥೆಗೆ ಮೀಸಲಾಗುತ್ತದೆ. ಸಂಪತ್ತಿನ ಸಮಾನ ವಿತರಣೆ ಅಸಾಧ್ಯವಾಗುತ್ತದೆ. ಹೀಗಿದ್ದಾಗ್ಯೂ ಜಾಗತೀಕರಣವನ್ನು ಮುಕ್ತವಾಗಿ ಪ್ರತಿಪಾದಿಸುವುದು, ಸಮರ್ಥಿಸುವುದು ಜೀವ ವಿರೋಧಿ ನಿಲುವಾಗುತ್ತದಷ್ಟೆ.

ಜಾಗತೀಕರಣ ಶುರುವಾದಂದಿನಿಂದ ಹೊಸ ಹುರುಪು ಪಡೆದಿರುವ ನಮ್ಮ ಯುವ ಜನತೆ ತಮ್ಮ ನಿದ್ರೆ, ಕನಸುಗಳನ್ನು ಸ್ವಲ್ಪಮಟ್ಟಿಗೆ ತ್ಯಾಗ ಮಾಡಿ ಮಧ್ಯರಾತ್ರಿಯ ಕಾಲ್‌ಸೆಂಟರ್‌ಗಳಲ್ಲಿ ದುಡಿಯತೊಡಗಿದ್ದಾರೆ. ಸರ್ಕಾರಿ ಸಂಬಳಕ್ಕಿಂತ ಎರಡು ಪಟ್ಟು ಸಂಬಳ ಪಡೆಯುವ ಅವಕಾಶ ಇರುವ ಇಲ್ಲಿ ಐದರಿಂದ ಹತ್ತು ವರ್ಷ ಶ್ರಮ ಪಟ್ಟು ದುಡಿದು, ನಂತರ ತಮ್ಮದೇ ಒಂದು ವ್ಯವಹಾರದಲ್ಲಿ ತೊಡಗಿಸಿಕೊಳ್ಳುವ ಧಾವಂತದಲ್ಲಿರುವ ಯುವಕ ಯುವತಿಯರು ಪಾಶ್ಚಾತ್ಯರ ಎಲ್ಲ ಸಂಸ್ಕೃತಿಗಳನ್ನು ಪಡೆದರೂ ತಮ್ಮ ಪರಂಪರೆಯಾದ ಬಲಪಂಥೀಯ ವಿಚಾರಧಾರೆಯನ್ನು ಮಾತ್ರ ಬಿಟ್ಟುಕೊಡಲು ಬಯಸುವುದಿಲ್ಲ. ಇದರ ನೇರ ಲಾಭ ಪುರೋಹಿತ ಶಾಹಿಯನ್ನು ತಲುಪುತ್ತಿದೆ. ಇಲ್ಲಿಯವರೆಗೂ ಕೇವಲ ಕೆಲವೇ ವರ್ಗಕ್ಕೆ ಸೀಮಿತವಾಗಿದ್ದ ಸಾರ್ವಜನಿಕ ಪೂಜೆ, ಹೋಮ, ಹವನ ಈಗ ಬಹುತೇಕ ಎಲ್ಲ ಜಾತಿ, ವರ್ಗದ ಜನರನ್ನು ಸಮೂಹಸನ್ನಿಯಂತೆ ಆವರಿಸತೊಡಗಿದೆ. ಹಿಂದೆಲ್ಲ ಮಡಿ ಮೈಲಿಗೆ ಎಂದು ಮೈಲಿ ದೂರ ಹಾರುತ್ತಿದ್ದ, ಹಾರುವ ಪುರೋಹಿತರು ಬದಲಾದ ಜಾಗತಿಕ ಸನ್ನಿವೇಶದಲ್ಲಿ ಪಂಚಮರ ವಿವಾಹೋತ್ಸವವಿರಲಿ, ಗೃಹ ಪ್ರವೇಶವಿರಲಿ ಅಥವಾ ಪುಣ್ಯತಿಥಿಯಂಥ ಕ್ರಿಯಾ ಕರ್ಮಗಳಿರಲಿ ಯಾವುದಕ್ಕೂ ಸಂಕೋಚಿಸದೆ ಹೋಗಿ ಬರುತ್ತಾರೆ.

ಪ್ರಗತಿಪರರು, ಎಡಪಂಥೀಯ ವಿಚಾರಧಾರೆಯುಳ್ಳವರು ಸಾಮ್ರಾಜ್ಯಶಾಹಿಗಳಿಗೆ ಪುರೋಹಿತಶಾಹಿಗೆ ಸಮಾನ ಶತ್ರುಗಳು. ಪ್ರಗತಿಪರರು ಎತ್ತುವ ಸಮಾನತೆಯ ಪ್ರಶ್ನೆ ಇವರಿಬ್ಬರಿಗೆ ಎಂದಿಗೂ ಅಪಥ್ಯ. ಶ್ರೇಣೀಕೃತ ವ್ಯವಸ್ಥೆ ಪ್ರತಿಪಾದಿಸುವ ಪುರೋಹಿತಶಾಹಿ ಲಾಭಕೋರ ಬಂಡವಾಳಶಾಹಿಗೆ ಸದಾ ಪೂರಕವಾಗಿಯೇ ಕಾರ್ಯ ನಿರ್ವಹಿಸುತ್ತದೆ. ಪ್ರಭುತ್ವ ಮತ್ತು ಬಂಡವಾಳಶಾಹಿಯ ನಡುವೆ ಸಂಪರ್ಕ ಸೇತುವೆಯಂತೆ ಕಾರ್ಯ ನಿರ್ವಹಿಸುವ, ಆ ಮೂಲಕ ತನ್ನ ಹಿತ ಸಾಧಿಸಿಕೊಳ್ಳುವ ಈ ಮಂದಿ, ದೇಶದ ದಟ್ಟ ದಾರಿದ್ರ್ಯವನ್ನೂ ಆನಂದಿಸುವ ಕ್ರೂರತೆ ಬೆಳೆಸಿ ಕೊಂಡಿದ್ದಾರೆ. ಆ ಕಾರಣಕ್ಕೇ Fascist ಪಕ್ಷ ಮತ್ತು ಸಂಘಟನೆಗಳು ಎಡಪಂಥೀಯರನ್ನು, ಪ್ರಗತಿಪರರನ್ನು ಜೈಲಿಗಟ್ಟಬೇಕು ಎಂದು ಊಳಿಡುವುದು.

ಜಾಗತೀಕರಣ ಅನಿಯಮಿತ ದೈಹಿಕ ಐಭೋಗಗಳನ್ನು ಮಾತ್ರ ಪ್ರಚೋದಿಸುತ್ತಿಲ್ಲ; ಅನಿಯಮಿತ ಧನದಾಹವನ್ನು ಕೂಡಾ. ನಮ್ಮೆಲ್ಲರ ನೈತಿಕ ಶಕ್ತಿ ಮಾತ್ರ ಇಂಥದ್ದನ್ನು ಪ್ರತಿರೋಧಿಸಲು ಸಾಧ್ಯ. □

ಸಂವಾದ

ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗ ಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಕವನಗಳಿಗೂ ಆಹ್ವಾನವಿದೆ. ಲೇಖನಗಳು 1,500 ಪದಗಳಿಗೆ ಮೀರದಂತಿದ್ದರೆ ಒಳ್ಳೆಯದು.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಪೋಸ್ಟ್ ಮಾರ್ಟಂ

ಮನುಕುಲ, ಪ್ರಾಣಿ, ಪಕ್ಷಿ ಸಂಕುಲಗಳ ಉಳಿವಿಗೆ ಪ್ರಕೃತಿಯು ಎಷ್ಟು ಅವಶ್ಯವೋ, ನಿಸರ್ಗದ ರಕ್ಷಣೆಗೆ ಜೀವ ಸಂಕುಲಗಳೂ ಅಷ್ಟೇ ಅವಶ್ಯಕ. ಈ ಪರಸ್ಪರ ಅವಲಂಬನೆಯನ್ನು ಆಧುನಿಕ ಸಮಾಜ ತನ್ನ ನೈತಿಕ ಜವಾಬ್ದಾರಿ ಎಂದು ತಿಳಿದು ನೈಸರ್ಗಿಕ ಸಮತೋಲನವನ್ನು ಕಾಪಾಡಿದರೆ ಮಾತ್ರ ಪ್ರಕೃತಿಯು ಮಾನವ ಸಮಾಜಕ್ಕೆ ಉಪಯುಕ್ತವಾಗುತ್ತದೆ. ತನ್ನ ಲೌಕಿಕ ಜೀವನದ ಸುಖ ಸಂಪತ್ತುಗಳಿಗಾಗಿ ಆಧುನಿಕತೆಗೆ ಮರುಳಾಗಿ, ಗ್ರಾಹಕ ಸಂಸ್ಕೃತಿಗೆ ಬಲಿಯಾಗಿ, ನೈಸರ್ಗಿಕ-ವಾಯು ಮಾಲಿನ್ಯವನ್ನು ಹರಡುತ್ತಿರುವ ಮನುಕುಲಕ್ಕೆ ಸುನಾಮಿ ಒಂದು ಗಂಭೀರವಾದ ನೈತಿಕ ಸವಾಲಾಗಿ ಪರಿಣಮಿಸಿದೆ.

○ ನಾ. ದಿವಾಕರ

ವಿಶ್ವದ ಶೇಕಡಾ ಎಪ್ಪತ್ತರಷ್ಟು ಭಾಗ ಜಲಾವೃತವಾಗಿದ್ದರೂ, ಭೂಖಂಡವನ್ನು ಅಸ್ವಾಭಾವಿಕವಾಗಿ ವಿಂಗಡಿಸಿ, ಭೌಗೋಳಿಕ ಗಡಿ ರೇಖೆಗಳಿಂದ ಬೇಲಿಗಳನ್ನು ಹಾಕಿಕೊಂಡು ತಮ್ಮದೇ ಆದ ಪ್ರಾಂತ್ಯಗಳನ್ನು ರಚಿಸಿಕೊಂಡು, ಸಾಮ್ರಾಜ್ಯಗಳನ್ನು ಆಳುತ್ತಿರುವ ಪರಿಸರ ವಿರೋಧಿ ಮನುಕುಲಕ್ಕೆ ಸುನಾಮಿ ಒಂದು ಮುನ್ನೆಚ್ಚರಿಕೆ. ಪ್ರಕೃತಿಯ ಸ್ವಾಭಾವಿಕ ಪ್ರಕ್ರಿಯೆಗಳನ್ನೇ ಕಡೆಗಣಿಸಿ, ನಿಸರ್ಗದ ಅವಶ್ಯಕತೆಗಳನ್ನೇ ಅಲ್ಲಗಳೆದು, ಭೂಖಂಡವನ್ನು ವಿನಾಶದ ಅಂಚಿಗೆ ತಳ್ಳುತ್ತಿರುವ ವಿಲಾಸೀ ಮನುಜ ಸಮಾಜಕ್ಕೆ ಸುನಾಮಿ ಸರಿಯಾದ ಪ್ರತ್ಯುತ್ತರ. ಮನುಕುಲ, ಪ್ರಾಣಿ, ಪಕ್ಷಿ ಸಂಕುಲಗಳ ಉಳಿವಿಗೆ ಪ್ರಕೃತಿಯು ಎಷ್ಟು ಅವಶ್ಯವೋ, ನಿಸರ್ಗದ ರಕ್ಷಣೆಗೆ ಜೀವ ಸಂಕುಲಗಳೂ ಅಷ್ಟೇ ಅವಶ್ಯಕ. ಈ ಪರಸ್ಪರ ಅವಲಂಬನೆಯನ್ನು ಆಧುನಿಕ ಸಮಾಜ ತನ್ನ ನೈತಿಕ ಜವಾಬ್ದಾರಿ ಎಂದು ತಿಳಿದು ನೈಸರ್ಗಿಕ ಸಮತೋಲನವನ್ನು ಕಾಪಾಡಿದರೆ ಮಾತ್ರ ಪ್ರಕೃತಿಯು ಮಾನವ ಸಮಾಜಕ್ಕೆ ಉಪಯುಕ್ತವಾಗುತ್ತದೆ. ತನ್ನ ಲೌಕಿಕ ಜೀವನದ ಸುಖ ಸಂಪತ್ತುಗಳಿಗಾಗಿ ಆಧುನಿಕತೆಗೆ ಮರುಳಾಗಿ, ಗ್ರಾಹಕ ಸಂಸ್ಕೃತಿಗೆ ಬಲಿಯಾಗಿ, ನೈಸರ್ಗಿಕ-ವಾಯು ಮಾಲಿನ್ಯವನ್ನು ಹರಡುತ್ತಿರುವ ಮನುಕುಲಕ್ಕೆ ಸುನಾಮಿ ಒಂದು ಗಂಭೀರವಾದ ನೈತಿಕ ಸವಾಲಾಗಿ ಪರಿಣಮಿಸಿದೆ.

ಸಂತ ಕಬೀರದಾಸರ 'ಧರತೀ ಬಾಂಟೇ - ಸಾಗರ್ ಬಾಂಟೇ - ಮತ್ ಬಾಂಟೋ ಇನ್ಸಾನೋ ಕೋ' ಎಂಬ ಕವಿವಾಣಿ ಇಲ್ಲಿ ನೆನಪಾಗುವುದು ಸಹಜ. ಲೋಭ ಸ್ವಾರ್ಥ ಅಧಿಕಾರ ದಾಹ - ಮದ - ಮತ್ಸರ - ದ್ವೇಷ ಅಸೂಯೆಗಳಿಂದ ವಿನಾಶದ ಅಂಚಿಗೆ ತಲುಪುತ್ತಿರುವ ಮನುಕುಲವು, ಭೂಖಂಡವನ್ನು, ಜಲ ಸಂಪತ್ತನ್ನು ತುಂಡರಿಸಿ, ಪ್ರಾದೇಶಿಕ, ಪ್ರಾಂತೀಯ, ಜನಾಂಗೀಯ ಅಧಿಕಾರಕ್ಕಾಗಿ ಧರ್ಮ, ಜಾತಿ, ಭಾಷೆ, ರಾಷ್ಟ್ರೀಯತೆಯ ಹೆಸರಿನಲ್ಲಿ ಭೂ ಮಂಡಲವನ್ನು ಮಾತ್ರವಲ್ಲದೆ ನಭೋ ಮಂಡಲವನ್ನು ಕಲುಷಿತಗೊಳಿಸಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಾಮ್ರಾಜ್ಯಶಾಹಿ ಅಧಿಪತ್ಯದಲ್ಲಿ ಭೂಖಂಡವು ಕ್ರಮೇಣ ತನ್ನ ಪ್ರಾಕೃತಿಕ ಸೌಂದರ್ಯವನ್ನು, ನೈಸರ್ಗಿಕ ಸಂಪತ್ತನ್ನೂ, ಸ್ಥಿತಿ ಸ್ಥಾಪಕತೆಯನ್ನು ಕಳೆದುಕೊಳ್ಳುತ್ತಿರುವುದರಿಂದ ನೈಸರ್ಗಿಕ ವಿಕೋಪಗಳನ್ನು ಎದುರಿಸುವುದು ಅಸಾಧ್ಯವಾಗಿದೆ. ಅನೇಕ ಜಾಗತಿಕ ಮಟ್ಟದ ಪರಿಸರ ಸಮಾವೇಶಗಳಲ್ಲಿ, ಶೃಂಗ ಸಭೆಗಳಲ್ಲಿ ಈ ಅಂಶಗಳ ಬಗ್ಗೆ ಪರಿಸರವಾದಿಗಳು ಎಚ್ಚರಿಕೆ ನೀಡುತ್ತಲೇ ಇದ್ದಾರೆ. ಆದರೂ ಸಹ ಮಾನವ ಸಮಾಜವನ್ನು ಆವರಿಸಿಕೊಂಡಿರುವ ಗ್ರಾನೈಟ್ ಸಂಸ್ಕೃತಿ, ವಿಲಾಸೀ ಪ್ರವೃತ್ತಿ ವಿಲಾಸೀ ಪ್ರವಾಸೀ ಮನೋಭಾವ, ರೆಸಾರ್ಟ್ ಸಂಸ್ಕೃತಿ, ಇವುಗಳೇ ಪರಿಸರ ಸಂರಕ್ಷಣೆಗೆ ಪ್ರಮುಖ ಅಡಚಣೆಗಳಾಗಿವೆ. ಪರಿಸರದ ಬಗ್ಗೆ ಕಾಳಜಿ ವಹಿಸಿ ಹೋರಾಡುವ ಬುದ್ಧಿ ಜೀವಿಗಳನ್ನು ದೇಶದ್ರೋಹಿಗಳೆಂದು ಜರೆಯುವವರು ಈ ಅಂಶವನ್ನು ಅಗತ್ಯವಾಗಿ ಗಮನಿಸಬೇಕು. ಕಡಲ ತೀರಗಳಲ್ಲಿ ಅರಣ್ಯ ಇದ್ದಲ್ಲಿ ಸುನಾಮಿಯ ಪ್ರಭಾವ ಕಡಿಮೆಯಾಗುತ್ತಿತ್ತೆಂದು ವಿಜ್ಞಾನಿಗಳ ಅಭಿಪ್ರಾಯ.

ಪ್ರಸ್ತುತ ಪೀಳಿಗೆಯವರು ಎಂದೂ ಕಂಡರಿಯದ ಕೇಳರಿಯದ ಭೀಕರ ನೈಸರ್ಗಿಕ ವಿಕೋಪ, ಸುನಾಮಿಯ ಮೂಲಕ ಇಡೀ ಮನುಕುಲವನ್ನು ಕಂಗೆಡಿಸಿದೆ. ಜಪಾನೀ ಭಾಷೆಯ ಮೂಲ ಹೊಂದಿರುವ ಸುನಾಮಿ, ಬಂದರಿನ ಅಲೆ ಎಂದು ಪರಿಗಣಿಸಲ್ಪಡುತ್ತದೆ. ಕಡಲಡಿಯಲ್ಲಿ ಭೂಕಂಪನ ಸಂಭವಿಸಿದಾಗ ಮೇಲೇಳುವ ಭಾರೀ ಗಾತ್ರದ ಅಲೆಗಳು, ಸಮುದ್ರದ ಮೇಲ್ಮೈನಲ್ಲಿನ ನೀರನ್ನು ಆವರಿಸಿಕೊಂಡು, ಅತಿ ಎತ್ತರದ ಅಲೆಗಳಾಗಿ ರಭಸದಿಂದ ಮುನ್ನುಗ್ಗುವ ಪ್ರಕ್ರಿಯೆಗೆ ಸುನಾಮಿ ಎಂದು ಕರೆಯಲಾಗುತ್ತದೆ. ಇತಿಹಾಸದಲ್ಲಿ ಇಣುಕಿ ನೋಡಿದಾಗ ಸುನಾಮಿ ದುರಂತ ಕರಾವಳಿ ಪ್ರದೇಶಗಳಲ್ಲಿ ತೀವ್ರ ತರವಾದ ಘಾಸಿ ಉಂಟು ಮಾಡಿರುವುದು ಕಂಡುಬರುತ್ತದೆ. ಭಾರತದ ಸಂದರ್ಭದಲ್ಲಿ ಪ್ರಸ್ತುತ ಪೀಳಿಗೆಯ ಜನತೆಗೆ ಸುನಾಮಿ ಹೊಸ ವಿದ್ಯಮಾನವಾಗಿದ್ದು ಈ ನೈಸರ್ಗಿಕ ಪ್ರಕ್ರಿಯೆಯ ಬಗ್ಗೆ ಅರಿವು ಮೂಡಿಸುವುದು ಅವಶ್ಯವಾಗಿದೆ. ಹಾಗಾಗಿ ಸುನಾಮಿ ದುರಂತವನ್ನು ಭಾವುಕತೆಗೆ ಸೀಮಿತಗೊಳಿಸದೆ ವೈಜ್ಞಾನಿಕ ದೃಷ್ಟಿಕೋನದಿಂದ ಹಾಗೂ ಸಾಮಾಜಿಕ ನೈಸರ್ಗಿಕ ಸಮತೋಲನದ ದೃಷ್ಟಿಯಿಂದ ವಿಶ್ಲೇಷಿಸುವುದು ಇಂದು ಅತ್ಯಗತ್ಯವಾಗಿದೆ.

ಸುನಾಮಿಯ ಸುತ್ತ...



ಡಿಸೆಂಬರ್ ೨೬ರಂದು ಸಂಭವಿಸಿದ ಸುನಾಮಿಯ ಪ್ರಭಾವ ಒಂದು ಸಾವಿರ ಕಿಲೋಮೀಟರ್‌ವರೆಗೂ ವ್ಯಾಪಿಸಿದ್ದು ಸುಮಾತ್ರಾ ದ್ವೀಪದಿಂದ ಚೆನ್ನೈನವರೆಗೂ ಪ್ರಭಾವ ಬೀರಿದೆ. ಈ ಹಿಂದೆ ಭಾರತೀಯ ಉಪಖಂಡದಲ್ಲಿ ೬೦ ವರ್ಷಗಳ ಹಿಂದೆ, ೧೯೪೧ರಲ್ಲಿ ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ಸುನಾಮಿ ಸಂಭವಿಸಿತ್ತು. ಅದಕ್ಕೂ ಮುನ್ನ ೧೮೮೧ರಲ್ಲಿ ಸಂಭವಿಸಿತ್ತೆಂದು ಹೇಳಲಾಗಿದೆ. ಭಾರತೀಯ ಉಪಖಂಡ ಹಾಗೂ ಆಸ್ಟ್ರೇಲಿಯ ಖಂಡಗಳನ್ನು ಹೊತ್ತಿರುವ ಭೂಮಿಯ ಹೊರ ಫಲಕವು, ಏಷ್ಯಾ ಖಂಡವನ್ನು ಹೊತ್ತಿರುವ ಹೊರಫಲಕಕ್ಕಿಂತಲೂ ಕೆಳಕ್ಕಿಳಿಯುತ್ತಿರುವ ಕ್ಷೇತ್ರಕ್ಕೆ ನಿಕಟವಾಗಿರುವುದರಿಂದ ಅಂಡಮಾನ್ ನಿಕೋಬಾರ್ ದ್ವೀಪಗಳು ಭೂಕಂಪಗಳಿಗೆ ಸುಲಭ ತುತ್ತಾಗಿದೆ. ಈ ಎರಡೂ ಭೂ ಕ್ಷೇತ್ರಗಳು ವರ್ಷಕ್ಕೆ ಅಂದಾಜು ೫-೪ ಸೆಂಟಿಮೀಟರ್‌ನಷ್ಟು ಹತ್ತಿರವಾಗುತ್ತಿದ್ದು ಈ ಭೂಫಲಕ ಚಲನೆಯಿಂದ ಭೂಕಂಪಗಳು ಸಂಭವಿಸುತ್ತವೆ.

ಡಿಸೆಂಬರ್ ೨೬ ರಂದು ಉತ್ತರ ಸುಮಾತ್ರಾದ ಪಶ್ಚಿಮ ಕರಾವಳಿಯಲ್ಲಿ ಉಂಟಾದ ೮.೯ ರಿಕ್ಟರ್ ಪ್ರಮಾಣದ ಭೂಕಂಪನವು, ಮುಂದಿನ ೧೦ ಗಂಟೆಗಳ ಅವಧಿಯಲ್ಲಿ ೧೨ ಬಾರಿ ವಿವಿಧ ದೇಶಗಳಲ್ಲಿ ಹರಡಿದೆ. ಈ ಭೂಕಂಪನ ಕೇಂದ್ರದಿಂದ ೨೫೭ ಕಿಲೋಮೀಟರ್ ದೂರದ ಕೊಲಂಬೋ, ೯೯೦ ಕಿಲೋಮೀಟರ್ ದೂರದ ಅಂಡಮಾನ್, ೨೦೨೮ ಕಿಲೋಮೀಟರ್ ದೂರದ ಚೆನ್ನೈ ಹಾಗೂ ೨೧೭೭ ಕಿಲೋಮೀಟರ್ ದೂರದ ಭುವನೇಶ್ವರದಲ್ಲಿ ೧೦ ಕಿಲೋಮೀಟರ್ ಕಡಲಾಳದಲ್ಲಿ ಭೂಕಂಪನ ಸಂಭವಿಸಿದ್ದರಿಂದಲೇ ಸುನಾಮಿ ದುರಂತವು ಹಲವಾರು ರಾಷ್ಟ್ರಗಳಿಗೆ ವ್ಯಾಪಿಸಿ ಹಾನಿಗೊಳಿಸಿದೆ. ಆಧುನಿಕ ಇತಿಹಾಸದಲ್ಲಿ ವಿಶೇಷವಾಗಿ ಕಳೆದ ಎರಡು ಶತಮಾನಗಳ ಅವಧಿಯಲ್ಲಿ ಸುನಾಮಿ ಒಂದು ವಿಧ್ವಂಸಕ ನೈಸರ್ಗಿಕ ಕ್ರಿಯೆಯಾಗಿ ಹಲವಾರು ದೇಶಗಳಿಗೆ ಹಾನಿ ಉಂಟುಮಾಡಿದೆ.

೧೮೮೩ರ ಆಗಸ್ಟ್ ೨೭ ರಂದು ಜಾವಾದ ಸುಂದ್ರಾ ಬಳಿ ಸುನಾಮಿ ಪ್ರಭಾವದಿಂದ ಆಸ್ಫೋಟಗೊಂಡ ಕಾಕ್ರಟಾವು ಅಗ್ನಿ ಪರ್ವತವು ೩೬ ಸಾವಿರ ಜನರನ್ನು ಬಲಿ ತೆಗೆದುಕೊಂಡಿತ್ತು. ೨೭ ಮೀಟರ್ ಎತ್ತರದ ಅಲೆಗಳು, ಇಂದಿನ ಇಂಡೋನೇಷಿಯಾದ ಹಲವಾರು ಸಣ್ಣಪುಟ್ಟ ಕರಾವಳಿ ಪ್ರದೇಶಗಳನ್ನು ಜನ ಸಮುದಾಯಗಳನ್ನು ದ್ವೀಪಗಳನ್ನು ನುಂಗಿಹಾಕಿತ್ತು. ಆಧುನಿಕ ಇತಿಹಾಸದಲ್ಲಿ ಈ ಘಟನೆಯನ್ನು ಅತ್ಯಂತ ಭೀಕರ ಪ್ರಕೃತಿ ವಿಕೋಪವೆಂದು ಪರಿಗಣಿಸಲಾಗುತ್ತದೆ. ಅತಿ ಪ್ರಾಚೀನ ಕಾಲದ ಸುನಾಮಿ ಕ್ರಿ.ಪೂ. ೪೭೯ರಲ್ಲಿ ಏಗಿಯನ್ ಸಮುದ್ರ ಉತ್ತರ ಭಾಗದಲ್ಲಿ ಸಂಭವಿಸಿದ್ದು ದಾಖಲಾಗಿದೆ. ಅನೇಕ ಇತಿಹಾಸಕಾರರ ಅಭಿಪ್ರಾಯದಲ್ಲಿ ಕ್ರಿ.ಪೂ. ೧೫೦೦ರಲ್ಲಿ ಇದೇ ಪ್ರದೇಶದಲ್ಲಿ ಸಂಭವಿಸಿದ ಸ್ಫೋಟದಿಂದ ಪೂರ್ವ ಮೆಡಿಟರೇನಿಯನ್ ಪ್ರಾಂತ್ಯದಲ್ಲಿ ವ್ಯಾಪಕವಾದ ಹಾನಿ ಉಂಟಾಗಿರುವುದು ದಾಖಲಾಗಿದೆ. ೧೭೫೫ರಲ್ಲಿ ಪೋರ್ಚುಗಲ್‌ನ ಆಸ್ಬನ್‌ನಲ್ಲಿ ಸಂಭವಿಸಿದ ಭೂಕಂಪದಿಂದ ಸ್ಪೇನ್, ಪೋರ್ಚುಗಲ್ ಹಾಗೂ ಉತ್ತರ ಆಫ್ರಿಕಾದ ಸಾವಿರಾರು ಕರಾವಳಿ ನಿವಾಸಿಗಳು ನಿರ್ನಾಮವಾದರೆಂದು ದಾಖಲಾಗಿದೆ. ಇತ್ತೀಚಿನ ಇತಿಹಾಸದಲ್ಲಿ ಸುನಾಮಿಯಿಂದ ಹೆಚ್ಚು ಬಾಧಿತವಾಗಿರುವ ರಾಷ್ಟ್ರವೆಂದರೆ ಜಪಾನ್ ಎಂದು ಹೇಳಬಹುದು. ಕ್ರಿ.ಶ. ೬೮೪ ರಿಂದೀಚೆಗೆ ಸುನಾಮಿಗಳಿಂದಲೇ, ಜಪಾನಿನಲ್ಲಿ ೬೬ ಸಾವಿರ ಮಂದಿ ಸಾವಿಗೀಡಾಗಿದ್ದಾರೆ. ೧೮೯೬ರಲ್ಲಿ ಜಪಾನ್‌ನ ಹೊನ್ಶು ಪ್ರಾಂತ್ಯದಲ್ಲಿ ಸಂಭವಿಸಿದ ಸುನಾಮಿ ೨೭ ಸಾವಿರ ಜನರನ್ನು ಬಲಿ ತೆಗೆದುಕೊಂಡಿತ್ತು. ಈ ದುರಂತ ಸಂಭವಿಸಿದಾಗ ಕರಾವಳಿಯ ನಿವಾಸಿಗಳು ತಮ್ಮ ರಜಾ ದಿನಗಳನ್ನು ಸಂಭ್ರಮದಿಂದ ರಸ್ತೆಗಳಲ್ಲಿ ಆಚರಿಸುತ್ತಿದ್ದರೆಂದೂ, ಮೀನುಗಾರರು ಮರುದಿನ ತಮ್ಮ ಮನೆಗಳಿಗೆ ತೆರಳಿದಾಗ ಕೇವಲ ಅವಶೇಷಗಳು ದೊರೆತಿದ್ದವೆಂದೂ ದಾಖಲಾಗಿದೆ.

ಸುನಾಮಿಗಳು ಉಂಟಾಗಬೇಕಾದರೆ ಭೂಕಂಪನವು ಕಡಲ ಅಡಿಯಲ್ಲಿ ಅಥವಾ ಕಡಲ ತೀರದಲ್ಲಿ ಸಂಭವಿಸಬೇಕು, ಜೊತೆಯಲ್ಲೇ ಭಾರಿ ಪ್ರಮಾಣದ ಭೂ ಚಲನೆ ಉಂಟು ಮಾಡಬೇಕು. ಭೂಕಂಪನದ ವಿಸ್ತಾರ, ಆಳ ಮತ್ತು ಗಸಿಯ (ಸೆಡಿಮೆಂಟ್) ಕುಸಿತದ ಪ್ರಮಾಣಗಳೇ ಸುನಾಮಿಯ ಗಾತ್ರವನ್ನು ನಿರ್ಧರಿಸುತ್ತದೆ. ಸರಳವಾಗಿ ಹೇಳುವುದಾದರೆ, ಕಡಲ ನೀರನ್ನು ಸ್ಥಾನಪಲ್ಲಟಗೊಳಿಸುವಂತಹ ಆವೇಗಪರ ವಾದ ಪ್ರಕ್ಷುಬ್ಧತೆಯ ಪರಿಣಾಮವಾಗಿ ಸಾಗರಗಳಲ್ಲಿ ಉಂಟಾಗುವ ಎತ್ತರವಾದ ತರಂಗಮಾನಗಳ ಸರಣಿಯನ್ನೇ ಸುನಾಮಿ ಎಂದು ಬಣ್ಣಿಸಬಹುದು.

ಪ್ರಸ್ತುತ ಸುನಾಮಿಯನ್ನು ಹೊರತುಪಡಿಸಿಯೇ, ಇಂಡೋನೇಷಿಯಾ ದೇಶವು ೩೦ಕ್ಕೂ ಹೆಚ್ಚು ಸುನಾಮಿಗಳಿಂದ ೫೦ ಸಾವಿರಕ್ಕೂ ಹೆಚ್ಚು ಜನರನ್ನು ಕಳೆದುಕೊಂಡಿದೆ. ೧೯೪೬ರ ಏಪ್ರಿಲ್ ಒಂದರಂದು ಸಂಭವಿಸಿದ ಸುನಾಮಿಯಲ್ಲಿ ಅಲೆಗಳು ೨೭ ಮೀಟರ್‌ಗಳಷ್ಟು ಎತ್ತರವಿದ್ದು ಸಾವಿರಾರು ಜನರನ್ನು ಬಲಿತೆಗೆದುಕೊಂಡಿತ್ತು. ೧೬.೮.೧೮೭೬ ರಂದು ಫಿಲಿಫೈನ್ಸ್‌ನ ಮಿಂಡಿನೋವಾದಲ್ಲಿ ಸುನಾಮಿಗೆ ೮ ಸಾವಿರ ಬಲಿಯಾಗಿದ್ದರು. ೨೮.೩.೬೪ ರಂದು ಅಲಾಸ್ಕಾದ ಸುನಾಮಿಯಿಂದ ಅಲಾಸ್ಕಾ, ವ್ಯಾಂಕೋವರ್, ಬ್ರಿಟಿಷ್ ಕೊಲಂಬಿಯಾ, ವಾಷಿಂಗ್‌ಟನ್, ಕ್ಯಾಲಿಫೋರ್ನಿಯಾ, ಹವಾಯಿ ಪ್ರಾಂತ್ಯಗಳಲ್ಲಿ ಅಪಾರ ಪ್ರಾಣ ಹಾನಿ ಉಂಟಾಗಿತ್ತು. ೧೯೬೦ರ ಮೇ ೨೨ ರಂದು ದಕ್ಷಿಣ ಚಿಲಿಯಲ್ಲಿ ೮.೬ ರಿಕ್ಟರ್ ಮಾಪಕದ ಭೂಕಂಪ ಸಂಭವಿಸಿ, ಫೆಸಿಫಿಕ್ ಸಾಗರದಲ್ಲಿ ಸುನಾಮಿ ಉಂಟಾಗಿ, ಸಾವಿರಾರು ಬಲಿ ತೆಗೆದುಕೊಂಡಿತ್ತು. ೧೯೫೨ರ ನವೆಂಬರ್ ೪ ರಂದು ರಷ್ಯಾದ ಕಂಚಟಕಾ ಮತ್ತು ೧೯೦೬ರ ಜನವರಿ ೩೧ ರಂದು ಈಕ್ವಡಾರ್ ಕೊಲಂಬಿಯಾದಲ್ಲಿ ಸಂಭವಿಸಿದ ಸುನಾಮಿ ದುರಂತ ಹಾನಿಕಾರಕವಾಗಿದ್ದವು. ೧೮೬೮ರ ಆಗಸ್ಟ್ ೧೩ ರಂದು ಚಿಲಿ ದೇಶದಲ್ಲಿ ಸಂಭವಿಸಿದ ಸುನಾಮಿ ೨೫ ಸಾವಿರ ಜನರ ಸಾವಿಗೆ ಕಾರಣವಾಗಿತ್ತು. ಈ ಎಲ್ಲಾ ದುರಂತಗಳಿಗೆ ಹೋಲಿಸಿದಲ್ಲಿ ೩ ಲಕ್ಷಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿರುವ ಡಿಸೆಂಬರ್ ೨೬ರ ಸುನಾಮಿ ಅತ್ಯಂತ ಭೀಕರವಾದದ್ದೆಂದು ಹೇಳಬಹುದು. ತದನಂತರದಲ್ಲಿ ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ನಿರಂತರವಾಗಿ ಭೂಕಂಪನವಾಗುತ್ತಿದ್ದು ಜಗತ್ತಿನಾದ್ಯಂತ ವಿಜ್ಞಾನಿಗಳು ಸುನಾಮಿ ಮುನ್ನೆಚ್ಚರಿಕೆಯ ತಂತ್ರಗಳನ್ನು ಅಳವಡಿಸಲು ಸಂಶೋಧನೆಗಳನ್ನೂ ಕೈಗೊಂಡಿದ್ದಾರೆ. ಭಾರತ ಸರ್ಕಾರವು ಸೇರಿದಂತೆ ವಿಶ್ವದ ಬಹುತೇಕ ರಾಷ್ಟ್ರಗಳು ಕಡಲ ತೀರದಲ್ಲಿ ಸುನಾಮಿ ಮುನ್ನೆಚ್ಚರಿಕೆಯ ಸಾಧನಗಳನ್ನು ಅಪಾರ ವೆಚ್ಚದಲ್ಲಿ ಅಳವಡಿಸುತ್ತಿವೆ.

ಸುನಾಮಿಯ ಭೌತಿಕ ಲಕ್ಷಣಗಳು

ಸಮುದ್ರ ಅಥವಾ ಸರೋವರಗಳ ಮೇಲೆ ಬೀಸುವ ಕಡಲ್ಗಾಳಿಯು ನೀರಿನ ಮೇಲ್ಭಾಗದಲ್ಲಿ ತೆರೆಗಳನ್ನುಂಟು ಮಾಡುತ್ತದೆ. ಇದರ ಪರಿಣಾಮವಾಗಿ ಮೇಲ್ಪದರಗಳಿಗೆ ಸೀಮಿತವಾದ ಸಣ್ಣ ಅಲೆಗಳು ಉಂಟಾಗುತ್ತವೆ. ಸಮುದ್ರದಂಚಿನಲ್ಲಿ ಪ್ರತಿನಿತ್ಯ ಭೂಮಿಯನ್ನು ಅಪ್ಪಳಿಸುವ ಉಬ್ಬರವಿಳಿತಗಳೂ ಸಹ ಅಲೆಗಳನ್ನು ಸೃಷ್ಟಿಸುತ್ತದೆ. ಆದರೆ ಹಲವಾರು ನೈಸರ್ಗಿಕ - ವೈಜ್ಞಾನಿಕ ಕಾರಣಗಳಿಗಾಗಿ ಮೃತ್ಯುಸ್ವರೂಪಿ ಸುನಾಮಿ ಅಲೆಗಳು ವಿಭಿನ್ನವಾಗಿರುತ್ತವೆ. ಏಕೆಂದರೆ ಸಾಮಾನ್ಯವಾದ ಕಡಲಲೆಗಳು ಚಂದ್ರನ ಗುರುತ್ವಾಕರ್ಷಣ ಶಕ್ತಿಯಿಂದ ಉಂಟಾದರೆ ಸುನಾಮಿ ಅಲೆಗಳು ಸಮುದ್ರ ತಳದಲ್ಲಿ ಹಠಾತ್ತನೆ ಸಂಭವಿಸುವ ಭೂಕಂಪನದಿಂದ ಉಂಟಾಗುತ್ತವೆ. ಹಾಗಾಗಿ ಕಡಲ ನೀರು ಊರ್ಧ್ವಾಭಿಮುಖವಾಗಿ ಸ್ಥಾನಪಲ್ಲಟವಾಗುತ್ತದೆ. ಈ ರೀತಿಯ ಪ್ರಕ್ಷುಬ್ಧತೆಯಿಂದ ಸಂಭವಿಸುವ ಸರಣಿ ಅಲೆಗಳು ಸುನಾಮಿಯಾಗಿ ಪರಿವರ್ತಿತವಾಗುತ್ತದೆ.

ಈ ರೀತಿ ಸ್ಥಾನಪಲ್ಲಟಗೊಂಡ ನೀರಿನ ದಟ್ಟಣೆಯು ತನ್ನ ಸಮತೋಲನವನ್ನು ಕಾಪಾಡಿಕೊಳ್ಳುವ ಹಂತದಲ್ಲಿ ಭಾರಿ ಅಲೆಗಳು ಉದ್ಭವಿಸುತ್ತವೆ. ಸಮುದ್ರ ತಳದ ಭೂಭಾಗವು ವಿಕೃತಗೊಂಡ ಪ್ರಮಾಣವನ್ನು ಆಧರಿಸಿ ಸುನಾಮಿ ಅಲೆಗಳ ಪ್ರಮಾಣವೂ ನಿರ್ಧರಿತವಾಗುತ್ತದೆ. ಅಲ್ಲಿ ಭೂಭಾಗವು ಹೆಚ್ಚು ಊರ್ಧ್ವಮುಖಿಯಾಗಿ ವಿಕೃತಗೊಂಡಂತೆಲ್ಲಾ ಅಲೆಗಳ ಗಾತ್ರವೂ ಹೆಚ್ಚಾಗುತ್ತಿರುತ್ತದೆ. ಸಾಮಾನ್ಯವಾಗಿ ಎಲ್ಲಾ ಭೂಕಂಪನಗಳೂ ಸುನಾಮಿಯನ್ನು ಸೃಷ್ಟಿಸುವುದಿಲ್ಲ.

ಸುನಾಮಿಗಳು ಉಂಟಾಗಬೇಕಾದರೆ ಭೂಕಂಪನವು ಕಡಲ ಅಡಿಯಲ್ಲಿ ಅಥವಾ ಕಡಲ ತೀರದಲ್ಲಿ ಸಂಭವಿಸಬೇಕು, ಜೊತೆಯಲ್ಲೇ ಭಾರಿ ಪ್ರಮಾಣದ ಭೂ ಚಲನೆ ಉಂಟು ಮಾಡಬೇಕು. ಭೂಕಂಪನದ ವಿಸ್ತಾರ, ಆಳ ಮತ್ತು ಗಸಿಯ (ಸೆಡಿಮೆಂಟ್) ಕುಸಿತದ ಪ್ರಮಾಣಗಳೇ ಸುನಾಮಿಯ ಗಾತ್ರವನ್ನು ನಿರ್ಧರಿಸುತ್ತದೆ. ಸರಳವಾಗಿ ಹೇಳುವುದಾದರೆ, ಕಡಲ ನೀರನ್ನು ಸ್ಥಾನಪಲ್ಲಟಗೊಳಿಸುವಂತಹ ಆವೇಗಪರವಾದ ಪ್ರಕ್ಷುಬ್ಧತೆಯ ಪರಿಣಾಮವಾಗಿ ಸಾಗರಗಳಲ್ಲಿ ಉಂಟಾಗುವ ಎತ್ತರವಾದ ತರಂಗಮಾನಗಳ ಸರಣಿಯನ್ನೇ ಸುನಾಮಿ ಎಂದು ಬಣ್ಣಿಸಬಹುದು. ಗಾಳಿಯಿಂದ ಉಂಟಾಗುವ ಅಲೆಗಳು ಸೀಮಿತವಾದ ಕಾಲಾವಧಿ ಹೊಂದಿದ್ದು ಅನುಕ್ರಮವಾಗಿ ಬರುವ ಎರಡು ಅಲೆಗಳ ನಡುವೆ ೫ ರಿಂದ ೨೦ ಸೆಕೆಂಡುಗಳಷ್ಟು ಕಾಲ ಇರುತ್ತದೆ. ಈ ಅಲೆಗಳ ತರಂಗಮಾನವೂ ಸಾಮಾನ್ಯವಾಗಿ ೩೦೦ ರಿಂದ ೬೦೦ ಅಡಿಗಳಷ್ಟಿರುತ್ತದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಸುನಾಮಿ ಅಲೆಗಳ ತರಂಗಮಾನ ೫೦೦ ಕಿಲೋಮೀಟರ್‌ಗಿಂತಲೂ

ಹೆಚ್ಚಾಗಿದ್ದು, ಕಾಲಾವಧಿ ೧೦ ನಿಮಿಷದಿಂದ ಎರಡು ತಾಸು ಆಗಿರುತ್ತದೆ. ಈ ಅತಿ ಉದ್ದವಾದ ತರಂಗ ಮಾನಗಳಿಂದಲೇ ಸುನಾಮಿ ಅಲೆಗಳು ಮೇಲ್ಪದರದ ನೀರಿನ ಅಲೆಗಳಂತೆ ವರ್ತಿಸುತ್ತದೆ.

ಇಲ್ಲಿ ಕಂಡು ಬರುವ ಮತ್ತೊಂದು ಲಕ್ಷಣವೆಂದರೆ, ನೀರಿನ ಆಳ ಮತ್ತು ತರಂಗಮಾನಗಳ ನಡುವಿನ ಅನುಪಾತವು ಕಡಿಮೆಯಾಗಿದ್ದಲ್ಲಿ, ಅಂತಹ ಸಂದರ್ಭದಲ್ಲಿ ಉಂಟಾಗುವ ಅಲೆಗಳನ್ನು ಮೇಲ್ಮೈ ಅಲೆಗಳೆಂದು ಪರಿಗಣಿಸಲಾಗುತ್ತದೆ. ಒಂದು ಅಲೆಯು ತನ್ನ ಶಕ್ತಿಯನ್ನು ಕಳೆದುಕೊಳ್ಳುವುದು, ಅದರ ತರಂಗಮಾನಕ್ಕೆ (wavelength) ವಿಪರ್ಯಯವಾಗಿ ಸಂಬಂಧಿಸಿರುತ್ತದೆ. ಹಾಗಾಗಿ ಅತಿ ಎತ್ತರದ, ೫೦೦ ಕಿ.ಮೀ. ವಿಸ್ತಾರವುಳ್ಳ ತರಂಗಮಾನಗಳನ್ನು ಹೊಂದಿರುವ ಸುನಾಮಿ ಅಲೆಗಳು ಮುಂದೆ ಸಾಗಿದಂತೆಲ್ಲಾ ಕನಿಷ್ಠ ಶಕ್ತಿ ಕಳೆದುಕೊಳ್ಳುತ್ತದೆ. ಈ ಪ್ರಕ್ರಿಯೆಯ ಪರಿಣಾಮವಾಗಿ ಹೆಚ್ಚು ಆಳ ಹೊಂದಿರುವ ಸಾಗರಗಳಲ್ಲಿ ಉಂಟಾದ ಸುನಾಮಿ ಅಲೆಗಳು ಹೆಚ್ಚು ವೇಗದಿಂದ, ಹೆಚ್ಚು ದೂರ ಕ್ರಮಿಸಿ ಕನಿಷ್ಠ ಮಟ್ಟದ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಉದಾಹರಣೆಗೆ ಸಮುದ್ರದ ಆಳ ೫೦೦೦ ಮೀಟರ್ ಇದ್ದಲ್ಲಿ, ಸುನಾಮಿ ಗಂಟೆಗೆ ೮೯೦ ಕಿ.ಮೀ. ವೇಗದಲ್ಲಿ, ಅಂದರೆ ಜೆಟ್ ವಿಮಾನದ ವೇಗದಲ್ಲಿ ಚಲಿಸುತ್ತವೆ. ನೀರಿನ ಆಳ ೧೦೦೦ ಮೀಟರ್‌ಗಳಿದ್ದರೆ ಸುನಾಮಿ ಗಂಟೆಗೆ ೩೫೬ ಕಿ.ಮೀ. ವೇಗದಲ್ಲೂ, ೫೦೩೦ ಇದ್ದಾಗ ೮೦೦ ಕಿ.ಮೀ, ೬೦೦೦ ಇದ್ದಾಗ ೮೭೩ ಕಿ.ಮೀ. ವೇಗದಲ್ಲಿ ಚಲಿಸುತ್ತವೆ.

ಆಳವಾದ ನೀರಿನಲ್ಲಿ ವೇಗ ಹೆಚ್ಚಾಗಿದ್ದರೆ ಮೇಲ್ಪದರದಲ್ಲಿ ಕಡಿಮೆಯಾಗಿರುತ್ತದೆ. ಹಲವು ಸಮುದ್ರಗಳಲ್ಲಿ ಕೆಲವೆಡೆ ನೀರು ೫೦೦೦ ಮೀಟರ್‌ಗಿಂತಲೂ ಆಳ ಇರುವುದಾದರೂ, ಸರಾಸರಿ ೫೦೦೦ ಮೀಟರ್ ಇರುವುದು ಸಾಮಾನ್ಯವೆಂದು ಪರಿಗಣಿಸಲಾಗುತ್ತದೆ. ಆದ್ದರಿಂದ ಈ ಮಟ್ಟದಲ್ಲಿ ಸುನಾಮಿ ಸರಾಸರಿ ಗಂಟೆಗೆ ೭೫೦ ಕಿ.ಮೀ. ವೇಗದಲ್ಲಿ ಚಲಿಸುತ್ತದೆ. ಫೆಸಿಫಿಕ್ ಸಮುದ್ರದ ಒಂದು ದಡದಿಂದ ಇನ್ನೊಂದು ದಡಕ್ಕೆ ಚಲಿಸಲು ಸುನಾಮಿಗೆ ೨೪ ಗಂಟೆಗಳ ಕಾಲಾವಧಿಯು ಬೇಕಾಗುತ್ತದೆ.

ಸುನಾಮಿ ಅಲೆಗಳಿಗೆ ಅಷ್ಟು ದೂರ ಕ್ರಮಿಸಲು ಶಕ್ತಿ ನೀಡುವ ಪ್ರಕ್ರಿಯೆ ಯಾವುದು ಎಂಬುದು ಕುತೂಹಲಕಾರಿ ಪ್ರಶ್ನೆ. ಅತಿ ವ್ಯಾಪಕವಾದ ಗುರುತ್ವಾಕರ್ಷಣೆಯುಳ್ಳ ಅಲೆಗಳೆಂದು ಸುನಾಮಿಯನ್ನು ಗುರುತಿಸಲಾಗುತ್ತದೆ. ಈ ಅಲೆಗಳು ಮುನ್ನುಗ್ಗಲು ಪರಸ್ಪರ ಕಾರ್ಯನಿರ್ವಹಿಸುವ ಎರಡು ಪ್ರಕ್ರಿಯೆಗಳು ಸಹಾಯಕವಾಗುತ್ತವೆ. ಮೊದಲನೆಯದಾಗಿ ಸಮುದ್ರದ ಮೇಲ್ಭಾಗದ ಇಳಿಜಾರು ಎಷ್ಟರ ಮಟ್ಟಿಗಿದೆ ಎಂಬ ಅಂಶವನ್ನು ಅವಲಂಬಿಸಿ ಸಮತಲವಾದ ಒತ್ತಡ ಉಂಟಾಗುತ್ತದೆ. ಎರಡನೆಯ ಪ್ರಕ್ರಿಯೆ ಎಂದರೆ, ಅಲೆಗಳು ಚಲಿಸುತ್ತಿರುವ ದಿಕ್ಕಿನಲ್ಲಿ ನೀರು ವಿವಿಧ ವೇಗಗತಿಯಲ್ಲಿ ಸಾಗುತ್ತಿರುವಂತೆಲ್ಲಾ, ಸಮುದ್ರದ ಮೇಲ್ಪದರವು ಇಳಿಮುಖವಾಗಿ, ಅಲೆಗಳು ಒಂದರ ಮೇಲೊಂದು ಶೇಖರಣೆಯಾಗುತ್ತದೆ. ಈ ಎರಡೂ ಪ್ರಕ್ರಿಯೆಗಳು ಸರಿಯಾದ ವೇಳೆಯಲ್ಲಿ ಸೂಕ್ತ ಸಂಬಂಧ ಹೊಂದಿದ್ದಲ್ಲಿ ಅವು ವ್ಯಾಪಕವಾಗಿ ಹರಡಲಾರಂಭಿಸುತ್ತವೆ. ಸುನಾಮಿ ಅಲೆಗಳು ಆಳವಾದ ಸಮುದ್ರವನ್ನು ದಾಟಿದ ನಂತರದಲ್ಲಿ, ಅವುಗಳ ತರಂಗಮಾನ ೧೦೦ ಕಿ.ಮೀ. ಗಿಂತಲೂ ಹೆಚ್ಚಾಗಿದ್ದರೆ, ಅದರ ಹರವು ಕೆಲವೇ ಅಡಿಗಳಷ್ಟಿ ರುತ್ತದೆ. ಹಡಗುಗಳಲ್ಲಿ ಚಲಿಸುವಾಗ ಅಥವಾ ಬಾನಿಂದ ನೋಡಿದಾಗ ಈ ಅಲೆಗಳು ಗೋಚರಿಸುವುದಿಲ್ಲ. ಇಷ್ಟು ವೇಗವನ್ನು ಪಡೆದಿದ್ದರೂ ಸುನಾಮಿ ಅಲೆಗಳು ಭೂಕಂಪದ ಅಲೆಗಳಿಗಿಂತಲೂ ಮಂದಗತಿಯಲ್ಲಿ ಚಲಿಸುತ್ತವೆ.

ಹಾಗಾಗಿಯೇ ಸುನಾಮಿ ಅಲೆಗಳು ಸಮುದ್ರ ತೀರವನ್ನು ದಾಟುವ ಮುನ್ನವೇ ಭೂಕಂಪದ ಮಾಹಿತಿ ಲಭ್ಯವಾಗಿರುತ್ತದೆ. ಚೆನ್ನೈನಲ್ಲಿ ಮುಂಜಾನೆ ೬.೩೦ರಲ್ಲಿ ಭೂಕಂಪನವಾಯಿತಾದರೂ, ಅದು ಕಡಲ ತೀರ ತಲುಪಲು ೨-೩ ತಾಸು ಬೇಕಾಯಿತು.

ಸುನಾಮಿ ಅಲೆಗಳು ಕಡಲಾಳವನ್ನು ತೊರೆದು ಮೇಲ್ಪದರದೆಡೆಗೆ, ತೀರದೆಡೆಗೆ ಚಲಿಸಿದಂತೆಲ್ಲಾ ಅದರಲ್ಲಿ ಪರಿವರ್ತನೆ ಉಂಟಾಗುತ್ತಿರುತ್ತದೆ. ಪರಿವರ್ತನೆಯಿಂದ ಅದರ ವೇಗಗತಿಯೂ ಪ್ರಭಾವಿತವಾಗುತ್ತದೆ. ಹಾಗಾಗಿ ಸುನಾಮಿಯ ವೇಗವು ಸಮುದ್ರದ ಆಳಕ್ಕೆ ನೇರವಾಗಿ ಸಂಬಂಧಿಸಿರುತ್ತದೆ. ಇದರ ಪರಿಣಾಮವಾಗಿ ಅಲೆಗಳ ನಡುವಿನ ಅಂತರ ಕಡಿಮೆಯಾಗುತ್ತದೆ. ಅಲೆಗಳಲ್ಲಿನ ಶಕ್ತಿಯ ರಕ್ಷಣೆಯ ಸಲುವಾಗಿ, ಅಲೆಗಳು ತಗ್ಗಿದಂತೆಲ್ಲಾ ಅದರ ಎತ್ತರ ಹೆಚ್ಚಾಗುತ್ತಿರುತ್ತದೆ. ಹಾಗಾಗಿ ಅಲೆಗಳು ಮೂವತ್ತು ಅಡಿ ಎತ್ತರಕ್ಕೆ ಏರಿದರೂ, ಸುನಾಮಿಯ ಶಕ್ತಿ ಮಾತ್ರ ಒಂದೇ ಸಮವಾಗಿರುತ್ತದೆ. ಇದನ್ನು ಶೋಲಿಂಗ್ ಎಂದು ಕರೆಯಲಾಗುತ್ತದೆ. ಅಂದರೆ ಅಲೆಗಳು ಹಿಂಡು ಹಿಂಡಾಗಿ ಚಲಿಸುತ್ತಿರುತ್ತವೆ. ಈ ಶೋಲಿಂಗ್‌ನ ಪರಿಣಾಮವಾಗಿ ಕಡಲಾಳದಲ್ಲಿ ಸುಪ್ತವಾಗಿದ್ದ ಸುನಾಮಿ ಅಲೆಗಳು ಕಡಲ ತೀರ ತಲುಪುತ್ತಿದ್ದಂತೆಲ್ಲಾ ಅಲೆಗಳ ವ್ಯಾಪ್ತಿ ಮತ್ತು ಎತ್ತರ ಹೆಚ್ಚಾಗುತ್ತಿರುತ್ತದೆ. ಹಾಗಾಗಿಯೇ ಸುನಾಮಿ ಅತ್ಯಂತ ಹಾನಿಕಾರಕವಾಗಿ ಪರಿಣಮಿಸುತ್ತವೆ. ಪ್ರಪಂಚದ ಎಲ್ಲಾ ಸಮುದ್ರ ಪ್ರದೇಶಗಳು ಸುನಾಮಿಯಿಂದ ಭಾದಿತವಾಗಿರುತ್ತವೆ. ಆದರೆ ಫೆಸಿಫಿಕ್ ಸಮುದ್ರದಲ್ಲಿ ಸುನಾಮಿ ಹೆಚ್ಚಾಗಿ ಸಂಭವಿಸುತ್ತದೆ. ಫೆಸಿಫಿಕ್ ಸಮುದ್ರ ತೀರದಲ್ಲಿ ಭಾರೀ ಭೂಕಂಪಗಳು ಸಾಮಾನ್ಯವಾದ್ದರಿಂದ ಅಲ್ಲಿ ಸಂಭವಿಸುವ ಸುನಾಮಿ ಅತ್ಯಂತ ಹಾನಿಕಾರಕವಾಗಿರುತ್ತದೆ.

ಮನುಕುಲವು ಭೂಮಿಯ ವಿವಿಧ ಪ್ರದೇಶಗಳನ್ನು ದೇಶಗಳಾಗಿ, ಖಂಡಗಳಾಗಿ ವಿಂಗಡಿಸುವ ವಿಧಾನವನ್ನು ಹೊಂದಿದ್ದರೆ, ಪ್ರಕೃತಿಯೂ ತನ್ನದೇ ಆದ ರೀತಿಯಲ್ಲಿ ವಿಂಗಡಿಸಿರುತ್ತದೆ. ಭೂಗ್ರಹದ ಮೇಲ್ಮೈ ಭಾಗವು ವ್ಯಾಪಕವಾಗಿರುವ ಒಂದೇ ಭೂ ಭಾಗವಲ್ಲ, ಬದಲಾಗಿ ಅದು ಹಲವಾರು ಸಣ್ಣ-ದೊಡ್ಡ ಫಲಕಗಳಾಗಿ ವಿಂಗಡಿಸಲ್ಪಟ್ಟಿರುತ್ತದೆ.

ಭೂಕಂಪನಗಳ ಕುರಿತು

ಮನುಕುಲವು ಭೂಮಿಯ ವಿವಿಧ ಪ್ರದೇಶಗಳನ್ನು ದೇಶಗಳಾಗಿ, ಖಂಡಗಳಾಗಿ ವಿಂಗಡಿಸುವ ವಿಧಾನವನ್ನು ಹೊಂದಿದ್ದರೆ, ಪ್ರಕೃತಿಯೂ ತನ್ನದೇ ಆದ ರೀತಿಯಲ್ಲಿ ವಿಂಗಡಿಸಿರುತ್ತದೆ. ಭೂಗ್ರಹದ ಮೇಲ್ಮೈ ಭಾಗವು ವ್ಯಾಪಕವಾಗಿರುವ ಒಂದೇ ಭೂ ಭಾಗವಲ್ಲ, ಬದಲಾಗಿ ಅದು ಹಲವಾರು ಸಣ್ಣ-ದೊಡ್ಡ ಫಲಕಗಳಾಗಿ ವಿಂಗಡಿಸಲ್ಪಟ್ಟಿರುತ್ತದೆ. ಈ ಫಲಕಗಳನ್ನು ಲಿಥೋಸ್ಪರಿಕ್ (Lithospheric) ಫಲಕಗಳೆಂತಲೂ ಕರೆಯಲಾಗುತ್ತದೆ. ಒಂದು ಫಲಕವು ಭಾರೀ ಗಾತ್ರದ ವಿಕೃತ ಆಕಾರದ ಗಟ್ಟಿಯಾದ ಹೆಬ್ಬಂಡೆಯಂತಿರುತ್ತದೆ ಮತ್ತು ಇವು ಭೂಖಂಡದ ಮತ್ತು ಸಾಗರದ ಶಿಲೆಗಳನ್ನು ಹೊಂದಿರುತ್ತವೆ. ೫೦ ಮೈಲಿಗಳಷ್ಟು ದಪ್ಪವಿರುವ ಈ ಫಲಕಗಳು ಒಂದೇ ಸ್ಥಳದಲ್ಲಿ ಸ್ಥಿರವಾಗಿರದೆ, ಸರಾಸರಿ ವರ್ಷಕ್ಕೆ ಕೆಲವು ಇಂಚುಗಳಷ್ಟು ದೂರ ಚಲಿಸುತ್ತಿರುತ್ತವೆ. ಈ ಫಲಕಗಳು ತಮ್ಮ ಗಡಿ ರೇಖೆಗಳಲ್ಲಿ ಒಂದಕ್ಕೊಂದು ಸ್ಪರ್ಶಿಸಿದಾಗ, ಭೂಕಂಪಗಳು - ಜ್ವಾಲಾಮುಖಿಗಳು ಸಂಭವಿಸುತ್ತವೆ.

ಆದರೆ ಎಲ್ಲಾ ಫಲಕಗಳ ಚಲನೆಗಳೂ ಈ ರೀತಿ ಘರ್ಷಣೆಯಲ್ಲಿ ಕೊನೆಗೊಳ್ಳುವುದಿಲ್ಲ. ಎರಡು ಫಲಕಗಳ ನಡುವೆ ಗಡಿ ರೇಖೆಗಳಲ್ಲಿ ಮೂರು ರೀತಿಯ ಚಲನೆಗಳನ್ನು ಗುರುತಿಸಲಾಗುತ್ತದೆ. ಅವುಗಳೆಂದರೆ ಏಕಾಗ್ರಮುಖ ಚಲನೆ, ದಿಕ್ಚ್ಯುತಿಣ ಚಲನೆ ಮತ್ತು ಪರಿವರ್ತನಾ ಚಲನೆ. (CONERGENCE, DIVERGENCE AND TRANSFORMING) ದಿಕ್ಚ್ಯುತಿಯ ಅಂಚಿನಲ್ಲಿ ಲಾವಾದ ಹರಿಯುವಿಕೆಯಿಂದ ಫಲಕಗಳು ಪರಸ್ಪರ ದೂರವಾದಾಗ ಹೊಸದಾದ ಗಟ್ಟಿಪೊರೆಯು ಉಂಟಾಗುತ್ತದೆ. ಇನ್ನೊಂದೆಡೆ ಏಕಾಗ್ರಮುಖ ಚಲನೆಯು ಅಂಚಿನಲ್ಲಿ ಒಂದು ಫಲಕವು ಇನ್ನೊಂದು ಫಲಕದಡಿಯಲ್ಲಿ ನುಸುಳುವುದರಿಂದ ಫಲಕಗಳು ನಾಶವಾಗುತ್ತವೆ. ಪರಿವರ್ತನಾ ಚಲನೆಯ ಅಂಚಿನಲ್ಲಿ ಈ ಎರಡೂ ಪ್ರಕ್ರಿಯೆಗಳು ಸಂಭವಿಸದೆ, ಫಲಕಗಳು ಸಮಾನಾಂತರವಾಗಿ ಒಂದನ್ನೊಂದು ಹಾದು ಹೋಗಿಬಿಡುತ್ತವೆ. ಸಾಗರತಳವೆಂದು ಪರಿಗಣಿಸಲಾಗುವ ಹೊಸ ಪೊರೆಗಳ ಉದ್ಭವ ದಿಕ್ಚ್ಯುತಿ ಗಡಿಗಳ ವಿಸ್ತರಣೆ ಮತ್ತು ಏಕಾಗ್ರ ಮುಖಫಲಕದ ಅಂಚಿನಲ್ಲಿ ಉಂಟಾಗುವ ವಿನಾಶಗಳು, ಒಂದೇ ಪ್ರಮಾಣದಲ್ಲಿ ನಡೆಯುತ್ತದೆ. ಫಲಕಗಳ ರಚನೆಯ ಮೂಲ ತಿರುಳು ಇದೇ ಆಗಿದ್ದು ಭೂಖಂಡವನ್ನು ಹಾನಿಗೊಳಪಡಿಸುವ ಭೂಕಂಪಗಳು ಜ್ವಾಲಾಮುಖಿಗಳು ಸಂಭವಿಸುವುದನ್ನು ಈ ಪ್ರಕ್ರಿಯೆ ವಿವರಿಸುತ್ತದೆ.

Tectonic Plate Boundaries • Active Volcanoes

ಉತ್ತರ ಸುಮಾತ್ರದ ಪಶ್ಚಿಮ ಕರಾವಳಿಯಲ್ಲಿ ಡಿಸೆಂಬರ್ ೨೬ ರಂದು ಸಂಭವಿಸಿದ ಭೂ ಕಂಪನಗಳು ಭಾರತೀಯ ಉಪಖಂಡದ ಮತ್ತು ಬರ್ಮಾದ ಫಲಕಗಳ ನಡುವೆ ಸಂಭವಿಸಿದೆ. ಬರ್ಮಾದ ಭೂ ಫಲಕಗಳಿಗೆ ಸಂಬಂಧಿಸಿದಂತೆ ವರ್ಷಕ್ಕೆ ೫ ಸೆಂಟಿ ಮೀಟರಿನಷ್ಟು ಚಲಿಸುತ್ತಿರುವ ಭಾರತದ ಫಲಕಗಳು ಏಕಾಗ್ರಮುಖ ಫಲಕದ ಅಂಚಿನಲ್ಲಿ ಬರ್ಮಾದ ಫಲಕದೊಡನೆ ಒಟ್ಟಾಗಿ ಸೇರಿದಾಗ ಘರ್ಷಣೆ ಉಂಟಾಗಿ, ಭಾರತೀಯ ಫಲಕವು ಬರ್ಮಾದ ಫಲಕಗಳ ಕೆಳಗೆ ಸೇರಿಕೊಂಡಿದ್ದರ ಫಲವಾಗಿ ಈ ಭೂಕಂಪ ಸಂಭವಿಸಿದೆ. ಇದರೊಂದಿಗೆ ಆಸ್ಟ್ರೇಲಿಯಾ, ಸುಂದಾ, ಯುರೇಸಿಯಾದ ಫಲಕಗಳು ಪರಸ್ಪರ ಘರ್ಷಣೆಯಾಗಿದ್ದರಿಂದ, ಭೂಕಂಪನ ಪ್ರಮಾಣವೂ ತೀವ್ರವಾಗಿತ್ತು.

ಭೂ ಫಲಕಗಳ ಅಂಚಿನಲ್ಲಿ ವಿವಿಧ ಫಲಕಗಳ ನಡುವೆ ನಡೆಯುವ ಘರ್ಷಣೆ ಒಂದು ಪ್ರಕ್ರಿಯೆಯಾದರೆ, ಫಲಕ ರಚನೆಯು ಎರಡು ರೀತಿಯ ಫಲಕಗಳನ್ನು ಆಧರಿಸಿರುತ್ತದೆ. ಒಂದು ಭೂಖಂಡ ಫಲಕವಾದರೆ ಇನ್ನೊಂದು ಸಾಗರದ ಫಲಕ ಅಥವಾ ಜಸಿಯಾನಿಕ್ ಫಲಕವೆಂದು ಪರಿಗಣಿಸಲಾಗುತ್ತದೆ. ಹಾಗಾಗಿ ಫಲಕಗಳ ಘರ್ಷಣೆಯು ಮೂರು ವಿಧದಲ್ಲಿ ಉಂಟಾಗಬಹುದು.

ಎರಡು ಭೂ ಖಂಡ ಫಲಕಗಳ ಘರ್ಷಣೆಯ ಪ್ರಮುಖ ನಿದರ್ಶನವೆಂದರೆ, ಭಾರತೀಯ ಉಪಖಂಡದ ಫಲಕಗಳು ಯುರೇಶಿಯಾದ ಫಲಕಗಳೊಡನೆಯ ಘರ್ಷಣೆಯಿಂದ ಹಿಮಾಲಯ ಪರ್ವತಗಳ ಸೃಷ್ಟಿಯಾಗಿರುವುದು. ಈ ಎರಡೂ ಫಲಕಗಳು ಒಂದೇ ಪ್ರಮಾಣದ ಸಾಂದ್ರತೆಯನ್ನು ಹೊಂದಿರುವುದರಿಂದ ಭಾರೀ ಗಾತ್ರದ ಪರ್ವತಗಳು ಸೃಷ್ಟಿಯಾಗಿವೆ. ಡಿಸೆಂಬರ್ ೨೬ ರಂದು ಸಂಭವಿಸಿದ ಭೂ ಕಂಪನವು ಎರಡು ಸಾಗರ ಫಲಕಗಳ ಘರ್ಷಣೆಯಿಂದ ಉಂಟಾಗಿದ್ದು ಈ ರೀತಿಯ ಏಕಾಗ್ರ ಮುಖದ ಅಂಚಿನಲ್ಲಿ ಜ್ವಾಲಾಮುಖಿಗಳು ಸಾಮಾನ್ಯವಾಗಿ ಉಂಟಾಗುತ್ತವೆ.

ಸುಮಾತ್ರದಲ್ಲಿ ಸಂಭವಿಸಿದ ಭೂಕಂಪದ ವೈಶಿಷ್ಟ್ಯವೆಂದರೆ, ಭೂಮಿಯಲ್ಲಿ ಫಲಕಗಳ ಘರ್ಷಣೆ ಉಂಟಾಗುವ ಕೇಂದ್ರ ಬಿಂದು ಸಾಗರ ತೀರಕ್ಕೆ ಬಹಳ ಹತ್ತಿರವಾಗಿತ್ತು. ಅಂದರೆ, ನೀರಿನ ಆಳ ಕೇವಲ ೧೦ ಕಿ.ಮೀಗಳಷ್ಟಿತ್ತು. ಕಡಲಾಳದಲ್ಲಿ ಸಂಭವಿಸುವ ಭೂಕಂಪಗಳಿಗಿಂತಲೂ ಸಾಗರದ ಮೇಲ್ಪದರದಲ್ಲಿ ಸಂಭವಿಸುವ ಕಂಪನಗಳು ಹೆಚ್ಚು ಹಾನಿಕಾರಕವಾಗಿರುತ್ತದೆ. ಇಲ್ಲಿ ಗಮನಾರ್ಹವಾದ ಅಂಶವೆಂದರೆ, ಭಾರತದ ಭೂ ಫಲಕಗಳು ಬರ್ಮಾದ ಫಲಕಗಳ ಕೆಳಗೆ ತೂರಿದಾಗ ಬರ್ಮಾದ ಫಲಕಗಳು ೧೫ ಮೀಟರ್ ಗಳಷ್ಟು ಮೇಲಕ್ಕೇರಿದವು. ಈ ರೀತಿಯಾದ ಭೂ ಫಲಕಗಳ ಊರ್ಧ್ವಮುಖ ಚಲನೆ ಹಿಂದೆಂದೂ ಕೇಳಿದ್ದೇ ಇರಲಿಲ್ಲ ಎನ್ನುತ್ತಾರೆ; ಹೈದರಾಬಾದ್‌ನ ನ್ಯಾಷನಲ್ ಜಿಯೋ ಫಿಸಿಕಲ್ ರಿಸರ್ಚ್ ಸಂಸ್ಥೆಯ ನಿರ್ದೇಶಕರಾದ ಆರ್. ಕೆ. ಚಡ್ಡಾ.

ಬರ್ಮಾದಲ್ಲಿ ಸಂಭವಿಸಿದ ಭೂಕಂಪದ ನಂತರದಲ್ಲಿ ಎರಡು ತಾಸುಗಳ ಅವಧಿಯಲ್ಲಿ ಅಂಡಮಾನ್ ದ್ವೀಪಗಳಲ್ಲಿ ಪ್ರಭಾವಿತವಾಗಿದ್ದು ಈ ಪ್ರಕ್ರಿಯೆಯಿಂದ ಬರ್ಮಾದ ಭೂ ಫಲಕಗಳ ಅಂಚು ೧೦೦೦ ಕಿ.ಮೀನಷ್ಟು ಚಲಿಸಿದೆ. ಇದು ಸುಮಾತ್ರದಲ್ಲಿ ಸಂಭವಿಸಿದ ಭೂಕಂಪದ ಶಕ್ತಿಯ ತಿರುಳು ಎಂದು ಹೇಳಬಹುದು. ಈ ಫಲಕಗಳ ಅಂಚಿನಲ್ಲಿ ಬಿರುಕು ಬಿಟ್ಟಿರುವುದನ್ನು ಅಮೇರಿಕಾದ ವಿಜ್ಞಾನಿಗಳು ಬೃಹತ್ ಒತ್ತಡದ ಭೂಕಂಪನವೆಂದು ಬಣ್ಣಿಸಿದ್ದಾರೆ. ಈ ವಿಜ್ಞಾನಿಗಳ ಅಭಿಪ್ರಾಯದಲ್ಲಿ ಈ ರೀತಿಯ ಭೂಕಂಪಗಳು ವ್ಯಾಪಕವಾಗಿ ಹಾನಿ ಉಂಟು ಮಾಡುತ್ತವೆ. ಭಾರೀ ಗಾತ್ರದ ಆಳವಿಲ್ಲದೆ ಸಾಂದ್ರತೆಯ ಪರಿಣಾಮವಾಗಿ ಬರ್ಮಾದ ಭೂ ಫಲಕಗಳು ಊರ್ಧ್ವಮುಖವಾಗಿ ಚಲಿಸಿದ್ದರಿಂದ ನೀರೆತ್ತುವ ಎಂಜಿನ್‌ನಂತೆ ಸಾಗರವನ್ನೇ ಅಲ್ಲೋಲಕಲ್ಲೋಲಗೊಳಿಸಿದ್ದರ

ಎರಡು ಫಲಕಗಳ ನಡುವೆ ಗಡಿ ರೇಖೆಗಳಲ್ಲಿ ಮೂರು ರೀತಿಯ ಚಲನೆಗಳನ್ನು ಗುರುತಿಸಲಾಗುತ್ತದೆ. ಅವುಗಳೆಂದರೆ ಏಕಾಗ್ರಮುಖ ಚಲನೆ, ದಿಕ್ಚ್ಯುತಿಶ ಚಲನೆ ಮತ್ತು ಪರಿವರ್ತನಾ ಚಲನೆ. (CONERGENCE, DIVERGENCE AND TRANSFORM-ING) **ದಿಕ್ಚ್ಯುತಿಯ ಅಂಚಿನಲ್ಲಿ ಲಾವಾದ ಹರಿಯುವಿಕೆಯಿಂದ ಫಲಕಗಳು ಪರಸ್ಪರ ದೂರವಾದಾಗ ಹೊಸದಾದ ಗಟ್ಟಿ ಪೊರೆಯು ಉಂಟಾಗುತ್ತದೆ. ಇನ್ನೊಂದೆಡೆ ಏಕಾಗ್ರಮುಖ ಚಲನೆಯು ಅಂಚಿನಲ್ಲಿ ಒಂದು ಫಲಕವು ಇನ್ನೊಂದು ಫಲಕದಡಿಯಲ್ಲಿ ನುಸುಳುವುದರಿಂದ ಫಲಕಗಳು ನಾಶವಾಗುತ್ತವೆ. ಪರಿವರ್ತನಾ ಚಲನೆಯ ಅಂಚಿನಲ್ಲಿ ಈ ಎರಡೂ ಪ್ರಕ್ರಿಯೆಗಳು ಸಂಭವಿಸದೆ, ಫಲಕಗಳು ಸಮಾನಾಂತರವಾಗಿ ಒಂದನ್ನೊಂದು ಹಾದು ಹೋಗಿಬಿಡುತ್ತವೆ.**

ಫಲವಾಗಿ ಸುಮಾತ್ರದ ಭೂಕಂಪವು ಭಾರೀ ಸುನಾಮಿಯಾಗಿ ಪರಿಣಮಿಸಿತ್ತು. ಇದರಿಂದ ೧೦೦೦ ಕಿ.ಮೀ. ವಿಸ್ತೀರ್ಣದ ಭೂ ಫಲಕಗಳು ಕುಸಿದಿವೆ ಎಂದು ಹೇಳಲಾಗಿದೆ. ನೀರಿನ ಗುರುತ್ವಾಕರ್ಷಣ ಶಕ್ತಿ ಮತ್ತು ಅಸಂಕೋಚನೆಯಿಂದ, ಭೂ ಫಲಕಗಳ ಮೇಲ್ಭಾಗದ ಸಾಗರವು ತಕ್ಷಣ ಕ್ರಿಯಾಶೀಲವಾಗುತ್ತದೆ. ಭಾರೀ ಪ್ರಮಾಣದ ನೀರು ಸ್ಥಾನ ಪಲ್ಲಟಗೊಳ್ಳುತ್ತದೆ. ಮೇಲ್ಪದರದಲ್ಲಿನ ನೀರು ಕೆಟ್ಟು ಜಾರಲು ಆರಂಭಿಸುವು ದರಿಂದ ಸುನಾಮಿ ಉಂಟಾಗುತ್ತದೆ.

ಭೂಫಲಕಗಳ ಘರ್ಷಣೆಯು ಭೂ ಭಾಗದಲ್ಲಿ ಉಂಟಾದಾಗ ಭೂಕಂಪನವಾದರೆ, ಸಾಗರದಡಿ ಸಂಭವಿಸಿದಾಗ ಸುನಾಮಿ ಉಂಟಾಗುತ್ತದೆ. ಭೂಮಿಯ ಮೇಲೆ ಸಂಭವಿಸುವ ಕಂಪನಗಳಲ್ಲಿ ಕುಸಿಯುವ ಕಟ್ಟಡಗಳಿಂದ ಸಾವು ನೋವು ಉಂಟಾಗುವುದೇ ಹೊರತು ಭೂಕಂಪನದಿಂದಲ್ಲ. ಅದೇ ರೀತಿ ಸಾಗರದ ತಳದಲ್ಲಿ ಸಂಭವಿಸುವ ಭೂಕಂಪನಗಳಿಗಿಂತಲೂ, ಸುನಾಮಿಗಳಿಂದಲೇ ಸಾವು ನೋವುಗಳು ಸಂಭವಿಸುತ್ತವೆ. ರಿಕ್ಟರ್ ಮಾಪನದಲ್ಲಿ ೬.೫ ಪ್ರಮಾಣದಲ್ಲಿ ಸಂಭವಿಸುವ ಸುನಾಮಿಗಳು ಬೇಗನೇ ಶಮನವಾಗುತ್ತವೆ. ಹಿಂದೂ ಮಹಾಸಾಗರದ ವ್ಯಾಪಕ ವಿಸ್ತಾರವು ಸುನಾಮಿಗೆ ಯಾವುದೇ ಅಡಚಣೆ ಉಂಟು ಮಾಡಲಿಲ್ಲ. ೫೦೦೦ ಕಿಲೋಮೀಟರ್ ವಿಸ್ತೀರ್ಣವನ್ನು ಸುಲಭವಾಗಿ ಕ್ರಮಿಸುವ ಸುನಾಮಿಗೆ ೨೦೦೦ ಕಿ.ಮೀ. ಕ್ರಮಿಸುವುದು ಕಷ್ಟವೇನಾಗಲಿಲ್ಲ. ಭಾರತದ ಕಡಲ ತೀರವನ್ನು ಅಪ್ಪಳಿಸಿರುವ ಭಾರೀ ಪ್ರಮಾಣದ ಸುನಾಮಿ ಇದೇ ಪ್ರಥಮವಾದರೂ ಮುಂದಿನ ದಿನಗಳಲ್ಲಿ ಕಡಿಮೆ ಪ್ರಮಾಣದ ಸುನಾಮಿ ಸಂಭವಿಸುವುದನ್ನು ಅಲ್ಲಗಳೆಯಲಾಗುವುದಿಲ್ಲ. ಇನ್ನೊಂದು ಸುನಾಮಿ ಸಂಭವಿಸುವುದು ಹಲವಾರು ವರ್ಷಗಳ ನಂತರವಾದರೂ ಅದನ್ನು ನಿರ್ಲಕ್ಷಿಸುವುದು ತರವಲ್ಲ.

ಭೂಕಂಪನ ಕೇಂದ್ರದ ಪಶ್ಚಿಮಕ್ಕೆ ಇರುವ ಕಂದಕವು ಭಾರತ, ಬರ್ಮಾ ಭೂ ಫಲಕಗಳ ಘರ್ಷಣೆಯ ಮುಖ್ಯ ಕೇಂದ್ರ ಬಿಂದುವಾಗಿದೆ. ಒಂದೆಡೆ ಭೂ ಫಲಕಗಳ ಒಂದರ ಕೆಳಗೊಂದು ಸೇರಿಕೊಳ್ಳುವ ಪ್ರಕ್ರಿಯೆ ಬರ್ಮಾದ ಭೂ ಫಲಕಗಳ ಪಶ್ಚಿಮದ ಅಂಚಿನಲ್ಲಿದ್ದರೆ, ಪೂರ್ವದಲ್ಲಿ ಜಸಿಯಾನಿಕ್ ಘರ್ಷಣೆಯಿಂದ ಹೊಸ ಸಾಗರ ತಳ ನಿರ್ಮಾಣವಾಗಿದೆ. ಇಲ್ಲಿನ ವೈಶಿಷ್ಟ್ಯವೆಂದರೆ ಬರ್ಮಾದ ಭೂಫಲಕವು ಬಹಳ ಕಿರಿದಾಗಿದೆ. ೭೦೦-೮೦೦ ಕಿ.ಮೀ ಅಗಲವಿರುವ ಬರ್ಮಾ ಫಲಕಗಳು ೨೦೦೦ ಕಿ.ಮೀ. ಉದ್ದವಿದೆ. ಒಂದು ಕಿರಿದಾದ ಭೂ ಫಲಕದ ಎರಡೂ ದಿಕ್ಕುಗಳಲ್ಲಿ ಎರಡು ರೀತಿಯ ಫಲಕ ರಚನೆಗಳು ಈ ಪ್ರದೇಶವನ್ನು ಸೂಕ್ಷ್ಮ ಪ್ರದೇಶವನ್ನಾಗಿ ಮಾಡಿವೆ. ಭೂ ವಿಜ್ಞಾನಿಗಳ ಅಭಿಪ್ರಾಯದಲ್ಲಿ ಭಾರತ-ಬರ್ಮಾ ಫಲಕಗಳ ಪ್ರದೇಶವು ಸಂಕುಚಿತವಾಗಿದ್ದು ಆಸ್ಟ್ರೇಲಿಯಾದ ಭೂ ಫಲಕಗಳು ಭಾರತೀಯ ಫಲಕಗಳೆಡೆ ಅಪ್ರದಕ್ಷಿಣವಾಗಿ ಸುತ್ತುತ್ತಿರುತ್ತದೆ. ಈ ಪ್ರಕ್ರಿಯೆಗಳ ಪರಿಣಾಮವಾಗಿ ಹಿಂದೂ ಮಹಾ ಸಾಗರವು ಅತಿ ಸೂಕ್ಷ್ಮವಾದ ಭೂಕಂಪನ ಪ್ರದೇಶವಾಗಿದೆ. ಸಂಕುಚಿತಗೊಂಡ ಕ್ಷೇತ್ರಗಳಲ್ಲಿ ಅಪಾರ ಸಾಮರ್ಥ್ಯದ ಸುಪ್ತ ಶಕ್ತಿ ಬಿಡುಗಡೆಯಾಗಿರುವುದರಿಂದ ಈ ಪ್ರಮಾಣದ ಸುನಾಮಿ ಸಂಭವಿಸಲು ಹಲವಾರು ವರ್ಷಗಳು ಬೇಕಾಗುತ್ತವೆ. ಹಿಂದೂ ಮಹಾಸಾಗರದ ಬಳಿಯಿರುವ ದೇಶಗಳು ಭೂಕಂಪ - ಸುನಾಮಿಗಳ ಬಗ್ಗೆ ಕಟ್ಟೆಚ್ಚರ ವಹಿಸುವುದು ಸೂಕ್ತ.

(ತಾಂತ್ರಿಕ ಅಂಶಗಳಿಗೆ ಆಧಾರ 'ದಿ ಹಿಂದೂ' ದಿನಪತ್ರಿಕೆ)

ವಿವೇಚನೆ

ಧರ್ಮ ಮತ್ತು ಮೂಲಭೂತವಾದದ ತಿಕ್ಕಲುತನಗಳು

'ಧರ್ಮ-ದೇವರು-ಧಾರ್ಮಿಕ ಮನೋಭಾವನೆ' ಹುಟ್ಟಿದ್ದೇ ಮೂಲತಃ ಭಯದ ವಾತಾವರಣದಲ್ಲಿ. ಇದು ಕ್ರಮೇಣ ಭಯ-ಭೀತಿಯ ಜತೆಗೆ ಭಾವನಾತ್ಮಕ ಮತ್ತು ಭ್ರಮಾತ್ಮಕವಾದ ಆಯಾಮವನ್ನು ಪಡೆದುಕೊಂಡಿತು. ಜಗತ್ತಿನ ಎಲ್ಲಾ ಧರ್ಮಗಳು ದೇವರ ಇರುವಿಕೆ ಮತ್ತು ಇಲ್ಲದಿರುವಿಕೆಯನ್ನು, ಅಮೂರ್ತತೆಯನ್ನು ಅಸತ್ಯವಾದುದನ್ನು ನಂಬಿಸಲು ಶ್ರಮಸಾಧ್ಯ ಪ್ರಯತ್ನದ ಮೂಲಕ ಪೈಪೋಟಿ ನಡೆಸುತ್ತವೆ. ಧರ್ಮಗಳಿಲ್ಲದೆ ಮನುಷ್ಯ ಬದುಕಲಾರನೆಂಬ ಮೊಂಡು ಹಠವಾದದಿಂದ ಮತಧರ್ಮಗಳು ಕಂಠಪೂರ್ತಿ ಘಂಟಾಘೋಷವಾಗಿ ಭಾಷಣಗಳನ್ನು - ಘೋಷಣೆಗಳನ್ನು ಕೂಗಿಕೊಳ್ಳುತ್ತಿವೆ.

○ ಡಾ|| ಸೂರಮ್ಮನಹಳ್ಳಿ ಉಮೇಶ

ಬದಲಾಗುತ್ತಿರುವ ಈ ಹೊತ್ತಿನ ಸಾಂಸ್ಕೃತಿಕ ಸಂದರ್ಭದಲ್ಲಿ 'ಧರ್ಮ' ಸಂಕುಚಿತಾರ್ಥದೊಂದಿಗೆ ವಿವಿಧ ಮಗ್ಗುಲುಗಳನ್ನು ಪಡೆದು ಕೊಳ್ಳುತ್ತಿದೆ. ಇಂದು ಜಾತಿ ಮತ್ತು ಮತಧರ್ಮಕ್ಕೆ ಧರ್ಮದ ಕಾರ್ಯಕ್ಷೇತ್ರವು ಸೀಮಿತವಾಗಿದೆ. ಮನುಕುಲವನ್ನಷ್ಟೆ ಅಲ್ಲದೆ ಪ್ರಾಣಿ-ಪಕ್ಷಿ ಸಂಕುಲಗಳನ್ನು ರಕ್ಷಿಸುವ ಸಾಮರ್ಥ್ಯವಿರುವ 'ಧರ್ಮ' ಮತಧರ್ಮಗಳ ಮೂಲಭೂತವಾದಕ್ಕೆ ಸಿಕ್ಕು ತನ್ನನ್ನು ತಾನು ರಕ್ಷಿಸಿಕೊಳ್ಳಲು ಬಂದೂಕ - ಪರಮಾಣು - ಅಣುಬಾಂಬುಗಳ ರಕ್ಷಣೆಯನ್ನು ಕೇಳುತ್ತಿದೆ. ಇಂದು ಈ ಯುದ್ಧಗಳು ಮೂಲಭೂತವಾದದ ನಿಶೆಯ ಅಮಲೇರಿ ಮನುಕುಲವನ್ನು ಪಣಕ್ಕಿಟ್ಟು ಬೇಟೆಯಾಡುತ್ತಿದೆ. ಈ ಕಾರಣದಿಂದಾಗಿ ಮನುಷ್ಯ ಸಂಬಂಧಗಳು ತೆಳುವಾಗುತ್ತಿದ್ದು ಜಾತಿ-ಜಾತಿಗಳ ಮಧ್ಯೆ, ಧರ್ಮ-ಧರ್ಮಗಳ ಮಧ್ಯೆ, ರಾಜ್ಯ-ರಾಜ್ಯಗಳ ಮಧ್ಯೆ, ರಾಷ್ಟ್ರ-ರಾಷ್ಟ್ರಗಳ ಮಧ್ಯೆ ಕಂದಕಗಳೇ ನಿರ್ಮಾಣವಾಗುತ್ತಿವೆ.

'ಧರ್ಮ-ದೇವರು-ಧಾರ್ಮಿಕ ಮನೋಭಾವನೆ' ಹುಟ್ಟಿದ್ದೇ ಮೂಲತಃ ಭಯದ ವಾತಾವರಣದಲ್ಲಿ. ಇದು ಕ್ರಮೇಣ ಭಯ-ಭೀತಿಯ ಜತೆಗೆ ಭಾವನಾತ್ಮಕ ಮತ್ತು ಭ್ರಮಾತ್ಮಕವಾದ ಆಯಾಮವನ್ನು ಪಡೆದುಕೊಂಡಿತು. ಪುರೋಹಿತಶಾಹಿ ವರ್ಗವು ಇದನ್ನು ಗುತ್ತಿಗೆ ಹಿಡಿದು ಬಣ್ಣದ ಮೂಲಕ ಬದುಕನ್ನು ಈ ದೇಶದಲ್ಲಿ ಕಟ್ಟಿಕೊಂಡಿತು. ಜಗತ್ತಿನ ಎಲ್ಲಾ ಧರ್ಮಗಳು ದೇವರ ಇರುವಿಕೆ ಮತ್ತು ಇಲ್ಲದಿರುವಿಕೆಯನ್ನು, ಅಮೂರ್ತತೆಯನ್ನು ಅಸತ್ಯವಾದುದನ್ನು ನಂಬಿಸಲು ಶ್ರಮಸಾಧ್ಯ ಪ್ರಯತ್ನದ ಮೂಲಕ ಪೈಪೋಟಿ ನಡೆಸುತ್ತವೆ. ಧರ್ಮಗಳಿಲ್ಲದೆ ಮನುಷ್ಯ ಬದುಕಲಾರನೆಂಬ ಮೊಂಡು ಹಠ ವಾದದಿಂದ ಮತಧರ್ಮಗಳು ಕಂಠಪೂರ್ತಿ ಘಂಟಾಘೋಷವಾಗಿ ಭಾಷಣಗಳನ್ನು - ಘೋಷಣೆಗಳನ್ನು ಕೂಗಿಕೊಳ್ಳುತ್ತಿವೆ.

'ಮತಧರ್ಮ'ಗಳಿಗೂ - 'ಮೂಲ ಭೂತವಾದ'ಕ್ಕೂ ತುಂಬಾ ಹತ್ತಿರದ ಮತ್ತು ಬಿಡಿಸಲಾರದ ಸಂಬಂಧಗಳಿವೆ. ಇವೆರಡು 'ರಾಜಕಾರಣ'ದ ಜತೆಗೆ ಗುಪ್ತಗಾಮಿನಿಯಾಗಿ ಸಂಬಂಧಗಳನ್ನು ಏರ್ಪಡಿಸಿಕೊಂಡಿವೆ. ಈ ಹೊತ್ತಿನ ವಿಶ್ವದ ಯಾವುದೇ ರಾಷ್ಟ್ರದ ರಾಜಕಾರಣವನ್ನು ಗಮನಿಸಿದರೂ ಅದು ತಿಳಿಯುತ್ತದೆ. ಅಮೇರಿಕಾ-ಕ್ರಿಶ್ಚಿಯನ್ಸ್, ಆಫ್ಘಾನಿಸ್ತಾನ-ತಾಲಿಬಾನ್, ಭಾರತ-ಬಿಜೆಪಿ, ಹೀಗೆ ಇವೆಲ್ಲಾ ಏನನ್ನು ಸೂಚಿಸುತ್ತವೆಂಬುದನ್ನು ಸೂಕ್ಷ್ಮವಾಗಿ ಗ್ರಹಿಸಬೇಕಾಗಿದೆ. ಮತಧರ್ಮಗಳ ಅಭಿವೃದ್ಧಿಗೆ ಅದರ ಅನುಯಾಯಿಗಳು ಶಿಕ್ಷಣದ ನೆಪದಲ್ಲಿ ದೇಣಿಗೆಯಾಗಿ ಹಣವನ್ನು, ಆಸ್ತಿಯನ್ನು ನೀಡುತ್ತಿದ್ದಾರೆ. ಹೀಗೆ ಬರುವ ಹಣವೆಲ್ಲ ಬಹುಮಟ್ಟಿಗೆ ವಿದೇಶಿ ಬಂಡವಾಳವೇ ಆಗಿರುತ್ತದೆ. ಈ ಹಣದಿಂದ ಚರ್ಚ್-ಮಸೀದಿ-ಮಂದಿರಗಳಲ್ಲಿ ಧಾರ್ಮಿಕ ಶಿಕ್ಷಣಗಳು ಉದಾರವಾಗಿ ನಡೆಯುತ್ತಿವೆ. ಈ ಎಲ್ಲಾ ವಿಚಾರಗಳ ಬೆನ್ನ ಹಿಂದೆ ಧಾರ್ಮಿಕ ಮೂಲಭೂತವಾದವು ಶಿಕ್ಷಣದ ಸೋಗು ಹಾಕಿದೆ. ಒಂದು ಕಾಲಕ್ಕೆ ಸಂಸ್ಕೃತ ಶಿಕ್ಷಣವನ್ನು ನಿರಾಕರಿಸಿದ್ದ ಸಮೂಹವೇ ಇಂದು ದಲಿತರಿಗೆ ಸಂಸ್ಕೃತ ಶಿಕ್ಷಣವನ್ನು ನೀಡಲು ಮುಂದಾಗುತ್ತಿದೆ. ಕ್ರಿಶ್ಚಿಯಾನಿಟಿಯಂತೂ ಈ ನಾಡಿಗೆ ಬಂದದ್ದೇ ಹಣ-ಆಸ್ತಿ-ಹೆಣ್ಣು-ಶಿಕ್ಷಣ-ಆಸ್ಪತ್ರೆ-ಆರೋಗ್ಯ ಸೇವೆಗಳ ಮೂಲಕ. ಹೀಗಾಗಿ ಇವೆಲ್ಲವುಗಳ ಹಿಂದೆ ಸ್ವಮತದ ಕೀರ್ತನೆ-ಶ್ರೇಷ್ಠ-ಪ್ರತಿಷ್ಠೆಗಳು ಬಿಟ್ಟರೆ ಬೇರೆ ಯಾವ ಕಾರಣವೂ ಇಲ್ಲ. ವಿಶ್ವದ ಪ್ರತಿಯೊಂದು ಮತಧರ್ಮವು ತನ್ನ ಧರ್ಮವೇ ಸರ್ವಶ್ರೇಷ್ಠವೆಂದು ಬೀಗುತ್ತಾ ತಮ್ಮ ತಮ್ಮ ಧಾರ್ಮಿಕ ಮೂಲಭೂತವಾದದ ತಿಕ್ಕಲುತನಗಳನ್ನು ಮೆರೆಯುತ್ತಿವೆ.

ಯಾವುದೇ ಧರ್ಮದ ಮೂಲಭೂತವಾದವು ಯಾವುದೇ ದೇಶದಲ್ಲಿ ತಾನು ಮತ್ತು ತನ್ನ ಸಿದ್ಧಾಂತ ಮಾತ್ರ ಶ್ರೇಷ್ಠ ಎಂದು ನಂಬಿಸುತ್ತದೆ. ಆ ಕುರಿತಂತೆ ಇಡೀ ಸಮಾಜಕ್ಕೆ ತನ್ನ ಮೌಲ್ಯಗಳನ್ನು ಒಪ್ಪುವಂತೆ ಹೇರಲು ಹಾತೊರೆಯುತ್ತದೆ. ಹಾಗಾಗಿ ಇನ್ನೊಂದು ಧರ್ಮದ ಆಚರಣೆ ಸಂಪ್ರದಾಯ, ತತ್ವ ಸಿದ್ಧಾಂತಗಳನ್ನು ಯಾವೊಂದು ಧರ್ಮವು ಸಹಿಸಿಕೊಳ್ಳಲು ಇಷ್ಟಪಡುತ್ತಿಲ್ಲ. ಸಹಿಷ್ಣತೆ ಇಲ್ಲದಿರುವ ಕಾರಣದಿಂದಲೇ ಸಂಘರ್ಷಗಳು ಅನಿವಾರ್ಯವೆಂಬಂತೆ ಘಟಿಸುತ್ತಿವೆ.

ಭಾರತ ಬಹುರೂಪಿ ಸಂಸ್ಕೃತಿಗಳ ನೆಲೆ. ಇಲ್ಲಿ ಬಹುಭಾಷೆಗಳ, ವಿವಿಧ ಧರ್ಮಗಳ, ನಾನಾ ಜಾತಿಯ ಜನರು ವಾಸವಾಗಿದ್ದಾರೆ. ಈ ಬಹುರೂಪತೆಗಳನ್ನು ನಾಶಮಾಡಿ 'ಹಿಂದೂ' ಎಂಬ ವೈದಿಕ ಪುರೋಹಿತಶಾಹಿ ಪ್ರಣೀತ ಮೂಲಭೂತವಾದವು ತಾನೇ ಸರ್ವಶ್ರೇಷ್ಠವೆಂದು ಬೀಗಿಕೊಳ್ಳುತ್ತದೆ. ವೈದಿಕ ಧರ್ಮಕ್ಕೆ ಪ್ರತಿಯಾಗಿ ಭಾರತದಲ್ಲಿ ಶೈವ, ಬೌದ್ಧ, ಜೈನ, ಲೋಕಾಯಿತ, ವೀರಶೈವ, ನಾಥ, ಸೂಫಿ ಮತ್ತು ಸಿಖ್ ಧರ್ಮಗಳು ಜನ್ಮ ತಳೆದಿವೆ. ಈ ಎಲ್ಲ ಧರ್ಮಗಳು ಮನುಷ್ಯನ ಒಳಿತಿಗಾಗಿ ಮನುಷ್ಯಪರ ಆಲೋಚನೆಯನ್ನು ಮಾಡಿವೆ. ಆದರೆ ಧಾರ್ಮಿಕ ಮೂಲಭೂತವಾದವು ಈ ಹೊತ್ತು ರಾಜಕಾರಣದೊಂದಿಗೆ ಕೈಜೋಡಿಸಿ ಮನುಷ್ಯ ಬದುಕನ್ನೇ ಸವಾಲಾಗಿಡುತ್ತದೆ. ವೈದಿಕಧರ್ಮ ಪ್ರತಿಪಾದಿಸಿದ ವರ್ಣವ್ಯವಸ್ಥೆ ಮತ್ತು ಜಾತಿವ್ಯವಸ್ಥೆಯನ್ನು ವಿರೋಧಿಸಿ ಬೌದ್ಧ ಜೈನಧರ್ಮಗಳು ಜನ್ಮ ತಳೆದವು. ಧಾರ್ಮಿಕ ಮಹಾಪುರುಷರು ಹಿಂಸೆಯನ್ನು ವಿರೋಧಿಸಿ ಅಹಿಂಸೆಯನ್ನು ಪ್ರತಿಪಾದಿಸಿದರು. ಬದಲಾಗಿ ಜೀವನ ಪ್ರೀತಿಯನ್ನು ಬೇಧಿಸಿದರು. ಬುದ್ಧ-ಬಸವ-ಅಂಬೇಡ್ಕರ್ ಇವರೆಲ್ಲರೂ ಭ್ರಾತೃತ್ವ, ಸಹಿಷ್ಣತೆ, ಸಹಬಾಳ್ವೆ ಬಗೆಗೆ ಒತ್ತುಕೊಟ್ಟರು. ಡಿ.ಆರ್.ನಾಗರಾಜ್ -ದಿ ಪ್ಲೇಮಿಂಗ್ ಫೀಟ್ - (ಉರಿಚಮ್ಮಾಳಿಗೆ) ಕೃತಿಯಲ್ಲಿ ....ಯಾರೂ ಜಾತಿ ವಿರೋಧಿ ಸಭೆಯನ್ನು ಲೋಹಿಯಾ, ಅಂಬೇಡ್ಕರ್ ಅಥವಾ ಪೆರಿಯಾರ್‌ರನ್ನು ಪ್ರಾರ್ಥಿಸಿ ಶುರುಮಾಡಬೇಕಿಲ್ಲ, ಕೆಳಜಾತಿಯ ಪ್ರವಾದಿ ಏಳು ಬೆಟ್ಟದೊಡೆಯ ಮಲೆಮಾದೇಶ್ವರ ಶುರು ಮಾಡಬಹುದು'...(ಪುಟ ೮೩). ಈ ನಿಟ್ಟಿನಲ್ಲಿ ಒಂದು ಕಾಲಕ್ಕೆ ಕಾರಣಾಂತರಗಳಿಂದ ಅಲಕ್ಷ್ಯಕ್ಕೆ ಒಳಗಾದ ಸಾಧು ಸಂತರ ಜೀವನ ವಿಧಾನವೇ ಸಮಾಜಕ್ಕೆ ಮಾರ್ಗದರ್ಶಿಯಂತಿದೆ. ಶಿಶುನಾಳ ಷರೀಫ, ತಿಂತಣಿ ಮೋನಪ್ಪಯ್ಯ, ನಾಯಕನಹಳ್ಳಿ ತಿಪ್ಪೇಸ್ವಾಮಿ, ಕೊಡೇಕಲ್ ರಾಚಪ್ಪಯ್ಯಾ ಮತ್ತು ಇನ್ನೂ ಅನೇಕರು ಹೇಳ ಹೆಸರಿಲ್ಲದೆ, ಭಾರತದ ಚರಿತ್ರೆಯಲ್ಲಿ ದಾಖಲಾಗದೇ ಹೋದವರು ಈ ನಾಡಿಗೆ ಬದುಕುವ ಮಾನವ ಪ್ರೀತಿಯ ಸಂದೇಶಗಳನ್ನು ಧಾರೆ ಎರೆದು ಹೋಗಿದ್ದಾರೆ. ದುರಂತವೆಂದರೆ ಈ ಹೊತ್ತು ವಿಹಿಂಪ, ಬಜರಂಗದಳ ಮತ್ತು ಶಿವಸೇನೆ ಪ್ರತಿಪಾದಿಸುವ 'ಹಿಂದೂಧರ್ಮ' ಅಹಿಂಸೆಯ ಬದಲಾಗಿ ಹಿಂಸೆಯನ್ನು ಪ್ರತಿಪಾದಿಸುತ್ತದೆ.

'ರಾಜಕಾರಣ'ವು ತನ್ನ ಬೇರುಗಳನ್ನು ಗಟ್ಟಿಯಾಗಿಸಿಕೊಳ್ಳುವಲ್ಲಿ ಮತಧರ್ಮವನ್ನು ಬಂಡವಾಳ ಮಾಡಿಕೊಂಡು ಮೂಲಭೂತವಾದದ ವಿಷಬೀಜವನ್ನು ಬಿತ್ತುತ್ತದೆ. ಆ ಕಾರಣಕ್ಕಾಗಿ ದೇವಸ್ಥಾನ-ಚರ್ಚ್-ಮಂದಿರ-ಮಸೀದಿಗಳಲ್ಲಿ ಹೋಮಗಳು-ವಿಶೇಷ ಪೂಜೆ-ಪ್ರಾರ್ಥನೆ-ನಮಾಜುಗಳು ನಡೆಯುತ್ತಿವೆ. ದೇವಸ್ಥಾನ- ಮಸೀದಿ-ಚರ್ಚ್‌ಗಳಲ್ಲಿ ಗಂಟೆ-ಜಾಗಟೆ-ಪ್ರಾರ್ಥನೆ-ನಮಾಜುಗಳ ಬದಲಾಗಿ ಅಣುಬಾಂಬು

ಗಳ-ಸ್ಫೋಟಕಗಳ ಸದ್ದು ಕೇಳ್ತಿತ್ತವೆ; ರಕ್ತದ ಕಾಲುವೆಗಳು ಹರಿಯುತ್ತವೆ. ಆಧುನಿಕ ರಾಜಕಾರಣವು ಸಾಂಸ್ಕೃತಿಕ ಆಯಾಮಗಳ ಮುಖೇನ ತನ್ನ ಬೇಳೆಯನ್ನು ಬೇಯಿಸಿಕೊಳ್ಳಲು ಭಾರತದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ಶತಾಯಗತಾಯ ಪ್ರಯತ್ನ ನಡೆಸುತ್ತದೆ. ಆ ಕಾರಣದಿಂದ ನಾಥ-ಸೂಫಿ-ಸಂತ-ಶರಣರು ಬದುಕಿ-ಬಾಳಿದ, ಗುಹೆ-ಗುಡಿ-ದೇವಸ್ಥಾನಗಳು ಧಾರ್ಮಿಕ ಮೂಲಭೂತವಾದಿಗಳ ಕ್ರೀಡಾಂಗಣಗಳಾಗುತ್ತಿವೆ. ಯಾವುದೇ ಧರ್ಮದ ಮೂಲಭೂತವಾದವು ಎಂದೋ ಆಗಿ ಹೋದ ಚರಿತ್ರೆಯ ಘಟನೆಗಳನ್ನು ನೆಪವಾಗಿಟ್ಟುಕೊಂಡು ವರ್ತಮಾನದಲ್ಲಿ ಗಲಾಟೆಗಳನ್ನು ಶುರುಮಾಡುತ್ತಾರೆ. ಹಿಂದೂ ಮೂಲಭೂತವಾದಿಗಳು ಕ್ರಿಶ್ಚಿಯನ್ನರನ್ನು, ಮುಸಲ್ಮಾನರನ್ನು, ಜಾಗತಿಕ ಮಟ್ಟದಲ್ಲಿ ಕ್ರಿಶ್ಚಿಯನ್ನರು-ಮುಸ್ಲಿಮರು ಹೀಗೆ ಬಾಂಬ್-ಬಂದೂಕಗಳ ಮೂಲಕ ಬೇಟೆಯಾಡುತ್ತಿದ್ದಾರೆ. ಧಾರ್ಮಿಕ ಮೂಲಭೂತವಾದವು ಬೇರೆ ಮತಧರ್ಮದವರನ್ನು ಕೊಲ್ಲುವುದು, ಹಿಂಸಿಸುವುದು ಮತ್ತು ಅತ್ಯಾಚಾರ ಮಾಡುವುದು ಆ ಮೂಲಕ ಖುಷಿ ಪಡುವುದು ಅವರವರ 'ಧರ್ಮಯುದ್ಧ'ಗಳೆಂದು ಬೀಗಿಕೊಳ್ಳುತ್ತಾರೆ.

ಇಂತಹ 'ಧರ್ಮಯುದ್ಧ'ಗಳ ಮೂಲಕ ಇಸ್ಲಾಂ ಮತ್ತು ಹಿಂದೂ ಧರ್ಮಗಳಿಂದ ದೂರಸಿಡಿದು ಬಂದ ನಾಥಸಿದ್ಧರು, ಸಂತರು, ಸೂಫಿಗಳು, ಶರಣರು ಮತ್ತು ಅನುಭಾವಿಗಳು ಜನಸಾಮಾನ್ಯರ ಹತ್ತಿರ ನಿಂತು ಸರಳವಾಗಿ ಬದುಕಿನ ಸಾರ್ಥಕ್ಯದ ಬಗ್ಗೆ ತಿಳಿ ಹೇಳಿದ್ದಾರೆ. ಶುದ್ಧಾಂತಿಕವೆನ್ನುವ ಹಿಂದೂಧರ್ಮವಾಗಲಿ, ಇಸ್ಲಾಂ ಧರ್ಮವಾಗಲಿ ಜನಸಾಮಾನ್ಯರಿಗೆ ಅರ್ಥವಾಗದೇ ಹೋಯಿತು. ಇವು ಭಕ್ತಿಯ ನೆಪದಲ್ಲಿ ಭಯವನ್ನು ಸೃಷ್ಟಿಸಿದವು. ಈ ಧರ್ಮಗಳ ತತ್ವಗಳು ಇರುವ ಭಾಷೆಗಳನ್ನು ನೋಡಿದರು ಸಾಕು ಜನಸಾಮಾನ್ಯರಿಂದ ಇವು ಎಷ್ಟು ದೂರವಿವೆಯೆಂದು ತಿಳಿದುಬರುತ್ತದೆ. ವೈದಿಕಧರ್ಮದ ತತ್ವಗಳು ಸಂಸ್ಕೃತ ಭಾಷೆಯಲ್ಲಿದ್ದರೆ, ಇಸ್ಲಾಂ ಧರ್ಮದ ತತ್ವಗಳು ಅರೇಬಿಕ್ ಭಾಷೆಯಲ್ಲಿವೆ. ಈ ಭಾಷೆಗಳು ಯಾವತ್ತೂ ಕೂಡ ಜನಸಾಮಾನ್ಯರನ್ನು ಒಳಗು ಮಾಡಿಕೊಂಡೇ ಇಲ್ಲ. ಮಹಿಳಾ ಜಗತ್ತನ್ನಂತೂ ಮಡಿ ಮೈಲಿಗೆಯ ನೆಪದಲ್ಲಿ ದೂರ ಇಟ್ಟಿವೆ. ದಲಿತ ಲೋಕವು ನಮ್ಮ ಸೇವೆಗಾಗಿಯೇ ಹುಟ್ಟಿ ಬಂದಿವೆಯೆಂದು ವೈದಿಕಧರ್ಮ - ಜಮೀನ್ದಾರೀ ಪ್ರಭುತ್ವ ನಂಬಿಕೊಂಡಿದೆ. ಬುಡಕಟ್ಟು ಜನರನ್ನು ಕಾಡುಕಳ್ಳರೆಂದು ದೂರೀಕರಿಸಿದೆ. ಆದರೆ ವಿಪರ್ಯಾಸವೆಂದರೆ ಇವರನ್ನೆಲ್ಲಾ 'ಹಿಂದೂ' ಎಂಬ ಚೌಕಟ್ಟಿನಲ್ಲಿ ಒಗ್ಗೂಡಿಸುವ ಜಾಣ ತಂತ್ರದ ಪ್ರಯತ್ನವನ್ನು ಪ್ರತಿಯೊಬ್ಬರು ಅರ್ಥಮಾಡಿಕೊಳ್ಳಬೇಕಾದ ಅನಿವಾರ್ಯ ಎಂದಿಗಿಂತಲೂ ಇಂದು ಅತ್ಯಗತ್ಯ.

ಜನಪದರಿಗೆ ಜ್ವರ ಬಂದಾಗ, ನೆಗಡಿಯಾದಾಗ ಯಾವುದೇ ಕಾಯಿಲೆಯಾದಾಗ ಮಸೀದಿಗೆ ಹೋಗಿ ತಾವೀಜ್ ಕಟ್ಟಿಸಿಕೊಳ್ಳುವಂತೆ, ದೇವಾಲಯಕ್ಕೆ ಹೋಗಿ ಸಾಧು ಸಂತರ ಹತ್ತಿರ ತಾಯಿತಗಳನ್ನು ಕಟ್ಟಿಸಿಕೊಳ್ಳುತ್ತಾರೆ. ಇವರಿಗೆ ದೇವರು-ಧರ್ಮ ಸಮಸ್ಯೆಯಲ್ಲ; ಅದೊಂದು ಭಕ್ತಿ, ನೆಮ್ಮದಿ, ಬದುಕು, ಪ್ರೀತಿ; ನೊಂದ ಜೀವಿಗೆ ಸಾಂತ್ವನ ಹೇಳುವ ಜಾಗ. ಧರ್ಮ-ದೇವರು ಸಮಸ್ಯೆಯಾಗಿರುವುದು ಧಾರ್ಮಿಕ ಮೂಲಭೂತವಾದಿಗಳಿಗೆ ಮತ್ತು ಬಲಪಂಥೀಯ ಚಿಂತನೆಗಳಿಂದ ಹೊರಬಂದ ರಾಜಕೀಯ ಪಕ್ಷಗಳಿಗೆ. ಈ ಕಾರಣಕ್ಕಾಗಿ ಕೋಮುವಾದ ಮತ್ತು ಅದರ ಕೆನ್ನಾಲಿಗೆಯು ಧಾರ್ಮಿಕತೆಯನ್ನು ಬಂಡವಾಳ ಮಾಡಿಕೊಂಡು ದೇಶವನ್ನು ಆಳುವ ಪ್ರಭುತ್ವದ ಜತೆಗೆ ಕೈ ಜೋಡಿಸುವ ಸೂಕ್ಷ್ಮತೆಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಕೋಮುವಾದದ ವಿಕೃತ ಮನಸ್ಸುಗಳಿಗೆ ಕೊನೆಯೆಂಬುದೇ ಇಲ್ಲ. ಇದು ದೇಶ-ಜಾತಿ-ಧರ್ಮ-ಭಾಷೆ ಎಲ್ಲಾ ವಲಯಗಳಿಗೆ ತನ್ನ ಕ್ಷೇತ್ರವನ್ನು ವಿಸ್ತರಿಸಿದೆ. ಭಾರತದಲ್ಲಿ ಹಿಂದೂ ಮೂಲಭೂತವಾದಿಗಳಿಗೆ ಕ್ರಿಶ್ಚಿಯನ್ ಮತ್ತು ಮುಸ್ಲಿಂ ವಿರೋಧಿಗಳಾದರೆ, ಅಮೆರಿಕಾದ ಆಳುವ ಪ್ರಭುತ್ವಕ್ಕೆ ಇರಾನ್-ಇರಾಕ್ ಮುಸ್ಲಿಮರು ವಿರೋಧಿಗಳು. ಇದೇ ರೀತಿ ತಾಲಿಬಾನ್‌ಗಳಿಗೆ ಬೌದ್ಧರು ವಿರೋಧಿಗಳಾಗಿ ಕಾಣುತ್ತಾರೆ.

ಧರ್ಮ-ದೇವರು ಸಮಸ್ಯೆಯಾಗಿರುವುದು ಧಾರ್ಮಿಕ ಮೂಲಭೂತವಾದಿಗಳಿಗೆ ಮತ್ತು ಬಲಪಂಥೀಯ ಚಿಂತನೆಗಳಿಂದ ಹೊರಬಂದ ರಾಜಕೀಯ ಪಕ್ಷಗಳಿಗೆ. ಈ ಕಾರಣಕ್ಕಾಗಿ ಕೋಮುವಾದ ಮತ್ತು ಅದರ ಕೆನ್ನಾಲಿಗೆಯು ಧಾರ್ಮಿಕತೆಯನ್ನು ಬಂಡವಾಳ ಮಾಡಿಕೊಂಡು ದೇಶವನ್ನು ಆಳುವ ಪ್ರಭುತ್ವದ ಜತೆಗೆ ಕೈ ಜೋಡಿಸುವ ಸೂಕ್ಷ್ಮತೆಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಕೋಮುವಾದದ ವಿಕೃತ ಮನಸ್ಸುಗಳಿಗೆ ಕೊನೆಯೆಂಬುದೇ ಇಲ್ಲ. ಇದು ದೇಶ-ಜಾತಿ-ಧರ್ಮ-ಭಾಷೆ ಎಲ್ಲಾ ವಲಯಗಳಿಗೆ ತನ್ನ ಕ್ಷೇತ್ರವನ್ನು ವಿಸ್ತರಿಸಿದೆ. ಭಾರತದಲ್ಲಿ ಹಿಂದೂ ಮೂಲಭೂತವಾದಿಗಳಿಗೆ ಕ್ರಿಶ್ಚಿಯನ್ ಮತ್ತು ಮುಸ್ಲಿಂ ವಿರೋಧಿಗಳಾದರೆ, ಅಮೆರಿಕಾದ ಆಳುವ ಪ್ರಭುತ್ವಕ್ಕೆ ಇರಾನ್-ಇರಾಕ್ ಮುಸ್ಲಿಮರು ವಿರೋಧಿಗಳು. ಇದೇ ರೀತಿ ತಾಲಿಬಾನ್‌ಗಳಿಗೆ ಬೌದ್ಧರು ವಿರೋಧಿಗಳಾಗಿ ಕಾಣುತ್ತಾರೆ.

ಅಮೆರಿಕಾದ ಈಗಿನ ರಾಜಕಾರಣವು ನಡೆಸುವ ದೌರ್ಜನ್ಯ ಮೂಲತಃ ಧಾರ್ಮಿಕವಾದದ್ದೇನೋ ನಿಜ. ಇದರ ಜತೆಗೆ ಸಾಮ್ರಾಜ್ಯಶಾಹಿ ಧೋರಣೆಯೂ ಸೇರಿಕೊಂಡಿದೆ. ಜಾಗತೀಕರಣದ ಅಭಿವೃದ್ಧಿ ರೇಸ್‌ನಲ್ಲಿ ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೆ ಮೊದಲ ಜಗತ್ತಿನ ದೇಶಗಳು ನಡೆಸುವ ಸವಾರಿಗಳನ್ನು ಇದರ ಹಿನ್ನೆಲೆಗೆ ಅರ್ಥಮಾಡಿಕೊಳ್ಳಬೇಕಾಗಿದೆ. ತೃತೀಯ ಜಗತ್ತಿನ ರಾಷ್ಟ್ರ-ರಾಷ್ಟ್ರಗಳ ನಡುವೆ ಇರುವ ವೈರುಧ್ಯಗಳನ್ನು ಭಾರತ-ಪಾಕಿಸ್ತಾನದ ನಿಲುವುಗಳನ್ನು ಅಫ್ಘಾನಿಸ್ತಾನದ ತಾಲಿಬಾನ್‌ಗಳ ನಿಲುವುಗಳನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಇದು ರಾಷ್ಟ್ರ-ರಾಷ್ಟ್ರಗಳ ವಿರುದ್ಧವಾಗಿ ನಡೆದರೆ ರಾಷ್ಟ್ರಗಳೊಳಗಡೆಯೇ ದೇವಸ್ಥಾನ-ಮಸೀದಿ-ಚರ್ಚ್-ಮಂದಿರಗಳು ಪುಡಿ-ಪುಡಿಯಾಗುತ್ತವೆ. ಇದು ಇನ್ನೊಂದು ಬಗೆಯ ಸಾಂಸ್ಕೃತಿಕ ರಾಜಕಾರಣ. ಬಾಬರಿ ಮಸೀದಿ, ಈದ್ಗಾ ಮೈದಾನ, ಬಾಬಾಬುಡನ್‌ಗಿರಿ - ದತ್ತಪೀಠದ ವಿವಾದ ಮತ್ತು ಕನಕ ಗೋಪುರ ವಿವಾದಗಳು ಈ ಬಗೆಯ ಧಾರ್ಮಿಕ ಮೂಲಭೂತವಾದಕ್ಕೆ ಸಾಕ್ಷಿಗಳಾಗಿವೆ.

ಕನಕದಾಸರು ಏಕಕಾಲಕ್ಕೆ ಒಬ್ಬ ಸಾಂಸ್ಕೃತಿಕ ಚಿಂತಕನಾಗಿ ಸಮಾಜ ವಿಜ್ಞಾನಿಯಾಗಿ, ಸಾಹಿತಿಯಾಗಿ, ಬರಹಗಾರರಾಗಿ, ಹರಿದಾಸರಾಗಿ ಕಂಡುಬರುತ್ತಾರೆ. ಕನಕದಾಸರು ತಾವು ಬದುಕಿದ್ದ ಕಾಲದಲ್ಲಿ ಚರ್ಚೆಗೆ-ಸಂವಾದಕ್ಕೆ-ಸಂಘರ್ಷಕ್ಕೆ ಒಳಗಾದಂತೆ ಇಂದು ಕೂಡಾ ಚರ್ಚೆಗೆ ಗ್ರಾಸವಾಗುತ್ತಿರುವುದು ಅವರ ಜೀವಂತಿಕೆಗೆ ಸಾಕ್ಷಿಭೂತವಾಗಿದೆ. ಸಮಾಜದಲ್ಲಿ ಯಾವುದೇ ವಿಚಾರ ಅರ್ಥಪೂರ್ಣವಾಗಿ ಸಂಘರ್ಷಕ್ಕೆ ಒಳಗಾಗುತ್ತದೆಂದರೆ ಅದರ ಚಲನಶೀಲತೆಯೆಂದೇ ಭಾವಿಸಬೇಕು.

'ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆ ಏನಾದರೂ ಬಲ್ಲಿರಾ?' ಎಂದು ಪ್ರಶ್ನಿಸಿದ ಕನಕದಾಸರು ಆಡಂಬರ, ಡಾಂಭಿಕತನ, ಜಾತಿ-ಮತ, ಉಚ್ಚ-ನೀಚ, ಬಡವ-ಬಲ್ಲಿದ, ವರ್ಣ-ವರ್ಗ-ಜಾತಿ-ಲಿಂಗ ತಾರತಮ್ಯಗಳನ್ನು ಖಂಡಿಸಿದರು. ಇಂತಹ 'ಕನಕದಾಸ ಮತ್ತು ಉಡುಪಿ ಮಠ ಪರಂಪರೆ' ಜತೆಗಿರುವ ಮಿತ್‌ಗಳು ಪದೇ ಪದೇ ಸಂಘರ್ಷಕ್ಕೆ ಕಾರಣವಾಗುತ್ತಿವೆ. ಇಂತಹ ಮಿತ್‌ಗಳನ್ನು ಒಡೆದು ನೋಡಿದರೆ ಹೊಸ ಚರಿತ್ರೆ ನಿರ್ಮಾಣವಾಗುವ ಸಾಧ್ಯತೆಗಳಿವೆ. ಕನಕದಾಸರಿಗೆ ಶ್ರೀಕೃಷ್ಣನೇ ಪ್ರತ್ಯಕ್ಷನಾಗಿ ಕಿಂಡಿಯ ಮೂಲಕವೇ ದರ್ಶನ ಮಾಡಿಸಿದನೋ? ಅಥವಾ ಕೆಳಜಾತಿಯವನೆಂಬ ಕಾರಣಕ್ಕೆ ಮಠಕ್ಕೆ ಪ್ರವೇಶವನ್ನು ಪುರೋಹಿತಶಾಹಿಯೂ ತಡೆ ಒಡ್ಡಿತೋ? ಅಥವಾ ಸ್ಥಾಪಿತ ವ್ಯವಸ್ಥೆಯೇ ಆ ಬಗೆಯ ಪುರಾಣಗಳನ್ನು ಸೃಷ್ಟಿಸಿತೋ? ಎಂಬುದು ಚರ್ಚಾರ್ಹ ವಿಷಯ. ಈ ನಾಡಿನ ಕೆಳ



ಕಂದನಿಗೆ

ನಾ ನಿನಗೆ ಜನುಮ ನೀಡಿದ್ದು
ಭೌತಿಕ ಸತ್ಯ
ನೀ ನನಗೆ ಜನುಮ ನೀಡಿದ್ದು
ವಾಸ್ತವ ಸತ್ಯ

ಜಗವೇ ತಿಳಿದಿಹುದು ನೀ
ನನ್ನ ಕಂದನೆಂದು
ಕಂದಮ್ಮ ನಿನ್ನಿಂದ ನಾ
ಹುಟ್ಟಿದೆನೆಂದು ನನಗಲ್ಲದೆ
ಬೇರಾರಿಗೆ ಗೊತ್ತು ।

ಯಶೋಧೆ ಬೀಗದಿರು, ನನ್ನ
ಕಂದನ ಬಾಯಲ್ಲೂ
ಕಾಣುತಿದೆ ಬ್ರಹ್ಮಾಂಡ।
ದಿನದಿನವು ವಿಶ್ವರೂಪ।



○ ಡಾ॥ ವಸು

ಸಮುದಾಯಗಳಿಂದ ಜನ್ಮ ಪಡೆದು ಅಸಾಮಾನ್ಯ ಸಾಧನೆ -ಪರಿಶ್ರಮಗಳಿಂದ ಬದುಕ ಬಾಳಿದ ಏಕಲವ್ಯ-ಕನಕದಾಸ-ಕುವೆಂಪು ಅಂತಹ 'ಏಕಲವ್ಯ ಪ್ರತಿಭೆ'ಗಳನ್ನು ಸ್ಥಾಪಿತ ವ್ಯವಸ್ಥೆಗೆ ಯಾಕೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ? ಕೆಲದಿನಗಳಿಂದ ಉಡುಪಿ ಮಠದ ವ್ಯವಸ್ಥೆ 'ಕನಕನ ಕಿಂಡಿ'ಯನ್ನು ಮುಚ್ಚುವ ಬದಲಾಗಿ 'ನವಗ್ರಹ ಕಿಂಡಿ'ಯೆಂದು ಬೇರೆ ಹೆಸರಿನಲ್ಲಿ ಪ್ರಚಾರ ಮಾಡುತ್ತಿದೆ. 'ಮೂವತ್ತೆರಡು ಅಡಿ ಎತ್ತರವಿರುವ 'ಕನಕ ಗೋಪುರ'ವನ್ನು ನೆಲಸಮ ಮಾಡಿ 'ರಾಜ ಗೋಪುರ'ವೆಂಬ ಹೆಸರಿನಲ್ಲಿ ಹೊಸ ಚರಿತ್ರೆ ನಿರ್ಮಾಣ ಮಾಡುವ ಪುರೋಹಿತಶಾಹಿ ಹುನ್ನಾರ ನಡೆಸಿದೆ.

ಇದೇ ತೆರನಾಗಿಯೇ ಉಮಾಭಾರತಿಯ 'ತಿರಂಗ ಹಾರಾಟ'ವನ್ನು ಕಂಚಿಸ್ವಾಮಿ ಪ್ರಕರಣವನ್ನು ಬೆನ್ನಿಹಿನ್‌ನ ಧಾರ್ಮಿಕ ಪ್ರಾರ್ಥನೆಗೆ ಪ್ರತಿಯಾಗಿ ವಿಹಿಂಪ, ಆರ್‌ಎಸ್‌ಎಸ್ ಮತ್ತು ಬಿಜೆಪಿ ಕಾರ್ಯಕರ್ತರ ಪ್ರತಿರೋಧ ಇವೆಲ್ಲವುಗಳನ್ನು ಗಮನಿಸಿದಾಗ 'ಮತಧರ್ಮ' ಇಂದು ಪ್ರಧಾನ ಪಾತ್ರವಹಿಸಿ ನೈಜತೆಯನ್ನು ಮರೆಮಾಚಿಸುತ್ತದೆ. ಬುದ್ಧನ ವಿಗ್ರಹಗಳನ್ನು ನಾಶಮಾಡಿದ ತಾಲಿಬಾನ್‌ಗಳಿಗೂ, ಗೋಧ್ರಾ ಹತ್ಯಾಕಾಂಡಕ್ಕೂ, ಅಮೆರಿಕಾ - ಇರಾಕ್ ದೇಶಗಳ ಮೇಲೆ ಮಾಡುವ ಯುದ್ಧಗಳಿಗೂ, ಕನಕ ಗೋಪುರ ಕೆಡವಿದ ಬ್ರಾಹ್ಮಣ ವಿದ್ವಾಂಸರ ಕೃತ್ಯಗಳಿಗೂ ಏನಾದರೂ ವ್ಯತ್ಯಾಸಗಳಿವೆಯೇ ? ಇವೆಲ್ಲವೂ ಕೂಡಾ ಧಾರ್ಮಿಕ ಮೂಲಭೂತವಾದದ ತಿಕ್ಕಲುತನಗಳೇ ಹೊರತು ಬೇರೇನೂ ಅಲ್ಲ. ಹಿಂದೂ ಮೂಲಭೂತವಾದಿಗಳಿಗೂ ವೈದಿಕ ಮತಗಳಿಗೂ ನೇರವಾದ ಸಂಬಂಧಗಳಿವೆ. ವೈದಿಕ ಪುರೋಹಿತಶಾಹಿಗೆ ಕಿಂಚಿತ್ ಅನ್ಯಾಯವಾದರೆ ಸಾಕು ತನ್ನ ಸಮಸ್ಯೆಯನ್ನು ಇಡೀ ಸಮುದಾಯದ ಸಮಸ್ಯೆಯೆಂಬಂತೆ ಪ್ರತಿಬಿಂಬಿಸುತ್ತದೆ. ೨೦೦೫ರ ಬಜೆಟ್‌ನಲ್ಲಿ ಶ್ರವಣ ಬೆಳಗೊಳದ ಗೊಮ್ಮಟೇಶ್ವರನ ಮಜ್ಜನಕ್ಕೆ ೭೫ ಕೋಟಿ ರೂಪಾಯಿ ತೆಗೆದಿರಸಲಾಗಿದೆಯಂತೆ. ದೇಶದಲ್ಲಿ ಶೇ ೩೦ ರಷ್ಟು ಜನರು ಅನ್ನವಿಲ್ಲದೆ ಬದುಕುತ್ತಿದ್ದಾರೆ. ಕುಡಿಯಲು ಸರಿಯಾದ ನೀರು ಸಿಗದೆ ಜನ-ಜಾನುವಾರುಗಳು ಎಲ್ಲೆಲ್ಲೂ ಹಾಹಾಕಾರಗಳು ಕೇಳಿಬರುತ್ತಿವೆ. ಇಷ್ಟಾಗಿಯೂ ಇಂತಹ ಮಜ್ಜನಗಳ ಅವಶ್ಯಕತೆಯಾದರೂ ಇದೆಯೇ ? ಇದೆಲ್ಲ ಯಾರ, ಯಾವ, ಸಾಧನೆಗಾಗಿ ?

> ಬುದ್ಧನ ವಿಗ್ರಹಗಳನ್ನು ನಾಶಮಾಡಿದ ತಾಲಿಬಾನ್‌ಗಳಿಗೂ, ಗೋಧ್ರಾ ಹತ್ಯಾಕಾಂಡಕ್ಕೂ, ಅಮೆರಿಕಾ - ಇರಾಕ್ ದೇಶಗಳ ಮೇಲೆ ಮಾಡುವ ಯುದ್ಧಗಳಿಗೂ, ಕನಕ ಗೋಪುರ ಕೆಡವಿದ ಬ್ರಾಹ್ಮಣ ವಿದ್ವಾಂಸರ ಕೃತ್ಯಗಳಿಗೂ ಏನಾದರೂ ವ್ಯತ್ಯಾಸಗಳಿವೆಯೇ ?

ಇಂತಹ ವಿಚಾರಗಳು ನಾಡಿನ ದೊಡ್ಡ ಸಮಸ್ಯೆಗಳು. ದಿನಬೆಳಗಾದರೆ ಇಂತಹ ಪ್ರಕರಣಗಳೇ ಪತ್ರಿಕೆಗಳಲ್ಲಿ ರಾರಾಜಿಸುತ್ತವೆ. ಪ್ರಾಥಮಿಕ ಸಮಸ್ಯೆಗಳಾದ ಬಡತನ, ಹಸಿವು, ನೀರು, ಆರೋಗ್ಯ, ಶಿಕ್ಷಣ ವಸತಿ ವಿಚಾರಗಳನ್ನು ಮರೆಸಿಬಿಡುವ ಅಗಾಧಶಕ್ತಿಯೂ ಇಂತಹ ಸಮಸ್ಯೆಗಳಿಗಿದೆ. ಮತಧರ್ಮಗಳು ಹರಿಯಬಿಡುವ ವಿಚಾರಗಳ ರಾಜಕಾರಣವನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಂಡು ಧಾರ್ಮಿಕ ಮೂಲಭೂತವಾದಿಗಳ ತಿಕ್ಕಲುತನಗಳಿಗೆ ಈ ನಾಡಿನ ಅಸಂಖ್ಯಾತ ಅಲಕ್ಷಿತ ದನಿಗಳು ಸೊಲ್ಲೆತ್ತಬೇಕಾದ ಅನಿವಾರ್ಯತೆ ಒದಗಿಬಂದಿದೆ. ನಾಡಿನ ಪ್ರತಿಯೊಬ್ಬರು ಇಂತಹ ವಿಚಾರಗಳ ಕಡೆ ಯೋಚಿಸುವಂತಾಗಲಿ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ :
ಸಂಪಾದಕರು, ' ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧
ದೂರವಾಣಿ : ೩೨೮ ೭೯೪೩ / ೯೪೪೪೮೦೪೮೩೦೬

ಹೆಜ್ಜೆಗಳು!



೧
ಕಂಚಿ ಕಾಮಕೋಟಿಯ ಕೋಟೆ
ಬಿರುಕಿಂದ ಸತ್ಯ ಎದ್ದು ಹಾತೊರೆದು
ಕೋರ್ಟಿನ ದಿಡ್ಡಿ ಬಾಗಿಲಿಗೆ ನೇತು ಬಿದ್ದಿತು
ಕೊಲೆಯಾದ ಆತ್ಮಗಳು ಕಂಬನಿಗಳಲ್ಲೇ
ಬೇಡುತ್ತಿದ್ದವು ಬದುಕುವ ಹಕ್ಕನ್ನು!

೨
ಬಾಂಬೆ ಷೇರು ಕಟಕಟೆಯ ನಾಡಿಯಲಿ
ಸೂಚ್ಯಾಂಕಗಳು ಸರಿದಾಡುವಾಗ
ರಿಮ್ಯೂಟ್‌ನ ದಲ್ಲಾಳಿಗಳ ಆಟಕ್ಕೆ
ಕಪ್ಪು 'ಹಣ' ಬೆವರುತ್ತಿತ್ತು!

೩
ನೇಣು ಹೋದ ರೈತರು ಸಾಲಕ್ಕಾಗಿ, ಹಸಿವಿಗಾಗಿ!
'ಸತ್ಯವೇ ನಮ್ಮ ತಂದೆ ತಾಯಿ' ಪುಣ್ಯಕೋಟಿಯ ನೆಲದಿ
ಸಾವುಗಳಿಗೆ ಇರುವುದಿಲ್ಲ ಮಹತ್ವ!
ಮಹಾತ್ಮರ ಸಾವೇ ಸದ್ಯಕ್ಕೆ ಅಮರತ್ವ!

೪
ಗುತ್ತಿಗೆದಾರರ ಪರ್ಸೆಂಟೇಜು ಹರಿದು ಸೇರುವ ಜಾಗ
ಸಾರಿಸಿ-ಗುಡಿಸಿ ರಂಗೋಲೆ ಹಾಕಿದಾಗ
ಕಪ್ಪು ಡಾಂಬರ ರಸ್ತೆಗಳಿಗೆ ಕಾಡುತ್ತದೆ ಮೈಥುನ!
ಬಡ ಜನ ಆಗಸ ನೆಟ್ಟು ಕರೆಯುತ್ತಾರೆ ಮಳೆರಾಯನ!

೫
ಛಾಪಕಾಗದ ಕರೀಂ ಲಾಲನ ಮೆದುಳಿಗೆ ಜಜಾನೆಗಳೇ
ಜಕಂ ಆದವು!
ಬೆತ್ತಲಾದಾಗ ಅಕ್ಕಿ ಗೋದಾಮಿನಲಿ
ಮಾಡಿದವು ಕ್ಯಾಬರೆ ಇಲಿ ಹೆಗ್ಗಣಗಳೂ ಕೂಡ!

೬
ಕಂಟಕಿ ಚಿಕನ್ನು ಅಮೇರಿಕಾ ನಾಲಗೆಗೆ ನೀರೂರಿಸಿದಾಗ
ಕವಿತೆಗಳೇ ಸತ್ತವು ಕೋಳಿಗಳಾಗಿ ರಕ್ತ ಬಸಿದು!

೭
ಅಂಡರ್‌ಗ್ರೌಂಡಿನ ದೊರೆಗಳ ಸೊಂಟ ಚೈನು ಸಡಿಲವಾಗುತ್ತಲೇ
ಮುಗಿಬಿದ್ದವು 'ಕಪ್ಪ' ಲಾಂಗುಗಳಿಗೆ!

೮
ಲೇಬಲ್ ಬುದ್ಧಿಜೀವಿಗಳೆಂದು ಶಸ್ತ್ರಹಿಡಿದು ಹೊರಟ
ದಾರಿಗಳಲ್ಲಿ ಕೋವಿಗಳ ಬಾಯಿಯಲ್ಲಿ ರಕ್ತ ಹನಿಯುತ್ತಿತ್ತು
ಅಮಾಯಕರದ್ದು!

○ ಟಿ.ಎಸ್. ರಾಜೇಂದ್ರ ಪ್ರಸಾದ್

ದಲಿತರು ಮತ್ತು ಪರ್ಯಾಯ ರಾಜಕಾರಣ :

ಪರ್ಯಾಯ ರಾಜಕಾರಣದ ತಾತ್ವಿಕತೆ

○ಡಾ|| ಮೊಗಳ್ಳಿ ಗಣೇಶ್
ಸಾಹಿತಿ, ಚಿಂತಕರು

ನಮ್ಮ ಸಂವಿಧಾನದ ಕೇಂದ್ರ ಪ್ರಜ್ಞೆಯು ಪ್ರಧಾನವಾಗಿ ಮೂರು ನೆಲೆಗಳಲ್ಲಿ ಅಸ್ತಿತ್ವಕ್ಕೆ ಬಂದಿದೆ. ಮೊದಲನೆಯದು ಜಾತ್ಯತೀತವಾದ ನೆಲೆ. ಎರಡನೆಯದು ಸಾಮಾಜಿಕ ನ್ಯಾಯದ ನೆಲೆ. ಮೂರನೆಯದು ಮಾನವೀಯತೆಯ ಸಮಷ್ಟಿ ಪ್ರಜ್ಞೆ. ಆಳುವ ಪ್ರಭುತ್ವವನ್ನೇ ನಿಯಂತ್ರಿಸುವಂತಹ ಸಂವಿಧಾನದ ಈ ತಾತ್ವಿಕತೆಯು ಅಖಂಡವಾದ ಮನುಷ್ಯತ್ವವನ್ನು ಪ್ರತಿಪಾದಿಸುತ್ತಿದೆ. ಈ ಕಾರಣವಾಗಿ ವಿಪ್ರ ಪ್ರಭುತ್ವದ ರಾಜಕಾರಣದ ನಡುವೆಯೂ ದಲಿತ ಸಮೂಹಕ್ಕೆ ಒಂದಿಷ್ಟಾದರೂ ಎಚ್ಚರ ಮತ್ತು ನ್ಯಾಯದ ಹಕ್ಕೊತ್ತಾಯದ ಪ್ರಜ್ಞೆಯು ಬಂದಿದೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯೂ, ಸಂಪತ್ತಿನ ಒಡೆತನವೂ, ರಾಜಕಾರಣದ ಪ್ರಭುತ್ವ ಸಂಬಂಧವೂ ಯಾವತ್ತೂ ಕೂಡ ಜಾತಿ ಪದ್ಧತಿಯ ಅನುಸಾರವಾಗಿಯೆ ಸಂಬಂಧಗಳನ್ನು ಮಾಡಿಕೊಂಡು ಬಂದಿವೆ. ನಮ್ಮ ಸಮಾಜ, ಇಲ್ಲಿನ ಒಟ್ಟು ಎಲ್ಲ ಬಗೆಯ ಸಂಪತ್ತು ಮತ್ತು ಅವುಗಳ ರಾಜಕಾರಣವು ಧರ್ಮದ ನಿರ್ಣಾಯಕವಾದ ತೀರ್ಮಾನಗಳಿಗೆ ಬದ್ಧವಾಗಿರುವುದರಿಂದ ಯಾವುದೇ ಹಂಚಿಕೆಯ ಒಪ್ಪಂದಗಳು ಕೂಡ ಮುಗಿಯಲಾರದ ತಕರಾರುಗಳನ್ನು ಎದುರಿಸಬೇಕಾಗುತ್ತದೆ. ಭಾರತೀಯ ಮನಸ್ಸು ಯಾವತ್ತೂ ಯಾವುದನ್ನೂ ಹಂಚಿಕೊಳ್ಳುವ ಸ್ವಭಾವದ್ದಲ್ಲ. ಏನೂ ಇಲ್ಲದ ಸಮುದಾಯಗಳು ಮಾತ್ರ ತಮ್ಮ ಒಂದು ಹೊತ್ತಿನ ತುತ್ತನ್ನು ಎಲ್ಲರಿಗೂ ಹಂಚಿಕೊಳ್ಳುವ ಬಗ್ಗೆ ಆಲೋಚನೆ ಮಾಡುತ್ತಿರುತ್ತವೆ. ಹಂಚಿಕೊಳ್ಳಬೇಕಾದ ಸಂಪತ್‌ಭರಿತ ಸಮುದಾಯಗಳು ಮಾತ್ರ ಯಾವತ್ತೂ ಹಂಚಿಕೆಯ ನ್ಯಾಯದ ವಿರುದ್ಧವೇ ಜಾಗೃತವಾಗಿರುತ್ತವೆ.

ಇದನ್ನು ಮನಗಂಡಿದ್ದ ಅಂಬೇಡ್ಕರ್ ಅವರು ಹಿಂದೂಸ್ತಾನದ ಈ ರಾಜಕೀಯ ಪ್ರಭುತ್ವದ ಜೊತೆ ತಮಗೆ ಯಾವ ನ್ಯಾಯವೂ ಸಿಗಲಾರದು ಎಂದು ಪ್ರತ್ಯೇಕವಾದ ದಲಿತಸ್ತಾನ್ ಬಗ್ಗೆಯೆ ಪ್ರಸ್ತಾಪಿಸಿ ಕೊನೆಗೆ ಪೂನಾ ಒಪ್ಪಂದದಲ್ಲಿ ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ಒತ್ತಾಯಿಸಿ ವ್ಯವಸ್ಥೆಯ ಸಂಚಿನ ಮುಂದೆ ಹಿಂದೆ ಸರಿದರು. ರಾಜಕಾರಣದಲ್ಲಿ ಅವರು ಸೋತರಾದರೂ ಹಿಡಿಯಾಗಿ ಅಖಂಡವಾಗಿ ಇಡೀ ತನ್ನ ಸಮುದಾಯವನ್ನೇ ಬೌದ್ಧ ಧರ್ಮಕ್ಕೆ ಮತಾಂತರಿಸುವ ಆಶಯದ ಮೂಲಕ ತಮ್ಮ ದಲಿತಸ್ತಾನ್ ಕಲ್ಪನೆಯ ಆದರ್ಶ ರಾಜ್ಯವನ್ನು ಬುದ್ಧನ ಬೆಳಕಿನಲ್ಲಿ ಹುಡುಕಾಡಿದರ ಇದು ಅಸಾಧಾರಣದ ದಿವ್ಯ ಪರ್ಯಾಯ. ಈ ದಿವ್ಯ ಪರ್ಯಾಯಕ್ಕೆ ಆ ಹೊತ್ತಿಗೆ ನಮ್ಮ ಸಮುದಾಯಗಳು ಎಚ್ಚರಗೊಳ್ಳಬೇಕಾದ ರೀತಿಯಲ್ಲಿ ಎಚ್ಚರಗೊಂಡಿರಲಿಲ್ಲ.

ಈಗ ಎಚ್ಚರಗೊಂಡಂತೆ ಪ್ರಭುತ್ವದ ಮುಂದೆ ಕಾಣುತ್ತಿದ್ದೇವೆ. ಆಳುವ ವ್ಯವಸ್ಥೆಯು ನಮ್ಮ ಜೊತೆ ಒಪ್ಪಂದಕ್ಕೂ ಸಿದ್ಧವಿದೆ. ನಮ್ಮ ನಮ್ಮ ಎಚ್ಚರದಲ್ಲೇ ವೈರುಧ್ಯವೂ ಗೊಂದಲವೂ ಇದೆ ಎಂಬುದನ್ನು ಪ್ರಭುತ್ವವು ಗಮನಿಸಿ; ಅಂತಹ ವೈರುಧ್ಯಾಂತರಗಳು ವಿಸ್ತರಿಸಿಕೊಳ್ಳಲು ಬೇಕಾದ ತಂತ್ರವನ್ನು ಪ್ರಯೋಗಿಸುತ್ತಿದೆ. ಭಾರತೀಯ ಜಾತಿ ವ್ಯವಸ್ಥೆಯು ಎಲ್ಲರನ್ನೂ ಒಟ್ಟಿಗೇ ಎಚ್ಚರಿಸಲು ಬಿಡುವುದಿಲ್ಲ. ಹಂತ ಹಂತವಾಗಿ ಎಚ್ಚರಗೊಂಡಾಗಲೂ ಒಬ್ಬರ ಎಚ್ಚರವು ಮತ್ತೊಬ್ಬರ ಎಚ್ಚರದ ವಿರುದ್ಧವಾಗಿಯೂ ಕೆಲಸ ಮಾಡಬಲ್ಲದು. ನಮ್ಮ ಎಲ್ಲ ತಳಸಮುದಾಯಗಳ ಎಚ್ಚರವು ಛಿದ್ರಗೊಂಡ ಎಚ್ಚರ. ಛಿದ್ರಗೊಂಡ ಎಚ್ಚರ ಯಾವತ್ತೂ ತನ್ನ ನೆರೆಹೊರೆಯ ವಿರುದ್ಧವೇ ದಾಳಿ ಮಾಡುತ್ತಿರುತ್ತದೆ. ಇಲ್ಲವೆ ಆತ್ಮಹತ್ಯಾತ್ಮಕ ಹಾದಿಯಲ್ಲಿ ತನ್ನನ್ನೇ ತಾನೇ ಬಲಿಕೊಟ್ಟುಕೊಳ್ಳುತ್ತಿರುತ್ತದೆ.

ಇಂತಹ ಅಪಾಯಕಾರಿ ಸ್ಥಿತಿಯಲ್ಲಿ ದಲಿತರ ಮುಂದಿನ ಯಾವ ಆಯ್ಕೆಯೂ ಅತ್ಯಂತ ಜಟಿಲವಾದುದೇ. ಯಾವುದೂ ಕೂಡ ಪೂರ್ಣ ವಿಶ್ವಾಸಕ್ಕೆ ಅರ್ಹವಾದುದಲ್ಲ. ಇದ್ದ ವ್ಯವಸ್ಥೆಯ ಒಳಗೇ ಅಂಬೇಡ್ಕರ್ ಅವರು ಪರ್ಯಾಯ ಸಾಧ್ಯ ಎಂಬುದನ್ನು ಪೂರ್ತಿಯಾಗಿ ನಂಬಿರಲಿಲ್ಲ. ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಮಾನವೀಕರಣಗೊಳಿಸಿದರೂ ಅದನ್ನು ನಿರ್ವಹಿಸುವ ವ್ಯವಸ್ಥೆ ಮಾತ್ರ ಅಮಾನುಷವಾದುದೇ. ಜಾತಿಯ ಮಾನದಂಡಗಳು ಎಂತಹ ಮಾನವೀಯ ವ್ಯವಸ್ಥೆಯನ್ನೂ ವಿಕಾರಗೊಳಿಸಬಲ್ಲದು. ಸಂವಿಧಾನದ ಆಚೆಗಿನ ಧಾರ್ಮಿಕ ಮತ್ತು ಜಾತಿಯ ಸರ್ವಾಧಿಕಾರಗಳು ಸಂವಿಧಾನಕ್ಕಿಂತಲೂ ಬಲಿಷ್ಠವಾದವು. ಅವುಗಳು ಸದಾ ಶೋಷಣೆಯ ಹೊಸ ಅವತಾರಗಳನ್ನು ಬಿತ್ತುತ್ತಲೆ ಇರುತ್ತವೆ. ಹೀಗಾಗಿಯೆ ಭಾರತದ ರಾಜಕಾರಣವೆಂದರೆ ಜಾತಿ ಶ್ರೇಣಿಯ ಯಾಜಮಾನ್ಯವನ್ನು ಪ್ರತಿಷ್ಠಾಪಿಸುವುದು.

ನಮ್ಮ ದೇಶದ ಬಹುಪಾಲು ಎಲ್ಲ ರಾಜಕೀಯ ಪಕ್ಷಗಳು ಜಾತಿಯ ಆಧಾರದಲ್ಲೇ ಅಧಿಕಾರವನ್ನು ಹಿಡಿಯುವುದು. ಸ್ವಾತಂತ್ರ್ಯ ಬಂದ ನಂತರ ದೇಶದ ಜಾತಿ ವ್ಯವಸ್ಥೆಯು ಅತ್ಯಂತ ಪ್ರಬುದ್ಧವಾಗಿ ಪಳಗಿದೆ. ರಾಜಕೀಯ ಪಕ್ಷಗಳು ಜಾತಿಯನ್ನು ನಿರಾಕರಿಸಿ ಅಸ್ತಿತ್ವವನ್ನು ಉಳಿಸಿಕೊಳ್ಳಲಾರವು. ಪ್ರಬಲ ಜಾತಿಗಳೆಲ್ಲವೂ ಸದಾ ಪ್ರಭುತ್ವದ ಕೇಂದ್ರವಾಗಿಯೆ ಉಳಿದಿರುತ್ತವೆ. ಜಾತಿಯನ್ನು ವಿನಾಶಪಡಿಸದ ಯಾವ ರಾಜಕಾರಣವೂ ಜನಪರವಲ್ಲ. ಜಾತಿ ಮತ್ತು ಧರ್ಮಗಳ ಪರವಾದ ಹಿಂದೂ ರಾಜಕಾರಣವು ಎಸಗುವ ಮತೀಯತೆಯ ಮೂಲಭೂತವಾದವು ದಲಿತರ, ಅಲ್ಪಸಂಖ್ಯಾತರ, ಹಿಂದುಳಿದವರ ವಿರುದ್ಧವಾಗಿರುತ್ತದೆಯೇ ಹೊರತು ಅದು ಎಂದೆಂದಿಗೂ ಜಾತ್ಯತೀತವಾಗಲಾರದು. ಹೀಗಾಗಿಯೆ ಪ್ರತಿ ಬಾರಿಯು ರಾಜಕೀಯ ಪಕ್ಷಗಳು ಮತೀಯ ರಾಜಕಾರಣದಲ್ಲಿ ಮುಳುಗಿ ಹಿಂದೂ ರಾಜಕಾರಣಕ್ಕೆ ಮರಳುತ್ತಿರುವುದು. ರಾಷ್ಟ್ರದ ಪ್ರಧಾನಿಯಿಂದ ಹಿಡಿದು ಕೊನೆಯ ಮಂಡಲ ಪಂಚಾಯಿತಿಯ ಸಾಮಾನ್ಯ ಸದಸ್ಯನೂ ಕೂಡ ಇವತ್ತು ಧಾರ್ಮಿಕ ರಾಜಕಾರಣದ ತಂತ್ರಗಳನ್ನು ಅನುಸರಿಸುತ್ತಿರುವುದು. ಇಂತಹ ಸ್ಥಿತಿಯಲ್ಲಿ ದಲಿತರ ಪರ್ಯಾಯ ರಾಜಕಾರಣದ ಕನಸು ಎಲ್ಲ ತಳ ಸಮುದಾಯಗಳ ಸಮಷ್ಟಿ ವಿಮುಕ್ತಿಯ ಹೋರಾಟವಾಗಬೇಕಾಗಿದೆ.

ಈ ನಿಟ್ಟಿನಲ್ಲಿ ದಲಿತ ರಾಜಕಾರಣದ ತಾತ್ವಿಕತೆಯನ್ನು ಪರಿಶೀಲಿಸಬಹುದು. ದಲಿತ ಸಮುದಾಯಗಳು ಇನ್ನೂ ಪ್ರಾಥಮಿಕ ಸಮಸ್ಯೆಗಳನ್ನೆ ಬಗೆಹರಿಸಿಕೊಂಡಿಲ್ಲ. ಛಿದ್ರಗೊಂಡ ಸಮುದಾಯಗಳು ಅಖಂಡವಾಗಿ ಒಂದುಗೂಡಲು ಸಾಧ್ಯವಾಗಿಲ್ಲ. ಒಂದೊಂದು ಜಾತಿಯ ಅನನ್ಯತೆಯೂ ಒಂದಾಗದಂತೆ ತಡೆದಿದೆ. ಜಾತಿಯು ಸಂಘಟಿತರಾಗಲು ಒತ್ತಾಯಿಸುವಂತೆಯೆ ಸ್ವತಃ ಅದೇ ಜಾತಿಯು ತನ್ನ ಸಮಷ್ಟಿ ಸಂಘಟನೆಯನ್ನೇ ಭಗ್ನಗೊಳಿಸಿಕೊಳ್ಳಲು ಉಪಯೋಗವಾಗುತ್ತಿರುತ್ತದೆ. ಪ್ರಧಾನವಾದ ಉಳಿದ ಜಾತಿಗಳು ಭಗ್ನಗೊಳ್ಳುವ ಬದಲು ಮತ್ತೆ ಮತ್ತೆ ಜಾತಿ ಬಲದಿಂದಲೇ ಬಲಗೊಳ್ಳುತ್ತಿರುತ್ತವೆ. ಜಾತಿಯನ್ನು ನಾಶಪಡಿಸದೆ

ಚರ್ಚೆ

ದಲಿತ ಸಮುದಾಯಗಳು ಇನ್ನೂ ಪ್ರಾಥಮಿಕ ಸಮಸ್ಯೆಗಳನ್ನೆ ಬಗೆಹರಿಸಿಕೊಂಡಿಲ್ಲ; ಛಿದ್ರಗೊಂಡ ಸಮುದಾಯಗಳು ಅಖಂಡವಾಗಿ ಒಂದುಗೂಡಲು ಸಾಧ್ಯವಾಗಿಲ್ಲ. ಒಂದೊಂದು ಜಾತಿಯ ಅನನ್ಯತೆಯೂ ಒಂದಾಗದಂತೆ ತಡೆದಿದೆ. ಜಾತಿಯು ಸಂಘಟಿತರಾಗಲು ಒತ್ತಾಯಿಸುವಂತೆಯೆ ಸ್ವತಃ ಅದೇ ಜಾತಿಯು ತನ್ನ ಸಮಷ್ಟಿ ಸಂಘಟನೆಯನ್ನೇ ಭಗ್ನಗೊಳಿಸಿಕೊಳ್ಳಲು ಉಪಯೋಗವಾಗುತ್ತಿರುತ್ತದೆ. ಪ್ರಧಾನವಾದ ಉಳಿದ ಜಾತಿಗಳು ಭಗ್ನಗೊಳ್ಳುವ ಬದಲು ಮತ್ತೆ ಮತ್ತೆ ಜಾತಿ ಬಲದಿಂದಲೇ ಬಲಗೊಳ್ಳುತ್ತಿರುತ್ತವೆ. ಜಾತಿಯನ್ನು ನಾಶಪಡಿಸದೆ ಯಾವ ಪರ್ಯಾಯವೂ ಸಾಧ್ಯವಿಲ್ಲ. ದಲಿತ ರಾಜಕಾರಣದ ತಾತ್ವಿಕತೆಯನ್ನು ಜಾತ್ಯತೀತವಾದ ಪ್ರಜ್ಞೆಯಿಂದಲೆ ರೂಪಿಸಿಕೊಳ್ಳಬೇಕು.

ಚರ್ಚೆ

ಜಾತ್ಯಾತೀತ ರಾಜಕಾರಣ

ಯಾವ ಪರ್ಯಾಯವೂ ಸಾಧ್ಯವಿಲ್ಲ. ದಲಿತ ರಾಜಕಾರಣದ ತಾತ್ವಿಕತೆಯನ್ನು ಜಾತ್ಯತೀತವಾದ ಪ್ರಜ್ಞೆಯಿಂದಲೆ ರೂಪಿಸಿಕೊಳ್ಳಬೇಕು.

ಜಾತ್ಯತೀತ ರಾಜಕಾರಣ ಮತ್ತು ಪ್ರಭುತ್ವ

ಬಾಬಾ ಸಾಹೇಬ ಅಂಬೇಡ್ಕರ್ ಅವರ ಪರಮ ಕನಸು ಜಾತ್ಯತೀತವಾದ ಸಮಾಜದ ನಿರ್ಮಾಣ. 'ಜಾತ್ಯಾತೀತ' ಎನ್ನುವುದು ಮಾನವತ್ವದ ಆತ್ಯಂತಿಕ ಹಠ. ಜಾತಿನಿಷ್ಠವಾದ ಸಮಾಜವು ಸಮಾಜವನ್ನು ಸದಾ ಸೀಳುತ್ತಲೇ ಸಮಾಜವನ್ನು ನಿರಂತರವಾಗಿ ಗಾಯಗೊಳಿಸುತ್ತಲೆ ಇರುತ್ತದೆ. ಈ ಸನಾತನ ಗಾಯಗಳಿಂದ ನಮ್ಮ ದೇಶದ ಸಾಮ್ರಾಜ್ಯಗಳು ಕೂಡ ಮನುಷ್ಯತ್ವವನ್ನು ಮರೆತೇ ರಕ್ತಪಾತದಲ್ಲಿ ದಿಗ್ವಿಜಯ ಸಾಧಿಸಿದವು. ಇವತ್ತಿನ ರಾಜಕಾರಣ ಕೂಡ ತನ್ನ ಆಳದಲ್ಲಿ ಇಂತದೇ ಪಾತಕ ಗುಣವನ್ನು ಬಚ್ಚಿಟ್ಟುಕೊಂಡಿರುತ್ತದೆ. ಹೀಗಾಗಿಯೆ ಪ್ರತಿಯೊಂದು ರಾಜಕಾರಿಣಿಯೂ ಆತನ ಪಕ್ಷವೂ ಜಾತಿಯ ಬಲದಿಂದಲೇ ಪ್ರಭುತ್ವವನ್ನು ಹಿಡಿದುಕೊಂಡಿರುತ್ತದೆ. ಇಂತಲ್ಲಿ ದಲಿತ ಸಮುದಾಯಗಳು ಜಾತ್ಯತೀತವಾದ ಸಮಾಜಕ್ಕಾಗಿ ಮೊದಲ ಆದ್ಯತೆಯನ್ನು ನೀಡಬೇಕಾಗುತ್ತದೆ. ಜಾತಿಯೇ ಇಲ್ಲದ ರಾಜಕಾರಣವು ಸಾಧ್ಯವೆ ? ಇದು ಅತಿಯಾದ ಆದರ್ಶವೆ? ಎಂಬ ಪ್ರಶ್ನೆಗಳಿಗೆ ನಾವಿನ್ನೂ ಸರಿಯಾದ ಪರ್ಯಾಯಗಳನ್ನು ಕಂಡುಕೊಂಡಿಲ್ಲ.

ದಲಿತರು ತಮ್ಮ ಸಮಗ್ರ ಹಕ್ಕೊತ್ತಾಯದ ಯಾವುದೇ ಸಂದರ್ಭದಲ್ಲು ಜಾತ್ಯತೀತವಾದ ನಿರ್ಣಯಗಳಿಗೇ ಬದ್ಧವಾಗಬೇಕು. ಜಾತಿ ಇಲ್ಲದ ಗ್ರಾಮ ಜೀವನಕ್ಕಾಗಿ ವಾಸ್ತವ ಕಾರ್ಯಕ್ರಮಗಳನ್ನು ರೂಪಿಸಬೇಕು. ಜಾತಿಯ ಜೊತೆಗೆ ಬೆರೆತುಹೋಗಿರುವ ಎಲ್ಲ ಸಂಪತ್ತನ್ನೂ ಜಾತಿಯ ಹಕ್ಕಿನ ಅಧಿಕಾರದಿಂದ ಬೇರ್ಪಡಿಸಬೇಕು. ಜಾತ್ಯತೀತ ರಾಜಕಾರಣ ಎಂದರೆ ಎಲ್ಲ ಜಾತಿಗಳ ಛಿದ್ರಗೊಂಡ ಬದುಕನ್ನು ಹಸನುಗೊಳಿಸುವಂತದು. ಜಾತಿಗಳು ತಮ್ಮ ಜಾತಿಯ ಕಾರಣವಾಗಿಯೇ ವಿಕೃತಗೊಳ್ಳುತ್ತ ದುರಂತದಲ್ಲಿ ಮುಂದುವರಿಯುತ್ತಲೇ ಇರುತ್ತವೆ. ಹೀಗಾಗಿ ಜಾತಿಯ ಕೊಂಪೆಯಾಗಿರುವ ಹಳ್ಳಿಗಳನ್ನು ಜಾತಿಯಿಂದ ಮುಕ್ತಗೊಳಿಸಬೇಕು.

ಈ ನಿಟ್ಟಿನಲ್ಲಿ ಪ್ರತಿಯೊಂದು ಗ್ರಾಮದ ಎಲ್ಲ ಬಗೆಯ ಸಂಪತ್ತಿನ ಅಧಿಕಾರವನ್ನು ಅದರ ಶೋಷಣೆಯ ಕ್ರಮಗಳನ್ನು ತಪ್ಪಿಸಬೇಕು. ರೈತಸಂಘವೂ ದಲಿತ ಸಂಘವೂ ಕೆಲವಾದರೂ ಹಳ್ಳಿಗಳನ್ನು ಸಂಘಟಿಸಿ ಆ ಹಳ್ಳಿಗಳನ್ನು ಜಾತ್ಯತೀತವಾಗಿಸಿ; ಆ ಹಳ್ಳಿಗಳ ಸಂಪತ್ತಿನ ಒಡೆತನವನ್ನು ತಪ್ಪಿಸಿ ಇಡೀ ಗ್ರಾಮವೇ ಆ ಸಂಪತ್ತಿನ ವಾರಸುದಾರರಾಗುವಂತಹ ಉತ್ಪಾದನಾ ವ್ಯವಸ್ಥೆಯನ್ನು ಸಾಧ್ಯವಾಗಿಸಬೇಕು. ಅಂತಹ ಸಮಾಜವು ಬಲಗೊಂಡಾಗ ಜಾತ್ಯತೀತವಾದ ರಾಜಕಾರಣವು ಸುಲಭ. ಆಗ ಪ್ರಭುತ್ವವು ಕೊನೆಯ ಮನುಷ್ಯನ ಕನಸುಗಳಿಗೂ ಸ್ಪಂದಿಸಬಲ್ಲದು. ಪ್ರಭುತ್ವ ಎನ್ನುವ ಶೋಷಕ ಶಕ್ತಿಗೆ ಪೂರಕವಾದ ರಾಜಕಾರಣವನ್ನೇ ಈ ತನಕ ಬೆಳೆಸಿಕೊಂಡು ಬರಲಾಗಿದೆ. ರಾಜಕಾರಣವು ಆಳುವ ವ್ಯವಸ್ಥೆಯಾದಾಗಲೆಲ್ಲ ತನ್ನೊಳಗೆ ಬಂಡವಾಳಶಾಹಿ ಗುಣವನ್ನೆ ಉಳಿಸಿಕೊಂಡಿರುತ್ತದೆ. ಹೀಗಾಗಿಯೇ ಇಲ್ಲಿನ ಬಂಡವಾಳಶಾಹಿ ರಾಜಕಾರಣಕ್ಕೂ ಇಲ್ಲಿನ ಒಂದೊಂದು ಜಾತಿಗೂ ಸಂಬಂಧವಿರುವುದು. ಜಾತಿಗಳೇ ಖಾಸಗೀ ಬಂಡವಾಳಶಾಹಿ ಘಟಕಗಳಾಗಿ ಕೆಲಸ ಮಾಡುತ್ತಿರುತ್ತವೆ. ಭಾರತದ ಜಾತಿ ವ್ಯವಸ್ಥೆಯು ಮೂಲತಃ ಬಂಡವಾಳಶಾಹಿ ರಚನೆಗೆ ತಕ್ಕಂತೆ ಹಿಂಗಡಣೆಯಾಗಿದೆ. ಎಲ್ಲ ಮೇಲುಜಾತಿಗಳು ಹೀಗಾಗಿಯೆ ಪ್ರಭುತ್ವದ ವಾರಸುದಾರರಾಗಿ ಮೆರೆಯುವುದು. ಜಾತಿಗಳ

ಈ ಯಾಜಮಾನ್ಯವನ್ನು ತಪ್ಪಿಸಲು ಗ್ರಾಮೀಣ ಭಾರತದ ಒಟ್ಟು ರಚನೆಯನ್ನೆ ಬದಲಿಸಬೇಕಾಗಿದೆ. ಆರ್ಥಿಕ ಸಂಪನ್ಮೂಲವನ್ನೆಲ್ಲ ವಿಕೇಂದ್ರೀಕರಿಸುವ ರಾಜಕಾರಣವೇ ಇಲ್ಲದಿದ್ದರೆ ಸಮಾನತೆಯ ಕನಸು ಹಾಗೇ ಉಳಿಯುತ್ತದೆ.

ಪ್ರಭುತ್ವರಹಿತ ರಾಜಕಾರಣ

ಪ್ರಭುತ್ವದ ಅಗತ್ಯಕ್ಕೆ ತಕ್ಕಂತೆ ಬೆಳೆದ ರಾಜಕಾರಣವು ಸದಾ ಆಳುವ ಅಮಲಿನಲ್ಲಿ ಸಮಾಜದ ಮೇಲೆ ಸವಾರಿ ಮಾಡುತ್ತಿರುತ್ತದೆ. ಜಾತಿಗಳು ಪ್ರಭುತ್ವದ ಪಾತ್ರಗಳಂತೆ ಪ್ರತಿ ಸಂದರ್ಭದಲ್ಲೂ ಬಣ್ಣ ಬದಲಾಯಿಸುತ್ತಿರುತ್ತವೆ. ಪ್ರಭುತ್ವ ರಹಿತವಾದ ರಾಜಕಾರಣವನ್ನು ಅಂಬೇಡ್ಕರ್ ಪ್ರತಿಪಾದಿಸಿದ್ದು ಅಖಂಡವಾದ ಮಾನವೀಯತೆಯ ದಾಹದಿಂದ. ಗಾಂಧಿ ಕೂಡ ಪ್ರಭುತ್ವದ ಗರ್ವವನ್ನು ತಿಳಿದೇ ಗ್ರಾಮ ಸಮಾಜದ ಬದಲಾವಣೆಯ ಅನಿವಾರ್ಯತೆಯನ್ನು ಸಮರ್ಥಿಸಿದ್ದು. ಆಳುವ ಪ್ರಜ್ಞೆಯು ಸರ್ವಾಧಿಕಾರಿ ನೆಲೆಯಿಂದ ಬರುವಂಥದು. ಹೀಗಾಗಿಯೆ ಮೇಲುಜಾತಿಗಳು ಧರ್ಮದ ಹೆಸರಿನಲ್ಲಿ ಸರ್ವಾಧಿಕಾರದ ರಾಜಕಾರಣವನ್ನು ಈ ಕಾಲದಲ್ಲೂ ಅತ್ಯಂತ ಚಾಣಾಕ್ಷತೆಯಿಂದ ಎಸಗುವಂಥದು.



ಬಾಬಾ ಸಾಹೇಬ ಅಂಬೇಡ್ಕರ್ ಅವರ ಪರಮ ಕನಸು ಜಾತ್ಯತೀತವಾದ ಸಮಾಜದ ನಿರ್ಮಾಣ. 'ಜಾತ್ಯಾತೀತ' ಎನ್ನುವುದು ಮಾನವತ್ವದ ಆತ್ಯಂತಿಕ ಹಠ. ಜಾತಿನಿಷ್ಠವಾದ ಸಮಾಜವು ಸಮಾಜವನ್ನು ಸದಾ ಸೀಳುತ್ತಲೇ ಸಮಾಜವನ್ನು ನಿರಂತರವಾಗಿ ಗಾಯಗೊಳಿಸುತ್ತಲೆ ಇರುತ್ತದೆ. ಈ ಸನಾತನ ಗಾಯಗಳಿಂದ ನಮ್ಮ ದೇಶದ ಸಾಮ್ರಾಜ್ಯಗಳು ಕೂಡ ಮನುಷ್ಯತ್ವವನ್ನು ಮರೆತೇ ರಕ್ತಪಾತದಲ್ಲಿ ದಿಗ್ವಿಜಯ ಸಾಧಿಸಿದವು. ಇವತ್ತಿನ ರಾಜಕಾರಣ ಕೂಡ ತನ್ನ ಆಳದಲ್ಲಿ ಇಂತದೇ ಪಾತಕ ಗುಣವನ್ನು ಬಚ್ಚಿಟ್ಟುಕೊಂಡಿರುತ್ತದೆ. ಹೀಗಾಗಿಯೆ ಪ್ರತಿಯೊಂದು ರಾಜಕಾರಿಣಿಯೂ ಆತನ ಪಕ್ಷವೂ ಜಾತಿಯ ಬಲದಿಂದಲೇ ಪ್ರಭುತ್ವವನ್ನು ಹಿಡಿದುಕೊಂಡಿರುತ್ತದೆ.

ಜಾತ್ಯತೀತ, ವರ್ಗಾತೀತ, ಧರ್ಮಾತೀತ ಹೆಸರಿನ ರಾಜಕೀಯ ಧುರೀಣರೂ ಪಕ್ಷಗಳೂ ಧರ್ಮದ ಹೇಯ ಆಚರಣೆ ಮತ್ತು ಜಾತಿಯ ವಿಕೃತ ತಂತ್ರಗಳನ್ನು ಯಾವುದೆ ಸಾರ್ವಜನಿಕ ಮುಜುಗರವಿಲ್ಲದೆ ಪ್ರಗತಿಪರ ಮುಖವಾಡಗಳಲ್ಲಿ ಚಲಾಯಿಸುತ್ತಿರುತ್ತಾರೆ. ದಲಿತ ಸಮಾಜದ ಉದ್ಧಾರಕ್ಕೆ ಪ್ರಭುತ್ವ ರಹಿತವಾದ ರಾಜಕಾರಣ ಅನಿವಾರ್ಯ. ಪ್ರಭುತ್ವ ಎನ್ನುವುದು ಕಲ್ಪಿತವಾಗಿದ್ದರೆ ಅದು ಅಷ್ಟರಮಟ್ಟಿಗೆ ಉಪಯುಕ್ತ. ವಾಸ್ತವದ ಎಲ್ಲ ಅಧಿಕಾರದ ನೆಲೆಗಳಲ್ಲೂ ಪ್ರಭುತ್ವವೆ ಆವರಿಸಿಕೊಂಡುಬಿಟ್ಟಿದ್ದರೆ ಅದು ಕೂಡ ಕ್ರೂರ ಧರ್ಮಾಧಿಕಾರದಂತೆಯೆ ವರ್ತಿಸಬಲ್ಲದು. ಆಧುನಿಕ ರಾಜಕೀಯ ಪಕ್ಷಗಳೆಲ್ಲ ಇವತ್ತು ಧರ್ಮಾಧಿಕಾರಿಗಳಂತೆ ವರ್ತಿಸುವುದು ಮತ್ತು ಆ ಮೂಲಕವೆ ರಾಜಕಾರಣವನ್ನು ಮಾಡುವುದು ಸಲೀಸಾಗಿದೆ. ಅಂದರೆ ನಮ್ಮ ಸಮಾಜವನ್ನೆ ಇಂತಹ ರಾಜಕಾರಣವು ವಿರೂಪಗೊಳಿಸುತ್ತಿದೆ. ಇಂತಹ ಸ್ಥಿತಿಯಲ್ಲಿ ದಲಿತರು ಶೂದ್ರರು ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಅಖಂಡ ರಾಜಕಾರಣ ಮಾತ್ರವೆ ಪ್ರಭುತ್ವ ರಹಿತ ವ್ಯವಸ್ಥೆಯನ್ನು ನಿರ್ಮಿಸಬಲ್ಲದು. ಆದರೆ; ಬಹುಸಂಖ್ಯಾತ ಸಮುದಾಯಗಳು ಕೂಡಿ ಪರ್ಯಾಯವನ್ನು ಹುಡುಕುವ ಬದಲು ಭಗ್ನಗೊಂಡ ಗಾಯಗೊಂಡ ಬಹುರೂಪಗಳಲ್ಲೆ ತಮ್ಮ ಅಸ್ತಿತ್ವವನ್ನು ಹುಡುಕುತ್ತಿವೆ.

ಪ್ರಭುತ್ವರಹಿತವಾದ ರಾಜಕಾರಣವನ್ನು ಸಾಧ್ಯವಾಗಿಸಲು ನಮ್ಮ ಎಲ್ಲ ಬಹುರೂಪಿ ಸಮುದಾಯಗಳು ತಮ್ಮ ಅನನ್ಯತೆಯನ್ನು ಅಖಂಡ ಪ್ರಜ್ಞೆಯಲ್ಲಿ ಅನುಸಂಧಾನಗೊಳಿಸುತ್ತ ಕರಗಿಸಿಕೊಳ್ಳಬೇಕು. ದಲಿತ ಸಮುದಾಯಗಳು ತಮ್ಮ ಅನನ್ಯತೆಯ ಅಂತರಗಳಿಂದಲೇ ದೂರ ದೂರ ಸರಿದಿರುವುದು. ಅಂದರೆ ನಮ್ಮ ಅನನ್ಯತೆಯೆ ನಮ್ಮನ್ನು ಒಂದಾಗದಂತೆ ದೂರವಿಟ್ಟಿರುವುದು. ಇಂತಹ ಸ್ಥಿತಿಯನ್ನೆ ಮುಂದುವರಿಸಿಕೊಂಡು ಹೋದರೆ ಪ್ರಭುತ್ವವು ಸಮಯ ಕಾದು ಒಬ್ಬೊಬ್ಬ ನಾಯಕರನ್ನೂ ಸಮುದಾಯವನ್ನೂ ಅಗ್ಗದ ಬೆಲೆಗೆ ಕೊಂಡುಕೊಂಡು ಜೀತಕ್ಕೆ ಇಟ್ಟುಕೊಳ್ಳಬಲ್ಲದು. ಒಂದು ಕಾಲಕ್ಕೆ ಊಳಿಗಮಾನ್ಯ ವ್ಯವಸ್ಥೆಯು ದಲಿತರನ್ನು ಬಹುಬಗೆಯ ಜೀತಕ್ಕೆ ಇಟ್ಟುಕೊಂಡು ಆಳಿತು. ಇವತ್ತು ಬದಲಾದ ಕಾಲದಲ್ಲಿ ಇರುವುದು ಕೂಡ ಊಳಿಗಮಾನ್ಯ ರಾಜಕಾರಣವೇ. ಈ ಊಳಿಗಮಾನ್ಯ ರಾಜಕಾರಣದಲ್ಲಿ ದಲಿತರಿಗೆ ಸಿಗುವ ರಾಜಕೀಯ ಲಾಭವು ವ್ಯಕ್ತಿನಿಷ್ಠವಾದುದೇ ವಿನಃ ಸಮುದಾಯನಿಷ್ಠವಾದುದಲ್ಲ. ಪ್ರಭುತ್ವವು ಯಾವತ್ತೂ ಬಂಡಾಯವೆದ್ದ ಸಮುದಾಯಗಳ ನಾಯಕರನ್ನು ಹಿಂಬಾಗಿಲಿಂದ ಕರೆಸಿಕೊಂಡು ಒಪ್ಪಂದ ಮಾಡಿಕೊಳ್ಳುವುದೇ ಹೊರತು ಹಿಡಿಯಾಗಿ ಆ ಸಮುದಾಯವನ್ನೆ ಮಾನ್ಯ ಮಾಡುವುದಿಲ್ಲ. ಇಂತಹ ಪ್ರಭುತ್ವದ ಜೊತೆ ಪಾಲು ಕೇಳುವ ರಾಜಕಾರಣವು ಭವಿಷ್ಯದಲ್ಲಿ ವ್ಯವಸ್ಥೆಯಲ್ಲೇ ಕರಗಿಹೋಗಿ ಸಮುದಾಯವನ್ನು ದಿಕ್ಕು ತಪ್ಪಿಸುವ ಸಾಧ್ಯತೆ ಇರುತ್ತದೆ. ಆಗ ಒಂದೇ ಸಮುದಾಯದ ಒಡಲಲ್ಲಿ ನೂರಾರು ಭಗ್ನತೆ ಉಂಟಾಗಿ ಕಳೆದು ಹೋಗುತ್ತವೆ. ಹೀಗಾಗಿಯೆ ರಾಜಕಾರಣದ ಪ್ರತಿ ಚುನಾವಣೆಯ ಸಂದರ್ಭದಲ್ಲು ನಿರ್ಣಾಯಕ ಪಾತ್ರ ವಹಿಸಬಹುದಾದ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ತಮ್ಮ ತಮ್ಮ ಅಸ್ತಿತ್ವವನ್ನು ಸಾಧಿಸಲು ಸಾಧ್ಯವಾಗದೇ ಹೋಗುವುದು. ಪ್ರಭುತ್ವದ ಹಂಗಿಲ್ಲದ ಚಳವಳಿಗಳನ್ನು ಬಲಪಡಿಸದ ಹೊರತು ಯಾವ ಪ್ರತಿರೋಧವೂ ಫಲಕೊಡದು.

ಮಾರ್ಕ್ಸ್, ಮಾವೊ, ಗಾಂಧಿ ಇವರೆಲ್ಲ ಪ್ರಭುತ್ವ ರಹಿತ ರಾಜಕಾರಣವನ್ನು ಕನಸಿದವರು. ಅಂಬೇಡ್ಕರ್ ಅವರ ಪ್ರಭುತ್ವ ಕಲ್ಪನೆಯಲ್ಲಿ ಈ ಸಮಾಜದ ಕೊನೆಯವನ ಪ್ರಜ್ಞೆಯೇ ಬೇರಿನಂತಿತ್ತು. ದಲಿತ ಸಮುದಾಯಗಳು ಬಹುಕಾಲದಿಂದಲೂ ಪ್ರಭುತ್ವದ ಪಾದದ ಅಡಿಯಲ್ಲಿ ಅಪ್ಪಚ್ಚಿಯಾಗಿರುವಂತವು. ತುಳಿದು ಕೊಬ್ಬಿದ ಸಮಾಜ ಮತ್ತದರ ಗರ್ವದ ವರ್ಗವು ತಾನು ನಿಶ್ಯಕ್ತನಾಗುತ್ತಿದ್ದೇನೆ ಎನಿಸಿದಾಗಲೆಲ್ಲ ತನ್ನ ಎದುರಾಳಿಯನ್ನೆ ಆತ್ಮೀಯನನ್ನಾಗಿಸಿಕೊಳ್ಳಲು ತಂತ್ರಗಳನ್ನು ರೂಪಿಸುತ್ತದೆ. ಹಾಗೆ ತಂತ್ರ ಬಳಸಿ ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳುತ್ತಿರುತ್ತದೆ. ಹಂಚಿಕೆಯ ನ್ಯಾಯದಲ್ಲೆ ಹಂಗಿಗೆ ಒಳಪಡಿಸುವುದು ಪ್ರಭುತ್ವದ ಹಳೆಯ ಗುಣ.



ಕಾರ್ಲ್ ಮಾರ್ಕ್ಸ್ | ಮಾವೋ -ತ್ಸೆ-ತುಂಗ್ | ಮೋಹನದಾಸ್ ಕರಮಚಂದ್ ಗಾಂಧಿ

ಪ್ರಭುತ್ವದ ಹಂಗಿಲ್ಲದ ಚಳವಳಿಗಳನ್ನು ಬಲಪಡಿಸದ ಹೊರತು ಯಾವ ಪ್ರತಿರೋಧವೂ ಫಲಕೊಡದು. ಮಾರ್ಕ್ಸ್, ಮಾವೊ, ಗಾಂಧಿ ಇವರೆಲ್ಲ ಪ್ರಭುತ್ವ ರಹಿತ ರಾಜಕಾರಣವನ್ನು ಕನಸಿದವರು. ಅಂಬೇಡ್ಕರ್ ಅವರ ಪ್ರಭುತ್ವ ಕಲ್ಪನೆಯಲ್ಲಿ ಈ ಸಮಾಜದ ಕೊನೆಯವನ ಪ್ರಜ್ಞೆಯೇ ಬೇರಿನಂತಿತ್ತು.

ಹೀಗಾಗಿ ಪ್ರಭುತ್ವದ ಜೊತೆಗಿನ ಊಳಿಗಮಾನ್ಯ ಅಧಿಕಾರವನ್ನು ಆರ್ಥಿಕ ಯಾಜಮಾನ್ಯವನ್ನು ನಿರಾಕರಿಸಬೇಕು. ಪ್ರಭುತ್ವವನ್ನು ಖರೀದಿಸುವ ಶಕ್ತಿಗಳ ಜೊತೆ ಸ್ನೇಹ ಮಾಡುವುದಕ್ಕಿಂತ ಅವುಗಳ ಜೊತೆ ಸಂಘರ್ಷವೇ ಪ್ರಮುಖ ಗುರಿಯಾಬೇಕು. ಈ ಸಂಘರ್ಷವು ಸಮಷ್ಟಿ ಪ್ರತಿರೋಧವಾದಾಗ ಪ್ರಭುತ್ವವನ್ನು ಮಾನವೀಕರಣಗೊಳಿಸಲು ಸಾಧ್ಯವಾಗುತ್ತದೆ.

ಧರ್ಮರಹಿತ ರಾಜಕಾರಣ

ದಲಿತ ಸಮುದಾಯಗಳು ಯಾವತ್ತೂ ಧರ್ಮಕ್ಕೆ ಬಿಗಿದುಕೊಂಡವಲ್ಲ. ಧರ್ಮದ ಪುರೋಹಿತಶಾಹಿಯು ಯಾವತ್ತೂ ಸಾಮ್ರಾಜ್ಯಗಳ ಹಿತ ಕಾಯುವಂತದ್ದು. ಹಾಗೆಯೆ ಎಲ್ಲ ಬಗೆಯ ಸಾಮ್ರಾಜ್ಯಗಳನ್ನು ತನ್ನ ಸಂರಕ್ಷಣೆಗಾಗಿ ನೇಮಿಸಿಕೊಳ್ಳುವಂತದ್ದು. ಹೀಗಾಗಿಯೆ ಹಿಂದೂಧರ್ಮದ ಅವತಾರಗಳ ಹಿಂದುತ್ವದ ಪ್ರತಿಪಾದನೆಗೂ ರಾಜಕಾರಣದ ಸಂಬಂಧ ಇರುವುದು. ಧರ್ಮದ ನಿರಂತರ ಅಪಮೌಲ್ಯ ಉಂಟಾಗಿರುವುದೇ ಪ್ರಭುತ್ವ ರಾಜಕಾರಣದಿಂದ. ರಾಜಕೀಯ ಪಕ್ಷಗಳು ಧರ್ಮದ ಆಯುಧಗಳನ್ನು ಹಿಡಿದೇ ರಾಮರಾಜ್ಯದ ಕನಸು ಕಾಣುತ್ತಿರುತ್ತವೆ. ಇಂತಲ್ಲಿ ದಲಿತರ ಧಾರ್ಮಿಕ ಅನನ್ಯತೆಯು ದಾಸ್ಯವನ್ನು ಪ್ರತಿನಿಧಿಸುವಂತದೇ ಆಗಿದೆ. ಹಿಂದೂ ರಾಜಕಾರಣವು ದಾಸ್ಯವನ್ನು ತಾರತಮ್ಯವನ್ನು ಅಧಿಕಾರದ ಶ್ರೇಷ್ಠತೆಯನ್ನು ಗದ್ದುಗೆಯ ಪಾವಿತ್ರ್ಯವನ್ನು ಹೇರುತ್ತಲೆ ಇರುತ್ತದೆ. ಹಿಂದೂ ಧರ್ಮದ ರಾಜಕಾರಣವು ದಲಿತರಿಗೆ ದಾಸ್ಯದ ಬದುಕನ್ನಲ್ಲದೆ ಸಮಾನತೆಯನ್ನು ಎಂದಿಗೂ ನೀಡಲಾರದು ಎಂಬ ಖಚಿತ ವಿಶ್ವಾಸದಿಂದಲೇ ಅವರು ಬೌದ್ಧಧರ್ಮದ ಕಡೆಗೆ ಪಯಣಿಸುವಂತೆ ಮಾಡಿದ್ದು. ಎಲ್ಲ ಬಗೆಯ ಅಧಿಕಾರ ನಿರ್ವಹಿಸುವವರಿಗೆ ದಾಸ್ಯರಾಗಿರಬೇಕಾಗಿದ್ದ ದಲಿತರನ್ನು ಹಿಂದೂ ಧರ್ಮ ಕನಿಷ್ಠ ಮನುಷ್ಯರೆಂದೂ ಪರಿಗಣಿಸಿರಲಿಲ್ಲ. ಇಂದಿನ ಸ್ಥಿತಿಯಲ್ಲಿ ಹಿಂದೂ ರಾಜಕಾರಣದ ಎದುರು ದಲಿತ ರಾಜಕಾರಣವನ್ನು ತಾತ್ವೀಕರಿಸುವಾಗ ದಲಿತ ಸಂಸ್ಕೃತಿಯನ್ನು ರಾಜಕೀಯ ಶಕ್ತಿಯನ್ನಾಗಿ ಮಾರ್ಪಡಿಸುವ ಬಗ್ಗೆ ಚಿಂತಿಸಬೇಕಾದ್ದಿದೆ.

ದಲಿತ ಸಂಸ್ಕೃತಿಯು ಸಾಮ್ರಾಜ್ಯಶಾಹಿ ಧೋರಣೆಗೆ ಬದ್ಧವಾದುದಲ್ಲ. ಅದು ಧರ್ಮದ ಪ್ರಭುತ್ವವನ್ನು ನಿರಾಕರಿಸುವಂತದ್ದು. ಜಲತತ್ವ ಅದರ ನಾಡಿಬಡಿತ. ಸದಾ ದುಡಿಮೆಯ ಬಾಳಿನ ಕಾಯಕ ಸಂಸ್ಕೃತಿಯಿಂದ ರೂಪುಗೊಳ್ಳುವ ಜೀವನ ಮೌಲ್ಯಗಳು ಅಪಾರವಾದ ಅಂತಃಕರಣವನ್ನು ತುಂಬಿಕೊಂಡಿರುತ್ತವೆ. ಉದಾರ ಮಾನವತಾವಾದ ದಲಿತ ಸಂಸ್ಕೃತಿಯ ಕೇಂದ್ರ ಪ್ರಜ್ಞೆ. ಇಂತಹ ಪ್ರಜ್ಞೆಯ ವಿರುದ್ಧವೇ ಹಿಂದೂ ಧರ್ಮ ಪ್ರಭುತ್ವದ ಕೋಟೆಗಳನ್ನು ಈ ಕಾಲದ ಈ ಹೊತ್ತಿನ ತನಕ ಕಟ್ಟಿಕೊಂಡೇ ಬರುತ್ತಿದೆ. ಹಿಂದೂ ಧರ್ಮದ ಎಲ್ಲ ಬಗೆಯ ಧೂರ್ತತೆಯ ವಿರುದ್ಧ ಹೋರಾಟ ಮಾಡಿಕೊಂಡು ಬಂದಿರುವುದು ದಲಿತ ಸಂಸ್ಕೃತಿಯೇ. ದಲಿತ ಸಂಸ್ಕೃತಿಯು ನಿರಂತರವಾಗಿ ಬಹುಬಗೆಯ ಬಿಡುಗಡೆಯ ದಾರಿಗಳನ್ನು ಕಂಡುಕೊಂಡು ಬಂದಿದೆ. ದಲಿತ ಸಂಸ್ಕೃತಿ ಎನ್ನುವುದನ್ನು ಸಾಂಸ್ಕೃತಿಕ ಪ್ರತಿರೋಧದ ಅಖಂಡ ಬಿಡುಗಡೆಯ ಹೋರಾಟ ಎಂದೇ ನಾವು ತಿಳಿಯಬೇಕಾಗುತ್ತದೆ. ಹಿಂದುತ್ವದ ಉದ್ದಕ್ಕೂ ದಲಿತತ್ವ ತನ್ನ ಲೌಖಿಕದ ಬೇರುಗಳ ಮೂಲಕವೇ ಬದುಕಿಕೊಂಡು ಬಂದಿದೆ. ಹಿಂದುತ್ವವು ದಣಿದಾಗಲೆಲ್ಲ ಅಥವಾ ಮೃತಸ್ಥಿತಿಗೆ ತಲುಪಿದಾಗಲೆಲ್ಲ ದಲಿತರನ್ನೇ ಆಶ್ರಯಿಸಿದೆ. ಅಂದರೆ ಹಿಂದುತ್ವದ ಸಂರಕ್ಷಣೆಗೆ ಮಾತ್ರ ದಲಿತ ಸಂಸ್ಕೃತಿಯನ್ನು ಬಳಸಿಕೊಳ್ಳಲಾಗಿದೆ.

ಹೀಗಾಗಿ ; ಈ ಕಾಲದ ರಾಜಕಾರಣ ಕೂಡ ದಲಿತ ಸಂಸ್ಕೃತಿಯನ್ನು ಹಿಂದೂ ಧರ್ಮದ ಸಂರಕ್ಷಣೆಗಾಗಿ ದುರುಪಯೋಗಿಸಿಕೊಳ್ಳುತ್ತದೆ. ರಾಮನನ್ನು ಕಾಪಾಡಲು ರಾವಣನನ್ನು ಬೇಕಾದರೂ ಮಠಾಧೀಶರು ಸಮರ್ಥಿಸಬಲ್ಲರು. ಅಂತೆಯೇ ಶಂಭೂಕನನ್ನು ಕೊಂದದ್ದು ನ್ಯಾಯ ಎಂತಲೂ ಹೇಳಬಲ್ಲರು. ಈ ಅಂಶವನ್ನು ಯಾಕೆ ಪ್ರಸ್ತಾಪಿಸಿದೆನೆಂದರೆ; ಇವತ್ತಿನ ಹಿಂದುತ್ವಕ್ಕೂ ಮಠಾಧೀಶರು ಬಹಿರಂಗವಾಗಿಯೇ ಮಾಡುತ್ತಿರುವ ರಾಜಕಾರಣಕ್ಕೂ ನೇರವಾದ ಸಂಬಂಧವಿದೆ. ಧರ್ಮ ರಹಿತವಾದ ರಾಜಕಾರಣ ಮಾತ್ರ ದಲಿತರನ್ನು ಮನುಷ್ಯರೆಂದು ಭಾವಿಸಬಲ್ಲದು. ಯಜ್ಞಯಾಗದ ಅಗ್ನಿ ತತ್ವದ ಹಿಂದೂ ರಾಜಕಾರಣವು ಬೆಂಕಿ ಹಚ್ಚುವುದನ್ನೆ ಪವಿತ್ರ ಎಂದು ತಿಳಿದಿದೆ.

ದಲಿತ ರಾಜಕಾರಣವು ದಲಿತ ಸಂಸ್ಕೃತಿಯ ಪ್ರತಿರೋಧವನ್ನು ಈ ಕಾಲದ ವೈಚಾರಿಕ ಎಚ್ಚರದಲ್ಲಿ ಪರಿಷ್ಕರಿಸಿಕೊಳ್ಳಬೇಕು. ಸಂಸ್ಕೃತಿ ನಿಷ್ಠವಾಗಿದ್ದ ಮಾವೋತ್ಸೆ ತುಂಗನ ಕ್ರಾಂತಿಗೂ ಬಸವಣ್ಣನ ಕಾಯಕನಿಷ್ಠ ರಾಜಕಾರಣದ ಕ್ರಾಂತಿಗೂ ದಲಿತರ ಸಂವೇದನೆಗೂ ಅವಿನಾಭಾವ ಸಂಬಂಧವಿದೆ. ಸಮುದಾಯಗಳು ಕಂಡುಕೊಂಡಿದ್ದ ಸಾಂಸ್ಕೃತಿಕ ಸಾಮರಸ್ಯದ ಸಂಬಂಧವನ್ನು ಪ್ರಗತಿನಿಷ್ಠ ಒಪ್ಪಂದಕ್ಕೆ ಅನುವು ಮಾಡಿಕೊಳ್ಳಬೇಕು. ತಳ ಸಮುದಾಯಗಳೆಲ್ಲವೂ ಮಾತೃ ಸಂವೇದನೆಯನ್ನು ತಮ್ಮ ಸಂಸ್ಕೃತಿಯಲ್ಲಿ ಈಗಲೂ ಒಂದಿಷ್ಟಾನ್ನಾದರೂ ಉಳಿಸಿಕೊಂಡಿವೆ. ಅಂತಹ ಸಂಸ್ಕೃತಿ ನಿಷ್ಠ ಒಳ ಸಂಬಂಧಗಳನ್ನು ಸಂಸ್ಕೃತಿಯ ಸಂಹಿತೆಗಳಿಂದಲೇ ಬಲಪಡಿಸಿಕೊಳ್ಳುವುದು ಧರ್ಮ ರಾಜಕಾರಣದ ಸಂದರ್ಭದಲ್ಲಿ ಜರೂರಾಗಿದೆ.

ಮಾನವೀಕರಣದ ರಾಜಕಾರಣ

ಪ್ಲೇಟೋನ ರಾಜನೀತಿಯಲ್ಲಿ ಮಾನವೀಕರಣಕ್ಕೆ ವಿಶೇಷವಾದ ಗಮನವಿತ್ತು. ಆದರ್ಶ ರಾಜ್ಯವೆಂದರೆ ಜನಸಾಮಾನ್ಯರ ಹಕ್ಕೊತ್ತಾಯಗಳನ್ನು ಮಾನ್ಯ ಮಾಡಿ ಅವರಿಗೆ ಸ್ವಾತಂತ್ರ್ಯವನ್ನು ನೀಡುವಂತಹದು. ಭಾರತಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ದಶಕಗಳೆ ಕಳೆದುಹೋಗಿದ್ದರೂ ದಲಿತರಿಗೆ ಇನ್ನೂ ಸರಿಯಾದ ಸ್ವಾತಂತ್ರ್ಯವೇ ಸಿಕ್ಕಿಲ್ಲದಿರುವಾಗ ಪ್ಲೆಟೋ ಪ್ರತಿಪಾದಿಸಿದ ಆದರ್ಶ ರಾಜ್ಯದ ನ್ಯಾಯನಿಷ್ಠ ನೈತಿಕತೆಯು ಮರುಭೂಮಿಯ ಯಾವುದೊ ಪ್ರತಿಧ್ವನಿಯಂತೆ ಕೇಳಿಸುತ್ತದೆ. ಯುರೋಪಿನ ಪುನರುಜ್ಜೀವನ ಯುಗ ಕೂಡ ಪ್ರಭುತ್ವ ರಹಿತ ಸಮಾಜದ ನಿರ್ಮಾಣಕ್ಕಾಗಿ ಹೋರಾಟ ಮಾಡಿತು. ನೆನ್ನೆ ಮೊನ್ನೆಯ ಮತ್ತು ಇಂದಿಗೂ ಸಂಘರ್ಷದಲ್ಲಿರುವ ಆಫ್ರಿಕನ್ನರ ಹೋರಾಟವು ಮಾನವೀಕರಣದ ರಾಜಕಾರಣಕ್ಕಾಗಿಯೇ ಚಳವಳಿಯನ್ನು ರೂಪಿಸುತ್ತಿದೆ. ಸ್ವತಃ ಅಂಬೇಡ್ಕರ್ ಅವರ ಹೋರಾಟವು ರಾಜ್ಯಾಧಿಕಾರವನ್ನೆ ಮಾನವೀಕರಣಗೊಳಿಸಲು ಮಾಡಿದ ಬಹುದೊಡ್ಡ ಪ್ರಯತ್ನ.

ದಲಿತ ಸಂಘಟನೆಗಳು ರಾಜಕಾರಣದಲ್ಲಿ ಅಧಿಕಾರವನ್ನು ಹಂಚಿಕೊಂಡ ಮಾತ್ರಕ್ಕೆ ಅವರ ಸಮುದಾಯಗಳು ಉದ್ಧಾರವಾಗುತ್ತವೆ ಎಂಬುದಕ್ಕೆ ಯಾವ ಮುಖ್ಯ ಆಧಾರಗಳೂ ನಮ್ಮ ಮುಂದೆ ಇಲ್ಲ. ದೇಶದ ಉದ್ದಕ್ಕೂ ರಾಜ್ಯಾಧಿಕಾರದ ಸ್ನೇಹದಲ್ಲಿರುವ ನೂರಾರು ದಲಿತ ಮಂತ್ರಿಗಳು ವೈಯಕ್ತಿಕವಾಗಿ ಬಲಿಷ್ಠರಾಗಿದ್ದಾರೆಯೆ ವಿನಃ ತಮ್ಮ ಸಮುದಾಯಗಳನ್ನು ಹಾಗೇ ಉಳಿಸಿದ್ದು ತಮ್ಮ ಸಮುದಾಯಗಳನ್ನೆ ತಮ್ಮ ಸ್ವಾರ್ಥಕ್ಕಾಗಿ ಪಣವಿಟ್ಟು ಮಾರಿಕೊಳ್ಳುತ್ತಿದ್ದಾರೆ. ಈ ಆರೋಪ ದಲಿತ ಹೋರಾಟಗಾರರ ಸಂದರ್ಭದಲ್ಲು ಆಗಾಗ ಕಾಣಿಸಿಕೊಳ್ಳುವುದಿದೆ. ಹೀಗಾದಾಗ ಮಾನವೀಕರಣದ ರಾಜಕಾರಣವು ಕೇವಲ ಕಲ್ಪಿತ ನ್ಯಾಯವನ್ನು ಮಾತ್ರ ತೋರುವುದಾಗುತ್ತದೆ. ಅಧಿಕಾರ

ವನ್ನು ಹಂಚಿಕೊಳ್ಳುವುದು ತಾತ್ಕಾಲಿಕ ನ್ಯಾಯವನ್ನು ಮಾತ್ರ ಒದಗಿಸಬಲ್ಲದು.

ಹೀಗೆ ಹಂಚಿಕೊಳ್ಳುವ ಅಧಿಕಾರ ಮುಂದೆ ಎಷ್ಟೊಂದು ಅಪಾಯಕಾರಿಯಾಗಿ ವಿರೂಪಗೊಳ್ಳುತ್ತದೆ ಎಂದರೆ; ಸರದಿಯಂತೆ ಒಂದೊಂದು ಜಾತಿ ಉಪಜಾತಿಯೂ ಅಧಿಕಾರಕ್ಕಾಗಿ ತನ್ನನ್ನು ತಾನು ಸೀಳಿಕೊಳ್ಳುತ್ತಾ ಅಮಾನವೀಯವಾಗಿ ತಮ್ಮ ತಮ್ಮ ವಿರುದ್ಧವೇ ತಂತ್ರ ರೂಪಿಸುತ್ತ ಶೋಷಣೆಯ ಕೇಂದ್ರದ ಜೊತೆ ಸ್ನೇಹದಿಂದ ಇದ್ದುಕೊಂಡು ಕನಿಷ್ಠ ಲಾಭಗಳಿಗೆ ಮಾರಿಕೊಳ್ಳಬೇಕಾಗುತ್ತದೆ. ದಲಿತ ಸಮುದಾಯಗಳೆ ಹೀಗೆ ಭಗ್ನಗೊಳ್ಳುವಂತಹ ಜಾಲವನ್ನು ಹಿಂದುತ್ವದ ಹೊಸ ಅವತಾರಗಳಲ್ಲಿ ರಾಜಕಾರಣವು ಮಾಡುತ್ತಲೆ ಇರುತ್ತದೆ. ಹೀಗಾಗಿ ದಲಿತ ಸಂಘಟನೆಗಳು ಮೊದಲು ಈ ಸಮಾಜಗಳನ್ನು ಮತ್ತು ಅವು ಕೂಡಿ ಕಟ್ಟಿಕೊಂಡಿರುವ ಜಾತಿ ರಾಜಕಾರಣವನ್ನು ಸುಧಾರಿಸಿ ಅವನ್ನು ಮಾನವೀಕರಣಗೊಳಿಸುವ ಚಳವಳಿಯನ್ನೆ ಪುನರ್ ಸಂಘಟಿಸಬೇಕಾಗಿದೆ. ಆಗ ಅಂಬೇಡ್ಕರ್ ಅವರು ಭಾವಿಸಿದ್ದ ಮಾನವೀಕರಣದ ನ್ಯಾಯವು ರಾಜಕಾರಣದಲ್ಲೂ ಸಾಧ್ಯವಾಗುತ್ತದೆ. ಒಂದು ಆದರ್ಶ ರಾಜ್ಯ ಯಾವತ್ತೂ ಕೂಡ ಮನುಷ್ಯತ್ವದ ಮುಗ್ಧತೆಯನ್ನು ಕಳೆದುಕೊಳ್ಳಬಾರದು. ನಾಗರಿಕತೆಯ ಜೊತೆಗೆ ಹುಟ್ಟಿಕೊಂಡ ಧರ್ಮ ಮತ್ತು ಸಾಮ್ರಾಜ್ಯಗಳು ಅಮಾನುಷತೆಯನ್ನೆ ಆಚರಿಸಿಕೊಂಡು ಬಂದಿವೆ. ಮಾನವೀಕರಣದ ದಾಹ ದಲಿತ ಸಮುದಾಯಗಳ ಆದಿಮ ಕನಸಿನಂತಿದೆ. ಮನುಷ್ಯರನ್ನು ಮಾನವೀಕರಣಗೊಳಿಸುತ್ತ ಸಾಗಬೇಕಾದ ಇಕ್ಕಟ್ಟಿನಲ್ಲಿ ದಲಿತ ರಾಜಕಾರಣ ಎನ್ನುವುದು ಬಹಳ ದೊಡ್ಡ ಆಶಯ. ಹಾಗೆಯೇ ಮಾನವೀಯ ನ್ಯಾಯದ ಆಕ್ರಂದನ ಕೂಡ. ಅಂತಃಕರಣದ ಹುಡುಕಾಟದ ರಾಜಕಾರಣ ನಮ್ಮನ್ನಷ್ಟೇ ಅಲ್ಲದೆ ನಮ್ಮನ್ನು ಶೋಷಿಸುವವನನ್ನೂ ಕಾಪಾಡಬಲ್ಲಂತದು. ಕೊಲುವವನನ್ನೂ ಕ್ಷಮಿಸಬೇಕಾದ ಅಂತಃಕರಣದ ರಾಜಕಾರಣ ದಲಿತ ಸಂವೇದನೆಯ ಭಾಗವಾಗಿದೆ.

ಸ್ತ್ರೀ ಪ್ರಜ್ಞೆಯ ರಾಜಕಾರಣ

ಮಾನವ ಸಂಪತ್ತಿನ ಅರ್ಧದಷ್ಟಿರುವ ಮಹಿಳಾ ಸಮಾಜವನ್ನು ನಿರಾಕರಿಸಿಯೆ ಈ ತನಕ ರಾಜಕಾರಣವು ಪುರುಷಾಧಿಪತ್ಯದಲ್ಲಿ ಬೆಳೆದುಬಂದಿದೆ. ರಾಜಕಾರಣದ ಪುರುಷ ಪ್ರಧಾನ ಮೌಲ್ಯಗಳು ಸುಭದ್ರ ಸಮಾಜವನ್ನು ಎಂದಿಗೂ ಕಟ್ಟಲಾರವು. ಇದನ್ನು ಮನಗಂಡಿದ್ದ ಬಾಬಾಸಾಹೇಬರು ಮಹಿಳೆಯರಿಗೆ ೩೩ರಷ್ಟು ಪ್ರಮಾಣದ ಮೀಸಲಾತಿಯನ್ನು ಸಮರ್ಥಿಸಿದ್ದೇ ಅಲ್ಲದೆ ಎಲ್ಲ ಬಗೆಯ ಮೂಲಭೂತ ಹಕ್ಕುಗಳೂ ಅವರಿಗೆ ಸಿಗಬೇಕೆಂದು ವಾದಿಸಿದರು. ಇಡೀ ದೇಶದ ಯಾವುದೇ ಪ್ರಮುಖ ಸಂದರ್ಭದಲ್ಲಿ ಮಹಿಳೆಯರ ಅಸ್ತಿತ್ವವನ್ನು ತುಂಡು ಮಾಡುವುದು ಪ್ರಜಾಪ್ರಭುತ್ವ ಅಲ್ಲ. ಹಾಗೆಯೇ, ದಲಿತರನ್ನು ಮಹಿಳೆಯರನ್ನು ಅಲ್ಪಸಂಖ್ಯಾತರನ್ನು ಹಾಗೂ ಹಿಂದುಳಿದವರನ್ನು ಎರಡನೆ ದರ್ಜೆ ಪ್ರಜೆಗಳಾಗಿ ಪರಿಗಣಿಸುವ ವ್ಯವಸ್ಥೆಯು ಸಂವಿಧಾನಬದ್ಧವಾಗಿ ನಡೆದುಕೊಳ್ಳುವುದಿಲ್ಲ. ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯ ಎಷ್ಟೋ ಬಾರಿ ಕಲ್ಪಿತ ನ್ಯಾಯದ ನಾಟಕವನ್ನು ನಡೆಸುತ್ತಿರುತ್ತದೆ.

ಮಹಿಳೆಯರನ್ನು ಹೊರತುಪಡಿಸಿದ ಯಾವುದೆ ರಾಜಕಾರಣವು ಜನಪರವಾಗಿರಲಾರದು. ದಲಿತರನ್ನಾಗಲಿ, ಅಲ್ಪಸಂಖ್ಯಾತರನ್ನಾಗಲಿ, ಹಿಂದುಳಿದವರನ್ನಾಗಲಿ ಸಬಲೀಕರಿಸಲು ಮಾತೃ ಮೌಲ್ಯಗಳು ಅನಿವಾರ್ಯ. ಈ ತನಕ



ಪ್ಲೆಟೋನ ರಾಜನೀತಿಯಲ್ಲಿ ಮಾನವೀಕರಣಕ್ಕೆ ವಿಶೇಷವಾದ ಗಮನವಿತ್ತು. ಆದರ್ಶ ರಾಜ್ಯವೆಂದರೆ ಜನಸಾಮಾನ್ಯರ ಹಕ್ಕೊತ್ತಾಯಗಳನ್ನು ಮಾನ್ಯ ಮಾಡಿ ಅವರಿಗೆ ಸ್ವಾತಂತ್ರ್ಯವನ್ನು ನೀಡುವಂತಹದು. ಭಾರತಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ದಶಕಗಳೆ ಕಳೆದುಹೋಗಿದ್ದರೂ ದಲಿತರಿಗೆ ಇನ್ನೂ ಸರಿಯಾದ ಸ್ವಾತಂತ್ರ್ಯವೇ ಸಿಕ್ಕಿಲ್ಲದಿರುವಾಗ ಪ್ಲೆಟೋ ಪ್ರತಿಪಾದಿಸಿದ ಆದರ್ಶ ರಾಜ್ಯದ ನ್ಯಾಯನಿಷ್ಠ ನೈತಿಕತೆಯು ಮರುಭೂಮಿಯ ಯಾವುದೊ ಪ್ರತಿಧ್ವನಿಯಂತೆ ಕೇಳಿಸುತ್ತದೆ.

ಇಂತಹ ಸಮುದಾಯಗಳು ಬದುಕಿ ಉಳಿದಿರುವುದು ಮಾತೃ ಮೌಲ್ಯ ಸಂಸ್ಕೃತಿಯಿಂದಲೇ. ಮಹಿಳೆಯರು ತಮ್ಮ ಎಲ್ಲ ಅಪಮಾನ ಸಂಕಟ ಅನ್ಯಾಯಗಳನ್ನು ಸಹಿಸಿಕೊಂಡು ಈ ಪುರುಷ ಸಮಾಜವನ್ನು ಕೈಹಿಡಿದು ನಡೆಸುತ್ತಲೆ ಬಂದಿದೆ. ಸ್ತ್ರೀ ಮೌಲ್ಯಗಳು ಸಮಾಜವನ್ನು ತಾಯ್ತನದ ತಕ್ಕಡಿಯಲ್ಲಿ ತೂಗುವಂತವು. ಸ್ತ್ರೀ ಪ್ರಜ್ಞೆಯೆಂಬುದು ಅಂತಃಕರಣದ ಜೀವ ವಿಸ್ತರಣೆಯದು. ಈ ಬಗೆಯ ಮೌಲ್ಯವು ದಲಿತ ರಾಜಕಾರಣದ ತಳಹದಿಯಲ್ಲಿ ಸೇರಿಕೊಳ್ಳಬೇಕು. ಅಂಬೇಡ್ಕರ್ ಅವರ ಒಟ್ಟು ಸಂವಿಧಾನವೇ ತಾಯ್ತನದ ಅಂತಃಕರಣದ್ದು. ಹಾಗಾಗಿಯೆ ಮೊದಲ ಬಾರಿಗೆ ಎಲ್ಲ ಜಾತಿಯ ಮಹಿಳೆಯರ ಸಮಾನತೆಯ ಬಗ್ಗೆ ಗಾಂಧೀಜಿಯವರಿಗಿಂತಲೂ ವಾಸ್ತವವಾಗಿ ಚಿಂತಿಸಿದರು.

ರಾಜಕಾರಣದ ಸಂವೇದನೆಯೇ ಮಾತೃಮೌಲ್ಯ ಅಂಶಗಳನ್ನು ಹೊಸಕಾಲದ ಅಗತ್ಯಕ್ಕೆ ತಕ್ಕಂತೆ ಅನುಸಂಧಾನಗೊಳ್ಳುವಂತಹ ವಾತಾವರಣವನ್ನು ನಿರ್ಮಿಸಬೇಕಾದ್ದಿದೆ. ಗಾಂಧೀಜಿಯವರ ಇಡೀ ಹೋರಾಟವು ಸ್ತ್ರೀ ಪ್ರಜ್ಞೆಯಲ್ಲೇ ಸಾಗಿ ನಮಗೆ ಸ್ವಾತಂತ್ರ್ಯವನ್ನು ತಂದುಕೊಟ್ಟಿದೆ. ಅವರ

ಮಹಿಳೆಯರನ್ನು ಹೊರತುಪಡಿಸಿದ ಯಾವುದೆ ರಾಜಕಾರಣವು ಜನಪರವಾಗಿರಲಾರದು. ದಲಿತರನ್ನಾಗಲಿ, ಅಲ್ಪಸಂಖ್ಯಾತರನ್ನಾಗಲಿ, ಹಿಂದುಳಿದವರನ್ನಾಗಲಿ ಸಬಲೀಕರಿಸಲು ಮಾತೃ ಮೌಲ್ಯಗಳು ಅನಿವಾರ್ಯ.

ಪ್ರತಿಭಟನೆಯ ಅಹಿಂಸೆ, ಸತ್ಯಾಗ್ರಹ, ಉಪವಾಸ, ಅಸಹಕಾರ, ಸರ್ವೋದಯ ಎಂಬ ಎಲ್ಲ ಮೌಲ್ಯಗಳೂ ಸ್ತ್ರೀ ಲೋಕದ ಪ್ರತಿಭಟನೆಯ ಮಾದರಿಗಳು. ಸ್ತ್ರೀ ಸಮಾಜದ ಸಾಂಸ್ಕೃತಿಕ ಶಕ್ತಿಯನ್ನು ಬೆಳೆಸಿಕೊಂಡೇ ಗಾಂಧೀಜಿಯವರು ಅಸಹಕಾರ ರಾಜಕಾರಣವನ್ನು ಸ್ವಾತಂತ್ರ್ಯದ ರಾಜಕಾರಣವನ್ನು ಸಾಧಿಸಿದ್ದು. ಅಂಬೇಡ್ಕರ್ ಅವರು ಕೂಡ ಇದೇ ಹಿನ್ನೆಲೆಯಲ್ಲಿ ಮಹಿಳಾ ಜಗತ್ತಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು. ಇಂತಹ ಹಿನ್ನೆಲೆಯಿರುವಾಗ; ನಾವು ಈ ಕಾಲದಲ್ಲಿ ಮಹಿಳಾ ರಾಜಕಾರಣವನ್ನು ಕಡ್ಡಾಯವಾಗಿ ಅನುಸರಿಸುತ್ತ ಅದಕ್ಕೆ ತಕ್ಕ ಚಳವಳಿಯನ್ನೆ ರೂಪಿಸಬೇಕಾಗಿದೆ. ಇಲ್ಲದಿದ್ದರೆ ಪುರುಷಾಧಿಕಾರಣ ರಾಜಕಾರಣವು ಮಕ್ಕಳನ್ನೆಲ್ಲ ತನ್ನ ಕಿನ್ನೂರಿಯಿಂದ ಮೋಡಿ ಮಾಡಿ ಕರೆದುಕೊಂಡು ಹೋಗಿ ನದಿಯಲ್ಲಿ ಮುಳುಗಿಸಿದಂತೆ ಇಡೀ ತಿರಸ್ಕೃತ ಸಮಾಜಗಳನ್ನೆ ಮುಳುಗಿಸಿಬಿಡಬಲ್ಲದು.

ಅಭಿವೃದ್ಧಿ ನಿಷ್ಠ ರಾಜಕಾರಣ

ದಲಿತ ಸಮುದಾಯಗಳೆಲ್ಲವೂ ಮೂಲತಃ ಉತ್ಪಾದಕ ಸಮುದಾಯಗಳು. ಕರಕುಶಲ ದೇಶೀಯ ತಂತ್ರಜ್ಞಾನದ ಈ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ಪೂರಕವಾದ ಆರ್ಥಿಕ ರಾಜಕಾರಣವನ್ನು ಕಂಡುಕೊಳ್ಳದೆ ಇರುವ ರಾಜಕೀಯ ವ್ಯವಸ್ಥೆಯ ಜೊತೆ ಸವಲತ್ತುಗಳ ಹೊಂದಾಣಿಕೆ ಮಾಡಿಕೊಂಡರೆ ಯಾವ ದಲಿತ ಸಮುದಾಯವೂ ಸಬಲವಾಗದು. ಎಲ್ಲ ಬಗೆಯ ದೇಶೀಯ ತಂತ್ರಜ್ಞಾನದ ಆಳದಲ್ಲಿರುವ ಜಾತಿ ಮತ್ತು ಧರ್ಮದ ನಿಯಂತ್ರಣವನ್ನು ತೊಡೆದು ಹಾಕುವಂತಾಗಬೇಕು. ಅಭಿವೃದ್ಧಿ ರಾಜಕಾರಣವೆಂದರೆ ಸಾಮಾಜಿಕ ನ್ಯಾಯದ ಪ್ರಗತಿಯ ಹಾದಿ. ಆರ್ಥಿಕ ರಾಜಕಾರಣವು ನಿರ್ಣಾಯಕವಾದ ಪಾತ್ರವನ್ನು ವಹಿಸುವಂತದು. ಅಭಿವೃದ್ಧಿಯ ಆರ್ಥಿಕ ಮಾನದಂಡಗಳಿಗೂ ಸಾಮಾಜಿಕ ನ್ಯಾಯದ ರಾಜಕೀಯ ಮೌಲ್ಯಗಳೂ ಪೂರಕವಾದ ಸಂಬಂಧಗಳನ್ನು ಉತ್ಪಾದನೆಯ ವಿತರಣೆ ಮತ್ತು ಪ್ರತಿಫಲದಲ್ಲಿ ಏರ್ಪಡಿಸಬೇಕು. ಈ ತನಕ ಅಖಂಡ ದಲಿತ ಸಮುದಾಯಗಳೆಲ್ಲವೂ ಬೇರೆಯವರ ಅಭಿವೃದ್ಧಿಗಾಗಿ ಮೀಸಲಿಟ್ಟ ಸಮುದಾಯಗಳಾಗಿ ಮಾತ್ರ ಸಾಗಿ ಬಂದಿವೆ. ದಲಿತ ಲೋಕ ಕೇವಲ ಅನುಭೋಗಿಯದಲ್ಲ ಅಭಿವೃದ್ಧಿ ಎಂಬ ವ್ಯವಸಾಯವನ್ನು ನಿರ್ವಹಿಸುವ ಈ ಸಮುದಾಯಗಳಿಗೆ ತಕ್ಕುದಾದ ಉದ್ಯೋಗ ಮತ್ತು ಆರ್ಥಿಕ ಸ್ವಾಯತ್ತತೆಯನ್ನು ಒದಗಿಸುವ ವ್ಯವಸ್ಥೆಯಾಗಬೇಕು.

ಈವರೆಗಿನ ನಮ್ಮ ಎಲ್ಲ ಪ್ರಗತಿ ಹಾಗೂ ಅಭಿವೃದ್ಧಿಯ ರಾಜನೀತಿಗಳು ಮಾರುಕಟ್ಟೆಯನ್ನೂ ಬಂಡವಾಳಶಾಹಿ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಕಾಯುತ್ತ ಬಂದವೇ ಆಗಿದ್ದು ಜನಸಾಮಾನ್ಯರಿಗಾಗಿ ಅಭಿವೃದ್ಧಿ ಸಾಧ್ಯವಾಗಿಲ್ಲ. ಗಾಂಧೀಜಿ ಹೇಳುತ್ತಿದ್ದ ಗ್ರಾಮೀಣ ಅಭಿವೃದ್ಧಿ ಅಂಶಗಳನ್ನೂ ಗಮನಿಸಬೇಕಾದ್ದಿದೆ. ಹಳ್ಳಿಗಳು ಉತ್ಪಾದಕ ಘಟಕಗಳಾಗಿ ಪರಿವರ್ತಿತವಾಗುವಂತೆ ಆರ್ಥಿಕ ರಾಜಕಾರಣವನ್ನು ಬಲಪಡಿಸಬೇಕು.

ಹಾಗೆಯೇ ನಗರ ಹಾಗೂ ಹಳ್ಳಿಯ ವೈರುಧ್ಯವನ್ನು ನಿವಾರಿಸುವ ಕಡೆಗೆ ನಮ್ಮ ಚಳವಳಿ ಒಳಗಾಗಬೇಕು. ರಾಜಕಾರಣವು ಕೇವಲ ಬೆರಳೆಣಿಕೆಯ ಉದ್ಯಮಪತಿಗಳ ಆದೇಶದಂತೆ ನಡೆಯುವ ಈ ಕಾಲದಲ್ಲಿ ರಾಜಕಾರಣ ಕೂಡ ಬಂಡವಾಳಶಾಹಿ ವ್ಯವಸ್ಥೆಯಾಗಿದ್ದು ಪ್ರಜಾಪ್ರಭುತ್ವ ಕೂಡ ಅಂತಹ ಶಕ್ತಿಯ ಜೊತೆಯೇ ಎಲ್ಲ ಬಡವರನ್ನು ದಲಿತರನ್ನು ಬೇಟೆ ಆಡುತ್ತಿರುತ್ತದೆ. ಅಂದರೆ ರಾಜಕೀಯ ಲಾಭಗಳಿಗಾಗಿ

ಅಭಿವೃದ್ಧಿಯ ನಾಟಕ ಕೂಡ ಜನ ವಿರೋಧಿಯೆ. ಖ್ಯಾತ ಅರ್ಥಶಾಸ್ತ್ರಜ್ಞ ಗುನ್ನಾರ್ ಮಿರ್ಡಾಲ್ ಬಹಳ ಹಿಂದೆಯೇ ಹೇಳಿದ ಮಾತಿಲ್ಲಿ ಮುಖ್ಯವೆನಿಸುತ್ತದೆ. ಭಾರತದ ಒಟ್ಟು ಆರ್ಥಿಕ ವ್ಯವಸ್ಥೆಯು ತೀರ್ಮಾನವಾಗುವುದು ಬಲಿಷ್ಠ ಕೋಮಿನ ರಾಜಕಾರಿಣಿಗಳ ಹಿತಾಸಕ್ತಿಯಿಂದ. ಇಲ್ಲಿನ ಬಂಡವಾಳಶಾಹಿಗೂ ರಾಜಕೀಯ ತೀರ್ಮಾನಗಳಿಗೂ ಯಾವ ವ್ಯತ್ಯಾಸವೂ ಇರುವುದಿಲ್ಲ. ಜನರ ಜೀವನ ಕ್ರಮವನ್ನು ಸುಧಾರಿಸುವ ರಾಜಕಾರಣವಿಲ್ಲದೆ ಅಭಿವೃದ್ಧಿಯ ಕಲ್ಪಿತ ಹೆಮ್ಮೆಯಲ್ಲೇ ಮೆರೆಯುವ ಭಾರತದ ಆರ್ಥಿಕ ವ್ಯವಸ್ಥೆಯು ಹೀಗೇ ಮುಂದುವರಿದರೆ ಇಲ್ಲಿನ ಅಂಚಿನವರ ಭವಿಷ್ಯವು ಮುಂದೆ ಘೋರವಾಗುತ್ತದೆ. ಈ ಮಾತನ್ನು ಇವತ್ತಿನ ಪರ್ಯಾಯ ರಾಜಕಾರಣದ ಹಿನ್ನೆಲೆಯಲ್ಲಿ ನೆನಪಿಟ್ಟಿರ ಬೇಕಾಗುತ್ತದೆ. ದಲಿತ ಸಮುದಾಯಗಳ ಆರ್ಥಿಕ ಅಸ್ತಿತ್ವಕ್ಕೆ ಪೂರಕವಾದ ಅಭಿವೃದ್ಧಿನಿಷ್ಠ ರಾಜಕಾರಣವಂತು ಇವತ್ತಿನ ಜಾಗತೀಕರಣದ ಹಂತದಲ್ಲಿ ಅತಿ ಮುಖ್ಯ.

ಜಗತ್ತಿನ ಉತ್ಪಾದನಾ ವ್ಯವಸ್ಥೆಯು ರೂಪಿಸುವ ಮೋಡಿಗೆ ಬದಲು ಜೀವನ ವಿಧಾನಕ್ಕೆ ತಕ್ಕುದಾದ ಮತ್ತು ಸಾಂಸ್ಕೃತಿಕ ಭಾವಲೋಕಕ್ಕೆ ಬೇಕಾದ ಉತ್ಪಾದನಾ ವ್ಯವಸ್ಥೆಯನ್ನು ದಲಿತ ಸಮುದಾಯಗಳು ಈಗಲೂ ತಮ್ಮ ಪ್ರಜ್ಞೆಯ ಆಳದಲ್ಲಿ ನೆನಪಿಟ್ಟುಕೊಂಡಿವೆ. ಭೌತಿಕ ವಸ್ತು ಸುಖದ ಜೊತೆಗೆಯೇ ಸಾಂಸ್ಕೃತಿಕ ಅನನ್ಯತೆಯ ಜೊತೆಗೆಯೇ ಮನುಷ್ಯನ ಮೂಲ ಪ್ರವೃತ್ತಿಗಳಿಗೆ ಹೊಂದುವಂತಹ ಉತ್ಪಾದನಾ ಸಾಮರ್ಥ್ಯವು ನಮ್ಮ ದೇಶದ ಎಲ್ಲ ತಳಸಮುದಾಯಗಳ ದೇಶೀಯ ತಂತ್ರಜ್ಞಾನದಲ್ಲಿದೆ. ಇಂತಹ ದೇಶೀಯ ಕರಕುಶಲ ತಂತ್ರಜ್ಞಾನದ ಪುನರುಜ್ಜೀವನ ಆಗುವಂತಹ ಆರ್ಥಿಕ ರಾಜಕಾರಣವನ್ನು ಮಾಡುವುದು ತುಂಬ ಮುಖ್ಯ. ಮಾರ್ಕ್ಸ್, ಮಾವೊ, ಬಸವಣ್ಣ ಇಂತಹ ಕಾಯಕ ಕ್ರಾಂತಿಯನ್ನು ಮಾಡುವ ಮೂಲಕವೆ ಪ್ರಭುತ್ವದ ಬುಡವನ್ನೆ ಉರುಳಿಸಿ ಕಾಯಕ ರಾಜಕಾರಣವನ್ನು ಸಾಧ್ಯವಾಗಿಸಿದರು. ದಲಿತರ ರಾಜಕಾರಣವು ಈ ಬಗೆಯ ಪಯಣಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳದೆ ಇರುವ ರಾಜಕೀಯ ಪಕ್ಷಗಳ ಜೊತೆ ಚುನಾವಣೆಗಳ ಕಾಲದಲ್ಲಿ ಒಳ ಒಪ್ಪಂದಗಳನ್ನು ಮಾಡಿಕೊಳ್ಳುವುದರಿಂದ; ಅಷ್ಟರ ಮಟ್ಟಿಗೆ ದಲಿತ ಸಮುದಾಯಗಳ ಮತಾಧಿಕಾರವು ನಷ್ಟಗೊಳ್ಳುತ್ತದೆ.

ಸಮುದಾಯ ನಿಷ್ಠ ಸಮಷ್ಟಿ ರಾಜಕಾರಣ

ವ್ಯಕ್ತಿನಿಷ್ಠ ರಾಜಕಾರಣವು ಯಾವತ್ತೂ ಅಪಾಯಕಾರಿಯಾದುದು. ಜಗತ್ತಿನ ಎಲ್ಲ ಕ್ರಾಂತಿಗಳು ಸಮಷ್ಟಿಯ ಹಿತದಲ್ಲಿಯೇ ಆಳುವ ವ್ಯವಸ್ಥೆಯನ್ನು ಬದಲಾಯಿಸಿದ್ದು. ಸಮುದಾಯದ ಬೇರು ಕಳೆದುಕೊಂಡ ಯಾವುದೇ ಹೊಂದಾಣಿಕೆಯ ರಾಜಕಾರಣವು ವಂಚಕತನದ್ದು. ಸಮುದಾಯಗಳಿಗೆ ವ್ಯಕ್ತಿ ಅಥವಾ ನಾಯಕ ಕೇವಲ ಸಂಕೇತ ಮಾತ್ರವಾಗಿರಬೇಕು. ನಾಯಕರ ಅಗತ್ಯಕ್ಕಾಗಿ ಎದುರಾಗುವ ರಾಜಕಾರಣವು ಸಮುದಾಯಗಳನ್ನೆ ಸಾರಾಸಗಟಾಗಿ ಅವಕಾಶ ಬಂದಾಗ ಮಾರಿಬಿಡಬಲ್ಲದು. ದಲಿತರ ನಾಯಕರು, ದಲಿತ ಮಂತ್ರಿ ಮಹೋದಯರೆಲ್ಲ ಇಂತಹ ಅಪರಾಧವನ್ನು ಎಸಗುತ್ತಲೆ ಬಂದಿದ್ದಾರೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಎಂಬ ಜನಪ್ರಿಯ ಮಾತು ಸಮುದಾಯನಿಷ್ಠತೆಯ ಧ್ವನಿಯನ್ನು ಬಿಂಬಿಸಿದರೂ ಈ ಕಾಲದಲ್ಲಿ ಇದು ಒಂದು ಅಣಕು ನುಡಿಯಂತಿದೆ. ದಲಿತರು ಸಮುದಾಯದ ಗಾಢವಾದ ಅವಿನಾಭಾವದ ಸಮಷ್ಟಿ ಸಂಬಂಧಗಳಿಂದಲೆ ರಾಜಕೀಯ ಶಕ್ತಿಯನ್ನು ಪಡೆದುಕೊಳ್ಳಲು ಸಾಧ್ಯ. ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲ ಅವರು ಸಮುದಾಯ ನಿಷ್ಠವಾದ ಸಮಷ್ಟಿ ರಾಜಕಾರಣವನ್ನು ಮಾಡಿದ್ದರಿಂದಲೆ ದಲಿತರ ಸಹೋದರರಾದ ಕರಿಯರು ಜಗತ್ತಿನ ಎದಿರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಾದದ್ದು. ಚಿಲ್ಲರೆ ರಾಜಕಾರಣದಿಂದ ದಲಿತರಿಗೆ ಆಗಬೇಕಾದದ್ದು ಏನೂ ಇಲ್ಲ. ಅಖಂಡವಾದ ದಲಿತ ಸಮುದಾಯಗಳನ್ನು ತಮ್ಮ ತಮ್ಮ ಮೂಗಿನ ನೇರಕ್ಕೆ ಸೀಳಿಕೊಂಡು ವ್ಯವಸ್ಥೆಯ ಯಕಶ್ಚಿತ್ ಹಂಚಿಕೆಯಲ್ಲಿ ಕರಗಿಸಿದರೆ ಮುಂದೆ ಈ ಸಮುದಾಯಗಳು ಕಳೆದು ಹೋಗುವುದಷ್ಟೇ ಅಲ್ಲದೆ ಮುಂದಿನ ತಲೆಮಾರುಗಳಿಗೆ ಯಾವ ಅಸ್ತಿತ್ವವನ್ನೂ ರೂಪಿಸಲಾರವು.

ಮೇಲು ಜಾತಿಗಳು ರಾಜಕೀಯ ಸಮುದಾಯಗಳಾಗುವಷ್ಟು ಪರಿವರ್ತಿತವಾಗಿವೆ. ಹೀಗಾಗಿಯೆ ಪ್ರತಿಯೊಂದು ಚುನಾವಣೆಯ ವೇಳೆಯಲ್ಲೂ ಮೇಲು ಜಾತಿಗಳು ತಳಜಾತಿಯ ಓಟುಗಳನ್ನು ಖರೀದಿಸುವುದು. ಅಧಿಕಾರ ವ್ಯವಸ್ಥೆಯ ಜೊತೆಗೆ ಬೆಳೆದು ಬಂದಿರುವ ಬಲಿಷ್ಠ ಜಾತಿಗಳ ನಾಯಕರು ತಮ್ಮಜಾತಿಗಳನ್ನು ರಾಜಕೀಯ ಸಮುದಾಯಗಳನ್ನಾಗಿ ಈಗಾಗಲೆ ಬದಲಾಯಿಸಿದ್ದಾರೆ. ದಲಿತ ಸಮುದಾಯಗಳು ಇನ್ನೂ ಪ್ರಾಥಮಿಕ ಸವಾಲುಗಳಿಂದಲೆ ಮುಕ್ತವಾಗಿಲ್ಲ. ಒಂದು ಸಮುದಾಯವು ತನ್ನೆಲ್ಲ ಸಮಷ್ಟಿ ಇಚ್ಛಾಶಕ್ತಿಯಿಂದ ರಾಜಕೀಯ ಜಾಗೃತಿಗೆ ಒಳಗಾದರೆ ಪ್ರಭುತ್ವದ ದರ್ಪವನ್ನು ಅಡಗಿಸಬಹುದು. ಸಮುದಾಯಗಳೆ ನೇರವಾಗಿ ರಾಜಕೀಯವಾಗಿ ಪಾಲುಗೊಳ್ಳುತ್ತ ಬೆಳೆಯುವ ಪರಿಸರ ಉಂಟಾಗಬೇಕು. ಜನತೆಯೇ ರೂಪಿಸುವ ರಾಜಕಾರಣವು ದೀರ್ಘಕಾಲೀನವಾದುದು. ಸಮಷ್ಟಿಯಾದ ಕನಸುಗಳು ಮಾತ್ರವೆ ಅಖಂಡವಾದ ಮಾನವ ಪ್ರೀತಿಯನ್ನು ಸಮಾಜದಲ್ಲಿ ಬೆಳೆಸಬಲ್ಲವು.



> ದಲಿತರು ಸಮುದಾಯದ ಗಾಢವಾದ ಅವಿನಾಭಾವದ ಸಮಷ್ಟಿ ಸಂಬಂಧಗಳಿಂದಲೆ ರಾಜಕೀಯ ಶಕ್ತಿಯನ್ನು ಪಡೆದು ಕೊಳ್ಳಲು ಸಾಧ್ಯ. ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲ ಅವರು ಸಮುದಾಯ ನಿಷ್ಠವಾದ ಸಮಷ್ಟಿ ರಾಜಕಾರಣವನ್ನು ಮಾಡಿದ್ದರಿಂದಲೆ ದಲಿತರ ಸಹೋದರರಾದ ಕರಿಯರು ಜಗತ್ತಿನ ಎದಿರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಾದದ್ದು.

ವ್ಯಕ್ತಿನಿಷ್ಠವಾದ ರಾಜಕಾರಣ ಜಾತಿನಿಷ್ಠ ಸಮಾಜದಲ್ಲಿ ನೈತಿಕ ಶಕ್ತಿಯನ್ನು ಬಹುಬೇಗ ಕಳೆದುಕೊಳ್ಳುತ್ತದೆ. ವ್ಯವಸ್ಥೆಗೆ ಇಂತಹ ವ್ಯಕ್ತಿನಿಷ್ಠ ರಾಜಕಾರಣವು ಉಪಕಾರಿಯೆ ಹೊರತು ಸಮುದಾಯಗಳಿಗೆ ಪೂರಕವಲ್ಲ. ಇಂಥಲ್ಲಿ ದಲಿತ ಸಂಘಟನೆಗಳ ನಾಯಕರು ತಮ್ಮ ಅನಿವಾರ್ಯತೆಯ ಮೂಲಕ ಸಮುದಾಯಗಳ ಅನಿವಾರ್ಯತೆಯನ್ನು ಪರೀಕ್ಷಿಸಬಾರದು. ಅಮಾಯಕರ ಮೇಲೆ ಹೊಸ ಬಗೆಯ ಔಷಧಿಗಳನ್ನು ಪ್ರಯೋಗಿಸಿದಂತೆಯೇ ಇದೂ ಕೂಡ ಆಗಬಾರದು. ನಮ್ಮ ಸಮುದಾಯಗಳಿಗೆ ಇನ್ನೂ ಅನಿವಾರ್ಯ ಎನಿಸದ ರಾಜಕೀಯ ಸಂಧಾನಗಳು ನಾಯಕರ ಅಗತ್ಯಕ್ಕೆ ತಕ್ಕಂತೆ ದುರ್ಬಳಕೆ ಆಗುತ್ತ ಬಂದಿರುವುದನ್ನು ಇತ್ತೀಚಿನ ದಿನಗಳಲ್ಲಿ ವಿಶೇಷವಾಗಿ ಗಮನಿಸುತ್ತಿದ್ದೇವೆ. ಹೀಗಾಗಿಯೆ ಭಗ್ನ ರಾಜಕಾರಣ ನಮ್ಮ ನಡುವೆ ವಿಜೃಂಭಿಸುತ್ತಿರುವುದು. ಸಮುದಾಯಗಳೇ ತಮ್ಮ ನಾಯಕರ ಸ್ವಾರ್ಥದಿಂದ ಹೀಗೆ ಭಿನ್ನಗೊಳ್ಳಬಲ್ಲವು. ಭಗ್ನಗೊಂಡ ಸಮುದಾಯವನ್ನು ಆಳುವ ರಾಜಕಾರಣವು ಸಂತೆ ವ್ಯಾಪಾರದಂತೆ ಖರೀದಿಸಬಲ್ಲದು. ಹೀಗಾಗಿ ಅಖಂಡ ರಾಜಕಾರಣದಿಂದ ಮಾತ್ರವೆ ಈ ದೇಶದ ಎಲ್ಲ ಸಮುದಾಯಗಳನ್ನು ಬಲಪಡಿಸಲು ಸಾಧ್ಯ.

ಸಮುದಾಯನಿಷ್ಠ ರಾಜಕಾರಣ ಎಂದಾಗ ಆಯಾಯ ಜಾತಿಯನ್ನು ಬಲಪಡಿಸುವ ರಾಜಕಾರಣವೆಂದಲ್ಲ. ಎಲ್ಲ ಶೋಷಣೆಗೆ ಒಳಗಾಗುವ ಎಲ್ಲ ಸಮುದಾಯಗಳನ್ನು ಅಖಂಡವಾಗಿ ವಿರಾಟ್ ಒಕ್ಕೂಟಕ್ಕೆ ಒಳಪಡಿಸುವ ಚಳವಳಿಯೇ ಆಗಬೇಕಾಗಿದೆ. ಭಗ್ನಗೊಂಡು ಒಪ್ಪಂದದ ರಾಜಕೀಯ ಮಾಡಿದರೆ ಬೆರಳೆಣಿಕೆಯ ವ್ಯಕ್ತಿಗಳಿಗೆ ಮಾತ್ರ ವ್ಯವಸ್ಥೆಯು ಮಾನ್ಯ ಮಾಡಿ ತನ್ನ ಸೇವೆಗೆ, ರಕ್ಷಣೆಗೆ ಅಂಥವರನ್ನು ಇಟ್ಟುಕೊಳ್ಳುತ್ತದೆ. ನಮ್ಮ ಅನೇಕ ಮಂತ್ರಿ ಮಹೋದಯರು ಇವತ್ತು ಇಂತಹ ಕೂಲಿ ರಾಜಕಾರಣವನ್ನು ಯಶಸ್ವಿಯಾಗಿ ಮಾಡುತ್ತ ಬಂದಿರುವುದರಿಂದಲೆ ನಮ್ಮ ಸಮುದಾಯಗಳು ರಾಜಕೀಯ ಸಮುದಾಯಗಳಾಗಿ ರೂಪಾಂತರಗೊಳ್ಳಲು ಸಾಧ್ಯವಾಗಿಲ್ಲ.

ಬುದ್ಧತ್ವದ ರಾಜಕಾರಣ

ಬುದ್ಧ ಎಂದೂ ಸಾಮ್ರಾಜ್ಯವನ್ನು ನಂಬಲಿಲ್ಲ. ಆತನಷ್ಟು ಪ್ರಭುತ್ವ ವಿರೋಧಿ ಯಾರೂ ಇಲ್ಲವೇನೊ. ಬುದ್ಧತ್ವ ಎಂದರೆ ಆತ್ಯಂತಿಕ ಆಯ್ಕೆಯ ಸ್ವಾತಂತ್ರ್ಯ. ಪರಮ ನೈತಿಕತೆಯ ಬುದ್ಧನ ಆಧ್ಯಾತ್ಮ ದರ್ಶನ ಅಂತಃಕರಣದ ದಿಕ್ಸೂಚಿಯಲ್ಲಿ ಕೊನೆಯ ಮನುಷ್ಯನ ಜೊತೆ ಬುದ್ಧ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡವನು. ಅಂಬೇಡ್ಕರ್ ರೂಪಿಸಿದ ಸಂವಿಧಾನದ ಕೇಂದ್ರ ಪ್ರಜ್ಞೆಯು ಬುದ್ಧತ್ವದ ವಿಮುಕ್ತಿಯ ಹಾದಿಯಿಂದ ಬಂದುದಾಗಿದೆ. ಬುದ್ಧ ಹೇಳಿದ ನೀತಿಗೂ ದಲಿತರ ಬದುಕಿನ ರೀತಿಗೂ ಸಂಬಂಧವಿದೆ. ದಲಿತರ ಸ್ವಾತಂತ್ರ್ಯದ ದಾಹಕ್ಕೆ ಬುದ್ಧನ ತತ್ವದಲ್ಲಿ ಜೀವಜಲವಿದೆ. ಹಿಂದೂ ರಾಜಕಾರಣವು ಸನಾತನತೆಯ ಹೊಸ ಅವತಾರಗಳನ್ನು ಹಿಂಸಾತ್ಮಕವಾಗಿ ಚಲಾಯಿಸುತ್ತಿರುವ ಈ ಕಾಲದಲ್ಲಿ ದಲಿತ ರಾಜಕಾರಣದ ತಾತ್ವಿಕತೆಯು ಬುದ್ಧತ್ವದ ನಾಡಿ ಬಡಿತವಾಗಬೇಕು. ಅಂತಃಕರಣವಿಲ್ಲದ ರಾಜಕಾರಣಕ್ಕೆ ಭವಿಷ್ಯವೇ ಇರುವುದಿಲ್ಲ. ದಲಿತ ರಾಜಕಾರಣದ ಪ್ರಣಾಳಿಕೆಯು ಬುದ್ಧನ ಧ್ಯಾನದಿಂದಲೇ ರೂಪಿತವಾಗಬೇಕಿದೆ. ಬುದ್ಧನ ತತ್ವ ಅತ್ಯಂತ ವೈಚಾರಿಕವಾದ

ಬೌದ್ಧಿಕವಾದ ಪ್ರತಿರೋಧ ಶಕ್ತಿಯನ್ನು ತಂದುಕೊಡಬಲ್ಲದು. ಚೀನಾ, ಜಪಾನ್, ಕೊರಿಯಾದಂತಹ ರಾಷ್ಟ್ರಗಳ ರಾಜಕಾರಣದ ಆಳದಲ್ಲಿ ಬುದ್ಧನ ಬೆಳಕಿದೆ. ಮಾವೊ ಕೂಡ ಬುದ್ಧನ ದಿವ್ಯತೆಯನ್ನು ಮರೆತಿರಲಿಲ್ಲ. ಕಾರ್ಲ್ ಮಾರ್ಕ್ಸ್ ಹೇಳಿದ ಉತ್ಪಾದನೆಯ ನೈತಿಕತೆಗೂ ಸಮಾನ ಹಂಚಿಕೆಯ ದಿವ್ಯತೆಗೂ ಬುದ್ಧ ಹೇಳಿದ ಮಾನವೀಯತೆಗೂ, ಅಂಬೇಡ್ಕರ್ ಮತ್ತು ಗಾಂಧಿ ಸಾರಿದ ಸಾಮಾಜಿಕ ನ್ಯಾಯದ ಆಕ್ರಂಧನಕ್ಕೂ ಅವಿನಾಭಾವ ಸಂಬಂಧವಿದೆ. ಜಾಗತೀಕರಣ ಭಯವನ್ನು ಬುದ್ಧನ ನೀತಿ ಹೋಗಲಾಡಿಸಬಲ್ಲದು. ಹಾಗೆಯೆ ದೇಶದ ಒಳಗಿನ ವಿಕಾರಗಳಿಗೂ ಮದ್ದನ್ನು ಕೊಡಬಲ್ಲದು.

ಆಯ್ಕೆಗಳನ್ನು ನಿರ್ಮಿಸದ ಮತ್ತು ಎಲ್ಲ ಆಯ್ಕೆಗಳನ್ನು ನಿರ್ಬಂಧಿಸುವ ಹಿಂದೂ ಧರ್ಮದ ಜಾತಿ ಕೂಪಗಳಲ್ಲಿ ಯಾರಿಗೂ ಬಿಡುಗಡೆ ಇಲ್ಲ. ಶೋಷಿಸುವವನು ಕೂಡ ಶೋಷಣೆಯ ಜಾಲದಲ್ಲಿ ಸೆರೆಯಾದವನೇ. ಶೋಷಕನೇ ಶೋಷಣೆಗೆ ಒಳಪಡುವವನಿಗಿಂತ ಹೆಚ್ಚು ಅಪಾಯದಲ್ಲಿ ಸಿಲುಕಿರುವುದು. ಶೋಷಕ ಸಮುದಾಯಗಳಿಗೆ, ಶೋಷಕ ವ್ಯವಸ್ಥೆಗೆ, ಶೋಷಕ ರಾಜಕಾರಣಕ್ಕೆ ಕೂಡ ಕೊನೆ ಇದೆ. ದಲಿತ ಸಂವೇದನೆ ಮತ್ತು ಅದರ ಸಂಸ್ಕೃತಿಯು ಶೋಷಕನನ್ನೂ ತಲೆ ಮೇಲೆ ಹೊತ್ತುಕೊಂಡು ಹೊಳೆ ದಾಟಿಸಬಲ್ಲಂತದು. ಅಖಂಡವಾದ ಮಾನವೀಯತೆ ಇದು. ಇಂತಹ ದಲಿತ ಸಂವೇದನೆಯನ್ನು ಭಗವಾನ್ ಬುದ್ಧ ತಮ್ಮ ತತ್ವದ ನಾಡಿಯಾಗಿಸಿಕೊಂಡರು. ಈ ಕಾಲದಲ್ಲಿ ದಲಿತ ರಾಜಕಾರಣವು ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳುವುದರ ಜೊತೆಯಲ್ಲೇ ಉಳಿದ ಮಿತ್ರರನ್ನೂ ಶತ್ರುಗಳನ್ನೂ ಕಾಯಬೇಕಾದ ಹೊಣೆಗಾರಿಕೆಯನ್ನು ಹೊಂದಿದೆ. ಈ ಬಗೆಯ ಜೀವಕೊಟ್ಟು ಜೀವ ಉಳಿಸಿಕೊಳ್ಳುವ ಬುದ್ಧತ್ವದ ರಾಜಕಾರಣವನ್ನು ಸಾಧ್ಯವಾಗಿಸುವುದು ನಮ್ಮ ಮುಂದಿರುವ ಸವಾಲು. ಇಂತಹ ಸವಾಲಿಗೆ ಬೆನ್ನು ಕೊಟ್ಟು ದೂರದಿಂದ ಸಾಗಿ ಬಂದದ್ದಕ್ಕೆ ಚರಿತ್ರೆಯ ಉದ್ದಕ್ಕೂ ಸಾಕ್ಷಿಯಿದೆ. ಬುದ್ಧತ್ವಕ್ಕೂ, ದಲಿತತತ್ವಕ್ಕೂ ಸೇತುವೆಯಾಗುವಂತಹ ರಾಜಕೀಯ ತತ್ವವನ್ನು ಸಾಕಾರಗೊಳಿಸಲು ಈ ಕಾಲವು ಪಕ್ವವಾಗಿದೆ ಎಂಬುದು ನಿಜವಿರಬಹುದು. ಆದರೆ ಅಖಂಡವಾದ ದಲಿತ ಸಮುದಾಯಗಳು ಭಗ್ನಗೊಂಡಿರುವಾಗ ಅವನ್ನೆಲ್ಲ ಬುದ್ಧತ್ವದ ಧ್ಯಾನಕ್ಕೆ ತತ್ವಕ್ಕೆ ಒಂದಾಗಿಸಬೇಕಾದುದು ಉಳಿದೆಲ್ಲಕ್ಕಿಂತಲೂ ಜರೂರಾಗಿದೆ.

ಈ ಬಗೆಯ ತಾತ್ವಿಕತೆಯಲ್ಲಿ ದಲಿತರ ಪರ್ಯಾಯ ರಾಜಕಾರಣವನ್ನು ಆಲೋಚಿಸಬಹುದು. ಈ ಪ್ರಬಂಧದ ಪ್ರಾರಂಭದಲ್ಲಿ ಸೂಚಿಸಿದ ಸಂವಿಧಾನದ ಮೂರು ನೆಲೆಗಳ ಹಿನ್ನೆಲೆಯಲ್ಲಿಯೆ ಯಾವುದೆ ಬಗೆಯ ಪರ್ಯಾಯ ರಾಜಕೀಯ ವೇದಿಕೆಯನ್ನು ಸಂಘಟಿಸಬಹುದು. ಅದಕ್ಕಿಂತ ಮೊದಲು ನಮ್ಮ ಜಾತಿ ಉಪಜಾತಿಗಳ ಒಳಗೇ ಇರುವ ಕ್ಷುದ್ರತೆಗಳನ್ನು ನಾಶಪಡಿಸಿಕೊಳ್ಳಬೇಕು. ವೈದಿಕ ಮೌಲ್ಯಗಳ ವಿಕಾರವನ್ನು ನಿರಾಕರಿಸಿದಷ್ಟೇ ಸಮನಾಗಿ ನಮ್ಮ ಒಳಗಿನ ಕೇಡನ್ನೂ ನಾಶಪಡಿಸಿಕೊಳ್ಳಬೇಕು. ನಮ್ಮ ಅಂತಿಮ ಗುರಿ ಕೇವಲ ರಾಜ್ಯಾಧಿಕಾರವೇ ಆಗಬೇಕಾದ್ದಿಲ್ಲ. ರಾಜ್ಯಾಧಿಕಾರವನ್ನು ಮಾನವೀಕರಣಗೊಳಿಸುವುದೂ ಆಗಬೇಕು. ರಾಜಕಾರಣದ ವಿರುದ್ಧ ರಾಜಕಾರಣವನ್ನು ಮಾಡುವಂತಾಗಬೇಕು. ಯಾವುದೇ ಜ್ಞಾನ, ತತ್ವ, ಅಧಿಕಾರ ವ್ಯವಸ್ಥೆಯ ಭಾಗವಾದಾಗ ಅಥವಾ ಸ್ವತಃ ಅದೇ ಒಂದು ಶಕ್ತಿಯಾದಾಗ ಕೊನೆಗೆ ಅದು ಕೂಡ ಸಮುದಾಯವನ್ನು ವಂಚಿಸಬಲ್ಲದು. ಹೀಗಾಗಿಯೆ ಒಂದು ಕಾಲದ ನ್ಯಾಯ, ಅದರ ನೈತಿಕ ಶಕ್ತಿ ಕೂಡ ಇನ್ನೊಂದು ಕಾಲಕ್ಕೆ ತನಗೆ ತಾನೇ ವಿರೋಧಿಯೂ ದುಷ್ಟವೂ ಆಗಿಬಿಡಬಲ್ಲದು. ಜಗತ್ತಿನ ಎಲ್ಲ ಮುಖ್ಯ ಚಿಂತಕರು ಇದನ್ನು ಮನಗಂಡಿದ್ದಾರೆ. ಗ್ರಹಾಂಸಿ, ಪುಕೊ, ಎಡ್ವರ್ಡ್ ಸೈದ್, ಡೆರಿಡಾ ಮತ್ತು ಚಾಮ್‌ಸ್ಕಿ ಮುಂತಾದವರೆಲ್ಲ ಸಾಮ್ರಾಜ್ಯಗಳ ಜ್ಞಾನದ ಕೇಡನ್ನು ಕ್ರಾಂತಿಗಳ ವಿರುದ್ಧ ಜಾಡನ್ನು ಸಮರ್ಥಿಸಿದವರೇ. ಹೀಗಾಗಿ ಜಗತ್ತಿನ ಇಂತಹ ಬೌದ್ಧಿಕ ಎಚ್ಚರದ ಸ್ನೇಹವೂ ನಮ್ಮ ರಾಜಕಾರಣಕ್ಕೆ ಬೇಕು. ಈ ಹಿನ್ನೆಲೆಗಳಲ್ಲಿ ದಲಿತ ಮತ್ತು ರೈತಸಂಘದ ಕೆಲವು ನಾಯಕರು ಪರ್ಯಾಯ ರಾಜಕಾರಣವನ್ನು ಹುಡುಕುತ್ತಿರುವಾಗ ಮೊದಲಿಗೆ ಈ ಕೆಲವು ಸವಾಲುಗಳನ್ನು ಕೈಗೆತ್ತಿಕೊಂಡು ನಂತರದ ಪರ್ಯಾಯ ರಾಜಕಾರಣದ ಪ್ರಯೋಗವನ್ನು ಮಾಡಬಹುದೆನಿಸುತ್ತದೆ.

ಬುದ್ಧ ಹೇಳಿದ ನೀತಿಗೂ ದಲಿತರ ಬದುಕಿನ ರೀತಿಗೂ ಸಂಬಂಧವಿದೆ. ದಲಿತರ ಸ್ವಾತಂತ್ರ್ಯದ ದಾಹಕ್ಕೆ ಬುದ್ಧನ ತತ್ವದಲ್ಲಿ ಜೀವಜಲವಿದೆ. ಹಿಂದೂ ರಾಜಕಾರಣವು ಸನಾತನತೆಯ ಹೊಸ ಅವತಾರಗಳನ್ನು ಹಿಂಸಾತ್ಮಕವಾಗಿ ಚಲಾಯಿಸುತ್ತಿರುವ ಈ ಕಾಲದಲ್ಲಿ ದಲಿತ ರಾಜಕಾರಣದ ತಾತ್ವಿಕತೆಯು ಬುದ್ಧತ್ವದ ನಾಡಿ ಬಡಿತವಾಗಬೇಕು.

ಮೊದಲಿಗೆ : ನಮ್ಮ ಗ್ರಾಮೀಣ ಸಮಾಜದ ಒಟ್ಟು ರಚನೆಯನ್ನು ಮುರಿದು ಹಳ್ಳಿಗರ ಸಮಗ್ರ ಬದಲಾವಣೆಗೆ ತೊಡಗುವುದು. ಎಲ್ಲ ಗ್ರಾಮಗಳನ್ನು ಉತ್ಪಾದನಾ ಕೇಂದ್ರಗಳಾಗಿಯೂ ದೇಶದ ಅಭಿವೃದ್ಧಿಯ ಪ್ರಾಥಮಿಕ ಘಟಕವಾಗಿ ಪರಿವರ್ತಿಸುವುದು.

ಎರಡನೆಯದು : ಹಳ್ಳಿಗಳ ಸಮಗ್ರ ಭೂಮಿಯನ್ನು ಸಮಾನವಾಗಿ ಎಲ್ಲ ಜಾತಿಗಳಿಗೂ ಲಿಂಗತಾರತಮ್ಯವಿಲ್ಲದೆ ಎಲ್ಲರಿಗೂ ಹಂಚುವ ವ್ಯವಸ್ಥೆಯನ್ನು ಜಾರಿಗೊಳ್ಳುವಂತೆ ಮಾಡುವುದು.

ಮೂರನೆಯದು : ಕರಕುಶಲ ಸಮುದಾಯಗಳೆಲ್ಲವನ್ನೂ ಜಾತ್ಯತೀತಗೊಳಿಸಿ ಅವುಗಳ ದೇಶೀಯ ತಂತ್ರಜ್ಞಾನವನ್ನು ಆಧುನಿಕ ಜಗತ್ತಿನ ವಿವೇಕದ ಜೊತೆಗೆ ಪರಿಷ್ಕರಿಸಿ ಸಮಕಾಲೀನ ಜಗತ್ತಿನ ಜೊತೆಗೆ ಮುಖಾಮುಖಿ ಮಾಡುವ ಹಾಗೂ ಅವುಗಳಿಗೆ ಆರ್ಥಿಕ ಸ್ವಾಯತ್ತತೆಯನ್ನು ಜಾಗತಿಕವಾಗಿ ನಿರ್ಮಿಸುವಂತಹ ಅವಕಾಶವನ್ನು ರೂಪಿಸುವುದು.

ನಾಲ್ಕನೆಯದಾಗಿ : ನಗರಗಳ ಆಧಿಪತ್ಯವನ್ನು ನಿವಾರಿಸಿ ಹಳ್ಳಿ ಮತ್ತು ನಗರಗಳ ವೈರುಧ್ಯವನ್ನು ಬಿಡಿಸಿ ಅವೆರಡೂ ಒಂದಕ್ಕೊಂದು ಪೂರಕವಾದ ಹಾಗೂ ಒಂದು ಇನ್ನೊಂದನ್ನು ಕಾಯುವಂತಹ ಸಮತೋಲನವನ್ನು ವ್ಯವಸ್ಥೆಗೊಳಿಸುವುದು.

ಐದನೆಯದಾಗಿ : ಧಾರ್ಮಿಕ ಹಾಗೂ ಮತೀಯ ಮೂಲಭೂತವಾದದ ವಿರುದ್ಧ ಹೋರಾಟವನ್ನು ರೂಪಿಸಿ ಮಹಿಳೆಯರನ್ನು ದೇಶದ ಎಲ್ಲ ಪ್ರಮುಖ ನಿರ್ಧಾರಗಳಲ್ಲೂ ಭಾಗಿಯಾಗುವಂತಹ ಅವಕಾಶವನ್ನು ಕಲ್ಪಿಸುವುದು.

ಹೀಗೆ ಈ ಕೆಲವು ಸಾಧ್ಯತೆಗಳನ್ನು ಮಾಡಿದ ನಂತರವೇ ರಾಜಕೀಯ ಅಧಿಕಾರದ ಅಥವಾ ಪರ್ಯಾಯ ರಾಜಕಾರಣ ಕನಸು ಸಾಧ್ಯ. ಇಂತಹ ಸವಾಲುಗಳನ್ನು ರೈತ ದಲಿತ ಸಂಘಟನೆಗಳು ಎಲ್ಲ ಬಗೆಯ ಎಡಪಂಥೀಯ ಸಂಘಟನೆಗಳ ಜೊತೆ ಅಲ್ಪಸಂಖ್ಯಾತರನ್ನು ಸೇರಿಸಿಕೊಂಡು ಮಾಡಿದರೆ; ಅದು ನಿಜಕ್ಕೂ ಬುದ್ಧನ ಕ್ರಾಂತಿಯನ್ನೆ ಮರು ರೂಪಿಸಿದಷ್ಟು ದೊಡ್ಡದಾಗಬಲ್ಲದು. ಈ ಹಾದಿಯಲ್ಲಿ ಪಯಣಿಸುವ ದಿನಗಳು ಸಾಧ್ಯವಾಗಲೆಂದು ಕ್ರಾಂತಿಯ ಪ್ರಜ್ಞೆಯಲ್ಲಿ ಧ್ಯಾನಿಸೋಣ. □



'ಸಂವಾದ' ದೊರೆಯುವ ಸ್ಥಳ

☞ ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ

◆ ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು-೫೬೦ ೦೦೧, ☎ : ೨೨೨೦೩೫೮೦

◆ ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೧೩೮೨ ◆ ಸ್ಟೇಷನ್ ರಸ್ತೆ, ಗುಲ್ಬರ್ಗ-೨, ☎ : ೪೨೪೩೦೨

◆ ಕೆ.ಎಸ್.ರಾವ್ ರಸ್ತೆ, ಮಂಗಳೂರು-೧, ☎ : ೨೪೪೧೦೦೬ ◆ ರಾಮಸ್ವಾಮಿ ವೃತ್ತ ಮೈಸೂರು-೨೪, ☎ : ೨೪೨೪೯೪

☞ ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಶೇಷಾದ್ರಿಪುರಂ ಅಂಚೆ ಕಛೇರಿ ಎದುರು, ಬೆಂಗಳೂರು - ೫೬೦ ೦೨೦

☞ ಕೆಎಸ್‌ಆರ್‌ಟಿಸಿ ಬುಕ್ ಸ್ಟಾಲ್, ಪ್ಲಾಟ್ ಫಾರ್ಮ್ ನಂ.೧, ಸ್ಟಾಲ್ ನಂ.೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು



ಕುಸಿಯುತ್ತಿರುವ ಶಿವಸೇನೆ!

ಸಮಕಾಲೀನ

೧೯೯೦ರ ದಶಕದಲ್ಲಿ ಕಾಂಗ್ರೆಸ್ ಪಕ್ಷದ ವರ್ಚಸ್ಸು ಇಳಿಮುಖವಾಗಿ ಸಂಘಪರಿವಾರದ ಬೆಳವಣಿಗೆ ಏರುಮುಖವಾಯಿತು. ಇದನ್ನು ಕಂಡುಕೊಂಡ ಥಾಕ್ರೆಯವರು ಸಂಘ ಪರಿವಾರದೊಡನೆ ತನ್ನನ್ನು ತನ್ನ ಪಕ್ಷವನ್ನು ಸಮ್ಮಿಶ್ರ ಮಾಡಿಕೊಳ್ಳುವುದೇ ತನ್ನ ಉದ್ದೇಶ ಸಾಧನೆಗೆ ಅತೀ ಅಗತ್ಯ ಎಂಬ ಅವರ ನಿರ್ಧಾರವು ಹಿಂದುತ್ವದ ಘೋಷಣೆಯಲ್ಲಿ ಸಂಘ ಪರಿವಾರಕ್ಕಿಂತಲೂ ಒಂದು ಹೆಜ್ಜೆ ಮುಂದಾಗಲು ಅವರನ್ನು ಒತ್ತಾಯಿಸಿತು. ಬಾಬ್ರಿ ಮಸೀದಿಯನ್ನು ಕೆಡವುವ ಕಾರ್ಯದಲ್ಲಿ ಸಂಘಪರಿವಾರದ ಕರಸೇವಕರಿಗಿಂತಲೂ ಹೆಚ್ಚಿಗೆ ಮುತುವರ್ಜಿಕೆ ವಹಿಸಿದವರು ಶಿವಸೇನೆಯ ಸ್ವಯಂ ಸೇವಕರಾಗಿದ್ದರು ಎಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ.

○ ಪಿ.ಎಂ.ಎಸ್.ಮೂರ್ತಿ

ಮಹಾರಾಷ್ಟ್ರ ಮಹಾರಾಷ್ಟ್ರೀಯರಿಗೆ ಎಂಬ ಘೋಷಣೆಯೊಂದಿಗೆ ಶಿವಸೇನೆಯು ಸಂಘಟಿಸಲ್ಪಟ್ಟಿತು. ಒಂದನೆಯ ಜಾಗತಿಕ ಯುದ್ಧದ ನಂತರ ಮಹಾರಾಷ್ಟ್ರದಲ್ಲಿ ಅಂದರೆ ಮುಖ್ಯವಾಗಿ ಮುಂಬೈಯಲ್ಲಿ ಅನೇಕ ಕೈಗಾರಿಕೆಗಳು ಸ್ಥಾಪಿತವಾದವು. ಅವುಗಳಲ್ಲಿ ಹತ್ತಿ ಗಿರಿಣಿಗಳೇ ಪ್ರಾಧಾನ್ಯತೆಯನ್ನು ಪಡೆದಿದ್ದವು. ಈ ಕೈಗಾರಿಕಾ ಘಟಕಗಳಲ್ಲಿ ಉದ್ಯೋಗವನ್ನು ದಕ್ಕಿಸಿಕೊಳ್ಳಲು ದಕ್ಷಿಣ ಭಾರತದಿಂದ ಗಣನೀಯ ಪ್ರಮಾಣದಲ್ಲಿ ಜನರು ಮುಂಬೈಗೆ ವಲಸೆ ಹೋಗಲು ಪ್ರಾರಂಭಿಸಿದರು. ಎರಡನೆಯ ಜಾಗತಿಕ ಯುದ್ಧದ ನಂತರ ಈ ಪ್ರದೇಶಗಳಿಂದ ಅಲ್ಲಿಗೆ ವಲಸೆ ಹೋಗುವವರ ಸಂಖ್ಯೆ ಇನ್ನಷ್ಟು ಅಧಿಕವಾಯಿತು. ಮುಂಬೈಯ ಮಾತುಂಗಿಯಲ್ಲಿ ತಮಿಳರು ಮತ್ತು ಮಲೆಯಾಳಿಗಳು ಅಧಿಕ ಸಂಖ್ಯೆಯಲ್ಲಿ ನೆಲೆಸಿದರು. ದಕ್ಷಿಣ ಕನ್ನಡ ಜಿಲ್ಲೆಯಿಂದ ಹೋದ ವಲಸೆದಾರರು ಸೆಂಟ್ರಲ್ ರೈಲ್ವೆ ಸ್ಟೇಷನ್ನಿನ ಪೋರ್ಟು ಪ್ರದೇಶದಲ್ಲಿ ಬಹುಸಂಖ್ಯಾತರಾದರು. ಸಾಮಾನ್ಯವಾಗಿ ಯಾವ ಕೆಲಸಕ್ಕೂ ತಯಾರಿದ್ದ ಈ ವಲಸೆದಾರರು ತಮಗೆ ಉದ್ಯೋಗಗಳನ್ನು ದೊರಕಿಸಿಕೊಳ್ಳುವುದರಲ್ಲಿ ಮುಂದಾದರು.

ಈ ಪರಿಸ್ಥಿತಿಯಲ್ಲಿ ಮೇಲೆ ಹೇಳಿದ ಘೋಷಣೆಯನ್ನು ಮುಂದಿಟ್ಟುಕೊಂಡು ಶಿವಸೇನೆಯನ್ನು ಸ್ಥಾಪಿಸಲಾಯಿತು. ಬಾಳ್ ಥಾಕ್ರೆಯವರು ಈ ಸಂಸ್ಥೆಯ ಸ್ಥಾಪಕ. ಅವರು ಮೊದಲಿಗೆ ವ್ಯಂಗ್ಯ ಚಿತ್ರಕಾರರಾಗಿದ್ದರು (Cartoonist). ೧೯೬೦ರ ನಂತರ ಮುಂಬೈಯ ಅನೇಕ ಕೈಗಾರಿಕೆಗಳು ಮುಗ್ಗಟ್ಟುಗಳಿಗೆ ಒಳಗಾದವು. ಗಿರಣಿಗಳ ಯಂತ್ರ ಸಾಮಗ್ರಿಗಳನ್ನು ಆಧುನಿಕತೆಗೊಳಿಸಲು ಸಾಧ್ಯವಾಗದೆ, ಹಾಗೆಯೇ ಹೊಸದಾಗಿ ಹುಟ್ಟಿಕೊಂಡ ಕಾರ್ಖಾನೆಗಳೊಡನೆ ಸ್ಪರ್ಧಿಸಲಾರದ ಫಲಿತಾಂಶವು ಈ ಮುಗ್ಗಟ್ಟಿಗೆ ಕಾರಣ. ಇದರಿಂದಾಗಿ ಬಹಳಷ್ಟು ಮಂದಿ ಕೆಲಸಗಾರರು ತಮ್ಮ ಕೆಲಸವನ್ನು ಕಳೆದುಕೊಳ್ಳಬೇಕಾಗಿ ಬಂತು. ದಕ್ಷಿಣ ಭಾರತದ ಜನರ ಆಗಮನದಿಂದ ಮಹಾರಾಷ್ಟ್ರೀಯರಿಗೆ ಕೆಲಸವು ಕೈತಪ್ಪಿತು. ಆದುದರಿಂದ ಅವರ ವಿರುದ್ಧವಾಗಿ ಚಳವಳಿ ಹೂಡುವುದೇ ಈ ಸಂಘಟನೆಯ ಉದ್ದೇಶವೆಂದು ಮುಂಬೈಯ ಮಹಾರಾಷ್ಟ್ರೀಯ ಜನರಲ್ಲಿ ಕೆಳ ಅಂತಸ್ತಿನ ಜನ ಸಮುದಾಯವನ್ನು ತನ್ನ ಸಂಘಟನೆಯತ್ತ ಆಕರ್ಷಿಸಲು ಥಾಕ್ರೆಯವರಿಗೆ ಸಾಧ್ಯವಾಯಿತು. ಅವರ ಉದ್ದೇಶವನ್ನು ಮಹಾರಾಷ್ಟ್ರೀಯ ಜನರಿಗೆ ಮನವರಿಕೆ ಮಾಡಲು ದಕ್ಷಿಣ ಭಾರತದ ವಿರುದ್ಧ ದಾಳಿ ನಡೆಸುವುದು, ಅದರ ವಿರುದ್ಧವಾಗಿ ಹಿಂಸಾಚಾರಗಳನ್ನು ನಡೆಸುವುದು. ದಕ್ಷಿಣ ಭಾರತದಿಂದ ವಲಸೆ ಹೋಗಿ ಅಲ್ಲಿ ವ್ಯಾಪಾರಗಳಲ್ಲಿ ತೊಡಗಿದವರನ್ನು ನಾನಾ ರೀತಿಯಲ್ಲಿ ಪೀಡಿಸುವ ವ್ಯಕ್ತಿಗಳನ್ನು ಕಾರ್ಯಗತಗೊಳಿಸಲು ಪ್ರಾರಂಭವಾಯಿತು. ಈ ಪೀಡನೆಯಿಂದ ತಮ್ಮನ್ನು ತಮ್ಮ ವ್ಯಾಪಾರವನ್ನು ರಕ್ಷಿಸಿಕೊಳ್ಳಲು ಈ ವ್ಯಕ್ತಿಗಳು ಈ ಶಿವಸೇನೆಗೆ ಲಂಚ ಕೊಡಲು ಶುರು ಮಾಡಿದರು. ಕೊನೆಗೆ ಈ ಲಂಚವು ಒಂದು ಶಿಸ್ತು ಬದ್ಧವಾದ ಒಂದು ಕ್ರಮದ ರೂಪವನ್ನೆ ತಾಳಿತು. ಪ್ರತಿ ವಾರ ಅದಕ್ಕೆ ಕೊಡಬೇಕಾದ ಲಂಚದ ಹಣದ ಪ್ರಮಾಣವನ್ನು ನಿರ್ಧರಿಸಲಾಯಿತು. ಆದುದರಿಂದ ಈ ಕ್ರಮಕ್ಕೆ ಹಪ್ತಾ ಎಂಬ ಹೆಸರು ಬಂತು.



ಇದರಿಂದಾಗಿ ಸಾಕಷ್ಟು ಪ್ರಮಾಣ ದಲ್ಲಿ ಹಣ ಸಂಗ್ರಹವಾಗಲು ಪ್ರಾರಂಭವಾಯಿತು. ಈ ಹಣದ ಪ್ರಾಬಲ್ಯದಿಂದ ತನ್ನದೇ ಆದ 'ಸಾಮ್‌ನಾ' ಎಂಬ ದೈನಿಕವೊಂದನ್ನು ಅಸ್ತಿತ್ವಕ್ಕೆ ತಂದರು. ಅವರು, ಅವರ ಸೇನೆ ಮತ್ತು ಅವರು ನಡೆಸುವ ಪತ್ರಿಕೆಗಳ ವಿರುದ್ಧ ಟೀಕಿಸುವವರ ವಿರುದ್ಧ ಹಗೆ ಸಾಧಿಸಲು ಹೊರಟರು. ಅಂತೆಯೇ ತಮಗೆ ಹಪ್ತಾ ನೀಡದಿದ್ದ ವ್ಯಾಪಾರಸ್ಥರ ಮೇಲೂ ಅವರ ವಕ್ರದೃಷ್ಟಿ ಹರಿಯುತ್ತಿತ್ತು. 'ಮಹಾ ನಗರ' ಎಂಬ ಮರಾಠಿ ಪತ್ರಿಕೆಯ ವಿರುದ್ಧ ಹಾಗೆಯೇ ಅದರ ಸಂಪಾದಕ ವಾಗ್ಲೆಯವರ ವಿರುದ್ಧ ಅದರ ಹಿಂಸಾಚಾರ ಕೃತ್ಯಗಳು ಆಗಾಗ್ಗೆ ನಡೆಯುತ್ತಲೇ ಇತ್ತು. ಥಾಕ್ರೆಯವರ ಜೀವನ ಈ ಹಂತಕ್ಕೆ ತಲುಪಿದೊಡನೆ ತಾನೊಂದು ರಾಜಕೀಯ ಪಟುವಾಗಬೇಕು ಎಂಬ ಆಸೆ ಅವರಲ್ಲಿ ಹುಟ್ಟಿತು. ಪ್ರಾರಂಭದಲ್ಲಿ ಮುಂಬೈಯ ನಗರ ಸಭೆಗೆ ಅಂದರೆ ೧೯೬೮ರಲ್ಲಿ ಮತ್ತು ೧೯೭೩ರಲ್ಲಿ ತನ್ನ ಪಕ್ಷದ ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸಿ ಜಯಶೀಲರಾದರು. ನಗರ ಸಭೆ ಅವರ ಕೈವಶವಾಯಿತು. ಇದರಿಂದ ಉತ್ಸಾಹವನ್ನು ದೊರಕಿಸಿಕೊಂಡ ಥಾಕ್ರೆಯವರು ಅಖಿಲ ಭಾರತ ಮಟ್ಟದಲ್ಲಿ ತನ್ನ ರಾಜಕೀಯ ಪ್ರಯೋಗಕ್ಕೆ ಪ್ರಯತ್ನಿಸಿದರು. ಆದರೆ ತನ್ನ ಪ್ರಾಬಲ್ಯವನ್ನು ಅಖಿಲ ಭಾರತ ಮಟ್ಟಕ್ಕೇರಿಸಲು ಕಾಂಗ್ರೆಸ್ ಪಕ್ಷದೊಡನೆ ಕೈಗೂಡಿಸಲು ಅವರು ಸಿದ್ಧರಾಗಲಿಲ್ಲ, ಬದಲು ಬಿಜೆಪಿ ಪಕ್ಷದ ಕಡೆ ಅವರು ವಾಲಿದರು. ಅದರ ಈ ಪ್ರಕ್ರಿಯೆ ಅವರನ್ನು ಶುದ್ಧ ಹಿಂದುತ್ವವಾದಿಯಾಗಿ ಪರಿವರ್ತಿಸಿತು. ಇದರ ನಂತರ ಅವರು ತನ್ನನ್ನು 'ಹಿಂದು ಹೃದಯದ ಸಾಮ್ರಾಟ' ಎಂದು ಕರೆದುಕೊಂಡು, ಅಲ್ಪ ಸಂಖ್ಯಾತರ ವಿರುದ್ಧ ಅದರಲ್ಲೂ ಮುಖ್ಯವಾಗಿ ಮುಸ್ಲಿಮರ ವಿರುದ್ಧ ತಮ್ಮ ದ್ವೇಷವನ್ನು ಕಾರಲು ಶುರು ಮಾಡಿದರು.

ಅವರ ತಂದೆ ಪ್ರಮೋದ ಕಾಂತೆ ಥಾಕ್ರೆಯವರು ಸಮಾಜ ಸುಧಾರಣೆಗಾಗಿ ದುಡಿದವರು. ನಮ್ಮ ಸಮಾಜದಲ್ಲಿ ಅತಿ ಕೀಳು ಅಂತಸ್ತಿನಲ್ಲಿರುವ ಕೋಟ್ಯಾನುಕೋಟಿ ದೀನ ದಲಿತರ ಸುಧಾರಣೆಯಾಗುವುದು ಈ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಅಗತ್ಯ ಎಂಬ ಭಾವನೆಯನ್ನು ಹೊಂದಿದವರಾಗಿದ್ದರು. ದಲಿತರು ಅಸ್ಪೃಶ್ಯರು ಎಂಬ ದುಷ್ಟ ಭಾವನೆಯನ್ನು ಸಮಾಜದಿಂದ ತೊಡೆದು ಹಾಕಬೇಕು ಎಂಬ ಪುರೋಗಾಮಿ ಚಿಂತನೆಗೆ ಅವರು ಒತ್ತಾಸೆ ನೀಡಿದ್ದರು. ಮತ್ತು ಅದಕ್ಕಾಗಿ ಇತರ ಸಮಾಜದ ಸುಧಾರಕರೊಡನೆ ಸೇರಿ ಈ ಕುರಿತು ತನ್ನ ಕೊಡುಗೆಯನ್ನು ನೀಡಿದ್ದರು.

ಆದರೆ ಅವರ ಮಗ ಬಾಳ್ ಸಾಹೇಬ ಥಾಕ್ರೆಯವರು ಬಿಜೆಪಿ ಪಕ್ಷದೊಡನೆ ತನ್ನ ಸಂಪರ್ಕವನ್ನು ಬೆಳೆಸಿದ್ದೇ ತಡ, ಸಂಘ ಪರಿವಾರದೊಡನೆ ತನ್ನ ಸೇರುವಿಕೆಗೆ ಅರ್ಹತೆಯನ್ನು ತೋರಿಸಿತು ಎಂಬಂತೆ ಅವರು ದಲಿತ ವಿರೋಧಿಯಾದರು. ಹಾಗೆಯೇ ಮನುವಾದಿಯಾದರು. ಅವರ ರಾಜಕೀಯ ಈ ಪರಿಸ್ಥಿತಿಗೆ ತಲುಪಿದಾಗ ದಲಿತರ ಓರ್ವ ಪ್ರಮುಖ ಮುಖಂಡನಾಗಿದ್ದ ಭವತ್ ಜಾದವ್ ಎಂಬವರ ಹತ್ಯೆ ನಡೆಯಿತು. ಅವರ ಕೊಲೆಗೆ ಶಿವಸೇನೆಯ ದ್ವೇಷವೇ ಕಾರಣವೆಂಬ ಭಾವನೆ ಇಂದಿಗೂ ಅನೇಕ ರಾಜಕೀಯ ಹಾಗೂ ಸಾಮಾಜಿಕ ರಂಗಗಳಲ್ಲಿ ನಿರತರಾಗಿರುವ ವ್ಯಕ್ತಿಗಳ

ಮನಸ್ಸಿನಿಂದ ಆರಿಹೋಗಿಲ್ಲ. ಬಾಳ್ ಸಾಹೇಬ ಥಾಕ್ರೆಯವರು ಹಿಂದುತ್ವವಾದಿಗಳೊಡನೆ ಸಖ್ಯ ಬೆಳೆಸಲು ಇನ್ನೊಂದು ಬಲವಾದ ಕಾರಣವೆಂದರೆ ೧೯೭೦ರ ಕಾಲದಲ್ಲಿ ಸಂಘಪರಿವಾರವು ಸಾಕಷ್ಟು ರಾಜಕೀಯ ಪ್ರಭಾವವನ್ನು ಗಳಿಸಿತ್ತು. ಈ ೧೯೭೦ರ ದಶಕದಲ್ಲಿ ಕಾಂಗ್ರೆಸ್‌ನಲ್ಲಿ ಒಡಕುಂಟಾದಾಗ ಈ ಹಿಂದುತ್ವವಾದಿಗಳು ಕಾಂಗ್ರೆಸ್ (ಐ) ಗೆ ಬೆಂಬಲ ನೀಡಿದರು. ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿಯನ್ನು ರಾಷ್ಟ್ರದ ಮೇಲೆ ಹೇರಿದ್ದು ಸಂಘಪರಿವಾರಕ್ಕೆ ಒಂದು ವರಪ್ರಸಾದವಾಗಿ ಬಂತು.

ಸಂಘಪರಿವಾರದ ರಾಜಕೀಯ ತತ್ವ ಶುದ್ಧ ಸರ್ವಾಧಿಕಾರದ ಸಿದ್ಧಾಂತವಾಗಿದ್ದರೂ ಈ ತುರ್ತು ಪರಿಸ್ಥಿತಿಯನ್ನು ಪ್ರಾಮಾಣಿಕವಾಗಿ ಎದುರಿಸಿದ್ದ ಇನ್ನಿತರ ವಿಭಾಗದ ಹಾಗೆಯೇ ರಾಜಕೀಯ ಪಕ್ಷಗಳ ಮಧ್ಯೆ ತಾವೂ ನುಸುಳಿಕೊಂಡು ತಮ್ಮ ಪ್ರಭಾವವನ್ನು ಅತ್ಯಧಿಕ ಪ್ರಮಾಣ ದಲ್ಲಿ ಬೆಳೆಸಿದರು. ಇದರಿಂದಾಗಿ ತುರ್ತು ಪರಿಸ್ಥಿತಿಯ ರದ್ದತಿಯ ನಂತರ ಅಧಿಕಾರಕ್ಕೆ ಬಂದ ಮೊರಾರ್ಜಿ ದೇಸಾಯಿ ಮಂತ್ರಿಮಂಡಲದಲ್ಲಿ ಅವರಿಗೆ ಪ್ರಾಧಾನ್ಯತೆ ದೊರೆಯಿತು. ಈ ಪರಿಸ್ಥಿತಿಯಲ್ಲಿ ತನ್ನ ಪಕ್ಷಕ್ಕೆ ಅಖಿಲಭಾರತ ಮಟ್ಟದ ಪ್ರಾಬಲ್ಯವನ್ನು ಗಳಿಸುವ ಆಸೆ ಥಾಕ್ರೆಯವರಲ್ಲಿ ಕುದುರಿತು. ತನ್ನ ಮತ್ತು ತನ್ನ ಪಕ್ಷದ ಬಲವರ್ಧನೆಗೆ ಈ ಹಿಂದುತ್ವವಾದಿಗಳಾದ ಸಂಘಪರಿವಾರದೊಡನೆ ಸಹಕಾರ ಹಾಗೂ ಮಿತ್ರತ್ವ ಅಗತ್ಯವೆಂದು ಕಂಡುಕೊಂಡ ಥಾಕ್ರೆಯವರು ತನ್ನ ಸಂಘವನ್ನು ಸ್ಥಾಪಿಸುವ ಕಾಲದಲ್ಲಿ ಅವರಲ್ಲಿದ್ದ ಉದ್ದೇಶಗಳನ್ನು ತೊರೆದು ಸಂಘಪರಿವಾರದವರನ್ನು ಸೇರಿಸಿಕೊಂಡರು. ಅವರ ಸಿದ್ಧಾಂತವನ್ನು ಮೈಗೂಡಿಸಿಕೊಂಡರು.

೧೯೯೦ರ ದಶಕದಲ್ಲಿ ಕಾಂಗ್ರೆಸ್ ಪಕ್ಷದ ವರ್ಚಸ್ಸು ಇಳಿಮುಖವಾಯಿತು. ಸಂಘಪರಿವಾರದ ಬೆಳವಣಿಗೆ ಏರುಮುಖವಾಯಿತು. ಇದನ್ನು ಕಂಡುಕೊಂಡು ಥಾಕ್ರೆಯವರು ಸಂಘ ಪರಿವಾರದೊಡನೆ ತನ್ನನ್ನು ತನ್ನ ಪಕ್ಷವನ್ನು ಸಮ್ಮಿಶ್ರ ಮಾಡಿಕೊಳ್ಳುವುದೇ ತನ್ನ ಉದ್ದೇಶ ಸಾಧನೆಗೆ ಅತೀ ಅಗತ್ಯ ಎಂಬ ಅವರ ನಿರ್ಧಾರವು ಹಿಂದುತ್ವದ ಘೋಷಣೆಯಲ್ಲಿ ಸಂಘ ಪರಿವಾರಕ್ಕಿಂತಲೂ ಒಂದು ಹೆಜ್ಜೆ ಮುಂದಾಗಲು ಅವರನ್ನು ಒತ್ತಾಯಿಸಿತು. ೧೯೯೨ ಡಿಸೆಂಬರ್ ೬ ರಂದು ಬಾಬ್ರಿ ಮಸೀದಿಯನ್ನು ಕೆಡವುವ ಕಾರ್ಯದಲ್ಲಿ ಸಂಘಪರಿವಾರದ ಕರಸೇವಕರಿಗಿಂತಲೂ ಹೆಚ್ಚಿಗೆ ಮುತುವರ್ಜಿಕೆ ವಹಿಸಿದವರು ಶಿವಸೇನೆಯ ಸ್ವಯಂ ಸೇವಕರಾಗಿದ್ದರು ಎಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಅವರ ಈ ಎಲ್ಲಾ ಕಾರ್ಯಕ್ರಮಗಳು ಅವರ ಪಕ್ಷವನ್ನು ಅಖಿಲ ಭಾರತದ ಮಟ್ಟಕ್ಕೆ ಏರಿಸದಿದ್ದರೂ ಅವರ ವೈಯಕ್ತಿಕ ಪ್ರಭಾವ ಹೆಸರು ಮತ್ತು ವರ್ಚಸ್ಸು ಆ ಮಟ್ಟಕ್ಕೆ ಏರಿದವು ಎಂಬುದು ನಿಸ್ಸಂದೇಹ. ಅವರಿಗೆ ಒದಗಿಬಂದ ಇಂತಹ ಒಂದು ರಾಜಕೀಯ ಪರಿಸರದಲ್ಲಿ ಅವರು ಇನ್ನಷ್ಟು ಸರ್ವಾಧಿಕಾರಿಯಾದದ್ದು ಸ್ವಾಭಾವಿಕವೆಂದೇ ಹೇಳಬೇಕು. ಕಾರಣ ಅವರು ಪ್ರಾರಂಭದಿಂದಲೂ ಅದೇ ಭಾವನೆಯನ್ನು ಮೈಗೂಡಿಸಿಕೊಂಡು ಬೆಳೆದು ಬಂದವರು. ೧೯೯೦ರ ದಶಕದ ಕೊನೆಯ ಹಂತದಲ್ಲಿ ಬಿಜೆಪಿ ಪಕ್ಷವು ಕೇಂದ್ರದಲ್ಲಿಯ ಸರಕಾರವನ್ನು ಕೈವಶ ಪಡಿಸುವ ಹಂತಕ್ಕೆ ತಲುಪಿದಾಗ ಅದಕ್ಕೆ ಥಾಕ್ರೆಯವರ ಸಹಾಯದ ಅನಿವಾರ್ಯತೆಯಿತ್ತು.

ರಾಜಕೀಯ ರಂಗದಲ್ಲಿ ಅವರಿಗೆ ಒದಗಿ ಬಂದ ಈ ಸನ್ನಿವೇಶವು ತನ್ನ ರೀತಿ ನೀತಿಗಳಿಂದಲೇ ಒದಗಿ ಬಂತು ಎಂಬ ಆತ್ಮ ವಿಶ್ವಾಸ ಅವರಲ್ಲಿ ಇನ್ನಷ್ಟು ಹೆಚ್ಚಿತು. ೧೯೯೯ರಲ್ಲಿ ವಾಜಪೇಯಿಯವರ ಸರಕಾರ ಅಧಿಕಾರಕ್ಕೆ ಬಂದ ವೇಳೆಯಲ್ಲಿ ತನ್ನ ಪಕ್ಷದ ಪರವಾಗಿ ವಾಜಪೇಯಿಯವರಿಗೆ ಅಧಿಕಾರ ವಾಣಿಯಿಂದ ಆಜ್ಞಾಪಿಸಲು ಶಕ್ತರಾದದ್ದು ಇದೇ ಕಾರಣದಿಂದ. ವಾಜಪೇಯಿಯವರ ಮಂತ್ರಿಮಂಡಲ ಅಧಿಕಾರ ಸ್ವೀಕರಿಸಿದ ನಂತರವೂ ಅವರ ವರ್ತನೆ ಬದಲಾಗಲಿಲ್ಲ. ಒಂದೆಡೆ ಈ ಸರಕಾರದ ಮೇಲೆ ತನ್ನ ಒತ್ತಡವನ್ನು ಹೇರುವುದು, ಇನ್ನೊಂದೆಡೆಯಲ್ಲಿ ತನ್ನ ಪಕ್ಷದ ಮಂತ್ರಿಗಳು ತನ್ನನ್ನು ಮೀರದಂತೆ ಅವರನ್ನು ನಿಯಂತ್ರಿಸುವುದು. ಇದೇ ಅವರ ಕೆಲಸವಾಗಿತ್ತು. ಮನೋಹರ ಜೋಷಿ ಹಾಗೂ ಪ್ರಭು ಎಂಬ ತನ್ನ ಪಕ್ಷದ ಮಂತ್ರಿಗಳನ್ನು ತನಗೆ ಮನಸ್ಸಿಗೆ ಬಂದಂತೆ ಮಂತ್ರಿಮಂಡಲಕ್ಕೆ ರಾಜೀನಾಮೆ ಕೊಡಿಸುವುದು. ಮತ್ತೆ ಅವರನ್ನು ಪುನಃ ಮಂತ್ರಿಮಂಡಲಕ್ಕೆ ಸೇರಲು ಆಜ್ಞಾಪಿಸಿದ್ದು ಇದಕ್ಕೆ ಸ್ಪಷ್ಟ ಉದಾಹರಣೆಗಳಾಗಿವೆ. ಅವರ ಸರ್ವಾಧಿಕಾರದ ಕೃತ್ಯಗಳಿಂದ ಅವರ ವೈಯಕ್ತಿಕ ವರ್ಚಸ್ಸು ಕೆಡುತ್ತಿದ್ದುದು, ಹಾಗೆಯೇ ಅದರಿಂದಾಗಿ ಅವರ ಹಿಂಬಾಲಕರಲ್ಲಿ ಅವರ ಕುರಿತು ಗೌರವ ವಿಶ್ವಾಸಗಳು ಕುಸಿಯುತ್ತಿದ್ದುದು ಅವರ ಮನಸ್ಸಿಗೆ ಬರಲೇ ಇಲ್ಲ.

ಅವರ ಪಕ್ಷದಲ್ಲಿ ಬಹಳಷ್ಟು ಮಂದಿ ದಲಿತರು ಕೂಡಾ ಸದಸ್ಯರಾಗಿದ್ದರು. ಮುಂಬೈ ಮಹಾನಗರ ಪಾಲಿಕೆಯ ಕೆಳಸ್ತರದ ಮಟ್ಟದಲ್ಲಿ ಕಾರ್ಮಿಕರಲ್ಲಿ ಬಹುತೇಕ ಮಂದಿ ಈ ವರ್ಗಕ್ಕೆ ಸೇರಿದವರು. ಅವರನ್ನು ಸಂಘಟಿಸಿದ ಧಾರ್ಮಿಕ ಸಂಘಗಳು ಥಾಕ್ರೆಯವರ ಹತೋಟಿಗೆ ಒಳಪಟ್ಟವು. ಥಾಕ್ರೆಯವರು ಸಂಘ ಪರಿವಾರದೊಡನೆ ಕೂಡಿಕೊಂಡದ್ದು ಈ ಕಾರ್ಮಿಕ ಸಂಘಟನೆಯ ಇತರ ಮುಂದಾಳುಗಳಿಗೆ ಹಿಡಿಸಲಿಲ್ಲ.

> **ಮುಂಬೈ ಮತ್ತು ಮಹಾರಾಷ್ಟ್ರದ ಕೊಂಕಣ ಪ್ರದೇಶವು ಶಿವಸೇನೆಯ ಕೋಟೆಯಂತಿದ್ದವು. ಕಳೆದ ಲೋಕಸಭೆ ಮತ್ತು ನಂತರ ಮಹಾರಾಷ್ಟ್ರದ ಶಾಸನ ಸಭೆಗಳಿಗೆ ನಡೆದ ಚುನಾವಣೆಯ ಫಲಿತಾಂಶಗಳು ಅವರಿಗೆ ಸಿಡಿಲು ಬಡಿದಂತಾದವು. ಮುಂಬೈ ನಗರದಲ್ಲಿ ಅವರಿಗೆ ಲೋಕಸಭೆಗೆ ದೊರೆತ ಸ್ಥಾನ ಬರೇ ಒಂದು ! ಅವರ ಹೆಮ್ಮೆಗೆ ಇದೊಂದು ಸವಾಲಾಯಿತು. ಇಷ್ಟರಲ್ಲಿ ಅವರ ಮಗ ಉದಯ್ ಥಾಕ್ರೆ ಮತ್ತು ಅವರ ಸಹೋದರರ ಮಗ ರಾಜ ಥಾಕ್ರೆ ಅವರೊಳಗೆ ತಿಕ್ಕಾಟಗಳು ಬೆಳಕಿಗೆ ಬಂದವು. ಪುತ್ರ ವಾತ್ಸಲ್ಯದಿಂದ ಥಾಕ್ರೆಯವರು ತನ್ನ ಮಗನನ್ನೇ ತನ್ನ ಉತ್ತರಾಧಿಕಾರಿಯಾಗಿ ನೇಮಿಸಿದ್ದರೂ, ರಾಜ ಥಾಕ್ರೆಯವರ ಬೆಂಬಲಿಗರು ಅವರ ಈ ನಿರ್ಧಾರವನ್ನು ಪ್ರಶ್ನಿಸಿದರು. ಇದರಿಂದಾಗಿ ಸೇನೆಯು ಹೋಳಾಗುವ ಪರಿಸ್ಥಿತಿಯನ್ನು ಈಗ ಎದುರಿಸುತ್ತಿದೆ.**

ಇತ್ತೀಚೆಗಿನ ವರ್ಷಗಳಲ್ಲಿ ದಕ್ಷಿಣ ಭಾರತದಿಂದ ಮಹಾರಾಷ್ಟ್ರಕ್ಕೆ ಅದರಲ್ಲಿ ಮುಖ್ಯವಾಗಿ ಮುಂಬೈಗೆ ವಲಸೆ ಹೋಗುವ ಮಂದಿಯ ಸಂಖ್ಯೆ ಬಹಳಷ್ಟು ಕಡಿಮೆಯಾಗಿದೆ. ಆದರೆ ಅದೇ ಸಮಯದಲ್ಲಿ ಬಿಹಾರ, ಒರಿಸ್ಸಾ, ಉತ್ತರ ಪ್ರದೇಶಗಳಿಂದ ವಲಸೆಯಾಗಿ ಬರುವವರ ಸಂಖ್ಯೆ ಬಹಳಷ್ಟು ಹೆಚ್ಚಿದೆ. ದಿನವೊಂದಕ್ಕೆ ೧೫೦ ಕುಟುಂಬಗಳು ಈ ಪ್ರದೇಶಗಳಿಂದ ಮುಂಬೈಗೆ ಬಂದು ಸೇರುತ್ತಿವೆ ಎಂಬುದು ೨೦೦೧ರ ಜನಗಣನೆಯ ಲೆಕ್ಕಾಚಾರಗಳಿಂದ ಕಂಡು ಬರುತ್ತದೆ. ಮುಂಬೈಯಲ್ಲಿ ಈಗಾಗಲೇ ಅನೇಕ ಗೂಂಡಾ ವ್ಯಕ್ತಿಗಳು ರಾಜಕೀಯಕ್ಕೆ ಇಳಿದಿರುವ ಕಾರಣ ಹೀಗೆ ವಲಸೆ ಬರುವ ಬಿಹಾರ ಹಾಗೂ ಒರಿಸ್ಸಾದ ಜನರನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಾಗದು ಎಂಬ ಶಂಕೆಯನ್ನು ತಾಳಿದ ಥಾಕ್ರೆಯವರು ಅವರ ಆಗಮನವನ್ನು ನಿರ್ಬಂಧಿಸಬೇಕು ಎಂದು ಪ್ರಾರಂಭದಲ್ಲಿ ಸರಕಾರವನ್ನು ಒತ್ತಾಯಿಸಿದರು. ನಂತರ ತನ್ನ ಪಕ್ಷದ ಸ್ವಯಂ ಸೇವಕರನ್ನು ಈ ವಲಸೆಗಾರರ ವಿರುದ್ಧ ಹಿಂಸಾಚಾರಗಳನ್ನು ನಡೆಸಲು ಒತ್ತಾಯಿಸಿದರು. ಈ ವರ್ಷದ ಅಂದರೆ ೨೦೦೪ನೇ ಜನವರಿಯಲ್ಲಿ ರೈಲ್ವೆ ಖಾತೆಗೆ ನೌಕರರನ್ನು ನೇಮಿಸಲು ಅಭ್ಯರ್ಥಿಗಳನ್ನು ಆರಿಸಲು ಪರೀಕ್ಷೆಯೊಂದನ್ನು ಮುಂಬೈಯಲ್ಲಿ ಏರ್ಪಡಿಸಲಾಗಿತ್ತು. ಈ ಪರೀಕ್ಷೆಗೆ ಹಾಜರಾಗಲು ಬಿಹಾರದಿಂದ, ಒರಿಸ್ಸಾದಿಂದ ಹಾಗೆಯೇ ಇತರ ಉತ್ತರ ಭಾರತದ ಕೆಲವು ರಾಜ್ಯಗಳಿಂದ ಅಭ್ಯರ್ಥಿಗಳು ಹಾಜರಾಗಲು ಬಂದಿದ್ದರು. ಥಾಕ್ರೆಯವರ ಆಜ್ಞೆಯ ಪ್ರಕಾರ ಈ ಅಭ್ಯರ್ಥಿಗಳ ವಿರುದ್ಧವಾಗಿ ಹಿಂಸಾಚಾರಗಳನ್ನು ನಡೆಸಲಾಗಿತ್ತು. ಮುಂಬೈ ನಗರದ ಒಟ್ಟು ಜನಸಂಖ್ಯೆಯ ಶೇ ೬೦ ರಷ್ಟು ಇತರ ರಾಜ್ಯಗಳಿಂದ ಬಂದು ಅಲ್ಲಿ ನೆಲಸಿದವರು ಎಂಬ ವಾಸ್ತವವನ್ನು ಮನಗಾಣದೆ ಅವರ ವಿರುದ್ಧವಾಗಿ ನಡೆಸಲ್ಪಟ್ಟ ಈ ಹಿಂಸಾಚಾರಗಳು ಥಾಕ್ರೆಯವರ ಪ್ರಾಬಲ್ಯಕ್ಕೆ ಇನ್ನಷ್ಟು ಕುಂದು ತಂದಿತು.

ಮುಂಬೈ ಮತ್ತು ಮಹಾರಾಷ್ಟ್ರದ ಕೊಂಕಣ ಪ್ರದೇಶವು ಶಿವಸೇನೆಯ ಕೋಟೆಯಂತಿದ್ದವು. ಕಳೆದ ಲೋಕಸಭೆ ಮತ್ತು ನಂತರ ಮಹಾರಾಷ್ಟ್ರದ ಶಾಸನ ಸಭೆಗಳಿಗೆ ನಡೆದ ಚುನಾವಣೆಯ ಫಲಿತಾಂಶಗಳು ಅವರಿಗೆ ಸಿಡಿಲು ಬಡಿದಂತಾದವು. ಮುಂಬೈ ನಗರದಲ್ಲಿ ಅವರಿಗೆ ಲೋಕಸಭೆಗೆ ದೊರೆತ ಸ್ಥಾನ ಬರೇ ಒಂದು! ಅವರ ಹೆಮ್ಮೆಗೆ ಇದೊಂದು ಸವಾಲಾಯಿತು.

ಇಷ್ಟರಲ್ಲಿ ಅವರ ಮಗ ಉದಯ್ ಥಾಕ್ರೆ ಮತ್ತು ಅವರ ಸಹೋದರರ ಮಗ ರಾಜ ಥಾಕ್ರೆ ಅವರೊಳಗೆ ತಿಕ್ಕಾಟಗಳು ಬೆಳಕಿಗೆ ಬಂದವು. ಪುತ್ರ ವಾತ್ಸಲ್ಯದಿಂದ ಥಾಕ್ರೆಯವರು ತನ್ನ ಮಗನನ್ನೇ ತನ್ನ ಉತ್ತರಾಧಿಕಾರಿಯಾಗಿ ನೇಮಿಸಿದ್ದರೂ, ರಾಜ ಥಾಕ್ರೆಯವರ ಬೆಂಬಲಿಗರು ಅವರ ಈ ನಿರ್ಧಾರವನ್ನು ಪ್ರಶ್ನಿಸಿದರು. ಇದರಿಂದಾಗಿ ಸೇನೆಯು ಹೋಳಾಗುವ ಪರಿಸ್ಥಿತಿಯನ್ನು ಈಗ ಎದುರಿಸುತ್ತಿದೆ.

ಅವರ ಈ ಎಲ್ಲಾ ಸೋಲಿಗೆ ಮುಖ್ಯ ಕಾರಣಗಳೆಂದರೆ ೧. ಬಾಳ್ ಥಾಕ್ರೆಯವರ ವಯಸ್ಸು. ಈಗಾಗಲೇ ಅವರಿಗೆ ೭೮ ವರ್ಷ ಪ್ರಾಯವಾಗಿದೆ. ತನ್ನ ಸರ್ವಾಧಿಕಾರವನ್ನು ಅಕ್ಷರಶಹ ಅವರ ಹಿಂಬಾಲಕರು ಪಾಲಿಸುವಂತೆ ಶಿಸ್ತನ್ನು ಬಿಗಿಗೊಳಿಸಲು ಅವರಿಗೆ ಸಾಧ್ಯವಾಗುತ್ತಿಲ್ಲ. ೨. ಉದಯ ಥಾಕ್ರೆ ಮತ್ತು ರಾಜ ಥಾಕ್ರೆಯವರೊಳಗೆ ವೈಮನಸ್ಸು. ೩. ಅವರ ಹಿಂದುತ್ವದ ಧೋರಣೆಯಿಂದ ಅವರಿಗೆ ಮೊದಲು ಬೆಂಬಲವೀಯುತ್ತಿದ್ದ ದಲಿತರು, ಮುಸ್ಲಿಮರು ಅವರಿಂದ

ಇಂದು ದೂರವಾಗಿದ್ದಾರೆ. ಮಹಾರಾಷ್ಟ್ರದಲ್ಲಿ ದಲಿತರ ಸಂಖ್ಯೆ ಏನೂ ಕಡಿಮೆಯಿಲ್ಲ, ಶೇ. ೧೬ ರಷ್ಟಿದೆ.

೪. ಒರಿಸ್ಸಾ ಬಿಹಾರ ಹಾಗೆಯೇ ಇತರ ಪ್ರದೇಶಗಳಿಂದ ಮಹಾರಾಷ್ಟ್ರಕ್ಕೆ ವಲಸೆಯಾಗಿ ಬಂದ ಜನರ ವಿರುದ್ಧವಾಗಿ ಸೇನೆಯ ಸ್ವಯಂ ಸೇವಕರು ನಡೆಸಿದ ಹಿಂಸಾಚಾರಗಳು.

೫. ಅವರ ಇಳಿ ವಯಸ್ಸಿನಿಂದಾಗಿ, ಮೊದಲಿನಂತೆ ಪಕ್ಷದ ಪ್ರಚಾರ ಕಾರ್ಯಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಮಹಾರಾಷ್ಟ್ರದ ಶರದ್ ಪವಾರ್‌ರನ್ನು ಬಿಟ್ಟರೆ ಸಭೆಗಳಿಗೆ ಬೃಹತ್ ಪ್ರಮಾಣದಲ್ಲಿ ಪ್ರೇಕ್ಷಕರನ್ನು ಆಕರ್ಷಿಸುವುದರಲ್ಲಿ ಥಾಕ್ರೆಯವರು ಬಹಳಷ್ಟು ನಿಸ್ಸೀಮರು.

೬. ಅವರ ಸರ್ವಾಧಿಕಾರ ಮನೋಭಾವ ಇದರಿಂದಾಗಿ ಅನೇಕ ವ್ಯಕ್ತಿಗಳು ಅವರಿಂದ ದೂರ ಸರಿದಿದ್ದಾರೆ. ಪತ್ರಿಕಾಕರ್ತರು ಕೂಡಾ ಅವರನ್ನು ಆದಷ್ಟು ದೂರವಿರಿಸಲು ಶ್ರಮಿಸುತ್ತಾರೆ.

ಯಾವ ಪಕ್ಷವೇ ಆಗಲಿ ಅದು ದ್ವೇಷ ಭಾವನೆಗಳಿಂದ ಹಾಗೆಯೇ ಸರ್ವಾಧಿಕಾರದ ಪ್ರವೃತ್ತಿಗಳಿಂದ ಬೆಳೆದು ಬಂದದ್ದೇ ಆದರೆ ಅದರ ಜೀವತ್ವದ ಕಾಲಕ್ಕೆ ಒಂದು ಮಿತಿ ಇದ್ದೇ ಇರುತ್ತದೆ. ಅದು ಹೆಚ್ಚು ಕಾಲ ಬಾಳುವುದಿಲ್ಲ. ಕಾರಣ ಜನ ಸಾಮಾನ್ಯರು ಅದನ್ನು ಸಹಿಸುವುದಿಲ್ಲ ಎಂಬುದಕ್ಕೆ ಇದೊಂದು ದೃಷ್ಟಾಂತ. ಲೋಕದ ಇತಿಹಾಸದಲ್ಲಿ ಈ ದೃಷ್ಟಾಂತಕ್ಕೆ ಸಮರ್ಥನೆ ನೀಡುವ ನಿದರ್ಶನಗಳು ಬೇಕಾದಷ್ಟು ಇವೆ. ಈ ಹಿನ್ನೆಲೆಯಲ್ಲಿ ಶಿವಸೇನೆಯ ಇಂದಿನ ದುಃಸ್ಥಿತಿಯನ್ನು ನಿಷ್ಪಕ್ಷಪಾತವಾಗಿ ಅವಲೋಕಿಸಿದರೆ ಆ ಕುರಿತು ಯಾರೂ ಆಶ್ಚರ್ಯ ಪಡಬೇಕಾಗಿಲ್ಲ.

ಈ ಎಲ್ಲಾ ನಿರಾಶೆಯ ಪರಿಸ್ಥಿತಿಯಿಂದಾಗಿ ಶಿವಸೇನೆಯ ಭವಿಷ್ಯಕ್ಕೆ ಕರಿಮೋಡಗಳು ಕವಿದಿವೆ. ಇದರ ಪರಿಣಾಮವಾಗಿ ಥಾಕ್ರೆಯವರ ಮರುದಿನದಲ್ಲಿ ಪಕ್ಷವೇ ನಿಸ್ತೇಜನಗೊಳ್ಳುವ, ಅಥವಾ ವಿಭಜನೆ ಹೊಂದುವ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂದು ಮಹಾರಾಷ್ಟ್ರದ ಪ್ರಸಿದ್ಧ ಪತ್ರಿಕೆಯಾದ 'ಲೋಕ ಸತ್ತಾ' ಸಂಪಾದಕರು ತಮ್ಮ ಪತ್ರಿಕೆಯಲ್ಲಿ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು ತಿರುಳಿಲ್ಲದ ಬರೇ ಊಹೆಯೇನಲ್ಲ.

ಏನಿದ್ದರೂ ಯಾವ ಪಕ್ಷವೇ ಆಗಲಿ ಅದು ದ್ವೇಷ ಭಾವನೆಗಳಿಂದ ಹಾಗೆಯೇ ಸರ್ವಾಧಿಕಾರದ ಪ್ರವೃತ್ತಿಗಳಿಂದ ಬೆಳೆದು ಬಂದದ್ದೇ ಆದರೆ ಅದರ ಜೀವತ್ವದ ಕಾಲಕ್ಕೆ ಒಂದು ಮಿತಿ ಇದ್ದೇ ಇರುತ್ತದೆ. ಅದು ಹೆಚ್ಚು ಕಾಲ ಬಾಳುವುದಿಲ್ಲ. ಕಾರಣ ಜನ ಸಾಮಾನ್ಯರು ಅದನ್ನು ಸಹಿಸುವುದಿಲ್ಲ ಎಂಬುದಕ್ಕೆ ಇದೊಂದು ದೃಷ್ಟಾಂತ. ಲೋಕದ ಇತಿಹಾಸದಲ್ಲಿ ಈ ದೃಷ್ಟಾಂತಕ್ಕೆ ಸಮರ್ಥನೆ ನೀಡುವ ನಿದರ್ಶನಗಳು ಬೇಕಾದಷ್ಟು ಇವೆ. ಈ ಹಿನ್ನೆಲೆಯಲ್ಲಿ ಶಿವಸೇನೆಯ ಇಂದಿನ ದುಃಸ್ಥಿತಿಯನ್ನು ನಿಷ್ಪಕ್ಷಪಾತವಾಗಿ ಅವಲೋಕಿಸಿದರೆ ಆ ಕುರಿತು ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. □

ಯಾವುದು ದೇವರ ಸೃಷ್ಟಿ



ಈ ಜಿಜ್ಞಾಸುವಿಗೆ
ಚಿಂತೆ ಏನಪ್ಪಾ ಅಂದರೆ
ಯಾವುದು ದೇವರ ಸೃಷ್ಟಿ
ಯಾವುದಲ್ಲ ಎಂಬುದು

ಒಟ್ಟಾರೆ ಪ್ರಕೃತಿಯೇ ದೇವರು ಅಂದ ಮೇಲೆ
ಅದು ಒಳಗೊಳ್ಳುವುದೆಲ್ಲವೂ
ಒಳ್ಳೆಯದೇ ಇರಬೇಕಲ್ಲ
ಯಾವುದು ತ್ಯಾಜ್ಯ

ಟೀವಿಯನ್ನು ಕುಕ್ಕಿ ಜಜ್ಜಿ ನಾಶ ಮಾಡಿ
ಹೆಣ್ಣಿನ ಉಂಗುಷ್ಟವನ್ನು
ತುರುಬನ್ನು ಮುಚ್ಚಿ
ಸತ್ಯದ ಅಂತರಂಗವನ್ನು ಬಚ್ಚಿಡಬಹುದೇ ?

ಗಾಳಿಯ ತರಂಗಗಳಲ್ಲಿ
ಗಂಡಿನ ಮನಃಪಟಲದಲ್ಲಿ

ತಡೆಯಬಹುದೆ
ಕನಸುಗಳ ಸ್ವೈರವಿಹಾರವನ್ನು

ಇನ್ನೊಬ್ಬ ಸೈತಾನನೆಂದು ಹಿಡಿದು
ಬಡಿಯುವ ಮುನ್ನ
ತನ್ನ ತಾನು ನಿಗ್ರಹಿಸಿದರೆ
ತನು ಬೆಚ್ಚಗೆ ಕಂಪಿಸುವುದು

ಆಗ ಟೀವಿಯೂ, ಹೆಂಗಸೂ
ದೇವರ ಸೃಷ್ಟಿಯಾಗಿ ಕಂಗೊಳಿಸುವರು
ಕಾಮದ ತುಕ್ಕು ಹಿಡಿದ ಮನಕ್ಕೆ
ಪರುಷದ ಸ್ಪರ್ಶ ಸಿಕ್ಕಿ ವ್ಯಸನ ಇಂಗುವುದು

○ ಮೂಡ್ನಾಕೂಡು ಚಿನ್ನಸ್ವಾಮಿ

ನೆನಪು

''ನನಗೆ 'ಡಿಫೆನ್ಸ್' ಕೋರಿ ತಪ್ಪು ಮಾಡಿದ್ದೀರಿ''

- ಶಾಹಿದ್ ಭಗತ್‌ಸಿಂಗ್ ತಂದೆಗೆ ಬರೆದ ಪತ್ರ

೧೯೩೦ ಸೆಪ್ಟೆಂಬರ್‌ನಲ್ಲಿ ಭಗತ್‌ಸಿಂಗರಿಗೆ ಮರಣ ಶಿಕ್ಷೆ ವಿಧಿಸುತ್ತಾರೆಂದು ತಿಳಿದ ನಂತರ ಅವರ ತಂದೆ ಸರ್ದಾರ್ ಕಿಷನ್‌ಸಿಂಗ್ ಶಿಕ್ಷೆ ತಪ್ಪಿಸಲು ಕಾನೂನು ಬದ್ಧವಾದ ದಾರಿಗಳನ್ನು ಅನ್ವೇಷಿಸುತ್ತಿರುತ್ತಾರೆ. ಭಗತ್‌ಸಿಂಗರಿಗೆ ಇದು ಇಷ್ಟವಿರುವುದಿಲ್ಲ. ಸರ್ಕಾರವು ಡಿಫೆನ್ಸ್ ನ್ಯಾಯವಾದಿಯನ್ನು ಏರ್ಪಾಟು ಮಾಡುತ್ತೇನೆ ಎಂದರೂ ಅವರು ತಿರಸ್ಕರಿಸಿರುತ್ತಾರೆ. ತಂದೆಯ ಪ್ರಯತ್ನಗಳನ್ನು ತಿಳಿದು ಹೀಗೆ ಬರೆದಿದ್ದಾರೆ.

....ನನ್ನ ಡಿಫೆನ್ಸ್‌ಗಾಗಿ ನೀವು ಸ್ಪೆಷಲ್ ಟ್ರಿಬುನಲ್‌ಗೆ ಪಿಟಿಶನ್ ಹಾಕಿದ್ದೀರೆಂದು ತಿಳಿದು ದಿಗ್ಭ್ರಾಂತಿಗೆ ಒಳಗಾಗಿದ್ದೇನೆ. ಆ ಕೆಲಸ ನನ್ನನ್ನು ಬಾಧಿಸಿದೆ. ನನ್ನ ಮಾನಸಿಕ ಸಂತುಲನೆಗೆ ಅದು ಪೂರ್ತಿಯಾಗಿ ಹೊಡೆತ ನೀಡಿದೆ. ಈ ಹಂತದಲ್ಲಿ ಆ ಪಿಟಿಶನನ್ನು ದಾಖಲು ಮಾಡುವುದು ಸರಿಯಾದದ್ದೆಂದು ನೀವು ಹೇಗೆ ಅಂದುಕೊಂಡಿದ್ದೀರೋ ಅರ್ಥ ಮಾಡಿಕೊಳ್ಳಲಾಗುತ್ತಿಲ್ಲ. ತಂದೆ ಎಂದು ನಿಮ್ಮ ಮೇಲೆ ಭಕ್ತಿ ಗೌರವವು ಇದೆ. ಆದರೂ ಸಹ, ಕನಿಷ್ಠ ನನ್ನನ್ನು ಒಂದು ಮಾತೂ ಕೇಳದೆ ನನ್ನ ಪರವಾಗಿ ಆ ರೀತಿಯ ನಿರ್ಣಯ ತೆಗೆದುಕೊಳ್ಳುವ ಅಧಿಕಾರ ನಿಮಗೆ ಇಲ್ಲವೆಂದು ಸ್ಪಷ್ಟ ಪಡಿಸುತ್ತಿದ್ದೇನೆ. ರಾಜಕೀಯ ರಂಗದಲ್ಲಿ ನನ್ನ ಅಭಿಪ್ರಾಯ ನಿಮ್ಮ ಅಭಿಪ್ರಾಯ ಒಂದೇ ಅಲ್ಲವೆಂಬ ವಿಷಯ ನಿಮಗೂ ಗೊತ್ತು. ನಿಮ್ಮ ಅನುಮತಿಯನ್ನು ನಿರಾಕರಣೆಯನ್ನು ನಾನು ಎಂದೂ ಕೇಳದೆ ಸ್ವತಂತ್ರವಾಗೇ ವ್ಯವಹರಿಸುತ್ತೇನೆ.

ಅಪ್ಪಾಜಿಯವರೇ, ನಿಮ್ಮ ಕಾರ್ಯವನ್ನು ತಪ್ಪೆಂದು ವಿಮರ್ಶಿಸುತ್ತಿರುವಾಗ ಸಭ್ಯತೆ ಮರ್ಯಾದೆಯನ್ನು ಸಹ ಪಾಲಿಸಲಿಲ್ಲವೇನೋ ಎಂದು, ನನ್ನ ಭಾಷೆಯಲ್ಲಿ ಒಂದಷ್ಟು ಪೌರುಷ ಇಣುಕದೇ ಇರುವುದಿಲ್ಲವೇನೋ ಎಂದು ಭಯಪಡುತ್ತಿರುವೆನು. ನಿಮ್ಮ ಶ್ರಮ ನನ್ನ ಬೆನ್ನಿಗೆ ಚಾಕುವಿನಿಂದ ಇರಿದ ಹಾಗೆ ಅನಿಸುತ್ತಿದೆ. ಬೇರೆ ಯಾರಾದರೂ ಆ ರೀತಿಯ ಕೆಲಸ ಮಾಡಿದಿದ್ದರೆ ದ್ರೋಹಪೂರಿತ ಕ್ರಮವಾಗೇ ಪರಿಗಣಿಸುತ್ತಿದ್ದೆನು.

ಕೇಸಿಗೆ ವಿರುದ್ಧವಾಗಿ ಹೋರಾಡೆಂದು, ನಿನ್ನನ್ನು ನೀನು ರಕ್ಷಿಸಿಕೊಳ್ಳೆಂದು ನೀವು ನನ್ನನ್ನು ಒಪ್ಪಿಸಲು ಪ್ರಯತ್ನಿಸುತ್ತಲೇ ಇರುವ ವಿಷಯವನ್ನು ಗುರುತು ಮಾಡಿಕೊಳ್ಳಿರಿ. ನನ್ನನ್ನು ನಾನು ರಕ್ಷಿಸಿಕೊಳ್ಳಬೇಕೆಂಬ ಅಭಿಲಾಷೆ ನನಗೆಂದೂ ಇಲ್ಲ. ನನ್ನದು ಒಂದು ರೂಪುರೇಶವಿಲ್ಲದ ಸಿದ್ಧಾಂತವೇ ? ಅಥವಾ ನನ್ನ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳಲು ನನ್ನ ವಾದಗಳು ನನಗೆ ಬೇರೆ ಇವೆಯೇ ? ಎನ್ನುವುದು ಬೇರೆ ವಿಷಯ. ಅಪ್ಪಾಜಿಯವರೇ, ನಿಮ್ಮ ಕಾರ್ಯವನ್ನು ತಪ್ಪೆಂದು ವಿಮರ್ಶಿಸುತ್ತಿರುವಾಗ ಸಭ್ಯತೆ ಮರ್ಯಾದೆಯನ್ನು ಸಹ ಪಾಲಿಸಲಿಲ್ಲವೇನೋ ಎಂದು, ನನ್ನ ಭಾಷೆಯಲ್ಲಿ ಒಂದಷ್ಟು ಪೌರುಷ ಇಣುಕದೇ ಇರುವುದಿಲ್ಲವೇನೋ ಎಂದು ಭಯಪಡುತ್ತಿರುವೆನು. ನಿಮ್ಮ ಶ್ರಮ ನನ್ನ ಬೆನ್ನಿಗೆ ಚಾಕುವಿನಿಂದ ಇರಿದ ಹಾಗೆ ಅನಿಸುತ್ತಿದೆ. ಬೇರೆ ಯಾರಾದರೂ ಆ ರೀತಿಯ ಕೆಲಸ ಮಾಡಿದಿದ್ದರೆ ದ್ರೋಹಪೂರಿತ ಕ್ರಮವಾಗೇ ಪರಿಗಣಿಸುತ್ತಿದ್ದೆನು.

ಪ್ರತಿಯೊಬ್ಬರೂ ತಮ್ಮ ದೇಶಭಕ್ತಿಯನ್ನು ಪರೀಕ್ಷೆಗೆ ಇಡಬೇಕಾದ ಸಮಯವಿದು. ಅಪ್ಪಾಜಿಯವರೇ... ಈ ವಿಷಯದಲ್ಲಿ ನೀವು ವಿಫಲವಾಗಿದ್ದೀರಿ. ನೀವು ದೊಡ್ಡ ದೇಶಭಕ್ತರೆಂದು ನನಗೆ ಗೊತ್ತು. ಆ ರೀತಿಯವರಾದ ನೀವು ಈ ಕ್ಷಣದಲ್ಲಿ ಏಕೆ ಈ ಮನೋದೌರ್ಬಲ್ಯವನ್ನು ಪ್ರದರ್ಶಿಸುತ್ತಿದ್ದೀರೋ ಅರ್ಥಮಾಡಿಕೊಳ್ಳದೇ ಹೋಗುತ್ತಿದ್ದೇನೆ.

ಅಂತಿಮವಾಗಿ ನಿಮಗೂ, ನನ್ನ ಕೇಸಿನ ಬಗ್ಗೆ ಆಸಕ್ತಿ ತೋರಿಸುತ್ತಿರುವ ಮಿತ್ರರಿಗೂ, ಸಕಲ ಜನತೆಗೂ ಒಂದು ವಿಷಯ ತಿಳಿಸುತ್ತಿದ್ದೇನೆ. ನಿಮ್ಮ ಕ್ರಮವನ್ನು ನಾನು ತಿರಸ್ಕರಿಸುತ್ತಿದ್ದೇನೆ. ಡಿಫೆನ್ಸ್‌ಗೆ ವ್ಯವಸ್ಥೆ ಮಾಡಿಕೊಳ್ಳುವುದು ಇಂದಿಗೂ ನನಗೆ ಸಮ್ಮತವಿಲ್ಲ ಎಂದು ಸ್ಪಷ್ಟಪಡಿಸುತ್ತಿದ್ದೇನೆ. ನನ್ನ ಸಹ ಆರೋಪಿಗಳು ಡಿಫೆನ್ಸ್ ಕೋರಿ ದಾಖಲಿಸಿದ ವಿಜ್ಞಾಪ್ತಿಯನ್ನು ನ್ಯಾಯಸ್ಥಾನ ಅನುಮೋದಿಸಿದರೂ ಸರಿ; ನನ್ನನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡುವುದಿಲ್ಲ. ನಿರಾಹಾರ ದೀಕ್ಷೆ (ಉಪವಾಸ ಮುಷ್ಕರ) ಸಮಯದಲ್ಲಿ ನಾನು ನೀಡಿದ ಸಂದರ್ಶನಕ್ಕೆ ಸಂಬಂಧಿಸಿ ಟ್ರಿಬುನಲ್‌ಗೆ ನಾನು ದಾಖಲಿಸಿಕೊಂಡ ದರಖಾಸ್ತುಗೆ ಅಪಾರ್ಥವನ್ನು ಆಪಾದಿಸಿದ್ದಾರೆ. ನಾನು ಡಿಫೆನ್ಸ್‌ಗೆ ಯಾವತ್ತು ಆಶಿಸದೇ ಇದ್ದರೂ ಪತ್ರಿಕೆಗಳು ನಾನು ಡಿಫೆನ್ಸ್ ಕೋರುತ್ತಿರುವುದಾಗಿ ಬರೆದಿವೆ. ನನ್ನ ಸಂಕಲ್ಪದಲ್ಲಿ ಬದಲಾವಣೆ ಇಲ್ಲ. ಬೋಸ್ಟೆಲ್ ಜೈಲಿನಲ್ಲಿ ಇರುವ ನನ್ನ ಮಿತ್ರರು ಇದನ್ನು ತಮ್ಮ ಬಗ್ಗೆ ನಂಬಿಕೆ ದ್ರೋಹವಾಗಿ ಭಾವಿಸುತ್ತಿದ್ದಾರೆ. ನನ್ನ ವೈಖರಿಯನ್ನು ಅವರಿಗೆ ಸ್ಪಷ್ಟಮಾಡುವ ಅವಕಾಶವೂ ನನಗೆ ಲಭಿಸಲಿಲ್ಲ.

ಟ್ರಿಬುನಲ್‌ಗೆ ನಾನು ಮಾಡಿಕೊಂಡ ದರಖಾಸ್ತು ಕುರಿತು ಸಂಪೂರ್ಣ ವಾಸ್ತವ ಅಂಶ ಪ್ರಜೆಗಳಿಗೆ ತಿಳಿಯಬೇಕೆಂದು ಆಶಿಸುತ್ತಿದ್ದೇನೆ. ಆದ್ದರಿಂದ ಈ ಪತ್ರವನ್ನು ಪ್ರಕಟಿಸಬೇಕೆಂದು ಅಭ್ಯರ್ಥಿಸುತ್ತಿದ್ದೇನೆ.

ಇಂಕ್ವಿಲಾಬ್ ಜಿಂದಾಬಾದ್ !

ಸಾಮ್ರಾಜ್ಯವಾದ ನಶಿಸಲಿ !!

(ಸೌಜನ್ಯ : ವಾರ್ತಾ)

....ನನ್ನ ಡಿಫೆನ್ಸ್‌ಗಾಗಿ ನೀವು ಸ್ಪೆಷಲ್ ಟ್ರಿಬುನಲ್‌ಗೆ ಪಿಟಿಶನ್ ಹಾಕಿದ್ದೀರೆಂದು ತಿಳಿದು ದಿಗ್ಭ್ರಾಂತಿಗೆ ಒಳಗಾಗಿದ್ದೇನೆ. ಆ ಕೆಲಸ ನನ್ನನ್ನು ಬಾಧಿಸಿದೆ. ನನ್ನ ಮಾನಸಿಕ ಸಂತುಲನೆಗೆ ಅದು ಪೂರ್ತಿಯಾಗಿ ಹೊಡೆತ ನೀಡಿದೆ. ಈ ಹಂತದಲ್ಲಿ ಆ ಪಿಟಿಶನನ್ನು ದಾಖಲು ಮಾಡುವುದು ಸರಿಯಾದದ್ದೆಂದು ನೀವು ಹೇಗೆ ಅಂದುಕೊಂಡಿದ್ದೀರೋ ಅರ್ಥ ಮಾಡಿಕೊಳ್ಳಲಾಗುತ್ತಿಲ್ಲ. ತಂದೆ ಎಂದು ನಿಮ್ಮ ಮೇಲೆ ಭಕ್ತಿ ಗೌರವವು ಇದೆ. ಆದರೂ ಸಹ, ಕನಿಷ್ಠ ನನ್ನನ್ನು ಒಂದು ಮಾತೂ ಕೇಳದೆ ನನ್ನ ಪರವಾಗಿ ಆ ರೀತಿಯ ನಿರ್ಣಯ ತೆಗೆದುಕೊಳ್ಳುವ ಅಧಿಕಾರ ನಿಮಗೆ ಇಲ್ಲವೆಂದು ಸ್ಪಷ್ಟ ಪಡಿಸುತ್ತಿದ್ದೇನೆ.

ಅನುವಾದ :
○ ಮನೋಹರ

ಜಾತಿ ಗಣರಾಜ್ಯಗಳ ರಾಜಕಾರಣ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ದಲಿತ್ ಡೈರಿ

ಭಾರತೀಯ ಗಣರಾಜ್ಯವು ಈಗ ಜಾತಿ ಗಣರಾಜ್ಯಗಳ ತೀವ್ರ ಸವಾಲನ್ನು ಎದುರಿಸಬೇಕಾಗಿದೆ. ಭಾರತೀಯ ಸಮಾಜದಲ್ಲಿ ದಲಿತರು ಮತ್ತು ಆದಿವಾಸಿಗಳು ತಮ್ಮ ಜಾತಿ ಸಂಘಟನೆಯ ಮೂಲಕ ತಮ್ಮ ಸಂವಿಧಾನಾತ್ಮಕ ಪಾಲನ್ನು ಪಡೆಯಬಹುದಾಗಿದೆ. ಆದರೆ ಪ್ರಧಾನ ಜಾತಿಗಳ ಯಶಸ್ವಿ ಸಂಘಟನೆಯಿಂದಾಗಿ ಭಾರತೀಯ ಗಣರಾಜ್ಯದ ಆದರ್ಶಗಳ ವಿರುದ್ಧವಾಗಿ ದಲಿತರನ್ನು ಮತ್ತು ಆದಿವಾಸಿಗಳನ್ನು ಅಂಚಿಗೆ ಸರಿಸಲಾಗುತ್ತಿದೆ.

❍ ಅನು : ಡಿ. ಡೊಮಿನಿಕ್

ರಾಜ್ಯದ ಸಂಯುಕ್ತ ಸರ್ಕಾರಕ್ಕೆ ತೊಂದರೆ ಉಂಟುಮಾಡಬಹುದೆಂಬ ಭಯದಿಂದ, ಕಾಂಗ್ರೆಸ್ ಪಕ್ಷ ಎಸ್.ಎಂ.ಕೃಷ್ಣನನ್ನು ಮಹಾರಾಷ್ಟ್ರದ ಗೌರ್‍ನರ್‌ರನ್ನಾಗಿ ಗಡೀಪಾರು ಮಾಡಿತು. ಅಂದರೆ ಕೃಷ್ಣ ಕಾಂಗ್ರೆಸ್ಸಿಗೆ ಬಹುಮತವನ್ನು ತಂದುಕೊಡುವಲ್ಲಿ ಸೋತಿದ್ದರು.

ತಾಂತ್ರಿಕವಾಗಿ ಹೇಳುವುದಾದರೆ ಸುಶೀಲ್‌ಕುಮಾರ್ ಸಿಂಧೆ ನೇತೃತ್ವದಲ್ಲಿ ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಯನ್ನು ಎದುರಿಸಲಾಯಿತು. ಕಾಂಗ್ರೆಸ್ - ಎನ್‌ಸಿಪಿಯ ಸಂಯುಕ್ತ ಸರ್ಕಾರವು ಅಧಿಕಾರವನ್ನು ಕಳೆದುಕೊಂಡಿದ್ದೇ ಆದಲ್ಲಿ ಆತನನ್ನು ಇತರೆ ರಾಜ್ಯದ ಗೌರ್‍ನರ್‌ರನ್ನಾಗಿ ಮಾಡಬಹುದಾಗಿತ್ತು. ವೈರುಧ್ಯವೆಂದರೆ ಕಾಂಗ್ರೆಸ್-ಎನ್‌ಸಿಪಿ ಮೈತ್ರಿಯು ಮಹಾರಾಷ್ಟ್ರದಲ್ಲಿ ಅಧಿಕಾರವನ್ನು ಪಡೆದಿದ್ದರೂ ಸಹ ಶ್ರೀ ಸಿಂಧೆಯವರನ್ನು ಆಂಧ್ರಪ್ರದೇಶದ ಗೌರ್‍ನರ್‌ರನ್ನಾಗಿ ಮಾಡಲಾಯಿತು. ಸಂಯುಕ್ತ ಸರ್ಕಾರದ ನಾಯಕತ್ವವನ್ನು ಗೆಲುವಿನ ಹೊರತಾಗಿಯೂ ಸಹ ಎಷ್ಟು ಬಾರಿ ಬದಲಾಯಿಸಲಾಯಿತೆಂಬುದನ್ನು ಚುನಾವಣಾ ಪಂಡಿತರೇ ಹೇಳಬೇಕು.

ಇಂತಹ ದುರಂತಮಯ ಸಂದರ್ಭಕ್ಕೆ ಒಬ್ಬ ಕಾಂಗ್ರೆಸ್ಸಿಗನು ಅಂತಹದ್ದೇ ವಿವರಣೆಯೊಂದನ್ನು ನೀಡಿದ್ದ. ಆತನ ಪ್ರಕಾರ ಸಿಂಧೆಯನ್ನು ತ್ಯಾಗ ಮಾಡದ ಹೊರತು ಹಾಗೂ ಒಬ್ಬ ಮರಾಠ ನಾಯಕನನ್ನು ಮುಖ್ಯಮಂತ್ರಿಯನ್ನಾಗಿ ಮಾಡದಿದ್ದಲ್ಲಿ ಕಾಂಗ್ರೆಸ್ ಪಕ್ಷವು ನೇರವಾದ ಬಿಕ್ಕಟ್ಟನ್ನು ಎದುರಿಸಬೇಕಾಗಿತ್ತು. ಅಲ್ಲದೆ ಮರಾಠ ಎಂಎಲ್‌ಎಗಳು ಎನ್‌ಸಿಪಿ ಅಥವಾ ತನ್ನದೇ ಆದ ಒಂದು ಗುಂಪನ್ನು ಮಾಡಿಕೊಂಡು ಮರಾಠೇತರನೊಬ್ಬ ಮುಖ್ಯಮಂತ್ರಿಯಾಗುವುದನ್ನು ತಡೆಯಲಾಗುತ್ತಿತ್ತು.

ಹೀಗಿದ್ದಾಗ್ಯೂ ಮರಾಠ ರಾಜಕಾರಣಿಯಾದ ಶರದ್ ಪವಾರ್ ಹಿಂದಿನ ಕಾಂಗ್ರೆಸ್ಸಿನ ನಾಯಕತ್ವ ವಹಿಸಿದ್ದ ದೇಶ್ ಮುಖ್ ಅವರ ನಾಯಕತ್ವವನ್ನು ತೆಗೆಯುವುದರಲ್ಲಿ ಪ್ರಧಾನ ಪಾತ್ರ ವಹಿಸಿದ್ದರೆಂದು ಕಾಂಗ್ರೆಸ್ಸಿನ ವೀಕ್ಷಕರೇ ಹೇಳುತ್ತಾರೆ. ಆಗ ಶ್ರೀ ಸಿಂಧೆಯನ್ನು ಮುಖ್ಯಮಂತ್ರಿಯನ್ನಾಗಿ ಮಾಡುವ ಕಾಂಗ್ರೆಸ್ ನಿರ್ಧಾರವನ್ನು ಶರದ್ ಪವಾರ್ ಬೆಂಬಲಿಸಿದ್ದ. ಈ ಘಟನೆಯ ನೀತಿಯೆಂದರೆ ಕಾಂಗ್ರೆಸ್ ಪಕ್ಷವು ಮೂಲತಃ ಮರಾಠ ಕೂಗಿಗೆ ಒಂದು ವೇದಿಕೆಯಾಗಿದೆಯಷ್ಟೆ. ಶರದ್ ಪವಾರ್ ಕಾಂಗ್ರೆಸ್‌ನಿಂದ ದೂರವಾದಾಗ ಮರಾಠ ಮತಗಳಿಗಾಗಿ ಸೆಣಸಾಟ ಆರಂಭವಾಗಿತ್ತು.

ಮರಾಠೇತರ ಮುಖ್ಯಮಂತ್ರಿಯೊಡನೆ ಕಾಂಗ್ರೆಸ್ ಪಕ್ಷವು ಮುಂದುವರೆದಿದ್ದೇ ಆದಲ್ಲಿ ಎನ್‌ಸಿಪಿಯು ಮರಾಠ ಕೇಂದ್ರವನ್ನು ಕಾಂಗ್ರೆಸ್‌ನಿಂದ ಕಸಿದುಕೊಳ್ಳುತ್ತಿತ್ತು.

ಈ ಹಿಂದೆ ಸೋನಿಯಾ ಗಾಂಧಿ ಪ್ರಧಾನಮಂತ್ರಿ ಪದವಿಯನ್ನು ತ್ಯಾಗ ಮಾಡುವ ಮೂಲಕ ಮಾದರಿಯೊಂದನ್ನು ಸ್ಥಾಪಿಸಿದ್ದರು. ಹಾಗೆಯೇ ಕಾಂಗ್ರೆಸ್ಸಿನ ಹಿತಾಸಕ್ತಿಗಾಗಿ ಮಹಾರಾಷ್ಟ್ರದಲ್ಲಿ ಮತ್ತೊಂದು ತ್ಯಾಗವನ್ನು ಮಾಡಬೇಕಾಗಿತ್ತು. ಶ್ರೀ ದೇಶ್‌ಮುಖ್ ನಿಸ್ತೇಜನೆಂಬ ಕಾರಣಕ್ಕಾಗಿ ನಾಯಕತ್ವದಿಂದ ತೆಗೆಯಲಾಗಿತ್ತು. ಆದರೆ ಈಗ ಆತ ಶಕ್ತಿಶಾಲಿ ನಾಯಕನಾಗಿ ಹೊರಹೊಮ್ಮುವ ಮೂಲಕ ಮುಖ್ಯಮಂತ್ರಿ ಪದವಿಯನ್ನು ಅಲಂಕರಿಸಿದ್ದ. ಹೀಗೆ ಮಾಡುವುದರ ಮೂಲಕ ಶರದ್ ಪವಾರ್‌ನನ್ನು ಸೋಲಿಸಲಾಯಿತು. ಆತ ಒಬ್ಬ ಮರಾಠನೇ ಆದ ಆರ್.ಆರ್. ಪಾಟೀಲ್‌ನನ್ನು ಉಪಮುಖ್ಯಮಂತ್ರಿಯ ಹುದ್ದೆಗೆ ನೇಮಿಸಿದ್ದ. ಒಟ್ಟಿನಲ್ಲಿ ಮಹಾರಾಷ್ಟ್ರವು ಮರಾಠ ಗಣರಾಜ್ಯವಾಗಿದೆ. ಆದ್ದರಿಂದ ಅಲ್ಲಿ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳಿಬ್ಬರೂ ಸಹ ಮರಾಠರೇ ಆಗಿರಬೇಕು.

ಇದಕ್ಕೆ ಮತ್ತೊಂದು ಕ್ಲಾಸಿಕಲ್ ಉದಾಹರಣೆಯೆಂದರೆ ಆಂಧ್ರಪ್ರದೇಶವಾಗಿದೆ. ಕಾಂಗ್ರೆಸ್ ಟಿಡಿಪಿಯನ್ನು ಅಧಿಕಾರದಿಂದ ಹೊರದಬ್ಬಿತಾದರೂ ಸಾಮಾಜಿಕವಾಗಿ ರೆಡ್ಡಿಗಳು, ಕಮ್ಮಾ ಜಾತಿಯವರನ್ನು ಬದಲಾಯಿಸಿದ್ದರು. ಅಂದರೆ ಆಂಧ್ರ ಪ್ರದೇಶ ಗಣರಾಜ್ಯವು ರೆಡ್ಡಿ ಅಥವಾ ಕಮ್ಮಗಳಿಗೆ ಮಾತ್ರ ಸೇರಿದ್ದಾಗಿದೆ. ಹಾಗೇನಾದರೂ ತೃತೀಯ ಜಾತಿಯು ಅಂತಹದ್ದೇ ಗಣರಾಜ್ಯವನ್ನು ಹೊಂದಬೇಕಾದರೆ ತನ್ನ ಶಕ್ತಿಯನ್ನು ಪ್ರದರ್ಶಿಸಬೇಕು, ಇಲ್ಲವೇ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಮುಂದಿಡಬೇಕು.

ಟಿಆರ್‌ಎಸ್ ಇದಕ್ಕೊಂದು ಸೂಕ್ತ ಉದಾಹರಣೆ. ಹಾಗೆಯೇ ಹೊಸದಾಗಿ ಸೃಷ್ಟಿಸಲಾದ ಉತ್ತರಾಂಚಲ್ ರಾಜ್ಯವು ಬ್ರಾಹ್ಮಣರ ಗಣರಾಜ್ಯವಾಗಿದೆ. ತಮಿಳುನಾಡಿನಲ್ಲಿ ರಾಮದಾಸ್‌ನ ಪಿಎಂಕೆಯು ವನ್ನಿಯಾರ್‌ಗಳ ಬಹುಸಂಖ್ಯಾತ ಜಿಲ್ಲೆಗಳನ್ನು ಹೊಸ ರಾಜ್ಯವನ್ನಾಗಿ ಮಾಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿತ್ತು. ಉತ್ತರ ತಮಿಳುನಾಡು ವನ್ನಿಯಾರ್ ಜಾತಿಯ ಪ್ರಮುಖ ನೆಲೆಯಾಗಿದ್ದರೂ ಸಹ ಪ್ರತ್ಯೇಕ ರಾಜ್ಯವನ್ನು ಹೊಂದಲಾಗಿಲ್ಲ. ಹಾಗೇನಾದರೂ ಉತ್ತರ ತಮಿಳುನಾಡು ಪ್ರತ್ಯೇಕಗೊಂಡಲ್ಲಿ ಅದೂ ಸಹ ವನ್ನಿಯಾರ್‌ಗಳ ಗಣರಾಜ್ಯವಾಗುತ್ತದೆ.

ಮಧ್ಯಪ್ರದೇಶದಲ್ಲಿ ಉಮಾಭಾರತಿಯನ್ನು ಮುಖ್ಯಸ್ಥಳನ್ನಾಗಿ ಮಾಡುವ ಮೂಲಕ ಬಿಜೆಪಿಯು ಅದನ್ನು ಲೋಧಿಗಳ ಗಣರಾಜ್ಯವನ್ನಾಗಿ ಮಾಡಿತ್ತು. ಅಲ್ಲದೆ ರಾಜಸ್ಥಾನದಲ್ಲಿ ರಾಜ್‌ಪುತಾನಿಯನ್ನು ಪ್ರೋತ್ಸಾಹಿಸಲಾಯಿತು. ಅಂದರೆ ರಾಜಸ್ಥಾನವು ರಾಜ್‌ಪೂತ್ ಗಣರಾಜ್ಯವಾಗಿದೆ. ಉಮಾಭಾರತಿಯ ನಿರ್ಗಮನದ ನಂತರ ಬಿಜೆಪಿಯು ಯಾದವನಾದ ಬಾಬುಲಾಲ್ ಗೌರ್‌ನನ್ನು ರಾಜ್ಯದ ಮುಖ್ಯಸ್ಥನನ್ನಾಗಿ ಅಧಿಕಾರಕ್ಕೆ ತಂದಿತು. ಅಂದರೆ ಮಧ್ಯ ಪ್ರದೇಶವು ಒಬಿಸಿಗಳ ಗಣರಾಜ್ಯವೆಂದೇ ಪರಿಗಣಿಸಬೇಕು. ಬಿಹಾರಕ್ಕಾಗಿ ನಡೆದ ಯುದ್ಧದಲ್ಲಿ ಎನ್‌ಡಿಎಯು ನಿತೀಶ್‌ಕುಮಾರ್‌ನನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಸೂಚಿಸಿದೆ. ಬಿಹಾರವು ಪ್ರಧಾನವಾಗಿ ಎರಡು ಪ್ರಬಲ ಒಬಿಸಿ ಜಾತಿಗಳಾದ

ಯಾದವರು ಮತ್ತು ಕುರ್ಮಿಗಳಿಂದ ಪ್ರತಿನಿಧಿತವಾಗಿದೆ. ಇದೀಗ ಯಾದವ ಗಣರಾಜ್ಯವು ಭಯಗ್ರಸ್ತವಾಗಿದೆ. ಈ ಬೆಳವಣಿಗೆ ಕುರ್ಮಿಗಳ ಗಣರಾಜ್ಯ ಎದ್ದು ನಿಲ್ಲಲು ದಾರಿಯಾಗಬಹುದು. ಹಾಗೆಯೇ ಪಂಜಾಬ್ ಸಹ ಜಾಟ್ ಮತ್ತು ಸಿಖ್ ರಾಜ್ಯವಾಗಿದ್ದು , ಹರಿಯಾಣವು ಜಾಟ್ ಗಣರಾಜ್ಯವಾಗಿದೆ.

ಹಾಗಾದರೆ ದಲಿತ ಗಣರಾಜ್ಯವೇನಾದರೂ ಇದೆಯಾ? ತುಂಬಾ ಹಿಂದೆ ೧೯೬೨ರಲ್ಲಿ ಆಂಧ್ರ ಪ್ರದೇಶದಲ್ಲಿ ಮುಖ್ಯಮಂತ್ರಿಯಾಗಿ ಒಬ್ಬ ಶ್ರೇಷ್ಠ ದಲಿತ ನಾಯಕನಾದ ದಾಮೋದರಂ ಸಂಜೀವಯ್ಯನನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಾಗಿತ್ತು. ಹಾಗೆಯೇ ಬಿಹಾರದಲ್ಲಿ ದಿವಂಗತ ಫೋಳ ಪಾಸ್ವಾನ್ ಶಾಸ್ತ್ರಿಯು ದಲಿತನಾಗಿಯೂ ಸಹ ಮೂರು ಬಾರಿ ೧೯೬೮, ೧೯೬೯ ಮತ್ತು ೧೯೭೧ರಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿ ಹೊರ ಹೊಮ್ಮಿದ್ದ. ಅಲ್ಲದೆ ೧೯೭೯ರಲ್ಲಿ ರಾಮ್ ಸುಂದರ್‌ದಾಸ್ ಎಂಬ ದಲಿತನೂ ಸಹ ಬಿಹಾರದ ಮುಖ್ಯಮಂತ್ರಿಯಾಗಿದ್ದ. ಮಾಯಾವತಿಯೂ ಸಹ ಮುಖ್ಯಮಂತ್ರಿಯಾಗಿ ಬಂದರೂ ಆಕೆ ಬಿಜೆಪಿಯ ಜೊತೆ ಕೈ ಜೋಡಿಸಬೇಕಾಗಿತ್ತು.

ಅಂದರೆ ಭಾರತೀಯ ಗಣರಾಜ್ಯವು ಈ ಜಾತಿ ಗಣರಾಜ್ಯಗಳ ತೀವ್ರ ಸವಾಲನ್ನು ಎದುರಿಸಬೇಕಾಗಿದೆ. ಭಾರತೀಯ ಸಮಾಜದಲ್ಲಿ ದಲಿತರು ಮತ್ತು ಆದಿವಾಸಿಗಳು ತಮ್ಮ ಜಾತಿ ಸಂಘಟನೆಯ ಮೂಲಕ ತಮ್ಮ ಸಂವಿಧಾನಾತ್ಮಕ ಪಾಲನ್ನು ಪಡೆಯಬಹುದಾಗಿದೆ. ಆದರೆ ಪ್ರಧಾನ ಜಾತಿಗಳ ಯಶಸ್ವಿ ಸಂಘಟನೆಯಿಂದಾಗಿ ಭಾರತೀಯ ಗಣರಾಜ್ಯದ ಆದರ್ಶಗಳ ವಿರುದ್ಧವಾಗಿ ದಲಿತರನ್ನು ಮತ್ತು ಆದಿವಾಸಿ ಗಳನ್ನು ಅಂಚಿಗೆ ಸರಿಸಲಾಗುತ್ತಿದೆ.

> ಮಧ್ಯಪ್ರದೇಶದಲ್ಲಿ ಉಮಾಭಾರತಿಯನ್ನು ಮುಖ್ಯಸ್ಥಳನ್ನಾಗಿ ಮಾಡುವ ಮೂಲಕ ಬಿಜೆಪಿಯು ಅದನ್ನು ಲೋಧಿಗಳ ಗಣರಾಜ್ಯವನ್ನಾಗಿ ಮಾಡಿತ್ತು. ಅಲ್ಲದೆ ರಾಜಸ್ಥಾನದಲ್ಲಿ ರಾಜ್‌ಪುತಾನಿಯನ್ನು ಪ್ರೋತ್ಸಾಹಿಸಲಾಯಿತು. ಅಂದರೆ ರಾಜಸ್ಥಾನವು ರಾಜ್‌ಪೂತ್ ಗಣರಾಜ್ಯವಾಗಿದೆ. ಬಿಹಾರಕ್ಕಾಗಿ ನಡೆದ ಯುದ್ಧದಲ್ಲಿ ಎನ್‌ಡಿಎಯು ನಿತೀಶ್‌ಕುಮಾರ್‌ನನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಸೂಚಿಸಿದೆ. ಬಿಹಾರವು ಪ್ರಧಾನವಾಗಿ ಎರಡು ಪ್ರಬಲ ಓಬಿಸಿ ಜಾತಿಗಳಾದ ಯಾದವರು ಮತ್ತು ಕುರ್ಮಿಗಳಿಂದ ಪ್ರತಿನಿಧಿತವಾಗಿದೆ. ಹಾಗೆಯೇ ಪಂಜಾಬ್ ಸಹ ಜಾಟ್ ಮತ್ತು ಸಿಖ್ ರಾಜ್ಯವಾಗಿದ್ದು, ಹರಿಯಾಣವು ಜಾಟ್ ಗಣರಾಜ್ಯವಾಗಿದೆ. ಹಾಗಾದರೆ ದಲಿತ ಗಣರಾಜ್ಯವೇನಾದರೂ ಇದೆಯಾ ?

ಹೆಚ್.ಡಿ. ದೇವೇಗೌಡರು ಕರ್ನಾಟಕದ ಮುಖ್ಯಮಂತ್ರಿ ಮತ್ತು ದೇಶದ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದವರು. ಆದರೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವರು ಆಯ್ದುಕೊಂಡ ಕ್ಷೇತ್ರ ಹಾಸನ. ಗುಲ್ಬರ್ಗ ಅಲ್ಲ, ಶೇ.೩೫ ರಷ್ಟು ಒಕ್ಕಲಿಗರು ಅಲ್ಲಿದ್ದಾರೆಂದು ತಾನೆ ? ಅಲ್ಲದೆ ದೇವೇಗೌಡರು ಅದೇ ಜಾತಿಗೆ ಸೇರಿದವರಾಗಿದ್ದಾರಲ್ಲವೇ ? ದಕ್ಷಿಣ ಕರ್ನಾಟಕದಲ್ಲಿ ಅವರ ರಾಜಕೀಯ ಕೇಂದ್ರೀಕೃತವಾಗಿದೆ ಏಕೆ ? ದಕ್ಷಿಣ ಕರ್ನಾಟಕ ಒಕ್ಕಲಿಗರ ಪ್ರಾಧನ್ಯತೆಯಿಂದ ತುಂಬಿದೆ ತಾನೆ ? ಹಾಗೆಯೇ ಲಿಂಗಾಯಿತರು ಉತ್ತರ ಕರ್ನಾಟಕದಲ್ಲಿ ಬಹುವಾಗಿದ್ದಾರೆ.

ಜಾತಿ ಗಣರಾಜ್ಯಗಳಿಗೆ ಗಾಯವಾಗಿದೆ

ಉತ್ತರ ಭಾರತದ ಒಬ್ಬ ನಾಯಕನನ್ನು ಕುರಿತು ಮಾತನಾಡೋಣ. ಚೌದರಿ ಚರಣ್‌ಸಿಂಗ್ ಮುಖ್ಯಮಂತ್ರಿ ಮತ್ತು ಪ್ರಧಾನಮಂತ್ರಿ ಸ್ಥಾನಕ್ಕೇರಿದವರು. ಆತ ಚುನಾವಣೆ ಯಲ್ಲಿ ಸ್ಪರ್ಧಿಸಲು ಆಜಾಂಘರ್‌ಗಿಂತ ಬಗಾಪರ್‌ನ್ನು ಆಯ್ಕೆ ಮಾಡಿಕೊಂಡನೇಕೆ ? ಅಲ್ಲದೆ, ಆತನ ಪ್ರಭಾವ ಪಶ್ಚಿಮ ಯು.ಪಿ.ಯಲ್ಲೇ ಕೇಂದ್ರೀಕೃತಗೊಂಡಿದೆ. ಏಕೆಂದರೆ ಈ ಜಾಗಗಳಲ್ಲಿ ಜಾಟ್/ಜಾತಿಯು ಪ್ರಬಲವಾಗಿದೆ.

ಈಗ ಪಶ್ಚಿಮ ಭಾರತದತ್ತ ತಿರುಗೋಣ. ಶರದ್‌ಪವಾರ್ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ವರು. ಪ್ರಧಾನ ಮಂತ್ರಿಯಾಗುವ ತಾಕತ್ತಿನ ಮನುಷ್ಯ. ಆತ ಬರಾಮತಿಯಲ್ಲಿ ಮಾತ್ರ ಚುನಾವಣೆಗೆ ನಿಲ್ಲುತ್ತಾನೆ. ಆತನ ರಾಜಕಾರಣ ಕಾರ್ಯಕ್ಷೇತ್ರ ಪಶ್ಚಿಮ ಮಹಾರಾಷ್ಟ್ರದಲ್ಲಷ್ಟೆ ಏಕೆಂದರೆ ಅಲ್ಲಿ ಮರಾಠರ ಸಂಖ್ಯೆ ಅಧಿಕವಾಗಿದೆ. ಪೂರ್ವದಲ್ಲಿ ಎಸ್. ಜಯಪಾಲ್ ರೆಡ್ಡಿ ಮಿರಿಯಾಲ್‌ಗುಡು ಜಾಗದಿಂದ ಸ್ಪರ್ಧಿಸುತ್ತಾನೆ. ಅಲ್ಲದೆ ರೇಣುಕಾ ಚೌದರಿ ಕಮ್ಮಂ ನಿಂದ ಸ್ಪರ್ಧಿಸುತ್ತಾಳೆ. ಮಿರಿಯಾಲ್‌ಗುಡು ರೆಡ್ಡಿ ಕೇಂದ್ರವಾಗಿದ್ದರೆ, ಕಮ್ಮಮ್ ಕಮ್ಮ ಜಾತಿಯವರದ್ದಾಗಿದೆ.

ಐ.ಕೆ.ಗುಜ್ರಾಲ್ ತನ್ನ ಇಡೀ ಬದುಕನ್ನು ದೆಹಲಿಯಲ್ಲಿ ಕಳೆದಿದ್ದಾರೆ. ಆದರೆ ಆತ ಪ್ರಧಾನ ಮಂತ್ರಿಯಾದಾಗ, ಲೋಕಸಭೆಗೆ ಚುನಾಯಿತರಾದದ್ದು ಜಲಾಂದರ್‌ನಿಂದ. ಏಕೆಂದರೆ ಅಲ್ಲಿ ಶೇ ೫೯ ರಷ್ಟು ಸಿಖ್ಖರು ಇದ್ದಾರಲ್ಲವೇ ? ಬಿಕನೇರ್ ಒಂದು ಜಾಟ್ ಜಾತಿಯ ಕೇಂದ್ರವಾಗಿದ್ದರಿಂದ ತಾನೇ ಧರ್ಮೇಂದ್ರ ಅಲ್ಲಿ ಚುನಾವಣೆಗೆ ನಿಂತಿದ್ದು.

ಕೆಲವೊಂದು ಅಪವಾದಗಳನ್ನು ಹೊರತುಪಡಿಸಿದಲ್ಲಿ ಅನೇಕ ರಾಜಕಾರಣಿಗಳು ಎಲ್ಲಿ ತಮ್ಮ ಜಾತಿಗಳ ಪ್ರಾಬಲ್ಯವಿದೆಯೋ ಅಲ್ಲೇ ಸ್ಪರ್ಧಿಸುತ್ತಾರೆ. ಅನೇಕ ಸ್ಥಳೀಯ ಪಕ್ಷಗಳು 'ಪ್ರಾದೇಶಿಕ' ಎಂದರೆ ಅಲ್ಲಿ ಆ ಪಕ್ಷಗಳ ಜಾತಿ ಪ್ರಾಬಲ್ಯವಿದೆಯೆಂದಷ್ಟೇ ಹೇಳಬೇಕು. ಅಂದರೆ ಮತಕ್ಕಾಗಿ ಪಕ್ಷಗಳು ಹೆಚ್ಚು ಜಾತಿಯನ್ನು ನಂಬುತ್ತವೆಯೇ ವಿನಃ ಸಿದ್ಧಾಂತ ವನ್ನೇನು ಅಲ್ಲ. ನಾಲ್ಕು ದಶಕಗಳ ಹಿಂದೆ ಈ ಜಾತಿ ಗಣರಾಜ್ಯಗಳು ಇರಲಿಲ್ಲ ಅಥವಾ ಕಾಣಿಸದಂತೆ ಇದ್ದವು. ೧೯೫೭ ಮತ್ತು ೬೭ರಲ್ಲಿ ಮುಸ್ಲಿಂ ಪ್ರಧಾನವಾಗಿದ್ದ ಬಲರಾಮ್‌ಪುರದಿಂದ ಅಟಲ್ ಬಿಹಾರಿ ಸ್ಪರ್ಧಿಸಿ ಗೆದ್ದಿದ್ದರು. ಈಗ ಅದು ಸಾಧ್ಯವಿಲ್ಲ, ಆದರೆ ಆತ ಈಗ ಮೊದಲಿಗಿಂತಲೂ ಹೆಚ್ಚು ಜನಪ್ರಿಯನಾಗಿದ್ದಾರೆ. ಒಬ್ಬ ಭೂಮಿಹಾರ್‌ನಾಗಿದ್ದ ರಾಜ್‌ನಾರಾಯಣ್ ಇಂದಿರಾಗಾಂಧಿಯನ್ನು ೧೯೭೭ರಲ್ಲಿ ಸೋಲಿಸಿದ್ದ. ಇಂದು ಅದನ್ನು ಯೋಚಿಸಲೂ ಸಾಧ್ಯವಿಲ್ಲ. ಆಕೆಯ ಸಂತಾನದವರು ಇಂದು ಭೂಮಿಹಾರ್‌ಗಳಿಲ್ಲದ ರಾಯ್‌ಬರೇಲಿಯಲ್ಲಿ ಸ್ಪರ್ಧೆಗೆ ನಿಲ್ಲಲಾರರು. ಆದರೆ ಈ ಜಾತಿ ಗಣರಾಜ್ಯಗಳು ಇಂದು ಹೆಚ್ಚೆಚ್ಚು ಹಿಂಸಾತ್ಮಕವಾಗಿ ಹೊರಹೊಮ್ಮುತ್ತಿವೆಯೇ ?

ಆಗಸ್ಟ್ ೧೫, ೧೯೪೭ರವರೆಗೆ ಬ್ರಾಹ್ಮಣ ನಾಯಕತ್ವದ ದ್ವಿಜರು ಭಾರತೀಯ ನಾಗರೀಕ ಸಂಸ್ಥೆಗಳನ್ನು ಮತ್ತು ಸಂಪತ್ತನ್ನು ಹಿಡಿದಿದ್ದರು. ಆದರೆ ಜಮೀನ್ದಾರಿ ಪದ್ಧತಿಯನ್ನು ನಿಷೇಧಿಸಿದಾಕ್ಷಣ ಅವರು ಹಿಡಿತ ಕಳೆದುಕೊಂಡರು. ಆಗಸ್ಟ್ ೭, ೧೯೯೦ರಂದು ವಿ.ಪಿ.ಸಿಂಗ್ ಮಂಡಲ್ ವರದಿಯನ್ನು ಘೋಷಿಸಿದಾಕ್ಷಣ ಪರಿಸ್ಥಿತಿ ಮತ್ತಷ್ಟು ಗಂಭೀರವಾಯಿತು. ಜಾತಿ ಗಣರಾಜ್ಯಗಳು ರಾಜಕೀಯ ಮಾನ್ಯತೆಯನ್ನು ಗಳಿಸಿದವು.

ದ್ವಿಜರಿಂದ ಅಧಿಕಾರ ಇತರ ಜಾತಿಗುಂಪುಗಳಿಗೆ ಹಸ್ತಾಂತರಗೊಂಡಿತು. ಉದಾಹರಣೆಗೆ ಆಂಧ್ರದಲ್ಲಿ ಕಾಪುಗಳು ಅಥವಾ ಉತ್ತರ ಪ್ರದೇಶದಲ್ಲಿ ಲೋಧರು- ಒಂದೇ ಶ್ರೇಣಿಯಲ್ಲಿ ಇದ್ದರೂ, ಒಂದೇ ಕಸುಬನ್ನು ಹೊಂದಿದ್ದರೂ ಅವರಿಬ್ಬರ ಮಧ್ಯೆ ಸಂಬಂಧವೇನೂ ಇಲ್ಲ.

ಉತ್ತರ ಪ್ರದೇಶದಲ್ಲಿ ಲೋಧರು ಶೇ. ೨.೨ ಮತ್ತು ಶೇ.೧.೬ ರಷ್ಟು ಹಮೀರ್‌ಪುರ್ ಅಥವಾ ಫರುಖಾಬಾದ್ ನಲ್ಲಿ ಲೋಧರು ಶೇ ೧೨ ಇದ್ದಾರೆ. ಇದು ಅವರ ಗಣರಾಜ್ಯ. ಮಥುರಾ ಅಥವಾ ಬಗಾಪಲ್‌ನಲ್ಲಿ ಜಾಟರು ಶೇ ೧೮ ಮತ್ತು ಶೇ ೧೪ ಇದ್ದಾರೆ. ರಾಜ್ಯದಲ್ಲಿ ಕಾಪುಗಳು ಪ್ರಬಲರಾಗಿಲ್ಲ ದಿದ್ದರೂ ರಾಜಾಮುಂಡ್ರಿಯಲ್ಲಿ ಶೇ. ೧೬ ರಷ್ಟಿದ್ದಾರೆ. ಹೀಗೆಯೇ ಪ್ರತಿಯೊಂದು ರಾಜ್ಯದಲ್ಲೂ ಅರ್ಧ ಡಜನ್ ಜಾತಿಗಳು ಆಯಾ ಪ್ರದೇಶಗಳಲ್ಲಿ ಪ್ರಬಲರಾಗಿದ್ದಾರೆ. ಇವರಿಗೆಲ್ಲಾ ಭಾರತವೆಂದರೆ ಕೊಳ್ಳೆ ಹೊಡೆಯುವ ತಾಣ. ಇದಕ್ಕಾಗಿ ರಾಜ್ಯಾಂಗದ ಅಧಿಕಾರವನ್ನು ಹಿಡಿಯಬೇಕು.

ಆದರೆ ಅವರ ಸ್ಥಳೀಯ ಅಸ್ತಿತ್ವ, ಸಂಖ್ಯೆ ಕಮ್ಮಿಯಿರುವು ದರಿಂದ ಸಾಂಪ್ರದಾಯಿಕ ಮಾರ್ಗಗಳಿಂದ ಪ್ರಜಾಪ್ರಭುತ್ವದಲ್ಲಿ ಅಧಿಕಾರ ಹಿಡಿಯಲಾಗದು. ವೈರುಧ್ಯ ಗ್ಯಾಂಗ್‌ವಾರ್‌ಗಳಲ್ಲಿ ಕೊನೆಗೊಂಡು ಹಿಂಸೆ ಅನಿವಾರ್ಯ ವಾಗಿಬಿಡುತ್ತದೆ. ಯಾವಾಗ ಜಾತಿ ಗಣರಾಜ್ಯಗಳು ಉದಯ ವಾಗುತ್ತವೋ ಆಗ ಎರಡು ಪ್ರಧಾನ ಗಟ್ಟಿ ಗಣರಾಜ್ಯ ಗಳಾಗಿಬಿಡುತ್ತವೆ. ಆಂಧ್ರ ದಲ್ಲಿ ಕಮ್ಮ ಅಥವಾ ರೆಡ್ಡಿಗಳು ಪ್ರಬಲ ಸ್ಪರ್ಧಿಗಳಾದರೆ ಕರ್ನಾಟಕದಲ್ಲಿ ಒಕ್ಕಲಿಗರು ಮತ್ತು ಲಿಂಗಾಯಿತರು ಪ್ರತಿಸ್ಪರ್ಧಿಗಳಾಗುತ್ತಾರೆ. ಇದೇ ಮಾದರಿ ಭಾರತದುದ್ದಗಲಕ್ಕೂ ಕಾಣುತ್ತದೆ. ಈ ಜಾತಿಗಳು ಸ್ಥಳೀಯ ವಾಗಿದ್ದು ಕೃಷಿಕರಾಗಿರುವುದರಿಂದ ಎಂದೂ ರಾಷ್ಟ್ರಕ್ಕೆ ನಿಷ್ಠರಾಗಲು ಸಾಧ್ಯವಿಲ್ಲ. ಮತ್ತು ಪ್ರಜಾಸತ್ತಾತ್ಮಕ ಆಡಳಿತಕ್ಕೆ ಗೌರವ ನೀಡಲಾರರು. ಅಂದರೆ ಸಂವಿಧಾನ ಜಾತಿ ಮೌಲ್ಯ ಗಳಿಗೆ ಮಾನ್ಯತೆ ನೀಡಬೇಕು. ಹಾಗೆಯೇ ಜಾತಿ ಮೌಲ್ಯಗಳೇ ಸಂವಿಧಾನ! ಹಿಂಸೆ ಅವರವರ ಗಡಿಗಳನ್ನು ಕಾಯ್ದುಕೊಳ್ಳಲು ಒಂದು ಅಸ್ತ್ರ. ಅಹಿಂಸಾ ವಿಧಾನಗಳಿಂದ ಏನನ್ನು ಪಡೆಯ ಬಹುದೋ ಅದನ್ನು ಹಿಂಸಾತ್ಮಕ ವಿಧಾನಗಳಿಂದ ಪಡೆಯ ಬಹುದಾಗಿದೆ. ಈ ಜಾತಿ ಗಣರಾಜ್ಯಗಳ ಗ್ಯಾಂಗ್ ಯುದ್ಧ ಗಳು ಭಾರತೀಯ ಚುನಾವಣಾ ಪದ್ಧತಿಯನ್ನು ಅಣಕ ಮಾಡಿ ಅದಕ್ಕೆ ಮಾಗಲಾರದ ಗಾಯವನ್ನು ಉಂಟು ಮಾಡಿದೆ.

ದಲಿತ್ ಡೈರಿ

ಮನುವಿನಿಂದ ಮಾನವನೆಡೆಗೆ

ಇತ್ತೀಚಿನ ವಿಧಾನಸಭಾ ಚುನಾವಣೆಯಲ್ಲಿ ಲಾಲೂ ಶಿರಸ್ತ್ರಾಣವನ್ನು ಧರಿಸಿ ಚುನಾವಣಾ ಪ್ರಚಾರ ಕೈಗೊಂಡಿದ್ದ ಅಂದರೆ ಚಳಿಯಿಂದ ರಕ್ಷಿಸಿಕೊಳ್ಳಲೇನೂ ಅಲ್ಲ. ಬದಲಾಗಿ ತನ್ನ ಶತ್ರುವಿನ ಆಕ್ರಮಣದಿಂದ ರಕ್ಷಿಸಿಕೊಳ್ಳಲಷ್ಟೆ. ಉತ್ತರ ಭಾರತದಲ್ಲಿ ಎಣ್ಣೆ ಹಚ್ಚಿದ ಕೋಲು, ಆಗಮಿಸಲಿರುವ ಆಕ್ರಮಣವನ್ನು, ಹಿಂಸಾತ್ಮಕ ಘರ್ಷಣೆಗೆ ಪೂರ್ವ ಸಿದ್ಧತೆಯನ್ನು ತಿಳಿಸುತ್ತದೆ. ಕಳೆದ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಲಾಲೂ ಅಧಿಕೃತವಾಗಿ ಪಾಟ್ನಾದಲ್ಲಿ ಲಾಟಿ ರ್‍ಯಾಲಿಯನ್ನು ಹಮ್ಮಿಕೊಂಡಿದ್ದ. ಹಿಂಬಾಲಕರೆಲ್ಲಾ ತಮ್ಮ ಲಾಟಿಗಳಿಗೆ ಎಣ್ಣೆ ಹಚ್ಚಲು ಹೇಳಲಾಗಿತ್ತು. ಅಂದರೆ ಹಿಂಸಾತ್ಮಕ ಘರ್ಷಣೆಯಲ್ಲಿ ಅವು ಸೂಕ್ತವಾದವು.

ಈ ಅಂಶವನ್ನು ಯಾರಿಗೆ ತಲುಪಿಸಿದ್ದು? ದ್ವಿಜರು ಮತ್ತು ದಲಿತರಿಗೆ ಇರಬಹುದು. ನಿಜವಾಗಿಯೂ ಶೂದ್ರರು/ಓ.ಬಿ.ಸಿ.ಗಳೇನು ಅಲ್ಲ. ಮುಲಾಯಂ ಸಿಂಗ್ ಯಾದವ್ ಒಮ್ಮೆ ಹಲ್ಲಾಬೋಲ್ ಆಂದೋಲನವನ್ನು ಅಂದರೆ 'ಆಕ್ರಮಣ ಮಾಡು' ಎಂದರ್ಥ. ಆತನ ರಾಜ ಭಯ್ಯ ಸಾಗಾ ಚಾಣಕ್ಷ ರಾಜಕೀಯ ತಂತ್ರವಾಗಿ ತನ್ನ ಸಾಮಾಜಿಕ ಪ್ರತಿನಿಧಿತ್ವವನ್ನು ಗಟ್ಟಿಗೊಳಿಸಲಾಯಿತು. ಲಾಲೂ ಅಥವಾ ಮುಲಾಯಂ ಅಪರಾಧಿಗಳೇನಲ್ಲ. ಆದರೆ ಅವರ ನಾಯಕತ್ವಕ್ಕೆ ಅಗತ್ಯವೇನೆಂದರೆ ಕಾನೂನು ಉಲ್ಲಂಘಿಸಿ, ರಾಜ್ಯಾಂಗದ ಅಧಿಕಾರವನ್ನು ವಿರೋಧಿಸಬೇಕು. ಈ ನಿರ್ದಿಷ್ಟವರ್ಗಕ್ಕೆ ಅಂದರೆ ಶೂದ್ರ/ಹಿಂದುಳಿದ ವರ್ಗಗಳಿಗೆ ರಾಜ್ಯವೆನ್ನುವುದು ಹಳ್ಳಿ ಸಮಾಜದ ವಿಸ್ತೃತ ರೂಪವಷ್ಟೆ. ಸರ್ಕಾರಗಳು ಸ್ಥಳೀಯ ಸಾಮಾಜಿಕ ಸಂಸ್ಥೆಗಳನ್ನು ಪೋಷಿಸಲೇಬೇಕು.

ಈ ಸಂದರ್ಭದಲ್ಲಿ ಇತ್ತೀಚಿನ ಎರಡು ಘಟನೆಗಳನ್ನು ಗಮನಿಸುವುದು ಸೂಕ್ತವಾದುದು. ರಾಮ್‌ವಿಲಾಸ್ ಪಾಸ್ವಾನ್ ತನ್ನ ರಾಜಕೀಯ ಬದುಕಿನ ಒಂದು ತೀವ್ರವಾದ ಸವಾಲನ್ನು ಎದುರಿಸಲೇಬೇಕಾಗಿತ್ತು. ಬಿಹಾರದ ಚುನಾವಣೆಯಲ್ಲಿ ಆತ ದಲಿತರು, ಬ್ರಾಹ್ಮಣರು ಮತ್ತು ಮುಸ್ಲಿಂ ಸಾಮಾಜಿಕ ಸಂಯುಕ್ತವನ್ನು ಬಯಸಿದ್ದ. ಆತ ನಿಜವಾಗಿಯೂ ಮಂಡಲ್‌ನನ್ನು ಎದುರಿಸಿದ್ದ. ೧೯೯೦ರಲ್ಲಿ ವಿ.ಪಿ.ಸಿಂಗ್ ಮಂಡಲ್ ಜಾರಿಯಾಗಿಸಿದಾಗ, ಈತ ಅದರ ಪ್ರಧಾನ ವಕ್ತಾರನಾಗಿದ್ದ. ಸಂಘರ್ಷ ಕಾಣುವಂತೆಯೇ ಇತ್ತು: ಪಾಸ್ವಾನ್‌ನ ದಲಿತ ಕ್ಷೇತ್ರ ಓ.ಬಿ.ಸಿ.ಗಳ ವಿರೋಧವಾಗಿಯೇ ನಿಂತಿತ್ತು.

> ನಾವು ಮರೆತಿರುವ ಸಂಗತಿಯೆಂದರೆ ಒಂದು ವ್ಯವಸ್ಥೆಯ ಜನಕನೇ ಅದರ ಬಲಿಪಶುವು ಆಗಬಲ್ಲ ಎಂಬುದು. ಅಮೆರಿಕಾ ಇಂದು ಪರಮಾಣು ಬಾಂಬ್ ಆಕ್ರಮಣದ ಭೀತಿಯನ್ನು ಎದುರಿಸುತ್ತಿದೆ. ಶೂದ್ರರು ಬ್ರಾಹ್ಮಣರನ್ನು ಪದಚ್ಯುತಗೊಳಿಸಿದ್ದಾರೆ. ಈಗ ದಲಿತರಿಗೆ ಇವರೇ ಅಧಿಕಾರ ಗದ್ದುಗೆಯಲ್ಲಿ ಸಾಮಾಜಿಕ ನಡಾವಳಿಯನ್ನು ರೂಪಿಸುತ್ತಿರುವವರು. ಪ್ರಜ್ಞಾ ಪಾವಳಿಯಲ್ಲಿ ದಲಿತರು ಎರಡು ರೀತಿಯ ಬದುಕನ್ನು ನಡೆಸುತ್ತಿದ್ದಾರೆ. ತಮ್ಮ ವಂಚಿತ ಬದುಕಲ್ಲಿ ಎಂದಿಗೂ ಬ್ರಾಹ್ಮಣರೇ ಅಪರಾಧಿಗಳು. ಆದರೆ ವಾಸ್ತವದಲ್ಲಿ ನಿಜವಾದ ಅಪರಾಧಿಗಳು ಶೂದ್ರ/ಓಬಿಸಿಗಳೇ ಆಗಿರುವುದು. ಬ್ರಾಹ್ಮಣ ಇಂದಿಗೆ ಪ್ರಸ್ತುತನಲ್ಲ.

ಮತ್ತೊಂದು ಘಟನೆಯಲ್ಲಿ ಫೆಬ್ರವರಿ ೨೦ ರಂದು ಬಿ.ಎಸ್.ಪಿ ಅಲಹಾಬಾದ್‌ನಲ್ಲಿ ಒಂದು ಬ್ರಾಹ್ಮಣ ಸಭೆಯನ್ನು ನಡೆಸಿತ್ತು. ಆಗ ಚುನಾವಣೆ ಪ್ರಕ್ರಿಯೆ ಇನ್ನೂ ಪ್ರಗತಿಯಲ್ಲಿತ್ತು. ಆ ಸಭೆಯಲ್ಲಿ ಪ್ರಕಟಪಡಿಸಿದ ವರದಿಯೆಂದರೆ 'ದೇಶದಲ್ಲಿ ಸಾಮಾಜಿಕ ಬದಲಾವಣೆಯ ಮುಂಚೂಣಿಯಲ್ಲಿದ್ದವರೆಂದರೆ ಬ್ರಾಹ್ಮಣರೇ.' ಮತ್ತು 'ಮನುವಾದದ ಬದಲು ಮಾನವವಾದ' ಎಂದು ಬಿಂಬಿಸಲಾಗಿತ್ತು. ಮಾಯಾವತಿ ಮತ್ತು ಪಾಸ್ವಾನ್ ಇಬ್ಬರು ದಲಿತ ನಾಯಕರೆಂದು ದೇಶದಲ್ಲಿ ಖ್ಯಾತಿ. ಮಂಡಲ್‌ನಂತ ಪಾಸ್ವಾನ್ ಶೂದ್ರ/ಓಬಿಸಿಗಳೊಡನೆಯೇ ಇದ್ದರು. ಮಾಯಾವತಿ ಬ್ರಾಹ್ಮಣ-ವಿರೋಧಿ ಗರಡಿಯಲ್ಲಿ ಬೆಳೆದವಳು. ಆದಾಗ್ಯೂ ಸಮಾಜವಾದಿ ಪಕ್ಷದೊಂದಿಗಿನ ಚುನಾವಣಾ ಪೂರ್ವ ಮೈತ್ರಿಯಲ್ಲಿ ಬಿ.ಎಸ್.ಪಿ. ಬಿಕ್ಕಟ್ಟನ್ನು ಎದುರಿಸುವಂತಾಯ್ತು. ಮುಲಾಯಂನಡಿ ದಲಿತರ ವಿರುದ್ಧದ ಹಿಂಸೆ ಅಧಿಕವಾಗಿತ್ತು. ಆಗ ಮಾಯಾವತಿ ಮುಲಾಯಂನನ್ನು ತೊರೆದು ಬಿಜೆಪಿಯೊಡನೆ ಮೂರು ಭಾರಿ ಮೈತ್ರಿಗಿಳಿದಳು.

ಮಾಯಾವತಿ ಮತ್ತು ಪಾಸ್ವಾನ್ ಇಬ್ಬರೂ ಶೂದ್ರ/ಓಬಿಸಿಗಳಲ್ಲಿ ತಪ್ಪನ್ನೇನು ಕಾಣಲಿಲ್ಲ. ಆದರೆ ಮುಲಾಯಂ ಮತ್ತು ಲಾಲೂ ದಲಿತರ ವಿರುದ್ಧ ಹಿಂಸೆಗೆ ಕಾರಣಕರ್ತರಾಗಿದ್ದರು. ಕೊಲೆಗಡುಕರು ಅಥವಾ ಅತ್ಯಾಚಾರಿಗಳು ಅನೇಕ ಬಾರಿ ಶೂದ್ರ/ಓಬಿಸಿಗಳೇ ಆಗಿದ್ದರೂ, ಬ್ರಾಹ್ಮಣರನ್ನು ಟೀಕಿಸಲಾಗುತ್ತಿತ್ತು. ಬ್ರಾಹ್ಮಣರೇ ಜಾತಿ ಶ್ರೇಣಿ ಪದ್ಧತಿಗೆ ಕಾರಣವಾಗಿ ಭಾರತದ ಪ್ರತಿಯೊಂದು ಅವಘಡಗಳಿಗೂ ಅವರನ್ನೇ ಕಾರಣೀಭೂತರನ್ನಾಗಿಸಲಾಗುತ್ತಿತ್ತು. ಪ್ರತಿಯೊಬ್ಬ ದಲಿತನೂ ಈ ಪ್ರಜ್ಞೆಯಲ್ಲೇ ಬೆಳೆಯುತ್ತಾನೆ. ದಲಿತ ಚಳವಳಿಯೂ ಸಹ ಇದೇ ಸೈದ್ಧಾಂತಿಕ ಲೆಕ್ಕದಲ್ಲೇ ಸಾಗುತ್ತದೆ.

ಆದಾಗ್ಯೂ ಮರೆತಿರುವ ಸಂಗತಿಯೆಂದರೆ ಒಂದು ವ್ಯವಸ್ಥೆಯ ಜನಕನೇ ಅದರ ಬಲಿಪಶುವು ಆಗಬಲ್ಲ ಎಂಬುದು. ಅಮೆರಿಕಾ ಇಂದು ಪರಮಾಣು ಬಾಂಬ್ ಆಕ್ರಮಣದ ಭೀತಿಯನ್ನು ಎದುರಿಸುತ್ತಿದೆ. ಶೂದ್ರರು ಬ್ರಾಹ್ಮಣರನ್ನು ಪದಚ್ಯುತಗೊಳಿಸಿದ್ದಾರೆ. ಈಗ ದಲಿತರಿಗೆ ಇವರೇ ಅಧಿಕಾರ ಗದ್ದುಗೆಯಲ್ಲಿ ಸಾಮಾಜಿಕ ನಡಾವಳಿಯನ್ನು ರೂಪಿಸುತ್ತಿರುವವರು.

ಪ್ರಜ್ಞಾ ಪಾವಳಿಯಲ್ಲಿ ದಲಿತರು ಎರಡು ರೀತಿಯ ಬದುಕನ್ನು ನಡೆಸುತ್ತಿದ್ದಾರೆ. ತಮ್ಮ ವಂಚಿತ ಬದುಕಲ್ಲಿ ಎಂದಿಗೂ ಬ್ರಾಹ್ಮಣರೇ ಅಪರಾಧಿಗಳು. ಆದರೆ ವಾಸ್ತವದಲ್ಲಿ ನಿಜವಾದ ಅಪರಾಧಿಗಳು ಶೂದ್ರ/ಓಬಿಸಿಗಳೇ ಆಗಿರುವುದು. ಬ್ರಾಹ್ಮಣ ಇಂದಿಗೆ ಪ್ರಸ್ತುತನಲ್ಲ. ಉದಾಹರಣೆಗೆ ಒಬ್ಬ ಯಾದವ ದಲಿತನನ್ನು ಥಳಿಸಿದಲ್ಲಿ ಬ್ರಾಹ್ಮಣನ ವಿರುದ್ಧ ಎಫ್‌ಐಆರ್ ದಾಖಲಿಸಲಾದೀತೆ.

ಹಾಗೇನಾದರೂ ಆದಲ್ಲಿ ಬ್ರಾಹ್ಮಣನನ್ನು ಎಫ್‌ಐಆರ್‌ನಲ್ಲಿ ದಾಖಲಿಸಲೇಬೇಕಿತ್ತು. ಕೊನೆಯದಾಗಿ ಮಾಯಾವತಿ ಮತ್ತು ಪಾಸ್ವಾನ್ ಕಂಡುಕೊಂಡ ವಾಸ್ತವಾಂಶವೆಂದರೆ 'ಬ್ರಾಹ್ಮಣ ಅಪರಾಧಿಯೊಬ್ಬ ತನ್ನ ಸಮುದಾಯದಲ್ಲೇ ಮರ್ಯಾದೆ ಕಳೆದುಕೊಳ್ಳುತ್ತಾನೆ. ಆದರೆ ಒಬ್ಬ ಶೂದ್ರ ಅಪರಾಧಿಯಲ್ಲದಿದ್ದರೂ ತನ್ನ ಸಮುದಾಯದಲ್ಲಿ ಆತನಿಗೆ ಗೌರವ ಇರುವುದಿಲ್ಲ'.

ಸಾಮಾಜಿಕ ಅಲ್ಪಸಂಖ್ಯಾತರಾಗಿರುವ ಬ್ರಾಹ್ಮಣರು ಮತ್ತು ದಲಿತರು ಒಂದು ಸಮಾನ ಸಾಮಾಜಿಕ ವರ್ಗದಿಂದ ಬರುತ್ತಿರುವ ಅಭದ್ರತೆಯನ್ನು ಎದುರಿಸುತ್ತಿದ್ದಾರೆ.

ಆದ್ದರಿಂದಲೇ 'ಮನುವಾದದಿಂದ ಮಾನವ ವಾದದೆಡೆ' ಪ್ರಯಾಣ ಸಾಗಿರುವುದು. ಇದನ್ನು ಬ್ರಾಹ್ಮಣರು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಅರಿತಿದ್ದೇ ಆದಲ್ಲಿ ಅಲ್ಲೊಂದು 'ಸಂಯುಕ್ತ' ಸಂಬಂಧ ಸಾಧ್ಯವಾಗಿ ಆಯಾ ಸಮುದಾಯಗಳು ಏಳ್ಗೆಯನ್ನು ಸಾಧಿಸಬಹುದು. □

ಬೋಧಿವೃಕ್ಷ

'ಅತಿ ಕೈಗಾರಿಕೀಕೃತ ಸಮಾಜ ಅಸ್ಥಿರವಾದುದು. ಮತ್ತೆ ಅದು ಪುರಾತನ ಕೃಷಿ ಮೂಲ ವ್ಯವಸ್ಥೆಯತ್ತ ತಿರುಗುವಂತಹುದು. ವ್ಯಕ್ತಿ ಸ್ವಾತಂತ್ರ್ಯವನ್ನು ಅಸ್ಥಿರಗೊಳಿಸುವ ಅಂಶಗಳನ್ನು ನಿಯಂತ್ರಿಸುವುದು ಅಸಾಧ್ಯವಾದಾಗ ಇಡೀ ನಾಗರಿಕ ಸಮಾಜವೇ ಅಸ್ಥಿರಗೊಳ್ಳುತ್ತದೆ. ಇಂದಿನ ಮುಖ್ಯ ಪ್ರಶ್ನೆಯೆಂದರೆ ನಾವು ಅನುಸರಿಸುತ್ತಿರುವ ಆಧುನೀಕರಣ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವುದರಿಂದ ನಮ್ಮನ್ನು ನಿರೀಕ್ಷಿತ ದಿಕ್ಕಿನಲ್ಲಿ ಮುನ್ನಡೆಸುತ್ತದೆಯೇ ಎನ್ನುವುದು.' ಈ ಅನುಮಾನದಿಂದಾಗಿಯೇ ಇಂದು ನಾವು ಆಧ್ಯಾತ್ಮಿಕ ಮೌಲ್ಯಗಳಿಗಿಂತ ಆಧುನಿಕ ಅಭಿವೃದ್ಧಿಯೇ ಮುಖ್ಯ ಎನ್ನುವ ಜನರಿಗೆ ಬೌದ್ಧ ಧರ್ಮೀಯ ಅರ್ಥಶಾಸ್ತ್ರದ ಅನುಷ್ಠಾನವನ್ನು ಶಿಫಾರಸ್ಸು ಮಾಡಬೇಕಾಗಿದೆ.

○ ಜಿ.ಎಸ್. ಮಲ್ಲಿಕಾರ್ಜುನ

ಬುದ್ಧನ ಅರ್ಥಶಾಸ್ತ್ರ

ಸಜ್ಜೀವನ ಬುದ್ಧನ ಅಷ್ಟಾಂಗ ಮಾರ್ಗಗಳಲ್ಲಿ ಒಂದು. ಸಾತ್ವಿಕ ಜೀವನ ವಿಧಾನವನ್ನು ಬೌದ್ಧಧರ್ಮ ಪ್ರತಿಪಾದಿಸುತ್ತದೆ ಎಂದ ಮೇಲೆ ಬೌದ್ಧಧರ್ಮೀಯ ಅರ್ಥಶಾಸ್ತ್ರವೆನ್ನುವುದು ಇರಲೇಬೇಕು. ಬುದ್ಧ ಪರಂಪರೆಗೆ ಬದ್ಧವಾಗಿರುವುದಾಗಿ ಘೋಷಿಸಿಕೊಂಡಿರುವ ರಾಷ್ಟ್ರಗಳಲ್ಲಿ ಬರ್ಮಾದೇಶವೂ ಒಂದು. ಈ ದೇಶದ ನಂಬಿಕೆಯ ಪ್ರಕಾರ 'ಆರ್ಥಿಕ ಅಭಿವೃದ್ಧಿ ಮತ್ತು ಧಾರ್ಮಿಕ ಮೌಲ್ಯಗಳ ಮಧ್ಯೆ ಯಾವುದೇ ಸಂಘರ್ಷವಿಲ್ಲ. ಆಧ್ಯಾತ್ಮಿಕ ಆರೋಗ್ಯ ಮತ್ತು ಭೌತಿಕ ಸೌಖ್ಯಗಳು ಪರಸ್ಪರ ವಿರೋಧಿಗಳಲ್ಲ; ಸಹಜ ಬಂಧುಗಳು.

ಒಂದು ವೇಳೆ ನಾವು ಇಚ್ಛಿಸಿದಲ್ಲಿ ಆಧುನಿಕ ತಂತ್ರಜ್ಞಾನದ ಪ್ರಯೋಜನಗಳನ್ನು ಮತ್ತು ಬೌದ್ಧಪರಂಪರೆಯ ಮೌಲ್ಯಗಳನ್ನು ಒಗ್ಗೂಡಿಸಿ ಬೆಸೆದ ನವಸಂಸ್ಕೃತಿಯನ್ನು ಆಚರಣೆಗೆ ತರಬಹುದು. ನಮ್ಮ ಕನಸು ಮತ್ತು ಕ್ರಿಯೆಗಳನ್ನು ಸ್ವಚ್ಛ ನಂಬಿಕೆಗಳತ್ತ ಕೊಂಡೊಯ್ಯಬಹುದು' ಬರ್ಮಾ ದೇಶವನ್ನು ಒಳಗೊಂಡಂತೆ ಇತರೇ ಮೂರನೇ ಜಗತ್ತಿನ ರಾಷ್ಟ್ರಗಳು ಇಂದು ಆಧುನಿಕ ಅರ್ಥಶಾಸ್ತ್ರ ತತ್ವಗಳ ಮೂಲಕ ಅನುಕರಣೀಯ ಅಭಿವೃದ್ಧಿಯನ್ನು ಸಾಧಿಸಬಹುದೆಂದು ಭಾವಿಸುತ್ತಿವೆ. ಅದಕ್ಕಾಗಿ ಆರ್ಥಿಕ ಯೋಜನೆಗಳ ನೀಲ ನಕ್ಷೆಯನ್ನು ತಯಾರಿಸಿಕೊಡುವಂತೆ ಅವು ಮುಂದುವರಿದ ರಾಷ್ಟ್ರಗಳಿಗೆ ದುಂಬಾಲು ಬೀಳುತ್ತಿವೆ.

ಆಧುನಿಕ ಅರ್ಥಶಾಸ್ತ್ರದಂತೆ ತಮ್ಮ ಧಾರ್ಮಿಕ ನೆಲೆಯಲ್ಲಿಯೇ ಬೌದ್ಧ ಧರ್ಮೀಯ ಅರ್ಥಶಾಸ್ತ್ರವೊಂದರ ಸಾಧ್ಯತೆಯ ಬಗ್ಗೆ ಅವು ಯೋಚಿಸುತ್ತಿಲ್ಲ. ಅಲ್ಲಿನ ಆರ್ಥಿಕ ತಜ್ಞರೂ ಸಹ ಇತರೆ ಸಾಮಾನ್ಯ ಪರಿಣತರುಗಳಂತೆ ಸಾಪೇಕ್ಷವಲ್ಲದ ಸ್ಪಷ್ಟ ಸತ್ಯವನ್ನು ನೀಡುವ ವಿಜ್ಞಾನವೊಂದಿದೆ ಎಂದು ನಂಬುತ್ತಾ, ಅಭೌತ ವಿದ್ಯಮಾನಗಳ ಬಗ್ಗೆ ಕುರುಡರಾಗಿದ್ದಾರೆ. ಕೆಲವರಂತೂ ಅರ್ಥವಿಜ್ಞಾನದ ತತ್ವಗಳು ಗುರುತ್ವಾಕರ್ಷಣ ನಿಯಮದಷ್ಟೇ ನಿಖರ ಮತ್ತು ಅಭೌತ ಚಟುವಟಿಕೆಗಳಿಂದ ಮುಕ್ತ ಎಂದು ವಾದಿಸುತ್ತಾರೆ. ಈ ರೀತಿಯ ವಾದ ವಿಧಾನಗಳಲ್ಲಿ ತೊಡಗುವ ಬದಲು ಜೀವನದ ಕೆಲವೊಂದು ಮೂಲಭೂತ ಸಮಸ್ಯೆಗಳ ಬಗ್ಗೆ ಆಧುನಿಕ ಅರ್ಥಶಾಸ್ತ್ರಜ್ಞ ಮತ್ತು ಬೌದ್ಧ ಧರ್ಮೀಯ ತಾಳುವ ನಿಲುವುಗಳನ್ನು ವಿಶ್ಲೇಷಿಸಿ ಅರ್ಥ ಮಾಡಿಕೊಳ್ಳುವುದರಿಂದ ಬೌದ್ಧ ಧರ್ಮೀಯ ಅರ್ಥಶಾಸ್ತ್ರದ ಬಗ್ಗೆ ಸ್ಪಷ್ಟ ಪರಿಕಲ್ಪನೆಯನ್ನು ಹೊಂದಬಹುದು.

ಸಾಮಾನ್ಯವಾಗಿ ಎಲ್ಲರೂ ಒಪ್ಪುವಂತೆ ಶ್ರಮವೇ ಸಂಪತ್ತಿನ ಮೂಲ. ಆಧುನಿಕ ಅರ್ಥಶಾಸ್ತ್ರಜ್ಞನ ಪ್ರಕಾರ ಶ್ರಮ ಅಥವಾ ಶ್ರಮವನ್ನು ಬೇಡುವ ಕೆಲಸ ಅನಿವಾರ್ಯ ಪೀಡೆ. ಉದ್ಯೋಗ ನೀಡುವ ಮಾಲೀಕನ ದೃಷ್ಟಿಯಲ್ಲಿ ಅದು ಖರ್ಚಿನ ಮೂಲ. ಯಾಂತ್ರೀಕರಣದ ಮೂಲಕ ಈ ಬಾಬಿನ ಖರ್ಚನ್ನು ಸಂಪೂರ್ಣವಾಗಿ ನಿವಾರಿಸಿಕೊಳ್ಳುವುದು ಅಸಾಧ್ಯವಾದರೂ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಅದನ್ನು ಕಡಿಮೆಗೊಳಿಸಿಕೊಳ್ಳಬಹುದು. ಇದೇ ಕೆಲಸವನ್ನು ಕಾರ್ಮಿಕ ನೋಡುವ ದೃಷ್ಟಿ ಬೇರೆ. ಅವನ ಪ್ರಕಾರ ಕೆಲಸದಲ್ಲಿ ಬಳಕೆಯಾಗುವ ಶ್ರಮ ತುಷ್ಟಿಗುಣವಿಲ್ಲದ್ದು. ಕೆಲಸ ನಿರ್ವಹಿಸುವುದೆಂದರೆ ವಿರಾಮ ಸುಖವನ್ನು ತ್ಯಾಗ ಮಾಡುವುದು. ಪಡೆಯುವ ಕೂಲಿ ವಿರಾಮದ ನಿರಾಕರಣೆಗೆ ನೀಡುವ ಪರಿಹಾರ. ಹಾಗಾಗಿ ಮಾಲೀಕನ ದೃಷ್ಟಿಯಲ್ಲಿ ಕಾರ್ಮಿಕನಿಲ್ಲದೆಯೇ ವಸ್ತುಗಳನ್ನು ಉತ್ಪಾದಿಸುವುದು ಲಾಭದಾಯಕ ಮಾರ್ಗವಾದರೆ, ಕೆಲಸ ನಿರ್ವಹಿಸದೆಯೇ ಆದಾಯ ಪಡೆಯುವುದು ಕಾರ್ಮಿಕನ ದೃಷ್ಟಿಯಲ್ಲಿ ಖುಷಿಯ ವಿಷಯ.

ಈ ಮನೋವೃತ್ತಿಯಿಂದಾಗಿ ಕೆಲಸ ನಿರ್ವಹಿಸುವುದರಿಂದ ದೂರ ಉಳಿಯುವ ಪ್ರಯತ್ನವೇ ಕೆಲಸ ಎನಿಸಿಕೊಂಡರೆ ಅದರ ಹೊರೆಯನ್ನು ಹಗುರ ಮಾಡಿಕೊಳ್ಳುವ ಪ್ರತಿ ಪ್ರಯತ್ನವೂ ದಕ್ಷತೆಯ ಕ್ರಮವೆಂದು ಪರಿಗಣಿಸಲ್ಪಡುತ್ತದೆ. ಯಾಂತ್ರೀಕರಣ ಕೂಡ ಇಂಥ ದಕ್ಷತೆಯ ಒಂದು ಕ್ರಮವಾದರೆ ಆಡಂ ಸ್ಮಿತ್ ತನ್ನ 'ರಾಷ್ಟ್ರಗಳ ಸಂಪತ್ತು' ಪುಸ್ತಕದಲ್ಲಿ ಹೇಳುವ ಶ್ರಮವಿಭಜನೆ ಮತ್ತೊಂದು ವಿಧಾನ. ಉತ್ಪಾದನಾ ಚಟುವಟಿಕೆಯನ್ನು ಸಣ್ಣ ಸಣ್ಣ ಚಟುವಟಿಕೆಗಳನ್ನಾಗಿ ವಿಭಜಿಸುವ ಕ್ರಿಯೆ ಒಂದು ಸಾಧಾರಣ ಪರಿಣತೀಕರಣದಷ್ಟೇ ಅಲ್ಲದೆ ಉತ್ಪಾದನೆಯ ವೇಗವನ್ನೂ ಹೆಚ್ಚಿಸುತ್ತದೆ. ಆದರೆ ಇಡೀ ಚಟುವಟಿಕೆಗಳನ್ನು ಅತಿಸಣ್ಣ ಕ್ರಿಯೆಗಳನ್ನಾಗಿ ವಿಂಗಡಿಸಿ, ಪರಿಣತರುಗಳಿಗೆ ಅವುಗಳನ್ನು ನಿರ್ವಹಿಸಲು ಒಪ್ಪಿಸುವುದರಿಂದ ಆ ವ್ಯಕ್ತಿಗಳಿಗೆ ಇಡೀ ಉತ್ಪಾದನಾ ಚಟುವಟಿಕೆಯಲ್ಲಿನ ಅವರ ಪಾತ್ರ, ಪ್ರಾಮುಖ್ಯತೆಗಳು ಅರಿವಾಗುವುದಿಲ್ಲ. ಯಂತ್ರಗಳಂತೆ ಕೆಲಸ ನಿರ್ವಹಿಸುತ್ತಾರಷ್ಟೆ. ಆದರೆ ಬೌದ್ಧ ಧರ್ಮೀಯ ದೃಷ್ಟಿಕೋನ ಕೆಲಸ ನಿರ್ವಹಣೆಯನ್ನು ಮೂರು ಆಯಾಮಗಳಲ್ಲಿ ಗುರುತಿಸುತ್ತದೆ. ಒಂದು: ವ್ಯಕ್ತಿಗೆ ಅವನ ದೈಹಿಕ ಮತ್ತು ಬೌದ್ಧಿಕ ಸಾಮರ್ಥ್ಯವನ್ನು ಬಳಸುವ ಮತ್ತು ಬೆಳೆಸಿಕೊಳ್ಳುವ ಅವಕಾಶವಾಗಿ; ಎರಡು : ಇತರರೊಂದಿಗೆ ಗುರುತಿಸಿಕೊಳ್ಳುತ್ತಾ ಅವನ ಅಹಂ ಅನ್ನು ನಿವಾರಿಸಿಕೊಳ್ಳುವ ಸಾಧ್ಯತೆಯಾಗಿ ; ಮೂರು : ಸಾತ್ವಿಕ ಬದುಕಿಗೆ ಅವಶ್ಯವಾದ ಭೌತ ಸರಕುಗಳ ಉತ್ಪಾದನೆಯಾಗಿ. ಯಾವುದೇ ಕೆಲಸವನ್ನು ಅರ್ಥರಹಿತವಾಗಿ, ಅನುಪಯೋಗಿಯಾಗಿ ಕಾರ್ಮಿಕರಿಗೆ ಆಯಾಸ ತರಿಸುವಂತೆ ಅವರ ನರನಾಡಿಗಳನ್ನು ಹಿಂಡುವಂತೆ ಸಂಘಟಿಸುವುದು ಯಾವುದೇ ಅಪರಾಧಕ್ಕಿಂತ ಕಡಿಮೆಯಲ್ಲ. ಮನುಷ್ಯರಿಗಿಂತ ಅವರು

ಉತ್ಪಾದಿಸುವ ಸರಕುಗಳಿಗೆ ಹೆಚ್ಚು ಒತ್ತು ಕೊಡುವುದು ಬಾಲಿಶ ಕೃತ್ಯ. ಅಂತೆಯೇ ಕೆಲಸದ ಬದಲಿಗೆ ವಿರಾಮವನ್ನು ಬಯಸುವುದು ನಮ್ಮ ಅಸ್ತಿತ್ವದ ಮೂಲ ಉದ್ದೇಶವನ್ನೇ ಮರೆತಂತೆ. ವಿರಾಮ ಮತ್ತು ಕೆಲಸಗಳು ಒಂದನ್ನೊಂದು ಅವಲಂಬಿಸಿರುವ ಮುಖ್ಯ ಕ್ರಿಯೆಗಳು. ಅವುಗಳನ್ನು ಪ್ರತ್ಯೇಕಿಸಿ ನೋಡುವುದೆಂದರೆ ಕೆಲಸ ನಿರ್ವಹಿಸುವುದರ ತೃಪ್ತಿ ಮತ್ತು ವಿರಾಮದ ಖುಷಿಯನ್ನು ಕಳೆದುಕೊಂಡಂತೆ.

ಬೌದ್ಧ ಧರ್ಮೀಯ ದೃಷ್ಟಿಕೋನ ಯಾಂತ್ರೀಕರಣವನ್ನು ಎರಡು ರೀತಿಯಲ್ಲಿ ನೋಡುತ್ತದೆ. ಒಂದು ಮನುಷ್ಯನ ಶಕ್ತಿ ಕೌಶಲ್ಯಗಳನ್ನು ಬೆಳೆಸುವಂತಹುದಾದರೆ, ಮತ್ತೊಂದು ಅವನನ್ನು ಯಂತ್ರಗಳ ಗುಲಾಮನನ್ನಾಗಿಸುವಂತಹುದು. ಮಾನವ ಶಕ್ತಿಯನ್ನು ನಿಷ್ಪ್ರಯೋಜನಗೊಳಿಸುವ ಯಾವುದೇ ಯಾಂತ್ರೀಕರಣ ಒಂದು ಸಂಸ್ಕೃತಿಯನ್ನೇ ನಾಶ ಮಾಡುತ್ತದೆ ಎನ್ನುವುದು ಪಾಶ್ಚಿಮಾತ್ಯರ ಆಧುನಿಕತೆಯನ್ನು, ಪೌರ್ವಾತ್ಯರ ಪ್ರಾಚೀನತೆಯನ್ನು ಅರ್ಥವತ್ತಾಗಿ ವಿವರಿಸಬಲ್ಲ ಆನಂದ ಕುಮಾರ ಸ್ವಾಮಿಯವರ ಅಭಿಪ್ರಾಯ. ಭೌತ ಸರಕುಗಳ ಉತ್ಪಾದನೆಯೇ ಆಧುನಿಕ ಅರ್ಥಜ್ಞರ ಉದ್ದೇಶವಾದರೆ ಮನುಷ್ಯನ ಬಹುಬಯಕೆಗಳಿಗೆ ಕಡಿವಾಣ ಹಾಕಿ ಅವನ ನಡತೆಯನ್ನು ರೂಪಿಸುವುದು ಬೌದ್ಧ ಧರ್ಮೀಯ ಅರ್ಥವ್ಯವಸ್ಥೆಯ ಉದ್ದೇಶವಾಗಿದೆ. ಉತ್ತಮ ನಡತೆ ಕೆಲಸದ ಉತ್ತಮ ನಿರ್ವಹಣೆಗೆ ಕಾರಣವಾದರೆ ಒಳ್ಳೆಯ ಕೆಲಸ ಒಳ್ಳೆಯ ನಡತೆಯನ್ನು ಶ್ರಮಿಕರಲ್ಲಿ ಮೂಡಿಸುತ್ತದೆ. ಪರಸ್ಪರ ಸ್ವಾತಂತ್ರ್ಯ, ಗೌರವಗಳಿರುವ ಕೆಲಸದ ವಾತಾವರಣದಲ್ಲಿ ಉತ್ಪಾದನೆಯಾದ ಸರಕು-ಸೇವೆಗಳಿಗೂ ಮಾರುಕಟ್ಟೆಯಲ್ಲಿ ಅಷ್ಟೇ ಗೌರವವಿರುತ್ತದೆ. ನಿರ್ವಹಿಸಬೇಕಾದ ಯಾವುದೇ ಕೆಲಸದ ಸ್ವರೂಪವನ್ನು ಸರಿಗೊಳಿಸುವ ಪ್ರಯತ್ನ ಅದನ್ನು ನಿರ್ವಹಿಸುವ ವ್ಯಕ್ತಿಯ ಅಂತರಂಗದ ಆಳದಲ್ಲಿ ಹುದುಗಿರಬಹುದಾದ ಮಹತ್ತನ್ನು, ಸೃಜನಶೀಲತೆಯನ್ನು ಬಯಲು ಮಾಡುತ್ತದೆ. ಅವನ ಮೃಗೀಯ ವರ್ತನೆಯನ್ನು ಶಿಸ್ತುಬದ್ಧಗೊಳಿಸಿ, ಸಂಸ್ಕರಿಸಿ ವ್ಯಕ್ತಿತ್ವ ವಿಕಾಸಕ್ಕೆ ಭೂಮಿಕೆ ಒದಗಿಸುತ್ತದೆ.

ಶಕ್ತ ವ್ಯಕ್ತಿಗೆ ಕೆಲಸ ನಿರ್ವಹಿಸುವ ಅವಕಾಶವೇ ನಿರಾಕರಣೆಯಾದಾಗ ಅವನು ಜಿಗುಪ್ಸೆಗೊಳ್ಳುತ್ತಾನೆ. ನಿರಾಶೆ ನಿರುತ್ಸಾಹಗಳಿಗೊಳಗಾಗುತ್ತಾನೆ. ಕಡಿಮೆ ಅವಧಿಯಲ್ಲಿ ಹೆಚ್ಚು ಸರಕುಗಳನ್ನು ಉತ್ಪಾದಿಸಬೇಕೆನ್ನುವ ಉದ್ದೇಶದ ಆಧುನಿಕ ಅರ್ಥಶಾಸ್ತ್ರಜ್ಞ ಶ್ರಮದ ಚಲನೆಗಾಗಿ, ವೇತನಗಳ ಸ್ಥಿರತೆಗಾಗಿ ಅರ್ಥವ್ಯವಸ್ಥೆಯನ್ನು ಪೂರ್ಣ ಉದ್ಯೋಗದ ಸ್ಥಿತಿಯಲ್ಲಿ ಕೊಂಡೊಯ್ಯಬೇಕೇ ಅಥವಾ ಅದಕ್ಕಿಂತ ಕೆಳಸ್ಥಿತಿಯಲ್ಲಿ ಕೊಂಡೊಯ್ಯಬೇಕೇ ಎನ್ನುವ ಲೆಕ್ಕಾಚಾರದಲ್ಲೇ ಸದಾ ತೊಡಗಿರುತ್ತಾನೆ. ಹೆಚ್ಚು ಸರಕುಗಳನ್ನು ಉತ್ಪಾದಿಸುವುದರಲ್ಲೇ ಅವನ ಯಶಸ್ಸನ್ನು ಕಾಣುತ್ತಾನೆ.

'ದಿ ಅಫ್ಲೂಯೆಂಟ್ ಸೊಸೈಟಿ' ಪುಸ್ತಕದ ಕರ್ತೃ ಪ್ರೊ॥ ಗಾಲ್‌ಬ್ರೆತ್ ವಿವರಿಸುವಂತೆ 'ಸರಕುಗಳ ಸೀಮಾಂತ ತುರ್ತು ಅವಶ್ಯಕತೆ ಎಷ್ಟಿರುತ್ತದೋ ಅಷ್ಟೇ ತುರ್ತುಸ್ಥಿತಿ ಶ್ರಮಿಕ ಸಮೂಹದ ಕೊನೆ ವ್ಯಕ್ತಿಗೆ ಉದ್ಯೋಗ ನೀಡಲು ಸೃಷ್ಟಿಯಾಗುತ್ತದೆ.' ಆರ್ಥಿಕ ಸ್ಥಿರತೆಯ ದೃಷ್ಟಿಯಿಂದ ಒಂದು ವೇಳೆ ಸ್ವಲ್ಪ ಪ್ರಮಾಣದ ನಿರುದ್ಯೋಗವನ್ನು ಇಷ್ಟಪಡುವುದಾದರೆ ಅಷ್ಟು ಜನ ನಿರುದ್ಯೋಗಿಗಳಿಗೆ ಜೀವನಾವಶ್ಯಕ ವಸ್ತುಗಳನ್ನು ನೀಡಿ ಅವರ ಜೀವನ ಮಟ್ಟ ಕಾಯಲು ಸನ್ನದ್ಧವಾಗಿರಬೇಕು. ಸರಕುಗಳನ್ನು ಜನರೊಂದಿಗೆ ಸಮೀಕರಿಸುವುದಾಗಲೀ ಅಥವಾ ಅನುಭೋಗವನ್ನು ಸೃಜನಶೀಲ ಕ್ರಿಯೆ ಎಂದು ಪರಿಗಣಿಸುವುದಾಗಲೀ ದುಷ್ಪಶಕ್ತಿಗಳಿಗೆ ಶರಣಾದಂತೆ.

ಬೌದ್ಧ ಧರ್ಮೀಯ ದೃಷ್ಟಿಕೋನ ಯಾಂತ್ರೀಕರಣ ವನ್ನು ಎರಡು ರೀತಿಯಲ್ಲಿ ನೋಡುತ್ತದೆ. ಒಂದು ಮನುಷ್ಯನ ಶಕ್ತಿ ಕೌಶಲ್ಯಗಳನ್ನು ಬೆಳೆಸುವಂತಹುದಾದರೆ, ಮತ್ತೊಂದು ಅವನನ್ನು ಯಂತ್ರಗಳ ಗುಲಾಮನನ್ನಾಗಿಸುವಂತಹುದು. ಮಾನವ ಶಕ್ತಿಯನ್ನು ನಿಷ್ಪ್ರಯೋಜನಗೊಳಿಸುವ ಯಾವುದೇ ಯಾಂತ್ರೀಕರಣ ಒಂದು ಸಂಸ್ಕೃತಿಯನ್ನೇ ನಾಶ ಮಾಡುತ್ತದೆ ಎನ್ನುವುದು ಪಾಶ್ಚಿಮಾತ್ಯರ ಆಧುನಿಕತೆಯನ್ನು, ಪೌರ್ವಾತ್ಯರ ಪ್ರಾಚೀನತೆಯನ್ನು ಅರ್ಥವತ್ತಾಗಿ ವಿವರಿಸಬಲ್ಲ ಆನಂದ ಕುಮಾರ ಸ್ವಾಮಿಯವರ ಅಭಿಪ್ರಾಯ. ಭೌತ ಸರಕುಗಳ ಉತ್ಪಾದನೆಯೇ ಆಧುನಿಕ ಅರ್ಥಜ್ಞರ ಉದ್ದೇಶವಾದರೆ ಮನುಷ್ಯನ ಬಹುಬಯಕೆಗಳಿಗೆ ಕಡಿವಾಣ ಹಾಕಿ ಅವನ ನಡತೆಯನ್ನು ರೂಪಿಸುವುದು ಬೌದ್ಧ ಧರ್ಮೀಯ ಅರ್ಥವ್ಯವಸ್ಥೆಯ ಉದ್ದೇಶವಾಗಿದೆ.

ಬೌದ್ಧಧರ್ಮೀಯ ಅರ್ಥಶಾಸ್ತ್ರದ ಗುರಿ ಅರಸಿಬಂದ ಎಲ್ಲರಿಗೂ ಉದ್ಯೋಗ ನೀಡುವುದಾಗಿದೆ. ಪೂರ್ಣ ಉದ್ಯೋಗಾವಕಾಶಗಳ ಸ್ಥಿತಿಯನ್ನು ಅದು ಒಪ್ಪುತ್ತದೆಯೇ ಹೊರತು ಗರಿಷ್ಠ ಉದ್ಯೋಗಗಳ ಸೃಷ್ಟಿಯನ್ನಾಗಲೀ, ಗರಿಷ್ಠ ಪ್ರಮಾಣದಲ್ಲಿ ಸರಕುಗಳ ಉತ್ಪಾದನೆಯನ್ನಾಗಲೀ ಅಲ್ಲ. (It would be a full employment. Not the maximisation of employment not the maximisation of production). ಎಳೆಯ ಮಕ್ಕಳಿಗೆ ತಾಯ್ತನ ನೀಡಲು ಸಾಧ್ಯವಾಗದಂತೆ ಕಛೇರಿ, ಕಾರ್ಖಾನೆಗಳಲ್ಲಿ ಮಹಿಳೆಯರನ್ನು ದುಡಿಸಿಕೊಳ್ಳುವುದು ಹಿಂಸಾತ್ಮಕವಾದುದರ ಜೊತೆಗೆ ಆರ್ಥಿಕತೆಯಿಂದಲೂ ಅಪ್ರಯೋಜಕ. ಉತ್ತಮ ಕೌಶಲ್ಯಗಳುಳ್ಳ ಕಾರ್ಮಿಕನನ್ನು ಸೈನಿಕ ಕೆಲಸಕ್ಕೆ ನೇಮಿಸುವುದು ನಷ್ಟಕಾರಿ ಕ್ರಮ ಎಂದು ಹೇಗೆ ಆಧುನಿಕ ಅರ್ಥಶಾಸ್ತ್ರಜ್ಞ ನಂಬುತ್ತಾನೋ, ಹಾಗೆಯೇ ಮಕ್ಕಳನ್ನು ತಾಯಿಯ ಪೋಷಣೆಯಿಂದ ವಂಚಿಸುವಂತೆ ಅವರನ್ನು ಕೆಲಸಗಳಿಗೆ ನೇಮಿಸುವುದು ಎಂದು ಬೌದ್ಧ ಧರ್ಮೀಯ ಭಾವಿಸುತ್ತಾನೆ.

ಬೌದ್ಧ ಧರ್ಮದ ತಳಹದಿಯ ಅರ್ಥವ್ಯವಸ್ಥೆ ಸರಕುಗಳ ಉತ್ಪಾದನೆಗಿಂತ ಸಂಕೋಲೆಗಳ ವಿಮೋಚನೆಯಲ್ಲಿ ಆಸಕ್ತಿ ಹೊಂದಿರುತ್ತದೆ. ಅಂದ ಮಾತ್ರಕ್ಕೆ ಕೈ ಸರಕುಗಳ ಉತ್ಪಾದನೆಯನ್ನೇ ಅದು ನಿರಾಕರಿಸುವುದಿಲ್ಲ. ಬದಲಾಗಿ ಸರಕು ಮತ್ತು ಸಂಕೋಲೆಗಳ ನಡುವೆ ಮಧ್ಯಮ ಮಾರ್ಗ ಅನುಸರಿಸುತ್ತದೆ. ವಿಮೋಚನೆಯ ಹಾದಿಯಲ್ಲಿ ಅಡ್ಡಿಯಾಗುವುದು ಭೌತ ಸಂಪತ್ತಲ್ಲ; ಅದಕ್ಕೆ ಅಂಟಿಕೊಳ್ಳುವ ಮನಸ್ಸು, ಭೋಗವಸ್ತುಗಳನ್ನು ಆನಂದಿಸುವುದಲ್ಲ; ಅವುಗಳಿಗಾಗಿ ಹಪಹಪಿಸುವುದು. ಸರಳತೆ ಮತ್ತು ಅಹಿಂಸೆಗಳೇ ಈ ವ್ಯವಸ್ಥೆಯ ತಿರುಳು. ವರ್ಷವೊಂದರಲ್ಲಿ ಒಬ್ಬ ವ್ಯಕ್ತಿ ಅನುಭೋಗಿಸುವ ಸರಕುಗಳನ್ನು ಆಧರಿಸಿಯೇ ಅವನ ಜೀವನಮಟ್ಟವನ್ನು ಅಳೆಯುವ ವಿಧಾನಕ್ಕೆ ಒಗ್ಗಿ ಹೋಗಿರುವ ಆಧುನಿಕ ಅರ್ಥಶಾಸ್ತ್ರಜ್ಞನಿಗೆ ಸಣ್ಣ ಸಂಪನ್ಮೂಲಗಳ ಸರಳ ಬಳಕೆಯಿಂದ ಸಿಗಬಹುದಾದ ಸಂತೃಪ್ತಿಯ ಬಗ್ಗೆ ಅರ್ಥ ಮಾಡಿಸುವುದು ಕಷ್ಟ. ದೃಷ್ಟಿಯಲ್ಲಿ ಹೆಚ್ಚು ಅನುಭೋಗಿಸುವವನೇ ಹೆಚ್ಚು ಸುಖಿ. ಬೌದ್ಧ ಧರ್ಮದ ಅನುಭೋಗದಿಂದ ಹೆಚ್ಚು ತುಷ್ಟಿಯನ್ನು ಹೊಂದುವುದನ್ನು ಪುರಸ್ಕರಿಸುತ್ತದೆ. ಮೈಮುಚ್ಚುವುದು ಮತ್ತು ಆಕರ್ಷಕವಾಗಿ ಕಾಣುವುದು ಬಟ್ಟೆ ತೊಡುವ ಉದ್ದೇಶವಾದರೆ ಆದಷ್ಟು ಕಡಿಮೆ ಸಂಪನ್ಮೂಲಗಳನ್ನು ವ್ಯಯಿಸಿ, ಕಡಿಮೆ ಬಟ್ಟೆಯನ್ನು ಬಳಸುವುದರಿಂದಲೂ ಅದನ್ನು ಈಡೇರಿಸಿಕೊಳ್ಳಬಹುದು. ಬಟ್ಟೆಗೆ ಅನ್ವಯಿಸಿದ್ದು ಇತರೆ ಎಲ್ಲಾ ಬಯಕೆಗಳಿಗೂ ಅನ್ವಯವಾಗುತ್ತದೆ. ಕಡಿಮೆ ಸಂಪನ್ಮೂಲಗಳನ್ನು ಬಳಸಿ ಹೆಚ್ಚು ಸುಖವನ್ನು ಸಾಧಿಸುವ ವಿಧಾನಗಳ ಬಗ್ಗೆ ಬೌದ್ಧ ಧರ್ಮೀಯ ಅರ್ಥಶಾಸ್ತ್ರ ವ್ಯವಸ್ಥಿತ ಅಧ್ಯಯನ ನಡೆಸುತ್ತದೆ.

ಸರಕುಗಳ ಗರಿಷ್ಠ ಅನುಭೋಗವನ್ನೇ ಸಂತೃಪ್ತಿ ಎಂದು ಭಾವಿಸುವುದರಿಂದ ಅವುಗಳ ಅಧಿಕ ಉತ್ಪಾದನೆಗಾಗಿ ಭೂಮಿ, ಶ್ರಮ, ಬಂಡವಾಳಗಳ ಮೇಲೆ ಅಧಿಕ ಒತ್ತಡ ಉಂಟಾಗುತ್ತದೆ. ಇದರಿಂದಾಗಿ ಉತ್ಪಾದನಾ ವಿಧಾನವೂ ಸಂಕೀರ್ಣವಾಗುತ್ತದೆ. ಉತ್ಪಾದನೆಯ ಮೇಲಿನ ಒತ್ತಡ ಮತ್ತು ಅದರ ಸಂಕೀರ್ಣತೆ ನಾಗರಿಕ ಬದುಕನ್ನು ಅಸಹನೀಯವಾಗಿಸುತ್ತದೆ. ಆದ್ದರಿಂದಲೇ ಬರ್ಮಾ ದೇಶದಂತಹ ರಾಷ್ಟ್ರಗಳಿಗಿಂತ ಅಮೆರಿಕಾದಂತಹ ರಾಷ್ಟ್ರಗಳಲ್ಲಿ ಹೆಚ್ಚು ಯಂತ್ರೋಪಕರಣಗಳನ್ನು ಬಳಸಿದಾಗ್ಯೂ ಕೂಡ ನಾಗರಿಕ ಬದುಕು ಸೂಕ್ಷ್ಮ ಮತ್ತು ಅಸಹನೀಯವಾಗುತ್ತಿದೆ. ಹಿಂಸಾತ್ಮಕವಾಗುತ್ತಿದೆ.

ಸರಳತೆ ಮತ್ತು ಅಹಿಂಸೆಗಳು ನಿಕಟ ಸಂಬಂಧ ಹೊಂದಿರುವುದರಿಂದ ಸಂಪನ್ಮೂಲಗಳ ಮಿತವಾದ ಬಳಕೆಯಿಂದ ಹೆಚ್ಚು ನೆಮ್ಮದಿ ಲಭ್ಯವಾಗುತ್ತದೆ. ಆದಷ್ಟೂ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ, ಸ್ಥಳೀಯರ ಅವಶ್ಯಕತೆಗಳ ಈಡೇರಿಕೆಗಾಗಿ ಉತ್ಪಾದಿಸುವುದರಿಂದ ದೂರದ ದೇಶಗಳ ಮೇಲೆ ಸಂಪನ್ಮೂಲಗಳಿಗಾಗಿ ಅವಲಂಬಿಸುವುದು ತಪ್ಪುತ್ತದೆ. ಸ್ಥಳೀಯ ಸಂಪನ್ಮೂಲಗಳನ್ನು, ಮಾರುಕಟ್ಟೆಯನ್ನು ಆಧರಿಸಿ ಬದುಕುವ ಸಮುದಾಯದ ಜನರಿಗಿಂತ ಜಾಗತಿಕ ವ್ಯಾಪಾರ ವ್ಯವಸ್ಥೆಯನ್ನು ಅವಲಂಬಿಸಿ ಬದುಕುವ ಜನ ಹೆಚ್ಚು ಹಿಂಸಾವಾದಿಗಳಾಗಿರುತ್ತಾರೆ. ಕೆಲವೇ ಸಂದರ್ಭದಲ್ಲಿ ಅದೂ ಸಣ್ಣ ಪ್ರಮಾಣದಲ್ಲಿ ಸರಕುಗಳನ್ನು ಆಮದು ಮಾಡಿಕೊಳ್ಳುವುದನ್ನು ಬಿಟ್ಟರೆ ಉಳಿದಂತೆ ದೂರದ ದೇಶಗಳ ಮೇಲಿನ ಅವಲಂಬನೆ ಆರ್ಥಿಕವಾಗಿ ಲಾಭದಾಯಕವಲ್ಲ. ಕೆಲಸ ನಿರ್ವಹಿಸುವ ಸ್ಥಳ ಮತ್ತು ವಾಸಿಸುವ ಮನೆಗಳ ಮಧ್ಯದ ದೂರವನ್ನು ಕ್ರಮಿಸಲು ಬಳಸುವ ಸಾರಿಗೆ ವ್ಯವಸ್ಥೆ ಜೀವನ ಮಟ್ಟದಲ್ಲಿನ ಹೆಚ್ಚಳವಲ್ಲ. ಹಾಗೆಯೇ ದೂರದ ದೇಶಗಳಿಂದ ಸಂಪನ್ಮೂಲಗಳನ್ನು ಪಡೆಯಲು ಏರ್ಪಡಿಸಿಕೊಂಡ ಸಾರಿಗೆ ಸಂಪರ್ಕ ವ್ಯವಸ್ಥೆಯ ಹೆಚ್ಚಳ ಕೂಡ. ಈ ಹೆಚ್ಚಳದ ಬಗೆಗಿನ ಅಂಕಿಸಂಖ್ಯೆಗಳನ್ನೇ ಆಧುನಿಕ ಅರ್ಥಶಾಸ್ತ್ರಜ್ಞ ಅಭಿವೃದ್ಧಿ ಎಂದು ಪರಿಗಣಿಸಿದರೆ ಬೌದ್ಧ ಧರ್ಮೀಯ ಅರ್ಥಜ್ಞ ಅದನ್ನು ಅನುಭೋಗದಲ್ಲಿನ ಅನಪೇಕ್ಷಿತ ನಷ್ಟ ಮತ್ತು ಸಂಪನ್ಮೂಲಗಳ ದುಂದುಗಾರಿಕೆ ಎಂದು ಭಾವಿಸುತ್ತಾನೆ.

'ಕನಕ'



ಲೋಕದ ಡೊಂಕಿಗೆ ತಿದ್ದಿ, ತೀಡಿ,
ತೇಪೆ ಹಾಕುವ ಬಯಕೆ
ಲಖ-ಲಕಿಸುವ ನೋವುಗಳಿಗೆ
ಕನಕ ಸಿಂಚನದ ರವಿಕೆ

ನಿನ್ನ ನೆನೆದಂತೆಲ್ಲಾ ಆತಂಕ, ಕಾತರ
ಭಯೋತ್ಪಾದನೆಯ ನೆರಳಲ್ಲಿ
ಜಾರ್ಜ್ ಬುಷ್‌ನಿಗೆ ಆಸ್ತಿಯಾದೆ,
ನಕ್ಸಲ್ - ಬೋಡೋಗಳ ಕೈಯಲ್ಲಿ
ಪ್ರತಿಭಟನೆಯ ಅಸ್ತ್ರವಾದೆ
ಪೇಪರ್, ಟಿವಿ, ರೇಡಿಯೋ ತುಂಬೆಲ್ಲಾ
ದುಡಿಮೆಗೆ ಮೂಲ ಸೆಲೆಯಾದೆ !

ಭಾರೀ, ಭಾರೀ, ಯೋಜನೆಯ ಪ್ಯಾಕೇಜ್‌ಲ್ಲಿ
ಕನಕನದೇ ಪ್ರತಿಬಿಂಬ, ಅದಕ್ಕೆ
ಸಚಿವ - ಶಾಸಕರ ಚುನಾವಣೆಯಲ್ಲಿ
ಲಾಟಿ - ಲೂಟಿಗಳ ಹಗ್ಗ - ಜಗ್ಗಾಟ
ನೋಡಿದೆಲ್ಲೆಡೆ ಭ್ರಷ್ಟಾಚಾರದ ರಂಪಾಟ
ಮತ್ತೇ, ಮತ್ತೇ ಘಟ್ಟಿಗೊಳ್ಳುತ್ತಿದೆ
ನಿರುದ್ಯೋಗದ ದೊಂಬರಾಟ !

ಕೊಲೆ - ಸುಲಿಗೆ - ದರೋಡೆಯ ಹಿಂದೆ
ದುಃಖ - ದುಮ್ಮಾನಗಳಿಗೆ ನಿನ್ನಯ ಹೊದಿಕೆ
ನಾನು - ನನ್ನದು - ಪ್ರತಿಯೊಂದಕ್ಕೂ
ಕನಕನದೇ ಕ್ಷೀರಾಭಿಷೇಕ
ಕೊನೆಗೂ ಬಿಡಲಿಲ್ಲ ದೇವರಿಗೂ
ದಾಸನ ಮೇಲೆ ಮೋಹವುಕ್ಕಿ
ಕೊರೆದೇ ಬಿಟ್ಟ ಕನಕನ ಕಿಂಡಿ !

'ದಾಸ' ಕನಕ ಮಾದರಿಯಾಗಲಿಲ್ಲ
ನಮಗೆ, ಕಟ್ಟಲು ಹೊರಟಿದ್ದೇವೆ
ಮನಸ್ಸು - ಮಹಲುಗಳ ಮೇಲೆ
ಗೋಪುರದ ಮೇಲೊಂದು ಗೋಪುರ
ಅದಕ್ಕಾಗಿ ಕನಕನ ಆಸ್ತಿಭಾರ
ಬದುಕಿಗೊಂದು ಅಸ್ತ್ರ ಹೊಳೆದಂತೆ
ಮಾಡಿದ ಪಾಪ ತೊಳೆದುಕೊಳ್ಳುವ
ಹುನ್ನಾರ ನೆನಪಿನ ಬಂಡಾರದಲಿ
ಕನಕನ ಹೊಸ ಚಿತ್ತಾರ. !

○ ಪಿ. ಹುಚ್ಚೂಸಾಬ್

ಪಾಶ್ಚಿಮಾತ್ಯ ವ್ಯಕ್ತಿಯನ್ನು ಅಂದರೆ ಆಧುನಿಕ ಅರ್ಥಜ್ಞನನ್ನು ಕುರಿತು ಫ್ರೆಂಚ್ ರಾಜಕೀಯ ಚಿಂತಕ ಬರ್ಟ್ರೆಂಟ್ ಡಿ ಜೋವಿನೆಲ್ ಹೇಳುವಂತೆ : 'ಮಾನವಶ್ರಮವೊಂದನ್ನುಳಿದು ಇನ್ನಾವುದನ್ನೂ ಆತ ಖರ್ಚು ಎಂದು ಪರಿಗಣಿಸುವುದಿಲ್ಲ. ಎಷ್ಟು ಖನಿಜಗಳು ಪೋಲಾಗುತ್ತವೆ ಅಥವಾ ಜೀವಗಳು ನಾಶವಾಗುತ್ತವೆ ಎನ್ನುವುದರ ಬಗ್ಗೆ ಆತ ತಲೆ ಕೆಡಿಸಿಕೊಳ್ಳುವುದಿಲ್ಲ. ಮನುಷ್ಯನ ಬದುಕು ಇನ್ನುಳಿದ ಜೀವಜಗತ್ತಿನ ಜಾಲದ ಮೇಲೆ ಅವಲಂಬಿಸಿದೆ ಎನ್ನುವುದು ತಿಳಿಯುವುದಿಲ್ಲ. ಮನುಷ್ಯರನ್ನುಳಿದು ಇತರೆ ಜೀವ ಪ್ರಪಂಚದ ದೂರವಾದ ಪಟ್ಟಣಗಳಿಂದ ಹೊರಡುವ ಜಗತ್ತಿನ ಆಳ್ವಿಕೆಯ ನಿರ್ಧಾರಗಳು ನಮ್ಮ ನಿತ್ಯ ಬಳಕೆಯ ಗಾಳಿ, ನೀರು ಮರ ಮುಂತಾದ ಸಂಪನ್ಮೂಲಗಳ ಸಂರಕ್ಷಣೆಯ ಬಗ್ಗೆ ಗಮನಹರಿಸುವುದಿಲ್ಲ.' ಬುದ್ಧನ ಬೋಧನೆಗಳಲ್ಲಿ ಜೀವಗಳ ಅಸ್ತಿತ್ವಕ್ಕೆ, ಮರಗಳಿಗೆ ವಿಶೇಷ ಸ್ಥಾನವಿದೆ. ಪ್ರತಿಯೊಬ್ಬ ಅನುಯಾಯಿ ತನ್ನ ಜೀವಿತ ಅವಧಿಯಲ್ಲಿ ಆಗಾಗ್ಗೆ ಗಿಡ ನೆಟ್ಟು ಅದು ಮರವಾಗಿ ಬೆಳೆಯುವವರೆಗೆ ಆರೈಕೆ ಮಾಡುವುದು ಕಡ್ಡಾಯವಾಗಿದೆ. ಈ ನಿಯಮವನ್ನು ಅನುಸರಿಸಿದಲ್ಲಿ ಯಾವ ವಿದೇಶಿ ಬಂಡವಾಳವೂ ಇಲ್ಲದೆ ಅಧಿಕ ಆರ್ಥಿಕ ಅಭಿವೃದ್ಧಿಯನ್ನು ಕಾಣಬಹುದು. ಆಗ್ನೇಯ ಏಷ್ಯಾ ರಾಷ್ಟ್ರಗಳ ಬಹಳಷ್ಟು ಸಮಸ್ಯೆಗಳು ನೈಸರ್ಗಿಕ ಸಂಪನ್ಮೂಲಗಳ ದುರ್ಬಳಕೆಯಿಂದಲೇ ಆರಂಭವಾಗುತ್ತವೆ.

ಆಧುನಿಕ ಅರ್ಥಶಾಸ್ತ್ರ ಪುನರ್‌ಸೃಷ್ಟಿಯಾಗುವ ಮತ್ತು ಆಗದ ಸಂಪನ್ಮೂಲಗಳ ನಡುವೆ ಅದಷ್ಟು ವ್ಯತ್ಯಾಸಗಳನ್ನು ಕಾಣುವುದಿಲ್ಲ. ಕಲ್ಲಿದ್ದಲು, ತೈಲ, ಮರ, ಜಲಶಕ್ತಿ ಮುಂತಾದವುಗಳ ನಡುವೆ ಅದು ಕಾಣುವ ಒಂದೇ ಒಂದು ವ್ಯತ್ಯಾಸ ಎಂದರೆ ಯಾವುದು ಸಸ್ತ ಎನ್ನುವುದು. ಪುನರ್‌ಸೃಷ್ಟಿಯಾಗದ ಸಂಪನ್ಮೂಲಗಳ ದುಂದುಗಾರಿಕೆ ಹಿಂಸಾತ್ಮಕವಾದುದು. ಯೂರೋಪಿನ ಕಲಾಕೃತಿಯನ್ನು ಅಮೆರಿಕಾಕ್ಕೆ ಆಕರ್ಷಕ ಬೆಲೆಗೆ ಮಾರಿದರೆ ಅದನ್ನೊಂದು ಆರ್ಥಿಕ ಸಾಧನೆ ಎಂದು ಆಧುನಿಕ ಅರ್ಥಜ್ಞ ಹೇಗೆ ನಂಬಲಾರನೋ ಹಾಗೆಯೇ ಪುನರ್‌ಸೃಷ್ಟಿಯಾಗದ ಸಂಪನ್ಮೂಲಗಳ ಅಧಿಕ ಬಳಕೆ ಕೂಡ ಆರ್ಥಿಕ ಅಭಿವೃದ್ಧಿಯಲ್ಲ. ಅವುಗಳನ್ನು ಜಗತ್ತಿನ ಜನಸಂಖ್ಯೆ ಶಾಶ್ವತವಾಗಿ ಅವಲಂಬಿಸುವುದೂ ಸಾಧ್ಯವಿಲ್ಲ. ನಿಸರ್ಗದ ಮೇಲಿನ ಮನುಷ್ಯನ ಹಿಂಸಾತ್ಮಕ ಚಟುವಟಿಕೆಗಳು ಮನುಷ್ಯ - ಮನುಷ್ಯರ ನಡುವೆ ಹಿಂಸೆಯನ್ನು ಭುಗಿಲೇಳಿಸುತ್ತವೆ.

ಈ ಎಲ್ಲಾ ಅಂಶಗಳನ್ನು ಪರಿಗಣಿಸಿದ 'ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ' ಸಂಸ್ಥೆಯ ಪ್ರೊ॥ ಹ್ಯಾರಿಸ್ ಬ್ರೌನ್ 'The Challenges of Man's Future' ಎನ್ನುವ ಪುಸ್ತಕದಲ್ಲಿ ವಿಶ್ಲೇಷಿಸಿರುವಂತೆ 'ಅತಿ ಕೈಗಾರಿಕೀಕೃತ ಸಮಾಜ ಅಸ್ಥಿರವಾದುದು. ಮತ್ತೆ ಅದು ಪುರಾತನ ಕೃಷಿ ಮೂಲ ವ್ಯವಸ್ಥೆಯತ್ತ ತಿರುಗುವಂತಹುದು. ವ್ಯಕ್ತಿ ಸ್ವಾತಂತ್ರ್ಯವನ್ನು ಅಸ್ಥಿರಗೊಳಿಸುವ ಅಂಶಗಳನ್ನು ನಿಯಂತ್ರಿಸುವುದು ಅಸಾಧ್ಯವಾದಾಗ ಇಡೀ ನಾಗರಿಕ ಸಮಾಜವೇ ಅಸ್ಥಿರಗೊಳ್ಳುತ್ತದೆ. ಇಂದಿನ ನಮ್ಮ ಮುಖ್ಯ ಪ್ರಶ್ನೆ ಎಂದರೆ ನಾವು ಅನುಸರಿಸುತ್ತಿರುವ ಆಧುನೀಕರಣ ಧಾರ್ಮಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವುದರಿಂದ ನಮ್ಮನ್ನು ನಿರೀಕ್ಷಿತ ದಿಕ್ಕಿನಲ್ಲಿ ಮುನ್ನಡೆಸುತ್ತದೆಯೇ ಎನ್ನುವುದು.' ಈ ಅನುಮಾನ ದಿಂದಾಗಿಯೇ ಇಂದು ನಾವು ಆಧ್ಯಾತ್ಮಿಕ ಮೌಲ್ಯಗಳಿಗಿಂತ ಆಧುನಿಕ ಅಭಿವೃದ್ಧಿಯೇ ಮುಖ್ಯ ಎನ್ನುವ ಜನರಿಗೆ ಬೌದ್ಧ ಧರ್ಮೀಯ ಅರ್ಥಶಾಸ್ತ್ರದ ಅನುಷ್ಠಾನವನ್ನು ಶಿಫಾರಸ್ಸು ಮಾಡಬೇಕಾಗಿದೆ.

> ಬುದ್ಧನ ಬೋಧನೆಗಳಲ್ಲಿ ಜೀವಗಳ ಅಸ್ತಿತ್ವಕ್ಕೆ, ಮರಗಳಿಗೆ ವಿಶೇಷ ಸ್ಥಾನವಿದೆ. ಪ್ರತಿಯೊಬ್ಬ ಅನುಯಾಯಿ ತನ್ನ ಜೀವಿತ ಅವಧಿಯಲ್ಲಿ ಆಗಾಗ್ಗೆ ಗಿಡ ನೆಟ್ಟು ಅದು ಮರವಾಗಿ ಬೆಳೆಯುವವರೆಗೆ ಆರೈಕೆ ಮಾಡುವುದು ಕಡ್ಡಾಯವಾಗಿದೆ. ಈ ನಿಯಮದ ಅನುಸರಣೆಯಿಂದ ಯಾವ ವಿದೇಶಿ ಬಂಡವಾಳವೂ ಇಲ್ಲದೆ ಅಧಿಕ ಆರ್ಥಿಕ ಅಭಿವೃದ್ಧಿಯನ್ನು ಕಾಣಬಹುದು.

ಹೀಗೆಂದರೆ 'ಆಧುನಿಕ ಅಭಿವೃದ್ಧಿ' ಮತ್ತು 'ಸಾಂಪ್ರಾದಾಯಕ ಜಡತ್ವ' ಇವುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕೆಂಬುದಲ್ಲ, ಆದರೆ ಅದು ಇವೆರಡರ ಮಧ್ಯೆ ಅನಾಹುತಕಾರಿಯಲ್ಲದ ಅಭಿವೃದ್ಧಿಯ ಮಾರ್ಗವನ್ನು ಕಂಡುಕೊಳ್ಳುವುದಾಗಿದೆ. ಭೌತಸರಕುಗಳ ಬಗೆಗಿನ ದಾಹ ಮತ್ತು ಸಾಂಪ್ರಾದಾಯಿಕ ಸಮಾಜದ ಜಡತ್ವಗಳ ನಡುವೆ ಸರಿದಾರಿಯೊಂದನ್ನು ಅನುಸರಿಸಬೇಕಾಗಿದೆ. ಅದೇ ಬುದ್ಧನ ಅಷ್ಟಾಂಗ ಮಾರ್ಗಗಳಲ್ಲಿ ಒಂದಾದ ಸಜ್ಜೀವನ (Right livelyhood).

(ಈ ಲೇಖನವನ್ನು ಆನಂದಕಂದ ಗ್ರಂಥಮಾಲೆಯ ಜಿ.ಎನ್. ಮಲ್ಲಿಕಾರ್ಜುನ ಅವರ 'ಬೋಧಿ ವೃಕ್ಷದ ಕೆಳಗೆ', ಸ್ವಾತಂತ್ರ್ಯೋತ್ತರ ಭಾರತದ ಅಭಿವೃದ್ಧಿ ವಿನ್ಯಾಸಗಳು, ಎಂಬ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ.)

□

ಮಹಿಳೆ ಮತ್ತು ಲೈಂಗಿಕ ಕಿರುಕುಳ

ಆದಿ ಕಾಲದಿಂದಲೂ ನಮ್ಮಲ್ಲಿ ಮಹಿಳೆಗೆ ತನ್ನದೇ ಆದ ಗೌರವಯುತ ಸ್ಥಾನವಿದೆ. ಭಾರತೀಯ ನಾರಿಯ ಸ್ಥಾನಮಾನಕ್ಕೂ, ಜಗತ್ತಿನ ಇತರೆ ದೇಶಗಳ ನಾರಿಯರ ಸ್ಥಾನಮಾನಕ್ಕೂ ಇರುವ ವ್ಯತ್ಯಾಸ ಗಣನೀಯವಾಗಿದೆ. ಜಗತ್ತಿನಲ್ಲಿ ಸ್ತ್ರೀತ್ವವನ್ನು ದೈವತ್ವಕ್ಕೆ ಏರಿಸಿದ ಕೀರ್ತಿ ಮಾತ್ರ ನಮ್ಮ ಭಾರತ ದೇಶಕ್ಕೆ ಇದೆ. 'ಮಾತೃ ದೇವೋಭವ' ಎಂಬ ವಾಕ್ಯವೇ ಇದಕ್ಕೆ ಸಾಕ್ಷಿಯಾಗಿದೆ. ಹಿಂದಿನಿಂದಲೂ ಮಹಿಳೆ ತನ್ನ ಗೃಹಸ್ಥ ಜೀವನದ ಜೊತೆಗೆ ಉಳಿದ ಎಲ್ಲಾ ರಂಗಗಳಲ್ಲಿಯೂ ಅವಿರತವಾಗಿ ದುಡಿಯುತ್ತ ತನ್ನದೇ ಆದ ಸ್ಥಾನವನ್ನು ಉಳಿಸಿಕೊಂಡಿದ್ದಾಳೆ. ಇದು ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಸಂಸಾರಿಕವಾಗಿ, ವೈಜ್ಞಾನಿವಾಗಿ, ಬೌದ್ಧಿಕವಾಗಿ ಮತ್ತು ನೈತಿಕವಾಗಿ ಯಾವುದರಲ್ಲಿ ತಾನು ಕಡಿಮೆ ಇಲ್ಲಾ, ತಾನು ಅಬಲೆಯಲ್ಲ ಸಬಲೆ ಅನ್ನುವುದನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದಾಳೆ ಎಂಬುದು ಹುಬ್ಬೇರಿಸುವ ಸಂಗತಿಯಾದರೆ, ಪ್ರಸ್ತುತದ ದಿನಗಳಲ್ಲಿ ಮಹಿಳೆ ಎಲ್ಲಾ ಕಡೆಗಳಲ್ಲಿ ಲೈಂಗಿಕ ಕಿರುಕುಳ ಅನುಭವಿಸುತ್ತಿರುವುದು ವಿಷಾದನೀಯ.

ಬಡವರ ಮೇಲೆ ಬಲ್ಲಿದರ, ಇಲ್ಲದವರ ಮೇಲೆ ಉಳ್ಳವರ, ದುರ್ಬಲರ ಮೇಲೆ ಸಬಲರ ದೌರ್ಜನ್ಯ ದಬ್ಬಾಳಿಕೆಗಳು ನಿರಂತರವಾಗಿ ನಡೆದುಕೊಂಡು ಬರುತ್ತಿವೆ. ಇತ್ತೀಚಿನ ದಿನಗಳಲ್ಲಿ ಇಂಥ ಸಂಗತಿಗಳು ಲೆಕ್ಕವಿಲ್ಲದಷ್ಟು ಇವೆ. ವರ್ಣಭೇದ ನೀತಿಯಾಗಲಿ, ಲಿಂಗಭೇದ ನೀತಿಯಾಗಲಿ, ಅಸಹಾಯಕರನ್ನು ಮತ್ತು ಅಮಾಯಕರನ್ನು ಶೋಷಿಸಿತೇ ಹೊರತು ಚರಿತ್ರೆಯ ಸಹನೀಯ ಭಾಗವಾಗಲಿಲ್ಲ. ವಿಷಾದದ ಸಂಗತಿಯೆಂದರೆ ಅದು ಮುಗಿದುಹೋದ ಅಧ್ಯಯನವಾಗದೆ, ಇವತ್ತಿಗೂ ಮರುಕಳಿಸುತ್ತಿರುವುದು ಚರಿತ್ರೆ ಮತ್ತು ವರ್ತಮಾನದ ಪುಟಗಳಿಂದ ಇಂತಹ ಕೆಲವು ಕಹಿ ಘಟನೆಗಳು ಇಲ್ಲಿವೆ.

ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳಿಂದ ನರ್ಸ್‌ಗಳ ಅಥವಾ ಮಹಿಳಾ ವೈದ್ಯಾಧಿಕಾರಿಗಳ ಮೇಲೆ, ಕೈಗಾರಿಕೆಗಳಲ್ಲಿ ಮೇಲಾಧಿಕಾರಿಗಳಿಂದ ಮಹಿಳಾ ಕ್ಲರ್ಕ್, ಟೈಪಿಸ್ಟ್ ಮತ್ತು ಕೆಲಸದಾಳುಗಳ ಮೇಲೆ, ಕಾಲೇಜ್ ಮತ್ತು ಪ್ರೌಢ ಶಾಲೆಗಳಲ್ಲಿ ಲೆಕ್ಚರರ್ಸ್ ಮತ್ತು ಮುಖ್ಯೋಪಾಧ್ಯಾಯರಿಂದ ಟೀಚರ್ಸ್ ಮತ್ತು ವಿದ್ಯಾರ್ಥಿನಿಯರ ಮೇಲೆ, ಕೃಷಿ ಕ್ಷೇತ್ರಗಳಲ್ಲಿ ಭೂಮಾಲೀಕರಿಂದ ಮಹಿಳಾ ಕೂಲಿಯಾಳುಗಳ ಮೇಲೆ ಮತ್ತು ಮಾರುಕಟ್ಟೆ ಬಸ್‌ನಿಲ್ದಾಣ, ರೈಲುನಿಲ್ದಾಣ, ಪೊಲೀಸ್ ಠಾಣೆ ಇತ್ಯಾದಿ ಕಡೆಗಳಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳಗಳು ನಿರಂತರವಾಗಿ ನಡೆಯುತ್ತಲೇ ಇವೆ. ರಕ್ಷಣೆ ನೀಡುವವರಿಂದಲೇ ಲೈಂಗಿಕ ಕಿರುಕುಳ ನಡೆಯುತ್ತಿರುವಾಗ ಸಾಮಾನ್ಯರ ಪಾಡೇನು ಎಂದು ವಿಚಾರ ಮಾಡುತ್ತಲೇ ಕಾಲ ಕಳೆಯುವಂತಾಗಿದೆ.

ಭಾರತದಲ್ಲಿ ಲೈಂಗಿಕ ಕಿರುಕುಳಗಳು

ಭಾರತವು ಪ್ರಪಂಚದಲ್ಲಿಯೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ಎರಡನೆಯ ರಾಷ್ಟ್ರವಾಗಿದೆ. ೧೦೨ ಕೋಟಿ ಜನಸಂಖ್ಯೆಯಲ್ಲಿ ಸುಮಾರು ೪೯ ಕೋಟಿಗಿಂತ ಹೆಚ್ಚು ಮಹಿಳೆಯರಿದ್ದಾರೆ ಎಂಬುದು ಆಶ್ಚರ್ಯಕರ ಸಂಗತಿಯಾಗಿದೆ. ಮಹಿಳೆಯರ ಮೇಲೆ ನಡೆಯುವ ಕಿರುಕುಳಗಳಲ್ಲಿ ಯುರೋಪ್ ರಾಷ್ಟ್ರಗಳನ್ನು ಬಿಟ್ಟರೇ ಭಾರತವೆ ಮುಂಚೂಣಿಯಲ್ಲಿರುವುದು ತಿಳಿದುಬಂದಿದೆ. ಭಾರತದಲ್ಲಿ ಲೈಂಗಿಕ ಕಿರುಕುಳದ ಪ್ರಥಮ ಪ್ರಕರಣ ಬಹುರಾಷ್ಟ್ರೀಯ 'ಟೀನ್' ಕಂಪನಿಯಲ್ಲಿ ಕಂಡುಕೊಂಡಿತು. ಕಂಪನಿಯ ಮ್ಯಾನೇಜರ್ ಸೆಕ್ರೆಟರಿಯತ್ತ ಕೆಟ್ಟದೃಷ್ಟಿಯಿಂದ ನೋಡುತ್ತಿದ್ದ. ಆಕೆಗೆ, ನಿನಗೆ ಹೆಚ್ಚು ಸಂಬಳ ಹಾಗೂ ಬಡ್ತಿ ಸಹ ಕೊಡುತ್ತೇನೆ, ಆದರೆ ನಾನು ಹೇಳಿದಂತೆ ಮಾಡಬೇಕು ಎಂದು ಒತ್ತಡ ತರುತ್ತಿದ್ದ. ಆ ಯುವತಿ ಸ್ಪಷ್ಟವಾಗಿ ಅದಕ್ಕೆ

ಮಹಿಳೆ

ಬಡವರ ಮೇಲೆ ಬಲ್ಲಿದರ, ಇಲ್ಲದವರ ಮೇಲೆ ಉಳ್ಳವರ, ದುರ್ಬಲರ ಮೇಲೆ ಸಬಲರ ದೌರ್ಜನ್ಯ ದಬ್ಬಾಳಿಕೆಗಳು ನಿರಂತರವಾಗಿ ನಡೆದುಕೊಂಡು ಬರುತ್ತಿವೆ. ಇತ್ತೀಚಿನ ದಿನಗಳಲ್ಲಿ ಇಂಥ ಸಂಗತಿಗಳು ಲೆಕ್ಕವಿಲ್ಲದಷ್ಟು ಇವೆ. ವರ್ಣಭೇದ ನೀತಿಯಾಗಲಿ, ಲಿಂಗಭೇದ ನೀತಿಯಾಗಲಿ, ಅಸಹಾಯಕರನ್ನು ಮತ್ತು ಅಮಾಯಕರನ್ನು ಶೋಷಿಸಿತೇ ಹೊರತು ಚರಿತ್ರೆಯ ಸಹನೀಯ ಭಾಗವಾಗಲಿಲ್ಲ. ವಿಷಾದದ ಸಂಗತಿಯೆಂದರೆ ಅದು ಮುಗಿದುಹೋದ ಅಧ್ಯಯನವಾಗದೆ, ಇವತ್ತಿಗೂ ಮರುಕಳಿಸುತ್ತಿರುವುದು ಚರಿತ್ರೆ ಮತ್ತು ವರ್ತಮಾನದ ಪುಟಗಳಿಂದ ಇಂತಹ ಕೆಲವು ಕಹಿ ಘಟನೆಗಳು ಇಲ್ಲಿವೆ.

○ ಶಿವರಾಜ ಬಿ.ಕೆ, ವಿಠೋಬ ಭೀಮಣ್ಣ



ನಿರಾಕರಿಸಿದ್ದರ ಪರಿಣಾಮವಾಗಿ ಆಕೆ ಕೆಲಸ ಕಳೆದುಕೊಳ್ಳಬೇಕಾಯಿತು. ಇಂತಹ ಉದಾಹರಣೆಗಳು ನಮ್ಮಲ್ಲಿ ಸಾಕಷ್ಟು ಸಿಗುತ್ತವೆ. ನಮ್ಮ ದೇಶದಲ್ಲಿ ಅತ್ಯಾಚಾರ, ಅಪಹರಣ, ವರದಕ್ಷಿಣೆ ಸಾವು, ಹಿಂಸೆ, ಲೈಂಗಿಕ ಕಿರುಕುಳಗಳಂತಹ ಮುಂತಾದ ಅಪರಾಧಗಳನ್ನು ಕೋಷ್ಟಕ-೧ರ ಸಹಾಯದಿಂದ ತಿಳಿದುಕೊಳ್ಳಬಹುದಾಗಿದೆ.

ಈ ಅಂಕಿ ಅಂಶಗಳನ್ನು ನೋಡಿದಾಗ ಯಾವುದೇ ನಾಗರಿಕ ಸಮಾಜ ತಲೆ ತಗ್ಗಿಸದೆ ಇರುವುದಿಲ್ಲ. ವರದಕ್ಷಿಣೆ ಪೀಡೆ, ಲೈಂಗಿಕ ಕಿರುಕುಳ, ಬಾಲ್ಯ ವಿವಾಹ ಮುಂತಾದ ಪ್ರಕರಣಗಳು ಪತಿ, ತಂದೆ - ತಾಯಿ ಕುಟುಂಬದ ಇತರ ಸದಸ್ಯರಿಂದಲೇ ನಡೆಯುವುದರಿಂದ ಕೆಲವೆಡೆ 'ಮನೆ' ಎಂಬ ಸ್ಥಳ ಮಹಿಳೆಯರಿಗೆ ಸುರಕ್ಷಿತ ಸ್ಥಳ ಆಗದೇ ಮಸಣಗಳಾಗಿವೆ.

ಭಾರತದಲ್ಲಿ ಬಾಲ್ಯ ವಿವಾಹ, ವರದಕ್ಷಿಣೆ ಪೀಡೆ, ಅತ್ಯಾಚಾರ, ಅಪಹರಣಗಳಂಥ ಪ್ರಕ್ರಿಯೆಗಳು ಮಹಿಳೆಯರು ಕೆಲಸ ಮಾಡುವ ಕಡೆಗಳಲ್ಲಿ ಲೈಂಗಿಕ ಕಿರುಕುಳ, ಗಂಡಂದಿರಿಂದ ದೈಹಿಕ ಮತ್ತು ಮಾನಸಿಕ ಹಿಂಸಾಚಾರ, ಆರೋಗ್ಯದ ದೃಷ್ಟಿಯಿಂದ ನಡೆಸಲಾಗುವ ಹಿಂಸಾಚಾರಗಳು, 'ಗಂಡು ಮಗು'ವಿಗೆ ಜನ್ಮ ಕೊಟ್ಟಿಲ್ಲ ಎಂಬ ಕಾರಣಕ್ಕೆ ಅತ್ತೆ ಮಾವ, ಗಂಡ, ಮೈದುನರಿಂದ ನಡೆಸಲಾಗುವ ಹಿಂಸಾಕೃತ್ಯಗಳು ಭಾರತದ ಸ್ತ್ರೀಯನ್ನು ಕುಗ್ಗಿಸಿವೆ. ಜಾತಿ ಆಧಾರಿತ ಹಿಂಸೆ, ಗರ್ಭದಲ್ಲಿ ಹೆಣ್ಣು ಶಿಶು ಇದೆ ಎಂದು ತಿಳಿದು, ಪ್ರೀತಿಯಿಂದಲೇ 'ಭ್ರೂಣ ಹತ್ಯೆ' ಮಾಡಿಸುತ್ತಿರುವುದು ಇತ್ಯಾದಿಗಳನ್ನು ನೋಡಿದರೆ ಹೆಣ್ಣು ಈ ಆಧುನಿಕ ಯುಗದಲ್ಲೂ ಕೂಡ ಹೆಚ್ಚಿನ ಹಿಂಸೆಗೆ ಗುರಿಯಾಗಿರುವುದು ನಾಗರಿಕ ಜಗತ್ತಿನ ಕರಾಳ ಮುಖವಾಗಿದೆ. (ರವೀಂದ್ರ ಭಟ್ಟ ಐನಕೈ - ೨೦೦೪).

ಭಾರತದಲ್ಲಿ ರಾಜ್ಯವಾರು ಲೈಂಗಿಕ ಕಿರುಕುಳ ಪ್ರಕರಣಗಳು

ಕೆಲವೊಂದು ಅಂಕಿ-ಅಂಶಗಳನ್ನು ಅವಲೋಕಿಸಿದಾಗ ಭಾರತದ ಮಹಾನಗರಗಳಲ್ಲಿಯೇ ಹೆಚ್ಚು ಲೈಂಗಿಕ ಕಿರುಕುಳದ ಪ್ರಕರಣಗಳು ಬೆಳಕಿಗೆ ಬಂದಿರುವುದು ಕಂಡುಬರುತ್ತದೆ. ೨೦೦೦ದಲ್ಲಿ ದೆಹಲಿಯಂತಹ ಮಹಾನಗರ ಒಂದರಲ್ಲಿಯೇ ೪೭೩ ಅತ್ಯಾಚಾರ ಪ್ರಕರಣಗಳು ನಡೆದಿವೆ ಎಂದಾದರೆ, ದೂರು ನೀಡದೆ ಮರ್ಯಾದೆಗೆ ಅಂಜಿ ಕುಳಿತವರ ಸಂಖ್ಯೆಯನ್ನು ನೀವೇ ಊಹಿಸಬಹುದು. ಇದರಲ್ಲಿ ಶೇ ೨.೫ ರಷ್ಟು ಜನ ೧೧ ರಿಂದ ೧೫ ವಯಸ್ಸಿನ ಒಳಗಿರುವ ಬಾಲೆಯರೆಂದರೆ ಆಶ್ಚರ್ಯಕರ ಸಂಗತಿಯಾಗಬಹುದು ! ಸೆಪ್ಟೆಂಬರ್ ೨೦೦೨ರಲ್ಲಿ ದೆಹಲಿಯ 'ಸಂಗಮ್ ವಿಹಾರ್' ಪ್ರದೇಶದಲ್ಲಿ ೮೦ರ ವೃದ್ಧೆಯೊಬ್ಬಳ ಮೇಲೆ ಅತ್ಯಾಚಾರವಾಗಿದೆ ಎಂದರೆ ನೀವು ನಂಬುತ್ತೀರಾ ? ನಂಬಲೇಬೇಕಾದುದು. ಅತ್ಯಾಚಾರ ಮಾಡಿದವನು ಬೇರೆ ಯಾರೂ ಅಲ್ಲ, ಅವಳ ೧೯ರ ಹರೆಯದ ಮೊಮ್ಮಗನ ಸ್ನೇಹಿತ ! ವಿಚಿತ್ರವೆಂದರೆ 'ಅಪರಾಧಿ'ಗೆ ಆಕೆ ಅಪರಿಚಿತೆಯಾಗಿರಲಿಲ್ಲ. (ದಿಕ್ಸೂಚಿ ಅಕ್ಟೋಬರ್ ೨೦೦೨).

ಲೈಂಗಿಕ ಕಿರುಕುಳದ ಕೆಲವು ಸತ್ಯ ನಿದರ್ಶನಗಳು

ಮಥುರಾ, ಮಾಯಾ ತ್ಯಾಗಿ, ರಮೀಜಾ ಮತ್ತು ಅನುಸೂಯಮ್ಮನಂಥವರ ಹೆಸರುಗಳು ನೆನಪಾದೊಡನೆ, ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳಗಳು ಭಾರತದಲ್ಲಿ ಎಷ್ಟರ ಮಟ್ಟಿಗೆ ನಡೆದಿವೆ ಎಂಬುದು ತಿಳಿಯುತ್ತದೆ. ಕಳೆದೆರೆಡು ದಶಕಗಳಲ್ಲಿ ಮಹಿಳೆಯರ ಮೇಲೆ ನಡೆದಿರುವ ಲೈಂಗಿಕ ಕಿರುಕುಳದ ವಿರುದ್ಧ ನಡೆದ ತೀವ್ರ ಹೋರಾಟದ ಸಂಕೇತಗಳು ಹಾಗೂ ಹೆಣ್ಣಾಗಿ ಹುಟ್ಟಿದುದಕ್ಕೆ ಹಲ್ಲೆಗೊಳಗಾದ ಹೆಣ್ಣಿನ ಪ್ರತಿನಿಧಿಗಳು ಇವರಾಗಿದ್ದಾರೆ.

೧೯೭೦ರಲ್ಲಿ ೧೬ರ ಹರೆಯದ ಮಥುರಾ ಪೊಲೀಸ್ ಅತ್ಯಾಚಾರಕ್ಕೆ ತುತ್ತಾದಳು. ಆರೋಪಿಗಳಿಗೆ ಸೆಷನ್ಸ್ ನ್ಯಾಯಾಲಯದಲ್ಲಿ ಬಿಡುಗಡೆಯಾದರೆ, ಹೈಕೋರ್ಟಿನಲ್ಲಿ ಶಿಕ್ಷೆಯಾಯಿತು. ಆದರೆ ಸುಪ್ರೀಂಕೋರ್ಟ್ ಆರೋಪಿಗಳನ್ನು ಆರೋಪದಿಂದ ಮುಕ್ತಗೊಳಿಸಿತು. ಅತ್ಯಾಚಾರ ಅಪರಾಧ ಸಾಬೀತುಪಡಿಸುವಲ್ಲಿನ ವೈಫಲ್ಯವೇ ಈ ಬಿಡುಗಡೆಗೆ ಕಾರಣವಾಯಿತು. ಮಹಿಳಾ ಹೋರಾಟದಿಂದಾಗಿ ಲೈಂಗಿಕ ಕಿರುಕುಳಗಳಿಗೆ ಒಳಗಾದ ವ್ಯಕ್ತಿಯು ತಾನು ಅಪರಾಧಿಯಲ್ಲ ಎಂಬುದನ್ನು ನ್ಯಾಯಾಲಯದಲ್ಲಿ ಸಾಬೀತುಪಡಿಸಬೇಕಾದ ಕಾನೂನಿನ ತಿದ್ದುಪಡಿಯನ್ನು ತರಬೇಕಾಗಿ ಬಂದಿದ್ದು ಈಗ ಇತಿಹಾಸವಾಗಿದೆ. (ಎನ್. ಗಾಯತ್ರಿ ೧೯೯೬).

೧೯೮೦ರ ಜೂನ್ ತಿಂಗಳಲ್ಲಿ ೨೦ ವರ್ಷದ ಮಯಾತ್ಯಾಗಿ ಎಂಬ ಹರೆಯದ ವಿವಾಹಿತ ಮಹಿಳೆ ಪತಿಯೊಂದಿಗೆ ಸಂಬಂಧಿಕರ ಮದುವೆಗೆಂದು ಹೊರಟಿದ್ದಳು. ಅವರ ದುರಾದೃಷ್ಟಕ್ಕೆ ಕಾರು ನಡು ದಾರಿಯಲ್ಲಿ ಕೆಟ್ಟು ಹೋಯಿತು. ಆಗ ಸಮಯ ಮಧ್ಯಾಹ್ನ ೧೨.೩೫ ಆಗಿತ್ತು. ಚಾಲಕ ದುರಸ್ತಿಗಾಗಿ ಮೇಕ್ಯಾನಿಕ್‌ನನ್ನು ಕರೆದುಕೊಂಡು ಬರಲು ಹೋಗಿದ್ದನು. ಆಗ ಕಾರಿನಲ್ಲಿದ್ದ ಪತಿ ಬಹಿರ್ದೆಸೆಗೆಂದು ಕೆಳಗಿಳಿದು ಹೋಗಿದ್ದರು. ಆಗ ಅಲ್ಲಿಗೆ ಸಬ್ ಇನ್ಸ್‌ಪೆಕ್ಟರ್ ನರೇಂದ್ರಕುಮಾರ್ ಸಿಂಗ್ ಮತ್ತು ಮುಖ್ಯ ಪೇದೆಯೊಬ್ಬರು ಬಂದರು. ಕಾರಿನಲ್ಲಿ ತ್ಯಾಗಿ ಒಬ್ಬರೇ ಇರುವುದು ಕಂಡು ಅವಳ ಜೊತೆಗೆ ಅಶ್ಲೀಲವಾಗಿ ನಡೆದುಕೊಂಡರು. ಸಹಾಯಕ್ಕಾಗಿ ಬಂದ ಪತಿಯ ಮೇಲೆ ಗುಂಡು ಹಾರಿಸಿ ಸಾಯಿಸಿದರು. ನಂತರ ತ್ಯಾಗಿಯ ಮೇಲೆ ಅತ್ಯಾಚಾರಗೈದು ಪರಾರಿಯಾದರು. ತ್ಯಾಗಿ ಪೊಲೀಸ್ ಕಟ್ಟೆ ಏರಿದಾಗ, ತ್ಯಾಗಿಯವರದು ಡಕಾಯಿತ ಗುಂಪೆಂದು ಸಾರಲಾಯಿತು. ಎಷ್ಟೇ ಕಷ್ಟಪಟ್ಟರು ತ್ಯಾಗಿಗೆ ನ್ಯಾಯ ಸಿಗದೇ ಸುಪ್ರಿಂಕೋರ್ಟಿನಲ್ಲಿ ಈ ಪ್ರಕರಣ ಇನ್ನೂ ಕೊಳೆಯುತ್ತಿದೆ.

ಒಮ್ಮೆ ಆಂಧ್ರದ ಕರ್ನೂಲ ಜಿಲ್ಲೆಯ ನಂದಿಕೊಟ್ಟರ್ ಹಳ್ಳಿಯ ರಮಿಜಾ ಬೀ ಎಂಬ ಹರೆಯದ ಬಡ ಹುಡುಗಿ ಪತಿಯ ಜೊತೆಯಲ್ಲಿ ಸಿನಿಮಾ ನೋಡಲು ಪಕ್ಕದ ಶಹರಕ್ಕೆ ಹೋಗಿದ್ದಳು. ಎರಡನೆಯ ಆಟ

ಕೋಷ್ಟಕ - ೧

ಭಾರತದಲ್ಲಿ ನಡೆದ ಅಪರಾಧಗಳು

ಕ್ರ. ಸಂ.	ಅಪರಾಧ ಪ್ರಕರಣಗಳು	ಪ್ರಕರಣಗಳ ಸಂಖ್ಯೆ		
		೧೯೯೮	೧೯೯೯	೨೦೦೦
೧.	ಅತ್ಯಾಚಾರಗಳು	೧೫೧೫೧ (೧೨.೭೪)	೧೫೪೬೮ (೧೨.೫೬)	೧೬೪೯೬ (೧೨.೮೬)
೨.	ಅಪಹರಣಗಳು	೧೬೩೫೧ (೧೩.೭೫)	೧೫೯೬೨ (೧೨.೯೬)	೧೫೦೨೩ (೧೧.೭೧)
೩.	ವರದಕ್ಷಿಣೆ ಸಾವುಗಳು	೬೯೭೫ (೫.೮೭)	೬೬೯೯ (೫.೪೪)	೬೯೯೫ (೫.೪೫)
೪.	ಚಿತ್ರ ಹಿಂಸೆಗಳು	೪೧೩೭೬ (೩೪.೮೧)	೪೩೮೨೩ (೩೫.೬೦)	೪೫೭೭೮ (೩೫.೭೦)
೫.	ಕಾಡಿಸುವುದು ಪೀಡಿಸುವುದು	೩೦೯೫೯ (೨೬.೦೪)	೩೨೩೧೧ (೨೬.೨೪)	೩೨೯೪೦ (೨೫.೬೮)
೬.	ಲೈಂಗಿಕ ಕಿರುಕುಳಗಳು	೮೦೫೪ (೬.೭೯)	೮೮೫೮ (೭.೨೦)	೧೧೦೨೪ (೮.೬೦)
	ಒಟ್ಟು	೧೧೮೮೬೬	೧೨೩೧೨೧	೧೨೮೨೫೬

Note : Figure in brackets are shows the percentage of respective heads in that years.
Source : Crime in India, 2000. National Crime records Bureau, Ministry of Home Affair.

ಕೋಷ್ಟಕ - 2

2000 ರಲ್ಲಿ ವಿವಿಧ ರಾಜ್ಯಗಳಲ್ಲಿ ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣಗಳು

ರಾಜ್ಯಗಳು	ಅತ್ಯಾಚಾರಗಳು			ಅಪಹರಣಗಳು			ವರದಕ್ಷಿಣೆ ಸಾವುಗಳು			ಪೀಡಿಸುವುದು			ಲೈಂಗಿಕ ಕಿರುಕುಳಗಳು		
	I	R	P	I	R	P	I	R	P	I	R	P	I	R	P
ಆಂಧ್ರಪ್ರದೇಶ	944	1.2	5.7	716	0.9	4.8	442	0.6	6.3	3231	4.3	9.8	2280	3.0	20.7
ಅಸ್ಸಾಂ	762	2.9	4.6	1101	4.2	7.3	50	0.2	0.7	773	3.0	2.4	18	0.1	0.2
ಬಿಹಾರ	1570	1.6	9.5	700	0.7	4.7	1085	1.1	15.5	456	0.5	1.4	122	0.1	1.1
ಗುಜರಾತ	330	0.7	2.0	868	1.8	5.8	93	0.2	1.3	944	1.9	2.9	119	0.2	1.1
ಹರಿಯಾಣ	421	2.1	2.6	299	1.5	2.0	263	1.3	3.8	605	3.0	1.8	423	2.1	3.8
ಕರ್ನಾಟಕ	281	0.5	1.7	323	0.6	2.2	217	0.4	3.1	1568	3.0	4.8	75	0.1	0.7
ಕೇರಳ	552	1.7	3.3	89	0.3	0.6	25	0.1	0.4	1695	5.2	5.1	69	0.2	0.6
ಮಧ್ಯಪ್ರದೇಶ	3737	4.7	22.7	869	1.1	5.8	685	0.9	9.8	8576	1.6	25.9	840	1.0	7.6
ಮಹಾರಾಷ್ಟ್ರ	1310	1.4	7.9	662	0.7	4.4	371	0.4	5.3	2805	3.1	8.5	930	1.0	8.4
ಒರಿಸ್ಸಾ	747	2.1	4.5	359	1.0	2.4	276	0.8	3.9	1685	4.6	5.0	135	0.4	1.2
ರಾಜಸ್ಥಾನ	1242	2.3	7.5	2550	4.7	17.0	429	0.8	6.1	3092	5.7	9.4	50	0.1	0.5
ತಮಿಳುನಾಡು	538	0.9	3.3	805	1.3	5.4	191	0.3	2.7	1948	3.1	5.9	2167	3.5	19.7
ಉತ್ತರ ಪ್ರದೇಶ	1865	1.1	11.3	2755	1.6	18.3	2222	1.3	31.8	2607	1.5	7.9	3169	1.8	28.7

Source: Crime in India, 2000. National Crime records Bureau, Ministry of Home Affair.

(I = Incidence, R = Rate, P = Proportion)

ಭಾರತದ ಪ್ರತಿಯೊಂದು ರಾಜ್ಯಗಳಲ್ಲಿ ಲೈಂಗಿಕ ಕಿರುಕುಳದಿಂದ, ಮಾನ - ಮರ್ಯಾದೆಗೆ ಅಂಜಿ ಆತ್ಮಹತ್ಯೆಗೆ ಶರಣುಹೋದ ಮಹಿಳೆಯರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದು, ಪುರುಷ ಪ್ರಧಾನ ಸಮಾಜಕ್ಕೆ ನಾಚಿಕೆಗೇಡು ಸಂಗತಿಯಾಗಿದೆ. ಇಲ್ಲಿ ಕೊಟ್ಟಿರುವ ಕೋಷ್ಟಕ-೨ನ್ನು ಗಮನಿಸಿದಾಗ ಭಾರತದ ಪ್ರತಿಯೊಂದು ರಾಜ್ಯಗಳು ಲೈಂಗಿಕ ಕಿರುಕುಳದ ಪ್ರಕರಣಗಳನ್ನು ತೋರಿಸುವಲ್ಲಿ ನಾ-ಮುಂದು, ತಾ-ಮುಂದು ಎಂದು ದಾಪುಗಾಲು ಇಡುತ್ತವೆ.

ಮುಗಿಸಿಕೊಂಡು ಆಟೋದಲ್ಲಿ ಹಳ್ಳಿಗೆ ಬರುವಾಗ, ಪತಿ ಮೂತ್ರ ವಿಸರ್ಜನೆ ಮಾಡಲು ಆಟೋದಿಂದ ಕೆಳಗಿಳಿದಿದ್ದನು. ಆಗ ಬೇಟೆಗೆಂದು ಬಂದ ನಾಲ್ವರು ಪೊಲೀಸರು ವಿಚಾರಣೆಗಾಗಿ ರಮಿಜಾಬಿಯನ್ನು ಸ್ಟೇಷನ್ನಿಗೆ ಕರೆದೊಯ್ದು ರಾತ್ರಿಯೆಲ್ಲಾ ಒಂದು ಕೋಣೆಯಲ್ಲಿ ಕೂಡಿ ಹಾಕಿ, ಸರದಿಯಂತೆ ರಮಿಜಾಬಿಯ ಮೇಲೆ ಅತ್ಯಾಚಾರ ಮಾಡಿದರು. ಸಹಾಯಕ್ಕಾಗಿ ಬಂದ ಪತಿಯನ್ನು ಬಡಿದು ಸಾಯಿಸಿದರು. ವಿಷಯ ತಿಳಿದ ಜನರೆಲ್ಲರೂ ಪ್ರತಿಭಟನೆಗೆ ಇಳಿದರು. ಈ ಸಮಯದಲ್ಲಿ ೧೮ ಪೊಲೀಸ್ ಸ್ಟೇಷನ್ನುಗಳನ್ನು ಸುಡಲಾಯಿತು. ಏನು ಪ್ರಯೋಜನವಾಗದೆ ಕೊನೆಗೆ ನ್ಯಾಯಾಲಯದಿಂದ ರಮೀಜಾಬೀಗೆ ವೇಶ್ಯಾ ಪಟ್ಟ ದೊರೆಯಿತು ! ಇಂತಹ ಲೈಂಗಿಕ ಕಿರುಕುಳಗಳಿಗೆ ಇಂದಿನ ನಮ್ಮ ಭಾರತ ದೇಶದಲ್ಲಿ ಲೆಕ್ಕವೇ ಇಲ್ಲ. ಸುಸಂಸ್ಕೃತ ಮಹಿಳೆಯರು ಮರ್ಯಾದೆಗೆ ಅಂಜಿ ತೆರೆಯ ಮರೆಯಲ್ಲಿ ಕೈಕಟ್ಟಿ ಕುಳಿತುಕೊಂಡಿದ್ದಾರೆ. ನಾಗಲ್ಯಾಂಡ್, ಮಿಜೋರಾಂ ಮತ್ತು ಅಸ್ಸಾಂನಂತಹ ಗಡಿ ಪ್ರದೇಶಗಳಲ್ಲಿ ಸೇನಾದಳದವರು ನಡೆಸುವ ಲೈಂಗಿಕ ಕಿರುಕುಳಕ್ಕೆ ಲೆಕ್ಕವೇ ಇಲ್ಲದಂತಾಗಿದೆ.

ಕ್ಷೇತ್ರವಾರು ನಡೆಯುವ ಲೈಂಗಿಕ ಕಿರುಕುಳಗಳು

ನಮ್ಮ ದೇಶದಲ್ಲಿ ಜನಸಂಖ್ಯೆ ಹೆಚ್ಚಾದಂತೆಲ್ಲಾ ಅನ್ಯಾಯ, ಅತ್ಯಾಚಾರ, ಅಪಹರಣ, ಹಿಂಸೆ, ವರದಕ್ಷಿಣೆ, ಸಾವು ಇನ್ನಿತರ ಲೈಂಗಿಕ ಕಿರುಕುಳಗಳು ಹೆಚ್ಚಾಗುತ್ತಿವೆ. ಇವುಗಳಿಗೆ ಸ್ಪಷ್ಟವಾದ ಕ್ಷೇತ್ರವಿಲ್ಲ. ಅಡುಗೆ ಮನೆಯಿಂದ ಹಿಡಿದು ಅಧಿಕಾರ ವರ್ಗದ ಎಲ್ಲಾ ಕ್ಷೇತ್ರಗಳವರೆಗೆ ಲೈಂಗಿಕ ಕಿರುಕುಳ ಎಂಬ ಘೋರಕೃತ್ಯ ಆವರಿಸಿಕೊಂಡಿದೆ.

ಕೃಷಿ ಕ್ಷೇತ್ರದಲ್ಲಿ

ಇದು ಹಳ್ಳಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಬಡ ಸುಂದರ ಮಹಿಳೆಯರ ಮೇಲೆ ಭೂ-ಮಾಲೀಕರ ಅತ್ಯಾಚಾರಗಳು ಸಾಕಷ್ಟಿವೆ. ನಾಳೆ ಇಷ್ಟು ಜನರಿಗೆ ತೋಟದಲ್ಲಿ ಕೆಲಸವಿಲ್ಲ, ಕಾರಣ ನೀನೊಬ್ಬಳೆ ಕೆಲಸಕ್ಕೆ ಬರಬೇಕು ಎಂದು ಹೇಳಿ, ಅಂಥವರ ಮೇಲೆ ಅತ್ಯಾಚಾರ ಮಾಡುವ ಯೋಜನೆ ರೂಪಿಸುವುದು ಹಳ್ಳಿಗಳಲ್ಲಿ ಸರ್ವೆ ಸಾಮಾನ್ಯವಾಗಿದೆ. ಬೋಧಗಯಾದ ಮಹಾಂತನಂತೂ ತಾನು ವಾಸಿಸುವ ಪ್ರದೇಶದಲ್ಲಿ ಒಂದು ಅಶಿಕ್ಷಿತ ಕಾನೂನೇ ಮಾಡಿಕೊಂಡಿದ್ದಾನಂತೆ. ರಾತ್ರಿ ವೇಳೆ ಅವನ ಜೀತದಾಳುಗಳ ಹೆಂಡತಿಯರು ಅವರ ಮಂಚ ಏರಲೇಬೇಕು. ಗುಡಿಸಿಲಿನ ಹೊರಗೆ ಅವನು ಬಿಡುವ ಚಪ್ಪಲಿಗಳು ಹೊರಗಿನಿಂದ ಬರುವ ಗಂಡನಾದವನಿಗೆ ಎಚ್ಚರಿಕೆಯ ಸಂಕೇತ. ಆ ವೇಳೆಯಲ್ಲಿ ಗಂಡ ಗುಡಿಸಿಲ ಒಳಗೆ ಪ್ರವೇಶಿಸಬಾರದು. ಅಲ್ಲಿನ ಎಲ್ಲ ಅಧಿಕಾರಿಗಳಿಗೆ ಈ ವಿಷಯ ಗೊತ್ತು. ಆದರೆ ಅವನ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುವ ಶಕ್ತಿ ಅವರಲ್ಲಿ ಇಲ್ಲ, ಏಕೆಂದರೆ ಚುನಾವಣೆ ಸಮಯದಲ್ಲಿ ಎಲ್ಲ ಪಕ್ಷದವರಿಗೆ ಇವನಿಂದಲೇ ಹಣಕಾಸಿನ ಸರಬರಾಜಾಗುತ್ತಿದೆಯಂತೆ. ಆದ್ದರಿಂದ ಇವನ ವಿರುದ್ಧ ಧ್ವನಿಯೆತ್ತುವ ಧೈರ್ಯ ಯಾರಿಗಿದೆ? ಇಂತಹವರ ದೌರ್ಜನ್ಯಕ್ಕೆ ಬಲಿಯಾದ ಎಷ್ಟು ಹೆಣ್ಣುಮಕ್ಕಳು ನಮ್ಮಲ್ಲಿಲ್ಲ?!

ಕೈಗಾರಿಕಾ ಕ್ಷೇತ್ರದಲ್ಲಿ

ಹಲವಾರು ಕೈಗಾರಿಕಾ ಕೇಂದ್ರಗಳಲ್ಲಿ ವ್ಯವಸ್ಥಾಪಕರಿಂದ ಹಿಡಿದು ಮಾಲೀಕರವರೆಗಿರುವ ಅಧಿಕಾರಿ ವರ್ಗ ಮಹಿಳೆಯರ ಮೇಲೆ ಅತ್ಯಾಚಾರ ಎಸಗುತ್ತಲೇ ಬಂದಿದೆ. ಈ ಕಿರುಕುಳ ತಾಳಲಾರದೆ, ನೂರಾರು ಜನ ಮಹಿಳೆಯರು ತಮ್ಮ ಹುದ್ದೆಯನ್ನು ಸಹ ಕಳೆದುಕೊಂಡವರಿದ್ದಾರೆ. ಬೈಲದಿಲ್ಲಾದ ಕಬ್ಬಿಣದ ಅದುರಿನ ಗಣಿಗಳ ಕಾರ್ಮಿಕ ಹೋರಾಟದಲ್ಲಿ ಹೋರಾಟವನ್ನು ಅಡಗಿಸಲೆಂದು ಅನೇಕ ಮಹಿಳೆಯರ ಮೇಲೆ ಅತ್ಯಾಚಾರವೆಸಗಲಾಯಿತು. ವೇತನದಲ್ಲಿ ಹೆಚ್ಚಳ, ಬಡ್ತಿ ಮತ್ತು ವಿಶೇಷ ಸ್ಥಾನಮಾನಗಳ ಆಸೆ-ಆಮಿಷಗಳಿಗೊಳಗಾದ ಇಂತಹ ಹಲವು ಮಹಿಳೆಯರು ವಿವಿಧ ರೀತಿಯ ಕಿರುಕುಳಗಳಿಗೆ ಬಲಿಯಾಗಿದ್ದಾರೆ.

ಆರೋಗ್ಯ ಕ್ಷೇತ್ರದಲ್ಲಿ

ಅಂಕಿ-ಅಂಶಗಳ ಪ್ರಕಾರ ಆರೋಗ್ಯ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಲೈಂಗಿಕ ಕಿರುಕುಳಗಳು ನಡೆಯುತ್ತಿರುವುದು ಕಂಡುಬಂದಿದೆ. ವೈದ್ಯಾಧಿಕಾರಿಗಳಿಂದ ಹಿಡಿದು ಕಾಂಪೌಂಡರುಗಳವರೆಗಿನ ಮಹಿಳೆಯರು ಒಂದಿಲ್ಲೊಂದು ಲೈಂಗಿಕ ಕಿರುಕುಳಗಳಿಗೆ ಒಳಗಾಗಿದ್ದಾರೆ. ಎಷ್ಟೋ ಅತ್ಯಾಚಾರಗಳು ವೈದ್ಯಾಧಿಕಾರಿಗಳಿಂದ ನಡೆದ ಘಟನೆಗಳಾದರೆ, ರೋಗಿಗಳ ಮೇಲೆ ಅತ್ಯಾಚಾರವೆಸಗುವುದು ಇನ್ನೊಂದು ಘಟನೆಗಳಾಗಿವೆ. ೨೦೦೦ ದಲ್ಲಿ ಕರ್ನಾಟಕದ ಗುಲಬರ್ಗಾ ಜಿಲ್ಲೆಯ ಸುರಪೂರ ತಾಲೂಕಿನ ಹಳ್ಳಿಯೊಂದರಲ್ಲಿ ೧೬ರ ಹರೆಯದ ಸುಜಾತ ಎಂಬ ದಲಿತ ಬಡ ವಿದ್ಯಾರ್ಥಿನಿ ಅನಾರೋಗ್ಯದಿಂದ ಇದ್ದಾಗ, ರಕ್ತ ಪರೀಕ್ಷೆ ಮಾಡಿಸಿಕೊಳ್ಳಲು ರಕ್ತ ಪರೀಕ್ಷಾಲಯಕ್ಕೆ ಹೋದಾಗ, ರಕ್ತ ಪರೀಕ್ಷೆ ಮಾಡುವಾತನಿಂದ ಅತ್ಯಾಚಾರಕ್ಕೊಳಗಾದಳು. ವಿಷಯ ಬಹಿರಂಗಗೊಂಡಾಗ ಆತ ಪರಾರಿಯಾದ, ನೊಂದ ಸುಜಾತ ನ್ಯಾಯಾಲಯದ ಕಟ್ಟೆ ಏರಿದಳು. ಜಿಲ್ಲೆಯಾದ್ಯಂತ ಹಲವಾರು ದಲಿತ ಸಂಘಟನೆಗಳಿಂದ, ಮಹಿಳಾ ಸಂಘಟನೆಗಳಿಂದ ಪ್ರತಿಭಟನೆಗಳು ನಡೆದವು. ಏನೂ ಪ್ರಯೋಜನವಾಗದೆ, ನ್ಯಾಯಾಲಯದಲ್ಲಿ ಪ್ರಕರಣದ ಫೈಲುಗಳು ಧೂಳು ಹಿಡಿದವು. ಅವಮಾನಕ್ಕೀಡಾದ ಸುಜಾತ ಆತ್ಮಹತ್ಯೆಗೆ ಪ್ರಯತ್ನಿಸಿ ವಿಫಲವಾದಳು. ಇದೊಂದೇ ಕಾರಣದಿಂದ ಅವಳು ಇನ್ನುವರೆಗೂ ಅವಿವಾಹಿತಳಾಗಿ ಶಪಿಸುತ್ತಾ ಕತ್ತಲೆ ಕೋಣೆಯೊಳಗೆ ಕೊಳೆಯುತ್ತಿದ್ದಾಳೆ. ಇಂತಹ ಪ್ರಕರಣಗಳಿಗೆ ನಮ್ಮ ಭಾರತದಲ್ಲಿ ಕೊರತೆಯೆಂಬುದೇ ಇಲ್ಲ.

ಧಾರ್ಮಿಕ ಕ್ಷೇತ್ರದಲ್ಲಿ

ಕಾಪಾಡುವ ದೇವರೇ ಕೆಟ್ಟದ್ದು ಮಾಡುತ್ತಾನೆಂದರೆ ನೀವು ನಂಬುತ್ತೀರಾ ? ಹೌದು ನಂಬಲೇಬೇಕಾದಂತದ್ದು. ಇದು ಕಲಿಯುಗ, ಕಲಿಯುಗದಲ್ಲಿ ಏನೆಲ್ಲಾ ನಡೆಯಬಾರದ್ದು ನಡೆಯುತ್ತವೆ ಎಂಬುದು ಹಿರಿಯರ ವಾಣಿಯಾಗಿದೆ. ತಂದೆಯಿಂದ ಮಗಳ ಮೇಲೆ ಅತ್ಯಾಚಾರ, ಸಹೋದರರಿಂದ ಸಹೋದರಿಯರ ಮೇಲೆ ನಡೆದ ಎಷ್ಟೋ ಅತ್ಯಾಚಾರಗಳು ತೆರೆಯ ಮರೆಯಲ್ಲಿ ನಡೆಯುತ್ತವೆ. ಧರ್ಮದ ಹೆಸರಿನಲ್ಲಿ ನಡೆಯುವ ಅತ್ಯಾಚಾರಗಳೇನೂ ನಮ್ಮ ಭಾರತದಲ್ಲಿ ಕೊರತೆಯಿಲ್ಲ. ದೈವವನ್ನೇ ನಂಬಿ ಬಂದ ಮುಗ್ಧ ಮಹಿಳೆಯರಿಗೆ ತಮ್ಮ ಕಾಲಿನ ಹೆಬ್ಬೆರಳಿನಿಂದ ಹಣೆಗೆ ಮುತ್ತಿಡುವ ಹಲವಾರು ಮಠಾಧೀಶರಿದ್ದಾರೆ. ರಾಯಚೂರ ಜಿಲ್ಲೆಯ ಕೊಪ್ಪಳ ತಾಲೂಕಿನ ಕುದುರೆ ಮೋತಿ ಗ್ರಾಮದ ಮಹಾಂತ ಸ್ವಾಮಿಯ ಅಪರಾವತಾರ ಯಾರಿಗೆ ನೆನಪಿಲ್ಲಾ? ಮಠಕ್ಕೆ ಹೋಗಿ ಬರುವ ಹೆಣ್ಣು ಮಕ್ಕಳನ್ನು ಕಾಮಕೇಳಿಗೆ ಒತ್ತಾಯಿಸಿ, ಅದಕ್ಕೆ ಮಣಿಯದವರ ಮೇಲೆ ಗೂಂಡಾ ಶಿಷ್ಯರಿಂದ ಹಿಂಸೆ, ಅತ್ಯಾಚಾರ ಮಾಡಿಸುವವ ಸ್ವಾಮಿ ಆ ಗ್ರಾಮದ ಶಾಲಾ ಶಿಕ್ಷಕರ ಪತ್ನಿ ಪಾರ್ವತಮ್ಮನು ಅವನಿಗೆ ಒಲಿಯದಿದ್ದಕ್ಕಾಗಿ ಆಕೆಯನ್ನು ನಗ್ನಳನ್ನಾಗಿ ಮೆರವಣಿಗೆ ನಡೆಸಿದನು. ಆಕೆಯ ನೆರವಿಗೆ ಬಂದ ಮಹಿಳೆಯರ ಮೇಲೂ ಹಲ್ಲೆ ನಡೆಸಲು ಯೋಜಿಸಿದ. ಸ್ಥಳೀಯ ರಾಜಕೀಯ ಅಭಯಹಸ್ತದಿಂದಾಗಿ ಸುರಕ್ಷಿತವಾಗಿ ಶಿಕ್ಷೆಯಿಲ್ಲದೆ ಮೆರೆದ. ಕಾವಿಯ ಮುಸುಕಿನಲ್ಲಿ ನಡೆದ ಈ ಲೈಂಗಿಕ ಕಿರುಕುಳ ಒಂದಾದರೆ, ತಿರುವನಂತಪುರದ ಭೀಮಪಲ್ಲಿಯಲ್ಲಿ ನಡೆದ ಸುಲೋಶಿ ಬೀವಿಯ ಪ್ರಕರಣ ಧರ್ಮದ ಮತ್ತೊಂದು ಮುಖವನ್ನು ತೋರಿಸುತ್ತದೆ. ಹೀಗೆ ಬಹಿರಂಗಗೊಂಡ ಪ್ರಕರಣಗಳ ಸಂಖ್ಯೆ ಕಡಿಮೆಯಾದರೂ, ತೆರೆಯ ಮರೆಯಲ್ಲಿ ಧರ್ಮದ ಹೆಸರಿನಲ್ಲಿ ನಡೆಯುವ ಅತ್ಯಾಚಾರ, ಹಿಂಸೆಗಳಿಗೆ ಲೆಕ್ಕವೇ ಇಲ್ಲದಂತಾಗಿದೆ.

ನಮ್ಮ ದೇಶದಲ್ಲಿ ಜನಸಂಖ್ಯೆ ಹೆಚ್ಚಾದಂತೆಲ್ಲಾ ಅನ್ಯಾಯ, ಅತ್ಯಾಚಾರ, ಅಪಹರಣ, ಹಿಂಸೆ, ವರದಕ್ಷಿಣೆ, ಸಾವು ಇನ್ನಿತರ ಲೈಂಗಿಕ ಕಿರುಕುಳಗಳು ಹೆಚ್ಚಾಗುತ್ತಿವೆ. ಇವುಗಳಿಗೆ ಸ್ಪಷ್ಟವಾದ ಕ್ಷೇತ್ರವಿಲ್ಲ. ಅಡುಗೆ ಮನೆಯಿಂದ ಹಿಡಿದು ಅಧಿಕಾರ ವರ್ಗದ ಎಲ್ಲಾ ಕ್ಷೇತ್ರಗಳವರೆಗೆ ಲೈಂಗಿಕ ಕಿರುಕುಳ ಎಂಬ ಘೋರಕೃತ್ಯ ಆವರಿಸಿಕೊಂಡಿದೆ.

ಶೈಕ್ಷಣಿಕ ಕ್ಷೇತ್ರದಲ್ಲಿ

ಕೈ ಮುಗಿದು ಒಳಗೆ ಬಾ ಬಾಲಕನೆ ಇದು ವಿದ್ಯಾಮಂದಿರ ಎಂಬ ಬರಹದ ಒಳಗಡೆಯೇ ಮಹಿಳೆಯರ ಮೇಲೆ ಹಲವಾರು ಲೈಂಗಿಕ ಕಿರುಕುಳಗಳು ನಡೆಯುತ್ತವೆ. ಮುಖ್ಯೋಪಾಧ್ಯಾಯಿನಿಯಿಂದ ಹಿಡಿದು ವಿದ್ಯಾರ್ಥಿನಿಯರುಗಳ ಮೇಲೆ ಹಲವಾರು ಅತ್ಯಾಚಾರ, ಅಪಹರಣ, ಹಿಂಸೆ ಇತರ ಲೈಂಗಿಕ ಕಿರುಕುಳಗಳು ನಡೆದ ಉದಾಹರಣೆಗಳು ಸಾಕಷ್ಟಿವೆ. ದೆಹಲಿಯಲ್ಲಿ ಪ್ರೌಢ ಶಾಲೆಯಲ್ಲಿನ ಒಬ್ಬ ಶಿಕ್ಷಕಿ ತನ್ನ ಜೊತೆಗೆ ಸಹಕರಿಸಲಿಲ್ಲ ಎಂಬ ಕಾರಣಕ್ಕಾಗಿ ಶಾಲೆಯ ಮುಖ್ಯೋಪಾಧ್ಯಾಯ ಆ ಶಿಕ್ಷಕಿಗೆ ದಿನಾಲು ಹಿಂಸೆ ಕೊಡುತ್ತಿದ್ದನು. ತಾಳಿಕೊಳ್ಳಲಾರದೆ ಆ ಶಿಕ್ಷಕಿ ಪೊಲೀಸ್ ಸ್ಟೇಷನ್‌ನಲ್ಲಿ ಮುಖ್ಯೋಪಾಧ್ಯಾಯರ ಮೇಲೆ ದಾವೆ ಹೂಡಿದಳು. ಆಗ ಮುಖ್ಯೋಪಾಧ್ಯಾಯ ಗೂಂಡಾಗಳಿಗೆ ಹಣ ಕೊಟ್ಟು ಆ ಮಹಿಳೆಯನ್ನು ಅಪಹರಿಸಿ ಅವಳನ್ನು ಲೈಂಗಿಕವಾಗಿ ಹಿಂಸಿಸಿ ಸಾಯಿಸಿದನು. ಹಣದ ಬಲ ಮತ್ತು ರಾಜಕೀಯ ಬಲದಿಂದಾಗಿ ಮುಖ್ಯೋಪಾಧ್ಯಾಯ ಸುರಕ್ಷಿತವಾಗಿ ಉಳಿದನು.

ಕರ್ನಾಟಕದ ಸುರಪೂರ ತಾಲೂಕಿನ ತಾಂಡವೊಂದರಲ್ಲಿ ೧೩ ವರ್ಷದ ೭ನೇ ತರಗತಿಯಲ್ಲಿ ಓದುತ್ತಿದ್ದ ಬಾಲಕಿಯು, ಅದೇ ತಾಂಡಾದಲ್ಲಿದ್ದ ೨೪ರ ಹರೆಯದ ಪ್ರಾಥಮಿಕ ಶಾಲೆಯ ಶಿಕ್ಷಕನ ಹತ್ತಿರ ಮನೆ ಪಾಠ ಹೇಳಿಸಿಕೊಳ್ಳಲು ದಿನಾಲು ಬರುತ್ತಿದ್ದಳು. ಬಾಲಕಿಯ ಸೌಂದರ್ಯಕ್ಕೆ ತಲೆಕೆಡಿಸಿಕೊಂಡು ಸಮಯಕ್ಕಾಗಿ ಕಾಯುತ್ತಿದ್ದ. ಅಂತಹ ಸಮಯ ಒಂದು ದಿನ ಬಂದೇ ಬಿಟ್ಟಿತು. ಅವನ ಹೆಂಡತಿ ಹೇರಿಗೆಗೆಂದು ತವರು ಮನೆಗೆ ಹೋಗಿದ್ದಳು. ಆ ಬಾಲಕಿಯ ತಂದೆ-ತಾಯಿಯರ ಪರವಾನಗಿಯನ್ನು ಪಡೆದುಕೊಂಡು ಆ ಬಾಲಕಿಯನ್ನು ಕರೆದುಕೊಂಡು, ಹೆಂಡತಿಯ ಊರಿಗೆ ಹೋಗದೆ ಮೈಸೂರು-ಊಟಿ ಇನ್ನಿತರ ಕಡೆಗಳಲ್ಲೆಲ್ಲಾ ಬಾಲಕಿಯನ್ನು ಕರೆದುಕೊಂಡು ಹೋದನು, ಆ ಬಾಲಕಿಗೆ

ಮದುವೆಯಾಗುವುದಾಗಿ ನಂಬಿಸಿ ಲೈಂಗಿಕ ತೃಷೆ ಪಡೆದಿದ್ದನು. ಮುಗ್ಧ ಬಾಲಕಿ ನಂಬಿ ಅವನ ಜೊತೆಗೆ ಸಹಕರಿಸಿದ್ದಳು. ಮಗಳು ಬಾರದಿದ್ದಕ್ಕಾಗಿ ಬಾಲಕಿಯರ ತಂದೆ - ತಾಯಿಗಳು ಶಿಕ್ಷಕನ ಹೆಂಡತಿ ಊರಿಗೆ ಪೋನಾಯಿಸಿ ವಿಷಯ ತಿಳಿಸಿದರು. ಅಲ್ಲಿಗೆ ಬಂದಿರದ ವಿಷಯ ತಿಳಿದ ತಂದೆ - ತಾಯಿಯರು ಪಕ್ಕದ ಹುಣಸಗಿಯ ಪೊಲೀಸ್ ಸ್ಟೇಷನ್‌ನಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಯ ಅಪಹರಣ ಪ್ರಕರಣ ದಾಖಲಾಯಿತು. ಕೆಲವೇ ದಿನಗಳಲ್ಲಿ ಶಿಕ್ಷಕನನ್ನು ಬಂಧಿಸಿ ಸ್ಟೇಷನ್ನಿಗೆ ತರಲಾಯಿತು. ಬಾಲಕಿಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಯಿತು. ವಿಷಯ ತಿಳಿದ ತಂದೆ - ತಾಯಿಯರು ದಿಗಿಲು ಬಡಿದಂತವರಾದರು. ಶಿಕ್ಷಕನ ಮೇಲೆ ಕ್ರಮ ಕೈಗೊಳ್ಳುವುದಾಗಿ ಸಬ್‌ಇನ್ಸ್‌ಪೆಕ್ಟರ್ ಬಾಲಕಿಯ ತಂದೆ-ತಾಯಿಯರನ್ನು ಸಮಾಧಾನ ಪಡಿಸಿ ಕಳುಹಿಸಿದರು.

ಹಣದ ಬಲ ಮತ್ತು ರಾಜಕೀಯ ಬಲದಿಂದ ಶಿಕ್ಷಕ ಕೆಲವೇ ದಿನಗಳಲ್ಲಿ ಅಪರಾಧ ಮುಕ್ತನಾಗಿ ಹೊರಬಂದಿರುವ ಘಟನೆ ಸಾಮಾನ್ಯವಾದುದಾಗಿದೆ. ಇಂತಹ ಹಲವಾರು ಘಟನೆಗಳು ನಮ್ಮ ಭಾರತದಲ್ಲಿ ಸಾಕಷ್ಟಿವೆ. ಕೇವಲ ಒಂದೇ ವರ್ಷದಲ್ಲಿ ನಮ್ಮ ಭಾರತದಲ್ಲಿ ೧೫ ವಯಸ್ಸಿನ ಒಳಗಿರುವ ಬಾಲಕಿಯರ ಮೇಲೆ ೩೩೫೦ ರಷ್ಟು ಅತ್ಯಾಚಾರದ ಅಪಹರಣ ಇಂತಹ ಲೈಂಗಿಕ ಕಿರುಕುಳ ಪ್ರಕರಣಗಳು ದಾಖಲಾಗಿವೆ. ಆದರೆ ಸ್ವಾಭಿಮಾನಕ್ಕೆ ಅಂಜಿ ಕುಳಿತಿರುವ ಪ್ರಕರಣಗಳ ಸಂಖ್ಯೆ ಎಷ್ಟಿರಬಹುದೆಂದು ನೀವೇ ಊಹಿಸಿರಿ ?

ಕತ್ತಲಾವರಿಸಿದ ಕಾರಾಗೃಹಗಳು

ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ಕೇಂದ್ರದಲ್ಲಿ ಮಹಿಳಾ ಆಯೋಗ ಮತ್ತು ರಾಜ್ಯಗಳಲ್ಲಿ ರಾಜ್ಯ ಮಹಿಳಾ ಆಯೋಗಗಳಿದ್ದರೂ ಮಹಿಳೆಯರ ಮೇಲೆ ದಿನಾಲು ಅತ್ಯಾಚಾರಗಳು ನಡೆಯುತ್ತಿವೆ. ಇತ್ತೀಚೆಗೆ ಬಿಹಾರದ ಸಸಾರಂ ಜೈಲಿನಲ್ಲಿ ೩೫ ವರ್ಷ ವಯಸ್ಸಿನ ನಜ್ಮಾಖತೂನ ಎಂಬ ಮಹಿಳಾ ವಿಚಾರಣಾಧೀನ ಕೈದಿಯ ಮೇಲೆ ಜೈಲಿನ ಸಿಬ್ಬಂದಿಯವರೆ ಅತ್ಯಾಚಾರವೆಸಗಿದ್ದಾರೆ. ಗರ್ಭಿಣಿಯಾದ ಅವಳು ಆಗಸ್ಟ್ ೬ ರಂದು ಪಾಟ್ನಾ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿಯೇ ಗಂಡು ಮಗುವಿಗೆ ಜನ್ಮ ನೀಡಿದಳು. ಅದೇ ಜೈಲಿನ ಪುರುಷರ ವಾರ್ಡಿನಲ್ಲಿದ್ದ ಅವಳ ಪತಿಯು ಆ ಮಗುವಿಗೆ ತಂದೆ ನಾನಲ್ಲವೆಂದು ಹೇಳಿದ್ದಾನೆ. ಏಕೆಂದರೆ ತಾನು ಹಲವು ವರ್ಷಗಳಿಂದ ಅವಳೊಂದಿಗಿಲ್ಲವೆಂದು ವಾದಿಸುತ್ತಿದ್ದಾನೆ. ತನ್ನ ಮೇಲೆ ಅತ್ಯಾಚಾರವೆಸಗಿದವರು ಯಾರೆನ್ನುವುದು ಆಕೆಗೆ ಗೊತ್ತಿಲ್ಲ. ಮುಖ ನೋಡಿ ಗುರುತಿಸಬಹುದು ಎಂದಿದ್ದಾಳೆ. ಆದರೆ ಅವಳ ಕೂಗು ಯಾರು ಕೇಳುವವರಿಲ್ಲದೆ ನಜ್ಮಾಳ ಪ್ರಕರಣ ಗೆದ್ದಿಲು ಹಿಡಿದಿದೆ.

ಗುಜರಾತಿನ ಬಾರಾಬಂಕಿಯ ಕುರ್ಸಿಯಲ್ಲಿ ಅಲ್ಲಿನ ಪೊಲೀಸ್ ಸ್ಟೇಷನ್ ಅಧಿಕಾರಿ ಮತ್ತು ಸಬ್‌ಇನ್ಸ್‌ಪೆಕ್ಟರ್ ಇಬ್ಬರೂ ಸೇರಿ ಒಬ್ಬ ದಲಿತ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿದ ಆಪಾದನೆಗೆ ಗುರಿಯಾಗಿದ್ದಾರೆ. ಆ ಮಹಿಳೆಯ ಗಂಡನನ್ನು ಕಳ್ಳತನ ಪ್ರಕರಣದಲ್ಲಿ ಹಿಡಿಯಲು ಹೋದಾಗ, ಗುಡಿಸಿಲಿನಲ್ಲಿ ಅವನು ಇಲ್ಲದ್ದನ್ನು ಕಂಡು ಅವಳ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿದ್ದರು. ಹೀಗೆ ನಮ್ಮ ಪೊಲೀಸ್ ಯಂತ್ರದ ನಿಷ್ಕ್ರಿಯತೆ ಎಷ್ಟೆಂದರೆ ಅತ್ಯಾಚಾರದ ಅಪರಾಧಿಗಳನ್ನು ಹಿಡಿಯದಿರುವುದು, ಆ ಬಗ್ಗೆ ಮಾಧ್ಯಮಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿರುವವರನ್ನು ಶಿಕ್ಷಿಸುವ ರೀತಿ ಕೂಡಾ ನಿಜಕ್ಕೂ ಬೇಸರ ಹುಟ್ಟಿಸುತ್ತದೆ.

ಭಾರತದಲ್ಲಿ ಪ್ರತಿ ೫೪ ನಿಮಿಷಕ್ಕೆ ಒಬ್ಬ ಮಹಿಳೆ ಅತ್ಯಾಚಾರಕ್ಕೊಳಗಾಗುತ್ತಾಳೆ ಎಂದು ವಿಶ್ವಸಂಸ್ಥೆ ಸಮೀಕ್ಷೆ ತಿಳಿಸಿದರೆ, ಪ್ರತಿ ೩೫ ನಿಮಿಷಕ್ಕೆ ಒಬ್ಬಳಂತೆ ಪ್ರತಿದಿನ ೪೨ ಮಹಿಳೆಯರು ಅತ್ಯಾಚಾರಕ್ಕೊಳಗಾಗುತ್ತಾರೆ ಎಂದು ಮಹಿಳಾ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಸಮೀಕ್ಷೆ ತಿಳಿಸುತ್ತದೆ. ಈ ನಿಟ್ಟಿನಲ್ಲಿ ೧೦ ಸಾವಿರ ಮಹಿಳೆಯರನ್ನು ಸಮೀಕ್ಷಿಸಿದಾಗ, ೫೦ ಪ್ರತಿಶತದಷ್ಟು ಮಹಿಳೆಯರು ಮದುವೆಯ ಬದುಕಿನಲ್ಲಿ ಒಂದಲ್ಲ ಒಂದು ರೀತಿಯ ಹಿಂಸೆ ಅನುಭವಿಸುತ್ತಿದ್ದಾರೆ.

ಪತ್ರಿಕಾ ರಂಗದಲ್ಲಿ

ದೇಶದ ನಾಲ್ಕನೇ ಅಂಗವಾಗಿರುವ ಪತ್ರಿಕಾ ರಂಗದಲ್ಲಿಯೂ ಲೈಂಗಿಕ ಕಿರುಕುಳಗಳು ನಡೆಯುತ್ತವೆಂದರೆ, ಸಾಮಾನ್ಯರ ಪಾಡೇನು ಎಂದು ಯೋಚಿಸುತ್ತೀರಾ? ಯಾವುದೇ ಮಹಿಳೆ ಲೈಂಗಿಕ ಕಿರುಕುಳಕ್ಕೆ ಒಳಗಾದ ವಿಷಯ ತಿಳಿದ ತಕ್ಷಣ ಅದನ್ನು ಬಯಲಿಗೆಳೆದು ತನ್ನ ಹಿರಿಮೆಯನ್ನು ತೋರಿಸಿಕೊಡುವ ಪತ್ರಿಕೋದ್ಯಮದಲ್ಲಿಯೂ ಉದ್ಯೋಗಸ್ಥ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳಗಳು ನಡೆಯುತ್ತಿವೆ. ಅಂತಹ ಒಂದು ಸತ್ಯ ಘಟನೆ ಅಸ್ಸಾಂನಿಂದ ವರದಿಯಾಗಿದೆ.

'ಅಮರ ಅಸ್ಸಾಂ' ದಿನಪತ್ರಿಕೆಯ ಉಪಸಂಪಾದಕಿ ಸಬಿತಾ ಲಹ್ಕರ್ ಅದೇ ಪತ್ರಿಕೆಯ ಸಂಪಾದಕ ಹೋಮನ್ ಬೊರ್ಗೊಹೇನ್ ಅವರು ತಮ್ಮ ಅಧಿಕಾರದ ದುರುಪಯೋಗದಿಂದ ತಮ್ಮೊಂದಿಗೆ ಲೈಂಗಿಕ ಸಂಬಂಧ ಬೆಳೆಸಲು ಎರಡು ವರ್ಷಗಳ ಅವಧಿಯಲ್ಲಿ ಹಲವು ಬಾರಿ ಒತ್ತಾಯಿಸಿದ್ದಾರೆ ಎಂದು ಆರೋಪಿಸಿದ್ದಾರೆ. ಈ ರೀತಿಯ ಅನೈತಿಕ ಸಂಬಂಧಕ್ಕೆ ಪ್ರತಿಯಾಗಿ ಸಂಬಳ ಹೆಚ್ಚಿಸುವ ಹಾಗೂ ಬಡ್ತಿ ನೀಡುವ ಆಮಿಷಗಳನ್ನು ಬೊರ್ಗೊಹೇನ್ ಒಪ್ಪಿದ್ದರೆನ್ನಲಾಗಿದೆ. ಮಕ್ಕಳು ಶಾಲೆಯ ಖರ್ಚಿಗಾಗಿ ಅವರ ಕಿರುಕುಳವನ್ನು ಸಹಿಸಿಕೊಂಡಿದ್ದ ಸಬಿತಾ ಸಹನೆ ಮಿತಿ ಮೀರಿದಾಗ ಕೆಲಸಕ್ಕೆ ರಾಜೀನಾಮೆ ನೀಡಿದುದಾಗಿ ಹೇಳುತ್ತಾರೆ. ಒಬ್ಬ ಪ್ರಸಿದ್ಧ ಪತ್ರಕರ್ತರೊಬ್ಬರ ವಿರುದ್ಧ ಸಿಡಿದೆದ್ದ ಸಬಿತಾಗೆ ಅಸ್ಸಾಂ ಪತ್ರಕರ್ತರ ಸಂಘ ನ್ಯಾಯ ದೊರಕಿಸಿಕೊಡಲು ಸಿದ್ಧವಾಗಿದ್ದು ಶೋಷಿತ ಮಹಿಳೆಯರು ಸೇರಿದಂತೆ ಹಲವಾರು ಸಂಘಟನೆಗಳು ಸಬಿತಾ ಪರವಾಗಿ ನಿಂತಿವೆ. (ದಿಕ್ಸೂಚಿ ನವೆಂಬರ್ ೨೦೦೩).

ಚಿತ್ರರಂಗದಲ್ಲಿ

ಬೆಳ್ಳಿ ತೆರೆಯ ಮೇಲೆ ಮಹಿಳೆ ಲೈಂಗಿಕ ಅಥವಾ ಸೌಂದರ್ಯದ ವಸ್ತುವಾಗಿ ಬಿಂಬಿಸಲ್ಪಡುತ್ತಾಳೆ. ಇದು ಅಪೇಕ್ಷಿತವೋ ಅನಪೇಕ್ಷಿತವೋ ಇನ್ನೂ ಸಾರ್ವಜನಿಕ ಚರ್ಚಾ ವಿಷಯವಾಗಿದೆ. ಹಲವಾರು ಹರೆಯದ ಮಹಿಳೆಯರು ಚಿತ್ರಗಳಲ್ಲಿ ನಾಯಕಿಯಾಗಬೇಕೆಂಬ ಆಸೆಯಿಂದ ಬಂದು, ನಿರ್ದೇಶಕ, ನಿರ್ಮಾಪಕ ವರ್ಗದವರಿಂದ ಹಲವಾರು ಲೈಂಗಿಕ ಕಿರುಕುಳಗಳಿಗೆ ಬಲಿಯಾದ ಪ್ರಕರಣಗಳು ಸಾಕಷ್ಟಿವೆ.

ಸುಮಾರು ೩೦ ವರ್ಷಗಳ ಹಿಂದಿನ ಬಿ.ಆರ್.ಛೋಪ್ರಾ ಅವರ 'ಇನ್ಸಾಫ್ ಕಾ ತರಾಝು' ಹಿಂದಿ ಚಿತ್ರದಲ್ಲಿ ಅತ್ಯಾಚಾರ ದೃಶ್ಯಗಳು ಪ್ರೇಕ್ಷಕರನ್ನು ಉಸಿರುಗಟ್ಟಿಸುವಷ್ಟು ಅಶ್ಲೀಲವಾಗಿದ್ದವು. ಮರ್ಡರ್, ಹವಾ ಮತ್ತು ಗರ್ಲ್ ಫ್ರೆಂಡ್ ಚಿತ್ರಗಳು ಅಶ್ಲೀಲತೆಯನ್ನು ಪ್ರದರ್ಶಿಸುವ ಹಿಂದಿ ಚಲನಚಿತ್ರಗಳಾಗಿವೆ. ಹೀಗೆ ಭವ್ಯ ಭವಿಷ್ಯವನ್ನು ಹೊತ್ತುಕೊಂಡು ಬಂದ ಹರೆಯದ ಮಹಿಳೆಯರು ಹಲವಾರು ಲೈಂಗಿಕ ಕಿರುಕುಳಗಳ ದೃಶ್ಯಗಳಲ್ಲಿ ಕಾಣಿಸಿಕೊಂಡು ತಮ್ಮ ಮುಂದಿನ ಚಿತ್ರರಂಗದಲ್ಲಿನ ಕನಸನ್ನು ಕಮರಿಸಿಕೊಂಡಿದ್ದಾರೆ.

ಲೈಂಗಿಕ ಕಿರುಕುಳದ ಬಗೆಗಿನ ಸಮೀಕ್ಷೆಗಳು

ಭಾರತದಲ್ಲಿ ಪ್ರತಿ ೫೪ ನಿಮಿಷಕ್ಕೆ ಒಬ್ಬ ಮಹಿಳೆ ಅತ್ಯಾಚಾರಕ್ಕೊಳಗಾಗುತ್ತಾಳೆ ಎಂದು ವಿಶ್ವಸಂಸ್ಥೆ ಸಮೀಕ್ಷೆ ತಿಳಿಸಿದರೆ, ಪ್ರತಿ ೩೫ ನಿಮಿಷಕ್ಕೆ ಒಬ್ಬಳಂತೆ ಪ್ರತಿದಿನ ೪೨ ಮಹಿಳೆಯರು ಅತ್ಯಾಚಾರಕ್ಕೊಳಗಾಗುತ್ತಾರೆ ಎಂದು ಮಹಿಳಾ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಸಮೀಕ್ಷೆ ತಿಳಿಸುತ್ತದೆ.

ಈ ನಿಟ್ಟಿನಲ್ಲಿ ೧೦ ಸಾವಿರ ಮಹಿಳೆಯರನ್ನು ಸಮೀಕ್ಷಿಸಿದಾಗ, ೫೦ ಪ್ರತಿಶತದಷ್ಟು ಮಹಿಳೆಯರು ಮದುವೆಯ ಬದುಕಿನಲ್ಲಿ ಒಂದಲ್ಲ ಒಂದು ರೀತಿಯ ಹಿಂಸೆ ಅನುಭವಿಸುತ್ತಿದ್ದಾರೆ. ಶೇ. ೪೩.೫ ರಷ್ಟು ಮಹಿಳೆಯರು ಪ್ರತಿನಿತ್ಯ ಮನ ನೆಮ್ಮದಿ ಕೆಡಿಸಿಕೊಳ್ಳುವ ಬೈಗುಳಕ್ಕೀಡಾಗುತ್ತಾರೆ. ಶೇ. ೪೦.೩ ರಷ್ಟು ಮಹಿಳೆಯರು ನಾನಾ ಬಗೆಯ ಹೊಡೆತ - ಬಡಿತ ತಿನ್ನಬೇಕಾಗುತ್ತದೆ ಎಂಬುದು ತಿಳಿದುಬಂದಿದೆ (ದಿಕ್ಸೂಚಿ ಜುಲೈ - ೨೦೦೩).

೧೯೯೮ರಲ್ಲಿ ಶ್ರೀರಾಮ್ ಮತ್ತು ಬಶಿಯೂ ಎಂಬುವರು ನಡೆಸಿದ ಸಮೀಕ್ಷೆಯ ಪ್ರಕಾರ ಶೇ. ೫೦ ರಷ್ಟು ಪತ್ನಿಯರು ಗಂಡನಿಂದ ಹೊಡೆತ ತಿನ್ನುತ್ತಾರೆ. ಇದೇ ವರ್ಷ ಗುಜರಾತ್‌ನಲ್ಲಿ ನಡೆಸಲಾದ ಸಮೀಕ್ಷೆಯ ಪ್ರಕಾರ ಶೇ. ೬೬ ರಷ್ಟು ಮಹಿಳೆಯರ ಮೇಲೆ ಪುರುಷರ ದೈಹಿಕ ಮತ್ತು ಮಾನಸಿಕ ಹಿಂಸಾಚಾರ ನಡೆಯುತ್ತದೆ, ಅಲ್ಲದೇ ಶೆ. ೪೨ ರಷ್ಟು ಪತ್ನಿಯರನ್ನು ಅವರ ಗಂಡಂದಿರು ಥಳಿಸುತ್ತಾರೆ. ೧೫ ರಿಂದ ೩೯ ವರ್ಷದೊಳಗಿನ ಮಹಿಳೆಯರ ಶೇ. ೪೫ ಮಂದಿ ಅವರ ಆಪ್ತರಿಂದಲೇ ಹಿಂಸಾಚಾರಕ್ಕೆ ಒಳಗಾಗುತ್ತಿದ್ದಾರೆ ಎಂದು ಉತ್ತರ ಪ್ರದೇಶದಲ್ಲಿನ ಕರೊಲಿನಾ ವಿಶ್ವವಿದ್ಯಾಲಯ ಸಮೀಕ್ಷೆ ಮಾಡಿತು.

೨೦೦೦ದಲ್ಲಿ ಅಂತರರಾಷ್ಟ್ರೀಯ ಕ್ಲಿನಿಕಲ್ ಎಪಿಡೆಮೋಲಾಜಿಸ್ಟ್ ನೆಟ್‌ವರ್ಕ್ ನಡೆಸಿದ ಸಮೀಕ್ಷೆಯ ಪ್ರಕಾರ ಶೇ. ೪೩.೫ ರಷ್ಟು ಮಹಿಳೆಯರು ತಮ್ಮ ವೈವಾಹಿಕ ಜೀವನದಲ್ಲಿ ಒಮ್ಮೆಯಾದರೂ ಗಂಡನಿಂದ ಹಿಂಸಾಚಾರಕ್ಕೆ ಒಳಗಾಗಿದ್ದಾರೆ. ಶೇ. ೪೦.೫ ರಷ್ಟು ಮಹಿಳೆಯರು ಲೈಂಗಿಕ ಕಿರುಕುಳಕ್ಕೆ ಒಳಗಾಗಿದ್ದಾರೆ. ಶೇ. ೬೮ ರಷ್ಟು ಲೈಂಗಿಕ ಕಿರುಕುಳ ಪ್ರಕರಣಗಳು ಪೊಲೀಸ್ ಠಾಣೆಗಳವರೆಗೆ ಹೋಗುವುದಿಲ್ಲ ಎಂದು ಚಂಡೀಗಡದ ಅಭಿವೃದ್ಧಿ ಮತ್ತು ಸಂಪರ್ಕ ಸಂಸ್ಥೆ

ಕೈಗೊಂಡ ಸಮೀಕ್ಷೆ ತಿಳಿಸಿದೆ. ಇತ್ತೀಚೆಗೆ ಕಳವೆ ಕಾನೂನು ವ್ಯವಸ್ಥೆಯಿಂದಾಗಿ ಪ್ರತಿಯೊಂದು ಕ್ಷೇತ್ರದಲ್ಲಿ ಲೈಂಗಿಕ ಕಿರುಕುಳಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಇವುಗಳಿಗೆ ಕೊನೆಯೇ ಇಲ್ಲಾ ಎಂದು ಅಧಿಕಾರಿಗಳು ಕೈಕಟ್ಟಿಕೊಂಡು ಕುಳಿತುಕೊಂಡಿದ್ದಾರೆ. (ರವೀಂದ್ರ ಭಟ್ಟ ಐನಕೈ - ೨೦೦೪)

ಲೈಂಗಿಕ ಕಿರುಕುಳಗಳಿಗೆ ಕೊನೆ ಇದೆಯೇ ?

ಹಲವಾರು ಕ್ಷೇತ್ರಗಳಲ್ಲಿ ಲೈಂಗಿಕ ಕಿರುಕುಳಗಳಿಗೆ ಬಲಿಯಾದ ಮಹಿಳೆಯರು, ಲೈಂಗಿಕ ಕಿರುಕುಳಗಳಿಗೆ ಕೊನೆ ಇದೆಯೇ ಎಂದು ನಿರುತ್ಸಾಹದಾಯಕವಾಗಿ ಕೇಳುತ್ತಾರೆ. ಈ ಕೆಳಗಿನ ಅಂಶಗಳನ್ನು ಅಳವಡಿಸಿಕೊಂಡಲ್ಲಿ ಮಹಿಳೆಯರ ಮೇಲಾಗುವ ಲೈಂಗಿಕ ಕಿರುಕುಳಗಳನ್ನು ಸ್ವಲ್ಪ ಮಟ್ಟಿಗಾದರೂ ನಿಯಂತ್ರಿಸಬಹುದು. ಅವುಗಳೆಂದರೆ,

★ ಮಹಿಳೆಗೆ ಸಂಬಂಧಿಸಿದ ಕುಟುಂಬ, ಜನಾಂಗ ಹಾಗೂ ಸಮಾಜದಲ್ಲಿನ ಮಹಿಳೆಯ ಬಗೆಗಿನ ಆಲೋಚನಾ ಲಹರಿಯೇ ಬದಲಾಗಬೇಕು, ಅಂದಾಗ ಮಾತ್ರ ಸಂಸಾರದಲ್ಲಿ ಹೆಣ್ಣಿಗೆ ಶಾಂತಿ ಹಾಗೂ ಗೌರವದಿಂದ ಬಾಳುವುದು ಸಾಧ್ಯವಾಗುತ್ತದೆ.

★ ಮಹಿಳೆಯರಿಗಾದ ಅನ್ಯಾಯಗಳನ್ನು ಹಂತ ಹಂತವಾಗಿ ತಡೆಯಬೇಕಾದರೆ ವೈಚಾರಿಕ ನೆಲೆ, ಸಂಸಾರಿಕ ಹಿನ್ನೆಲೆ, ಕಾನೂನಿನ ಚೌಕಟ್ಟಿನಲ್ಲಿ ಸಮತೋಲನದೊಡನೆ ಪ್ರಯತ್ನಿಸಬೇಕು. ಮಹಿಳಾ ಹಕ್ಕಿನ ಅರಿವನ್ನು ಹೆಚ್ಚಾಗಿ ಜನರಿಗೆ ಮುಟ್ಟಿಸುವ ಕಾರ್ಯವಾಗಬೇಕು.

★ ಗಂಡನಾದವನು ಹೆಂಡತಿಯ ಮೇಲೆ ಹಿಂಸೆ, ಅನಾವಶ್ಯಕ ದಬ್ಬಾಳಿಕೆ ಮಾಡುವ ಮುಂತಾದ ಕಾರಣ ಗಳಿಂದಾಗಿ ವಿಚ್ಛೇದನದ ಕಾನೂನನ್ನು ಸುಲಭವಾಗಿಸಬೇಕು.

★ ಕಾನೂನಿನ ಪ್ರಕಾರ ವರದಕ್ಷಿಣೆ ಕೊಡುವುದು ಮತ್ತು ತೆಗೆದುಕೊಳ್ಳುವುದು ಅಪರಾಧ. 'ಕ್ರಿಮಿನಲ್ ಪ್ರಿಸ್ ಆಫ್ ಟ್ರಸ್ಟ್' ಕಾಯ್ದೆಯ ಪ್ರಕಾರ, ಮದುವೆಯಾದ ೭ ವರ್ಷದೊಳಗೆ ಹೆಂಡತಿ ಅಸ್ವಾಭಾವಿಕ ಸಾವನ್ನಪ್ಪಿದರೆ ಅದು ವರದಕ್ಷಿಣೆಯ ಹಿಂಸೆ ಸಾವೆಂದೇ ಪರಿಗಣಿಸಲಾಗುತ್ತದೆ. ಇಷ್ಟಿದ್ದಾಗ್ಯೂ ನಮ್ಮ ಭಾರತದಲ್ಲಿ ಹಲವಾರು ಮಹಿಳೆಯರು ವರದಕ್ಷಿಣೆ ಕಿರುಕುಳದಿಂದಾಗಿ ಸಾವನ್ನಪ್ಪಿದ ಸಾಕಷ್ಟು ನಿದರ್ಶನಗಳಿವೆ. ಕಾರಣ ವರದಕ್ಷಿಣೆಗೆ ತಡೆ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಯಲ್ಲಿ ತರಬೇಕು.

ಮಹಿಳೆಯರ ಮೇಲಿನ ಅತ್ಯಾಚಾರ, ಅಪಹರಣ, ಹಿಂಸೆ, ಲೈಂಗಿಕ ಕಿರುಕುಳಗಳು ಅತ್ಯಂತ ನಾಚಿಕೆಗೇಡಿನ ಸಂಗತಿಗಳೆಂದು ಸಮಾಜಕ್ಕೆ ತಿಳಿದಿದ್ದರೂ, ಅದೇ ಸಮಾಜದಲ್ಲಿ ದಿನಗಳು ಉರುಳಿದಂತೆಲ್ಲಾ ಲೈಂಗಿಕ ಕಿರುಕುಳಗಳ ಸಂಖ್ಯೆ ಹೆಚ್ಚುತ್ತಲಿವೆ. ಮಹಿಳೆಯರ ಮೇಲೆ ನಡೆಯುವ ಇಂತಹ ದೌರ್ಜನ್ಯಗಳಿಗೆ ಭೌಗೋಳಿಕ, ಸಾಂಸ್ಕೃತಿಕ, ಧಾರ್ಮಿಕ, ಬಡವ, ಶ್ರೀಮಂತರೆಂಬ ಚೌಕಟ್ಟುಗಳಿಲ್ಲ. ಇದು ಎಲ್ಲಿಯವರೆಗೂ ಮುಂದುವರೆಯುತ್ತದೆಯೋ ಅಲ್ಲಿಯವರೆಗೆ ನಿಜವಾದ ಪ್ರಗತಿ ಸಾಧ್ಯವಿಲ್ಲ.

★ ವಿಚ್ಛೇದನ ಪಡೆದ ಮಹಿಳೆಗೆ ಆಸ್ತಿ ಹಕ್ಕುದಾರಿಕೆಯನ್ನು ಆಯಾ ಧರ್ಮಗಳಿಗನುಸಾರವಾಗಿಯೇ ವಿಂಗಡಿಸಬೇಕು.

★ ೧೮ ವರ್ಷಕ್ಕಿಂತ ಕಡಿಮೆಯಿರುವ ಹೆಣ್ಣನ್ನು ಮದುವೆಯಾದರೆ, ಅದು ಬಾಲ್ಯವಿವಾಹ ಕಾಯ್ದೆಯಡಿಯಲ್ಲಿ ಅಪರಾಧವಾಗುತ್ತದೆ ಎಂಬುದನ್ನು ತಿಳಿದಿದ್ದರು, ಹಲವಾರು ಸಾಮೂಹಿಕ ಮದುವೆಗಳಲ್ಲಿ ರಾಜಕಾರಣಿಗಳ, ಮಠಾಧಿಶರು ಮತ್ತು ಸಮಾಜದ ಹಿರಿಯ ಗಣ್ಯರೆದುರಿನಲ್ಲಿಯೇ ಬಾಲ್ಯ ವಿವಾಹಗಳು ನಡೆಯುತ್ತಿವೆ. ಇದನ್ನು ತಪ್ಪಿಸಲು ಬಾಲ್ಯ ವಿವಾಹ ತಡೆ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕಾದುದು ಅವಶ್ಯಕವಾಗಿದೆ.

★ ಲೈಂಗಿಕ ಕಿರುಕುಳ - ಇದು ಹೆಣ್ಣಿನ ಪಾಲಿಗೆ ಹಿಂಸೆಯ ಪರಾಕಾಷ್ಠೆ. ಸಾರ್ವಜನಿಕ ಸ್ಥಳಗಳಲ್ಲಿ, ಕೆಲಸ ಮಾಡುವ ಇಲಾಖೆ, ಸಂಸ್ಥೆಗಳಲ್ಲಿ ಹೆಣ್ಣು ಕಿರುಕುಳಕ್ಕೊಳಗಾದದ್ದು ಸಾಬೀತಾದರೆ, ಕಿರುಕುಳ ನೀಡಿದ ವ್ಯಕ್ತಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಆದರೆ ಕೆಲವೊಂದು ನುಸುಳಿ ಹೋಗುವ ಕಾನೂನುಗಳನ್ನು ಬಿಗಿಗೊಳಿಸಬೇಕು. ಲೈಂಗಿಕ ಕಿರುಕುಳ ತಡೆ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು.

ಮಹಿಳೆಯರ ಮೇಲಿನ ಅತ್ಯಾಚಾರ, ಅಪಹರಣ, ಹಿಂಸೆ, ಲೈಂಗಿಕ ಕಿರುಕುಳಗಳು ಅತ್ಯಂತ ನಾಚಿಕೆಗೇಡಿನ ಸಂಗತಿಗಳೆಂದು ಸಮಾಜಕ್ಕೆ ತಿಳಿದಿದ್ದರೂ, ಅದೇ ಸಮಾಜ ದಲ್ಲಿ ದಿನಗಳು ಉರುಳಿದಂತೆಲ್ಲಾ ಲೈಂಗಿಕ ಕಿರುಕುಳಗಳ ಸಂಖ್ಯೆ ಹೆಚ್ಚುತ್ತಲಿವೆ. ಮಹಿಳೆಯರ ಮೇಲೆ ನಡೆಯುವ ಇಂತಹ ದೌರ್ಜನ್ಯಗಳಿಗೆ ಭೌಗೋಳಿಕ, ಸಾಂಸ್ಕೃತಿಕ, ಧಾರ್ಮಿಕ, ಬಡವ, ಶ್ರೀಮಂತರೆಂಬ ಚೌಕಟ್ಟುಗಳಿಲ್ಲ. ಇದು ಎಲ್ಲಿಯ ವರೆಗೂ ಮುಂದುವರೆಯುತ್ತದೆಯೋ ಅಲ್ಲಿಯವರೆಗೆ ನಿಜವಾದ ಪ್ರಗತಿ ಸಾಧ್ಯವಿಲ್ಲ. ಅಭಿವೃದ್ಧಿ ಶಾಂತಿ ಮತ್ತು ಸಮಾನತೆ ಸ್ಥಾಪಿಸಲು ಸಾಧ್ಯವಿಲ್ಲ.

ಮಹಿಳೆಯರ ಮೇಲೆ ಆಗುತ್ತಿರುವ ಲೈಂಗಿಕ ಕಿರುಕುಳಗಳನ್ನು ತಡೆಯಲು ಅನೇಕ ಕಾಯ್ದೆಗಳು ಇದ್ದರೂ ಸಹಿತ ದಿನ ಬೆಳಗಾದಂತೆ ಮಹಿಳೆಯರು ಹಿಂಸೆ, ಅತ್ಯಾಚಾರ ಅಥವಾ ಇನ್ಯಾವುದೋ ರೀತಿಯ ಕಿರುಕುಳಕ್ಕೆ ಒಳಗಾದ ತಕ್ಷಣ ದೂರು ಕೊಡದೇ ಇರುವುದರಿಂದ, ಅಪರಾಧಿಗಳು ಸುಲಭವಾಗಿ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿದೆ. ಆದ್ದರಿಂದ ಮಹಿಳೆಯರು ಮಹಿಳಾ ಸಂಘ, ಉಚಿತ ಕಾನೂನು ಸಲಹೆ ಸಂಸ್ಥೆಗಳನ್ನು ಸಂಪರ್ಕಿಸಬೇಕು. ಅವರು ಯಾವುದೇ ರೀತಿಯ ಆರ್ಥಿಕ ಒತ್ತಡಗಳನ್ನು ನೀಡದೆ ಉಚಿತವಾಗಿ ವಕೀಲರನ್ನು ನೇಮಿಸಿ ಅವರ ಮೂಲಕ ಕಾನೂನಿನ ರೀತಿಯಲ್ಲಿ ಕ್ರಮ ಕೈಗೊಂಡು ಅಪರಾಧಿಗಳನ್ನು ಶಿಕ್ಷೆಗೊಳಪಡಿಸುತ್ತಾರೆ. ಆದರೆ ಹಲವಾರು ಪ್ರಕರಣಗಳು ನ್ಯಾಯಾಲಯದಲ್ಲಿಯೇ ಧೂಳು ಹಿಡಿಯುತ್ತಿವೆ. ಬೇಲಿಯೇ ಎದ್ದು ಹೊಲ ಮೇಯ್ದಾಗ ಯಾರು ಏನು ಮಾಡಲು ಸಾಧ್ಯವಿಲ್ಲ ಎಂಬಂತಾಗಿದೆ ಈಗಿನ ಸಮಾಜ ಮತ್ತು ಕಾನೂನು.

ಆಧಾರಗಳು

೧. ಗಾಯತ್ರಿ ಎಸ್. (೧೯೯೬) 'ಮಹಿಳೆ ಬಿಡುಗಡೆಯ ಹಾದಿಯಲ್ಲಿ'
೨. ಡಾ|| ನೀಲಮ್ಮ ಕೆ. (೧೯೯೭) 'ಮಹಿಳೆ : ಹಲವು ಮುಖಗಳು'
೩. ಕ್ರೈಮ್ ಇನ್ ಇಂಡಿಯಾ (೨೦೦೦) ನ್ಯಾಷನಲ್ ಕ್ರೈಮ್ ರಿಕಾರ್ಡ್ಸ್ ಬ್ಯೂರೋ.
೪. ಶಮಂತ (೨೦೦೧) 'ಕಟಕಟೆಯೊಳಗೆ ಕುಟುಂಬದ ಕಣ್ಣೀರು'
೫. ಡಾ|| ಶ್ರೀಮತಿ.ಎಚ್.ಎಸ್.-೨೦೦೧ 'ಆಧುನಿಕ ಭಾರತದಲ್ಲಿ ಮಹಿಳೆ'.
೬. ದಿಕ್ಸೂಚಿ ಮಾಸ ಪತ್ರಿಕೆ ೭. ವಿಜಯ ಕರ್ನಾಟಕ ದಿನಪತ್ರಿಕೆ

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣ ವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದು ದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ವಾಸ್ತವ

ಅಸ್ಪೃಶ್ಯತಾ ವಿರೋಧಿ ಕಾಯ್ದೆ, ಎಸ್‌ಸಿ/ಎಸ್‌ಟಿ ದೌರ್ಜನ್ಯ ವಿರೋಧಿ ಹೀಗೆ ಎಷ್ಟು ಕಾಯಿದೆಗಳಿದ್ದರೂ ಇಂದಿಗೂ ದಲಿತರು ಅಸ್ಪೃಶ್ಯತೆ, ದೌರ್ಜನ್ಯಗಳಿಂದ ಮುಕ್ತರಾಗಿಲ್ಲ. ಇನ್ನು ಸತ್ತ ನಂತರ ಸ್ಮಶಾನದಲ್ಲಿಯೂ ಸಹ ಅಸ್ಪೃಶ್ಯರಾಗಿ ಪ್ರತ್ಯೇಕವಾಗಿ ಹೂಳಲ್ಪಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ದಲಿತರು ಮತ್ತು ದೌರ್ಜನ್ಯಗಳು, ದಲಿತರು ಸುಭದ್ರವಾಗಿರುವುದೆಲ್ಲಿ?, ದಲಿತರು ಮತ್ತು ಹಿಂದುತ್ವ, ದಲಿತರು ಮತ್ತು ಪೊಲೀಸ್ ವ್ಯವಸ್ಥೆ ದಲಿತರು ಮತ್ತು ನ್ಯಾಯಾಲಯಗಳು, ದಲಿತರು ಮತ್ತು ಮೀಸಲಾತಿ, ದಲಿತರು ಮತ್ತು ಜಾಗತೀಕರಣ, ಎಂಬ ಇಂತಹ ವಿಷಯಗಳನ್ನು ವರ್ಗೀಕರಿಸಿದ ವಿಶ್ಲೇಷಣೆ ಇಲ್ಲಿದೆ.

○ ಸಣ್ಣಂಗಿ ರಾಜ

ದಲಿತರು ಸುಭದ್ರವಾಗಿರುವುದೆಲ್ಲಿ ?

ಸ್ವತಂತ್ರ ಭಾರತವೆಂದು ಹೇಳಿಕೊಳ್ಳುತ್ತಿರುವ ನಮ್ಮ ದೇಶದಲ್ಲಿ ೧೫ ಕೋಟಿಗೂ ಅಧಿಕ ಜನರು ಅಸ್ಪೃಶ್ಯರಾಗಿ ಜೀವಿಸುತ್ತಿದ್ದಾರೆ. ಇಂದಿಗೂ ಅನೇಕ ಗ್ರಾಮಗಳಲ್ಲಿ ಊರಿನಿಂದ ದೂರದ ಕೇರಿಗಳಲ್ಲಿ ಹೊಲಸು ಕೊಚ್ಚೆಗಳ ಮಧ್ಯೆ ಗುಡಿಸಲುಗಳಲ್ಲಿ ಲಕ್ಷಾಂತರ ದಲಿತರು ದುರ್ಬಲ ಜೀವನ ನಡೆಸುತ್ತಿದ್ದಾರೆ.

ಸತ್ತ ದನ ಊರಿನಿಂದ ಹೊರಗೆ ಹೊತ್ತುಕೊಂಡು ಹೋಗಿ ಚರ್ಮ ಸುಲಿದು ಚಪ್ಪಲಿ ಹೊಲೆಯುವುದು, ಸತ್ತ ಶವವನ್ನು ಹೊತ್ತುಕೊಂಡು ಹೋಗುವುದು, ದೂರದ ಊರಿನಲ್ಲಿರುವ ಮೇಲ್ಜಾತಿ ಜನರ ಸಂಬಂಧಗಳಿಗೆ ಸುದ್ದಿ ಮುಟ್ಟಿಸುವುದು, ಗುಂಡಿ ತೆಗೆಯುವಂತಹ ಕೆಲಸಗಳನ್ನು ಮಾಡುತ್ತಿದ್ದಾರೆ. ಇಂತಹ ಪರಿಶುದ್ಧ ಕೆಲಸಗಳಲ್ಲದೆ ಕಸ ಗುಡಿಸುವ, ಹೇಲೆತ್ತುವ ಕೆಲಸಗಳನ್ನೂ ಸಹ ಅಸ್ಪೃಶ್ಯರೇ ಮಾಡುತ್ತಾರೆ. ಮನುಷ್ಯರ ಹೇಲನ್ನು ಕೈಗಳಲ್ಲಿ ಎತ್ತಿ ಬಕೆಟಿಗೆ ಹಾಕಿಕೊಂಡು ನೆತ್ತಿಯ ಮೇಲೆ ಒತ್ತುಕೊಂಡು ಹೋಗಿ ದೂರ ಹಾಕುವ ಜನರು ತಾವು ಮಲಿನಗೊಂಡು ಸಮಾಜಕ್ಕೆ ಆರೋಗ್ಯ ಭಾಗ್ಯವನ್ನು ಪ್ರಸಾದಿಸುತ್ತಾರೆ.

ಹುಟ್ಟಿನಿಂದಲೇ ಜಾತಿಯ ಆಧಾರದ ಮೇಲೆ ಈ ಸಮಾಜದಲ್ಲಿ ಕೆಲವರಿಗೆ ಅಧಿಕಾರ, ಅಹಂಕಾರ, ಗೌರವಗಳು ಬರುತ್ತವೆ. ಮತ್ತೆ ಕೆಲವರಿಗೆ ದನ, ಹಂದಿ, ನಾಯಿಗಳಿಗಿಂತ ಕೀಳಾಗಿ ಕಾಣುವ ಪರಿಸ್ಥಿತಿ ಇದೆ. ಪಕ್ಷಿ, ಹಾವು, ದನ, ಕೋತಿ, ಹೇಲನ್ನು ಪೂಜಿಸುವಂತಹ ಹಿಂದುತ್ವವಾದಿಗಳನ್ನ 'ಮನುಷ್ಯರನ್ನ ಕೀಳಾಗಿ ಕಾಣುವುದೇಕೆಂದು ಪ್ರಶ್ನಿಸಿದರೆ' ಅಟ್ಟಾಡಿಸಿಕೊಂಡು ಕೈಕಾಲು ತಲೆ ಕಡಿದು ಸಾಯಿಸುತ್ತಾರೆ. ಮನುಷ್ಯರನ್ನ ಮನುಷ್ಯರನ್ನಾಗಿ ನೋಡಬೇಕೆಂಬ ಹಂಬಲಕ್ಕಾಗಿ ದಲಿತರು ಸುರಿಸಿದ ರಕ್ತದ ಕಾರಣಕ್ಕೆ ಮೇಲ್ಜಾತಿಯ ಅಧಿಕಾರಿ ಆಳುವ ವರ್ಗ ಕೆಲ ಕಾಯ್ದೆ ಕಟ್ಟಳೆಗಳನ್ನು ತಂದಿದೆ.

ನಮ್ಮ ಸಂವಿಧಾನದ ಆರ್ಟಿಕಲ್ ೧೭ ಅಸ್ಪೃಶ್ಯತೆಯನ್ನು ನಿಷೇಧಿಸಿದೆ. ೧೯೫೫ರಲ್ಲಿ ಅಸ್ಪೃಶ್ಯತಾ ವಿರೋಧಿ ಕಾಯ್ದೆ ಜಾರಿಗೆ ಬಂದಿದೆ. ೧೯೮೯ರಲ್ಲಿ ಎಸ್‌ಸಿ/ಎಸ್‌ಟಿ ದೌರ್ಜನ್ಯ ವಿರೋಧಿ ಕಾಯ್ದೆ ಜಾರಿಗೆ ಬಂದಿದೆ. ಇಷ್ಟು ಕಾಯಿದೆಗಳಿದ್ದರೂ ಇಂದಿಗೂ ಅನೇಕ ಗ್ರಾಮಗಳಲ್ಲಿ ದಲಿತರು ಚಪ್ಪಲಿ ಹಾಕಿಕೊಂಡು ಮೇಲ್ಜಾತಿ ಜನರ ಬೀದಿಗಳಲ್ಲಿ ನಡೆಯುವಂತಿಲ್ಲ. ಮೊಳಕಾಲು ಕೆಳಗಿನವರೆಗೆ ಲುಂಗಿ ಉಡುವಂತಿಲ್ಲ, ದಲಿತ ಹೆಣ್ಣು ಮಕ್ಕಳು ಹೂ ಮುಡಿಯುವಂತಿಲ್ಲ, ಇದಲ್ಲದೆ ಹೋಟೆಲ್, ದೇವಸ್ಥಾನಗಳಿಗೆ ಪ್ರವೇಶವಿಲ್ಲ. ಮೇಲ್ಜಾತಿ ಜನರ ಬೀದಿಗಳಲ್ಲಿ ದಲಿತರ ಮದುವೆ ಮೆರವಣಿಗೆ, ದೇವರ ಮೆರವಣಿಗೆ ಮಾಡುವಂತಿಲ್ಲ.

ದಲಿತರು ಸಾರ್ವಜನಿಕ ಪ್ರದೇಶಗಳಾದ ಚಾವಡಿಯ ಕಟ್ಟೆಯ ಮೇಲೆ, ಬಸ್ ನಿಲ್ದಾಣದ ಕಲ್ಲುಗಳ ಮೇಲೆ ಕುಳಿತುಕೊಳ್ಳುವಂತಿಲ್ಲ. ಮೇಲ್ಜಾತಿಯ ದುರಹಂಕಾರಿ ದೌರ್ಜನ್ಯದ ಮನಸ್ಸುಗಳುಳ್ಳ ಜನ ಊರು, ಕೇರಿ ಒಂದಾಗದಂತೆ ಅಘೋಷಿತ ಬಹಿಷ್ಕಾರವನ್ನು ಜಾರಿಗೆ ತಂದಿದ್ದಾರೆ, ತರುತ್ತಿದ್ದಾರೆ. ನಗರಗಳಲ್ಲಿಯೂ ಸಹ ದಲಿತ ಉದ್ಯೋಗಿಗಳನ್ನ ಅದೇ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದಾರೆ. ಮನೆಗಳ ಹತ್ತಿರ, ನೀರಿನ ನಲ್ಲಿಯ ಹತ್ತಿರ, ಆಫೀಸು, ಫ್ಯಾಕ್ಟರಿ ಮತ್ತಿತರ ಕಡೆ ಅವಮಾನಿಸುವುದು ನಡೆಯುತ್ತಿದೆ.

ಮೇಲ್ಜಾತಿಯ ಹಂತಕ ಪ್ರತಿನಿಧಿಗಳೇ ಆಳುವಂತಹ ಜನರಾಗಿರುವ ಕಾರಣಕ್ಕೆ ಕಷ್ಟಪಟ್ಟು ಹೋರಾಡಿ ಪಡೆದಂತಹ ಕಾನೂನುಗಳನ್ನ ಜಾರಿಗೆ ಬರಲು ಬಿಡುತ್ತಿಲ್ಲ. ದೌರ್ಜನ್ಯ ವಿರೋಧಿ ಕಾಯ್ದೆ ಕಾನೂನುಗಳ ಜಾರಿಗೆ ಹೋರಾಟ ನಡೆಸಬೇಕಾಗಿದೆ. ಈ ಆಂದೋಲನಗಳಲ್ಲಿ ರಕ್ತ ಹರಿಸುವಂತಹ ಅನಿವಾರ್ಯತೆಯೂ ಸಹ ಬಂದಿದೆ. ದಲಿತರು ಹುಟ್ಟಿನಿಂದ ಸಾಯುವವರೆಗೂ ಇಂತಹ ನೀಚಾತಿ ನೀಚ ಬವಣೆಯನ್ನು ಅನುಭವಿಸಬೇಕಾಗಿದೆ. ಇನ್ನು ಸತ್ತ ನಂತರ ಸ್ಮಶಾನದಲ್ಲಿಯೂ ಸಹ ಅಸ್ಪೃಶ್ಯರಾಗಿ ಪ್ರತ್ಯೇಕ ಸ್ಮಶಾನಗಳಲ್ಲಿ ಹೂಳುತ್ತಾರೆ. ಮೇಲ್ಜಾತಿಯ ಬ್ರಾಹ್ಮಣಶಾಹಿ ಹಿಡಿತದ ಜಾತಿವ್ಯವಸ್ಥೆಯಡಿ ದಲಿತರು ನಿರಂತರವಾಗಿ ನಲುಗುತ್ತಿದ್ದಾರೆ.

ಮಧ್ಯ ಏಷ್ಯಾದಿಂದ ಬಂದ ಆರ್ಯರು ಪಶುಪಾಲಕರಾಗಿ ನಮ್ಮ ದೇಶವನ್ನು ಪ್ರವೇಶಿಸಿದರು. ಅಲ್ಪಸಂಖ್ಯಾತರಾಗಿರುವ ಆರ್ಯರು ಬಲ ಪ್ರಯೋಗದಿಂದ ಧರ್ಮ ಶಾಸ್ತ್ರದ ಆಧಾರದ ಮೇಲೆ ಭಾರತದಲ್ಲಿನ ಗಣ (ಬುಡಕಟ್ಟುಸಮಾಜಗಳ) ಗಳನ್ನಗುಲಾಮರನ್ನಾಗಿಸಿಕೊಳ್ಳುವ ಪ್ರಯತ್ನವಾಗಿ ವರ್ಣ ವ್ಯವಸ್ಥೆಯನ್ನ ಜಾರಿಗೊಳಿಸಿದರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ವರ್ಗೀಕರಿಸಿ ಸಮಾಜಕ್ಕೆ ಅಗತ್ಯವಾದ ವಿವಿಧ ವೃತ್ತಿ ಶ್ರೇಣಿಗಳನ್ನು ಹುಟ್ಟುಹಾಕಿದರು. ಬ್ರಾಹ್ಮಣರ ವರ್ಣಾಶ್ರಮ ಧರ್ಮಗಳ ಮನುಸ್ಮೃತಿ ಒಂದು ಕಾಯ್ದೆಯಾಗಿ ಹುಟ್ಟಿಕೊಂಡಿದೆ. ಜಾತಿ ವ್ಯವಸ್ಥೆ ಅಂದಿನಿಂದ ಇಂದಿನವರೆಗೂ ಬ್ರಾಹ್ಮಣಶಾಹಿಗಳ ಆಯುಧವಾಗಿ ಕರ್ಮ ಸಿದ್ಧಾಂತವನ್ನು ಬೋಧಿಸುತ್ತಾ ಕೆಳ ಜಾತಿ ಜನರ ಶ್ರಮವನ್ನು ದೋಚುತ್ತಿದ್ದಾರೆ.

ದಲಿತರು, ರೈತರು ಆದಿವಾಸಿಗಳ ಹೋರಾಟದ ಫಲವಾಗಿ ಕೆಲ ರಾಜ್ಯಗಳಲ್ಲಿ ಉಳಿಗಮಾನ್ಯ ವ್ಯವಸ್ಥೆ ರದ್ದಾಗಿ ಭೂ ಹಂಚಿಕೆ ಅಲ್ಪ ಸ್ವಲ್ಪವಾದರೂ ಗೋಮಾಳ ಮತ್ತಿತರ ಕೆಲಸಕ್ಕೆ ಬಾರದ ಭೂಮಿ ದಲಿತರಿಗೆ ದಕ್ಕಿದೆ. ಬ್ರಾಹ್ಮಣರ ಅಧೀನದಲ್ಲಿದ್ದ ಸಾವಿರಾರು ಅಗ್ರಹಾರಗಳು ಛಿದ್ರಗೊಂಡಿವೆ. ೧೯೬೦ರಲ್ಲಿ ನಡೆದ ಚಳವಳಿಗಳ ಕಾರಣಕ್ಕಾಗಿ ಕೆಲ ಜಾತಿಗಳು ಅರೆ ಭೂ ಮಾಲೀಕರಾಗಿ ಅವತರಿಸಿದ್ದಾರೆ. ಬ್ರಾಹ್ಮಣ, ರೆಡ್ಡಿ, ಮರಾಠಿಗರು, ಒಕ್ಕಲಿಗರು ಮತ್ತು ಲಿಂಗಾಯಿತರಲ್ಲದೇ ಮತ್ತಿತರರು ಮೇಲ್ಜಾತಿಯಾಗಿ ಆಳುವ ವರ್ಗಗಳಾಗಿವೆ.

ಬ್ರಿಟೀಷ್ ಆಳುವವರು ತಮ್ಮ ಮತ (ಕ್ರೈಸ್ತ) ಅಭಿವೃದ್ಧಿಯ ಭಾಗವಾಗಿ ಚರ್ಚ್, ವಿದ್ಯಾಶಾಲೆ, ವೈದ್ಯ ಕೇಂದ್ರಗಳಿಗೆ ದಲಿತರಿಗೆ ಪ್ರವೇಶಿಸುವ ಅವಕಾಶವನ್ನು ಕಲ್ಪಿಸಿದ್ದಾರೆ. ರೈಲ್ವೇ, ಫ್ಯಾಕ್ಟರಿಗಳಲ್ಲಿ ದಲಿತರಿಗೆ ಸಣ್ಣ ಸಣ್ಣ ಉದ್ಯೋಗವಕಾಶಗಳೂ ಸಹ ದೊರೆತಿವೆ. ವ್ಯವಸಾಯ ಕೂಲಿ ಕಾರ್ಮಿಕರಾದ ದಲಿತರಿಗೆ ಚಳವಳಿಯ ಕಾರಣಕ್ಕೆ ಕೂಲಿ ದರ ಏರಿಕೆಗೆ ಉಪಯೋಗವಾಗಿದೆ. ಓದು, ಉದ್ಯೋಗ, ನಿತ್ಯದ ದಾರಿಗಾಗಿ ಕೂಲಿ ಮತ್ತಿತರ ಕೆಲಸದಿಂದ ಕೆಲ ದಲಿತರು ಮಧ್ಯಮ ವರ್ಗವಾಗಿ ಹುಟ್ಟಿಕೊಂಡಿದ್ದಾರೆ.

ಈ ವಿಧವಾಗಿಯೇ ಸಂಘಟನೆಗಳಲ್ಲಿಯೂ, ಸಮಾಜ ದಲ್ಲಿಯೂ ನಾವು ಮನುಷ್ಯರೆಂದು ಗುರುತಿಸಿಕೊಳ್ಳುವಂತಹ ಸ್ವಾಭಿಮಾನಕ್ಕಾಗಿ ಹೋರಾಡಿದ್ದಾರೆ. ಫುಲೆ, ಪೆರಿಯಾರ್, ಅಂಬೇಡ್ಕರ್‌ರಂತಹ ಸಾಮಾಜಿಕ ಕ್ರಾಂತಿಕಾರಿಗಳ ನಾಯಕತ್ವ ದಲ್ಲಿ ಮೇಲ್ಜಾತಿ ಭೂ ಮಾಲೀಕ, ಬ್ರಾಹ್ಮಣ ಶಾಹಿಗಳ ವಿರುದ್ಧ ಅನೇಕ ಹೋರಾಟಗಳನ್ನು ನಡೆಸಿದ್ದಾರೆ.

ದಲಿತರು ಮತ್ತು ದೌರ್ಜನ್ಯಗಳು

ಯುಗಯುಗಗಳಿಂದಲೂ ಭೂಮಿಯಿಲ್ಲದವರು, ಬಿಟ್ಟಿ ಜೀತಗಾರರಾಗಿ ಬದುಕುತ್ತಿರುವ ದಲಿತರು ತಮ್ಮ ಹಕ್ಕುಗಳಿಗಾಗಿ ಪ್ರಶ್ನಿಸಿದರೆ ಸಹಿಸಲಾಗದ ಮೇಲ್ಜಾತಿಯ ಜನರು ದಲಿತರ ಮೇಲೆ ಸಾಮೂಹಿಕ ದೌರ್ಜನ್ಯಗಳು, ಅತ್ಯಾಚಾರಗಳು, ಹತ್ಯೆಗಳು, ಸಜೀವ ದಹನಗಳನ್ನು ನಡೆಸುತ್ತಿದ್ದಾರೆ. ಬಿಹಾರ ರಾಜ್ಯದ ಲಕ್ಷ್ಮಣರ ಬಾಥೆ ಗ್ರಾಮದಲ್ಲಿ ಮೇಲ್ಜಾತಿಯ ಆಯುಧದಾರಿ ರಣವೀರ ಸೇನೆ ೭೦ ಮಂದಿಗೂ ಅಧಿಕ ದಲಿತರನ್ನ ತಲೆ ಕಡಿದು ಸಾಯಿಸಿ ಇಡೀ ದಲಿತ ಸಮುದಾಯವನ್ನೇ ಭಯದ ವಾತಾವರಣದಲ್ಲಿ ಬದುಕುವಂತೆ ಮಾಡಿದೆ. ದಲಿತರು ಕೆಲಸಕ್ಕೆ ತಕ್ಕ ವೇತನ ಕೇಳಿದ ಕಾರಣಕ್ಕೆ ರಣವೀರ ಸೇನೆ ಈ ದಾರುಣ ಘಟನೆ ನಡೆಸಿದೆ. ತಮಿಳುನಾಡಿನ ಕೀಲ್‌ವೆಣ್ಮಣಿಯಲ್ಲಿ ದಿನಗೂಲಿ ಜಾಸ್ತಿ ಮಾಡಿರೆಂದು ಕೇಳಿದ್ದಕ್ಕೆ ಮೇಲ್ಜಾತಿಯ ನೂರಾರು ಜನ

ದಲಿತರು ಸುಭದ್ರವಾಗಿರುವುದೆಲ್ಲಿ?

ದೇಶದಲ್ಲಿ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳಿಗೆ ಕೊನೆ ಎಲ್ಲಿ? ಈ ಕೆಳಗಿನ ಕೋಷ್ಟಕದಲ್ಲಿರುವ ವಿವರಗಳು ಪೊಲೀಸ್ ಠಾಣೆಯಲ್ಲಿ ದಾಖಲಾದ ಕೇಸುಗಳು ಮಾತ್ರ. ದಾಖಲೆಗಳಿಲ್ಲದವು ಇದಕ್ಕಿಂತ ಜಾಸ್ತಿ.

ರಾಜ್ಯಗಳು	ದಲಿತರ ಮೇಲಿನ ದೌರ್ಜನ್ಯಗಳು						
	೧೯೯೬	೧೯೯೭	೧೯೯೮	೧೯೯೯	೨೦೦೦	೨೦೦೧	೨೦೦೨
ಕರ್ನಾಟಕ	೧೦೮೯	೧೨೨೭	೧೦೨೪	೧೩೨೦	೧೫೬೬	೧೭೨೪	೧೮೬೩
ಆಂಧ್ರಪ್ರದೇಶ	೧೬೨೪	೧೮೮೦	೧೫೩೦	೧೭೪೯	೧೫೬೫	೧೬೩೪	೧೫೫೮
ಬಿಹಾರ	೮೧೦	೭೧೦	೬೮೩	೭೨೬	೭೬೬	೬೬೩	೫೨೪
ತಮಿಳುನಾಡು	೧೮೧೨	೧೪೦೩	೧೭೧೯	೧೬೨೦	೧೨೩೦	೧೫೦೦	
ಉತ್ತರ ಪ್ರದೇಶ	೧೯೬೩	೮೫೦೦	೫೫೦೮	೬೨೦೦			

ಗೂಂಡಾಗಳೊಂದಿಗೆ ದಲಿತರ ಕೇರಿಗೆ ನುಗ್ಗಿ ಸಾಮೂಹಿಕ ದೌರ್ಜನ್ಯ ನಡೆಸಿದ್ದಾರೆ. ಕೆಲ ದಲಿತರು ಭಯದಿಂದ ಓಡಿಹೋಗಿದ್ದಾರೆ. ಮತ್ತೆ ಕೆಲವರು ಒಂದು ಮನೆಯಲ್ಲಿ ಅವಿತುಕೊಂಡರೆ ಜಾತಿವಾದಿ ದುರಹಂಕಾರಿಗಳು ಆ ಮನೆಗೆ ಬೆಂಕಿ ಹಚ್ಚಿ ಸ್ತ್ರೀಯರು, ಮಕ್ಕಳನ್ನೊಳಗೊಂಡಂತೆ ೪೪ ಜನರನ್ನು ಸುಟ್ಟುಬೂದಿಯಾಗಿಸಿದ್ದಾರೆ.

ಇಂತಹ ಮತ್ತೊಂದು ಘಟನೆ ಕರ್ನಾಟಕದಲ್ಲಿಯೂ ಸಹ ನಡೆದಿದೆ. ಕೋಲಾರ ಜಿಲ್ಲೆಯ ಕಂಬಾಲಪಲ್ಲಿಗಳಂತಹ ನರಮೇಧದ ಘಟನೆಗಳು ನಮ್ಮ ಕಣ್ಣಮುಂದೆಯೇ ನಡೆಯುತ್ತಿವೆ. ಸ್ವಾಭಿಮಾನಿಗಳಾಗಿ ಬದುಕುವ ಕಾರಣಕ್ಕೆ ದಲಿತರ ಮೇಲೆ ಮೇಲ್ಜಾತಿಯವರ ದೌರ್ಜನ್ಯಗಳು ಹೇಳತೀರದಾಗಿವೆ. ಶೇ ೬೦ ರಷ್ಟು ದೌರ್ಜನ್ಯಗಳು ಭೂಮಿಯ ಕಾರಣಕ್ಕೆ ನಡೆಯುತ್ತಿವೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ ೧೯೪೭ರಿಂದ ೧೯೯೬ರ ಒಳಗೆ ದೇಶಾದ್ಯಂತ ಒಟ್ಟು೭೮ ಸಾವಿರಕ್ಕಿಂತ ಜಾಸ್ತಿ ದಲಿತರ ಮೇಲಿನ ದೌರ್ಜನ್ಯದ ಘಟನೆಗಳು ನಡೆದಿವೆ, ನಡೆಯುತ್ತಿವೆ.

ದಲಿತ ವಿದ್ಯಾರ್ಥಿಗಳು ಶಾಲೆ, ಕಾಲೇಜುಗಳಿಗೆ ಹೋಗುವ ಕಾರಣಕ್ಕೆ ಮೇಲ್ಜಾತಿಯ ಹುಡುಗಿಯರನ್ನು ಚುಡಾಯಿಸುತ್ತಾರೆಂದೋ ಇಲ್ಲ ನೀರಿನ ವಿಚಾರಗಳೆಂದೋ ನಿರಂತರ ಜಗಳ, ಹಲ್ಲೆ, ಅವಮಾನಗಳು ನಡೆಯುತ್ತಿವೆ. ಚುನಾವಣೆಯ ಸಮಯದಲ್ಲಿಯೂ ಮೇಲ್ಜಾತಿಯ ಜನ ಹೇಳಿದ ಪಕ್ಷಕ್ಕೆ ಮತ ಹಾಕಲಿಲ್ಲವೆಂದರೆ ಮೇಲ್ಜಾತಿಯ ವಿರುದ್ಧ ಪ್ರತಿಸ್ಪರ್ಧಿಗಳಾಗಿ ನಿಂತರೆ ದೌರ್ಜನ್ಯಗಳು ನಡೆಯುತ್ತವೆ. ಗ್ರಾಮ ಪಂಚಾಯ್ತಿಯಿಂದ ಎಂಎಲ್ಎ, ಎಂ. ಪಿ. ಯವರೆಗೆ ಗೆಲ್ಲಲು ಯಾವ ರೀತಿಯಾದರೂ ಸರಿ ದಲಿತರನ್ನು ಸಾಯಿಸುವ ಅಧಿಕಾರವನ್ನು ಮೇಲ್ಜಾತಿಯ ಜನ ಧಕ್ಕಿಸಿಕೊಂಡಿದ್ದಾರೆ. ಇದು ನಿರಂತರವಾಗಿದೆ.

ಸ್ವಾಭಿಮಾನಿಗಳಾಗಿ ಬದುಕುವ ಕಾರಣಕ್ಕೆ ದಲಿತರ ಮೇಲೆ ಮೇಲ್ಜಾತಿಯವರ ದೌರ್ಜನ್ಯಗಳು ಹೇಳತೀರದಾಗಿವೆ. ಶೇ ೬೦ ರಷ್ಟು ದೌರ್ಜನ್ಯಗಳು ಭೂಮಿಯ ಕಾರಣಕ್ಕೆ ನಡೆಯುತ್ತಿವೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ ೧೯೪೭ರಿಂದ ೧೯೯೬ರ ಒಳಗೆ ದೇಶಾದ್ಯಂತ ಒಟ್ಟು೭೮ ಸಾವಿರಕ್ಕಿಂತ ಜಾಸ್ತಿ ದಲಿತರ ಮೇಲಿನ ದೌರ್ಜನ್ಯದ ಘಟನೆಗಳು ನಡೆದಿವೆ, ನಡೆಯುತ್ತಿವೆ.

ದಲಿತರು ಮತ್ತು ಹಿಂದುತ್ವ

ಹಿಂದೂ ಮತೀಯ ವಾದದ ವಿರುದ್ಧ ಮಾತನಾಡಿದರೆ ನರಮೇಧ ಸೃಷ್ಟಿಸುವಂತಹ ಅಧಿಕಾರವನ್ನ ಬಿಜೆಪಿ ಮತ್ತು ಸಂಘ ಪರಿವಾರ ಸಂಪಾದಿಸಿಕೊಂಡಿದೆ. ಅದರ ಆಧಾರದ ಮೇಲೆ ಗುಜರಾತಿನಲ್ಲಿ ಅನೇಕ ಜನ ದಲಿತರನ್ನ, ಆದಿವಾಸಿಗಳನ್ನ, ಒಬಿಸಿಗಳನ್ನ ಇಟ್ಟುಕೊಂಡು ಮುಸ್ಲಿಮರ ಮಾರಣಹೋಮ ನಡೆಸಿದ್ದಾರೆ. ಹರಿಯಾಣಾದ ಜಜ್ಜುರ್ ಜಿಲ್ಲೆಯಲ್ಲಿ ದಲಿತರು ದನದ ಚರ್ಮ ಸುಲಿದರೆಂದು ಆರೋಪಿಸಿ ಹಿಂದೂ ಮತೀಯವಾದಿಗಳಾದ ವಿಹೆಚ್‌ಪಿಯ ಮಂಗಗಳು ೫ ಜನ ದಲಿತರನ್ನು ದಲಿತರ ಕೈಯಲ್ಲೇ ಕಲ್ಲು ಹೊಡೆಸಿ ಅತ್ಯಂತ ಅಮಾನವೀಯವಾಗಿ ಸಾಯಿಸಿದ್ದಾರೆ. ನಂತರ 'ಮನುಷ್ಯನ ಪ್ರಾಣಕ್ಕಿಂತ ದನದ ಪ್ರಾಣವೇ ಮುಖ್ಯ'ವೆಂದು ಹಲುಬುತ್ತಿದ್ದಾರೆ.

ಒರಿಸ್ಸಾದ ಬುಜ್ಜ್ವ ಜಿಲ್ಲೆಯಲ್ಲಿ ಆಸ್ಟ್ರೇಲಿಯಾ ದೇಶದ ಕುಷ್ಟರೋಗಿಗಳ ಹಾರೈಕೆ ಮಾಡುತ್ತಿದ್ದ ಫಾಸ್ಟರ್ ಗ್ರಾಹಂ ಸ್ಟೈನ್ಸ್‌ರನ್ನು ಮತ್ತು ಆತನ ಈರ್ವರು ಮಕ್ಕಳನ್ನು ಭಜರಂಗಿಗಳು ಪೆಟ್ರೋಲ್ ಸುರಿದು ಸಜೀವ ಹತ್ಯೆಗೈದಿದ್ದಾರೆ. ಅನೇಕ ಚರ್ಚುಗಳ ಮೇಲೆ, ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ ಮಾಡಿ ಸಾವಿರಾರು ಬೈಬಲ್‌ಗಳನ್ನು ದಹಿಸಿದ್ದಾರೆ. ಗುಜರಾತ್, ಮಹಾರಾಷ್ಟ್ರ ಮತ್ತಿತರ ರಾಜ್ಯಗಳಲ್ಲಿ ಕ್ರಿಶ್ಚಿಯನ್‌ರ ಮೇಲೆ ನಡೆದ ಹಿಂದುತ್ವವಾದಿಗಳ ದಾಳಿ ದೌರ್ಜನ್ಯಗಳು ದಲಿತ ಆದಿವಾಸಿಗಳ ಮೇಲೆ ನಡೆದಂತಹ ದೌರ್ಜನ್ಯಗಳೇ ಆಗಿವೆ.

ದಲಿತರನ್ನು ಕಷ್ಟನಷ್ಟಗಳಿಗೆ ಗುರಿಯಾಗಿಸುತ್ತಿರುವ ಮೇಲ್ಜಾತಿಯ ಆಳುವ ವರ್ಗದ ಜನರ ದೃಷ್ಟಿ ಮತ್ತೆ ಧರ್ಮ, ಕರ್ಮ ಸಿದ್ಧಾಂತಗಳ ಆಧಾರದ ಮೇಲೆ ದಲಿತರ ಶ್ರಮವನ್ನು ಬ್ರಾಹ್ಮಣಶಾಹಿಗಳು ದೋಚುತ್ತಿದ್ದಾರೆ. ನಿರಂತರವಾಗಿ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ತಮ್ಮ ಕಷ್ಟ ಪರಿಹಾರಕ್ಕೆ ದೇವರನ್ನೇ ನಮಸ್ಕರಿಸುವಂತೆ ಮಾಡಿದ್ದಾರೆ. ಮಕ್ಕಳ ವಿದ್ಯೆಗೆ, ಆರೋಗ್ಯಕ್ಕೆ ಉಪಯೋಗಿಸುವ ಹಣ ದೇವರ ದರ್ಶನಕ್ಕೆ ವ್ಯಯವಾಗುತ್ತಿದೆ.

ವ್ರತ, ಹವನ, ಹೋಮಗಳಿಗೆ ಖರ್ಚಾಗುತ್ತಿದೆ. ದೈನಂದಿನ ಜೀವನದಲ್ಲಿ ಹುಟ್ಟಿನಿಂದ ಸಾಯುವವರೆಗೂ ನಡೆಯುವ ಕ್ರಮಗಳಿಗೆ ಮುಹೂರ್ತಗಳ, ಜ್ಯೋತಿಷ್ಯಗಳ, ವಾಸ್ತುಗಳಂತಹ ಮೂಢನಂಬಿಕೆಗಳು ಬಾಧಿಸುತ್ತಿರುವಾಗ ದಲಿತ ಶ್ರಮಜೀವಿಗಳು ತಮ್ಮ ಬೆವರು, ರಕ್ತ ಬಸಿದು ಸಂಪಾದಿಸಿದ ಹಣವನ್ನು ಕಾಣಿಕೆಯ ರೂಪದಲ್ಲಿ ದೋಚುತ್ತಿದ್ದಾರೆ. ಹಿಂದುತ್ವ ಪ್ರಚಾರಕರಿಂದು ಪರಾವಲಂಬಿಗಳಾಗಿ ಜೀವಿಸುತ್ತಿದ್ದಾರೆ.

ದಲಿತರು ಮತ್ತು ಪೊಲೀಸ್ ವ್ಯವಸ್ಥೆ

ದಲಿತರ ಮೇಲೆ ಮೇಲ್ಜಾತಿಯವರು ದೌರ್ಜನ್ಯ ನಡೆಸಲು ಪೊಲೀಸರು ಸಕಲ ಕುಮ್ಮಕ್ಕು ನೀಡುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಪೊಲೀಸರು ಆರೋಪಿಗಳನ್ನು ಕಾಪಾಡುತ್ತಾ ಬಂದಿದ್ದಾರೆ. ಅಪರಾಧಿಗಳ ಮೇಲೆ ಎಸ್.ಸಿ, ಎಸ್.ಟಿ ಕಾಯ್ದೆಯಡಿ ಕೇಸು ದಾಖಲಿಸುವುದೇ ಇಲ್ಲ, ಜನರ ಹೋರಾಟದಿಂದ ಒಂದು ವೇಳೆ ಕೇಸು ಹಾಕಿದರೂ ಮೇಲ್ಜಾತಿಯ ಜನರು ಮತ್ತೆ ದಲಿತರ ಮೇಲೆ ಕೇಸು ಹಾಕಿಸಿ ರಾಜಿ ಮಾಡಿಸುತ್ತಾರೆ.

ಆಂಧ್ರ ಪ್ರದೇಶದ ಚಂಡೂರಿನಲ್ಲಿ ಪೊಲೀಸರ ಸಹಕಾರದೊಂದಿಗೆ ರೆಡ್ಡಿ ಜಾತಿಯ ಜಾತಿವಾದಿ ದುರಹಂಕಾರಿಗಳು ದಲಿತರನ್ನು ತಲೆ ಕಡಿದು ಸಾಯಿಸಿದ್ದಾರೆ. ಹಂತಕರನ್ನು ಬಂಧಿಸಬೇಕೆಂದು ಒತ್ತಾಯಿಸಿ ಪ್ರತಿಭಟನೆ ಮಾಡಿದವರನ್ನೇ ಗೋಲಿಬಾರ್ ಮಾಡಿ ಸಾಯಿಸಿದ್ದಾರೆ. ಕೋಲಾರ ಜಿಲ್ಲೆಯ ಕಂಬಾಲಪಲ್ಲಿಯಲ್ಲಿ ೭ ಜನ ದಲಿತರನ್ನು ಸಜೀವವಾಗಿ ದಹಿಸಿದ ರೆಡ್ಡಿಗಳನ್ನು ಮತ್ತೆ ಅದೇ ಜಿಲ್ಲೆಯ ನಾಗಲಾಪಲ್ಲಿಯಲ್ಲಿ ತಾಯಿ ಮಕ್ಕಳನ್ನು ಕೂಡಿಹಾಕಿ ಒಡೆದು ಸಾಯಿಸಿದ ರೆಡ್ಡಿಗಳನ್ನು ಪೊಲೀಸರು ಬಂಧಿಸದೇ ದೊಂಬಿ ಕೇಸು ಹಾಕಿ ದಲಿತರನ್ನೇ ಬಂಧಿಸಿದ್ದಾರೆ.

ಇದಲ್ಲದೆ, ಬಳ್ಳಾರಿ ಜಿಲ್ಲೆಯ ವಣೇನೂರಿನಲ್ಲಿ ದಲಿತ ಮಹಿಳೆಯನ್ನು ಬೆತ್ತಲೆಗೊಳಿಸಿದವರನ್ನು ಬಂಧಿಸದೇ ದೌರ್ಜನ್ಯಕ್ಕೊಳಗಾದವರ ಮೇಲೆ ಕೇಸು ದಾಖಲಿಸಿದ್ದಾರೆ. ಹೇಗಿದೆ ನೋಡಿ ? ದೌರ್ಜನ್ಯಕ್ಕೊಳಗಾದವರ ಮೇಲೆಯೇ ಕೇಸು ಹಾಕುವುದು. 'ಗಾಯದ ಮೇಲೆ ಬರೆ ಹಾಕುವಂತಹ ನೀತಿ'ಯನ್ನ ಅನುಸರಿಸುತ್ತಿದ್ದಾರೆ. ದೊಂಬಿ ಕೇಸು ಹಾಕಿದರೆ ಎಸ್.ಸಿ, ಎಸ್.ಟಿ ಕಾಯ್ದೆಯಡಿ ಕೇಸು ಹಾಕಲು ಬರುವುದಿಲ್ಲವೆಂದು ಕೈತೊಳೆದುಕೊಳ್ಳುತ್ತಾರೆ.

ದಲಿತ ಸ್ತ್ರೀಯರು ಸುಂದರವಾಗಿ ಹುಟ್ಟುವುದು ಅಪರಾಧವೇ ?

ದಲಿತ ಜಾತಿಯಲ್ಲಿ ಹೆಣ್ಣು ಮಕ್ಕಳು ಸುಂದರವಾಗಿ ಹುಟ್ಟುವುದೇ ಅಪರಾಧವಾಗುತ್ತದೆ. ಕನಿಷ್ಠ ಮನೆಯೂ ಸಹ ಇಲ್ಲದ ಕೂಲಿ ಕಾರ್ಮಿಕರಾದ ದಲಿತ ಸ್ತ್ರೀಯರು ಉಳ್ಳವರ ಹೊಲ ಗದ್ದೆಗಳಿಗೆ ಕೂಲಿಗೆ ಹೋದರೆ ಉಳ್ಳವರ ಕಾಮ ದಾಹಕ್ಕೆ ನಿರಂತರವಾಗಿ ಬಲಿಯಾಗುತ್ತಿದ್ದಾರೆ. ಕೆಲ ಸಂದರ್ಭಗಳಲ್ಲಿ ಹತ್ಯೆಗೂ ಸಹ ಗುರಿಯಾಗುತ್ತಿದ್ದಾರೆ. ಅವಮಾನ ಸಹಿಸಲಾರದೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಪೊಲೀಸ್ ಠಾಣೆಯ ಮೆಟ್ಟಲು ಹತ್ತುವುದೇ ಕನಸಿನ ಮಾತು. ಒಂದು ವೇಳೆ ಠಾಣೆಗೆ ಬಂದರೂ ಭಯದಲ್ಲಿ ಕೇಸು ಹಾಕಲು ಸಹ ಹೆದರುತ್ತಾರೆ. ಜೀವ ಬೆದರಿಕೆಯ ನಡುವೆಯೇ ಕೇಸು ಹಾಕುತ್ತಾರೆ. ಬಳ್ಳಾರಿ ಜಿಲ್ಲೆಯ ವಣೇನೂರು ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಕೆಲವು ಕಡೆ ದಲಿತರ ಸ್ವಾಭಿಮಾನಿ ಚೈತನ್ಯವನ್ನು ಸಹಿಸದವರು ದಲಿತ ಸ್ತ್ರೀಯರ ಮೇಲೆ ಅತ್ಯಾಚಾರ ನಡೆಸಿ ಪ್ರತೀಕಾರ ತೀರಿಸಿಕೊಳ್ಳುತ್ತಾರೆ.

ದಲಿತರ ಬಡತನಕ್ಕೆ, ಅಮಾಯಕತ್ವಕ್ಕೆ ಮತ, ಧರ್ಮಗಳ ಮೌಢ್ಯ ತುಂಬಿ ಮುಗ್ಧ ಹಾಲುಗಲ್ಲದ ಹಸು ಕಂದಮ್ಮಗಳಾದ ದಲಿತ ಹೆಣ್ಣು ಮಕ್ಕಳನ್ನು ಗ್ರಾಮದಲ್ಲಿನ ದೇವರೊಂದಿಗೆ ವಿವಾಹ ಮಾಡಿಸಿ ಮೇಲ್ಜಾತಿಯ ಜನ ತಮ್ಮ ಕಾಮ ತೀಟೆ ತೀರಿಸಿಕೊಳ್ಳುವ ಯಂತ್ರಗಳನ್ನಾಗಿ ಮಾಡಿಕೊಂಡಿದ್ದಾರೆ. ಜೀವನದಲ್ಲಿಯೇ ಮದುವೆ ಆಗುವಂತಹ ಅವಕಾಶವೇ ಇಲ್ಲದಂತೆ ಮಾಡುತ್ತಾರೆ. ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿಯೂ ದಾಸಿ, ದೇವದಾಸಿ, ಜೋಗಿ, ಬಸವಿ, ಮಾತಂಗಿ, ಬಾನಾಮತಿಗಳೆಂದು ಕರೆಯಲಾಗುವ ಇಂತಹ ದಲಿತ ಸ್ತ್ರೀಯರಿಗೆ ಹುಟ್ಟುವ ಸಂತಾನಕ್ಕೆ ತಂದೆ ಯಾರೆಂದು ಹೇಳಿಕೊಳ್ಳಲಾಗದಂತಹ ಮಾನಸಿಕ ಸಂಕ್ಷೋಭೆಗೊಳಗಾಗಿ ಭಾವನೆಗಳಿಲ್ಲದೆ ಬದುಕುತ್ತಿದ್ದಾರೆ.

ದಲಿತರು ಮತ್ತು ನ್ಯಾಯಾಲಯಗಳು

ದಲಿತರು ಮೇಲ್ಜಾತಿಯವರ ದೌರ್ಜನ್ಯಗಳಿಗೆ, ಅತ್ಯಾಚಾರಗಳಿಗೆ ಗುರಿಯಾದಾಗ ಪೊಲೀಸ್ ಠಾಣೆಯವರೆಗೆ ಬರುವ ಕೇಸುಗಳು ಕಡಿಮೆಯಾದರೂ ಬಂದಂತಹ ಕೇಸುಗಳು ಜಾಸ್ತಿಯಿವೆ. ಬಗೆಬಗೆಯ ಹೆದರಿಕೆ, ಬೆದರಿಕೆಗಳನ್ನು ತಡೆದುಕೊಂಡು ಕೆಲ ಕೇಸುಗಳು ನ್ಯಾಯಾಲಯಕ್ಕೆ ಬಂದರೆ, ನ್ಯಾಯಾಲಯಗಳು ಉಳ್ಳವರ ಪರವಾಗಿ, ಮೇಲ್ಜಾತಿಯ ಪರವಾಗಿಯೇ (ಅ) ನ್ಯಾಯ ನೀಡುತ್ತಿರುವುದನ್ನು ನೋಡುತ್ತಿದ್ದೇವೆ.

ರಾಜಾಸ್ತಾನದಲ್ಲಿ ಬನವಾರಿ ದೇವಿ ಎಂಬ ಗ್ರಾಮ ಸೇವಕಿಯಾದ ದಲಿತ ಮಹಿಳೆ ಮೇಲ್ಜಾತಿಯವರ ಮನೆಯಲ್ಲಿ ನಡೆಯುತ್ತಿದ್ದ ಬಾಲ್ಯ ವಿವಾಹವನ್ನು ಕುರಿತು ಅಧಿಕಾರಿಗಳಿಗೆ ತಿಳಿಸಿದ ಕಾರಣಕ್ಕೆ ಸಾಮೂಹಿಕ ಅತ್ಯಾಚಾರಕ್ಕೆ ಗುರಿಯಾಗಿದ್ದಾರೆ. ನ್ಯಾಯಾಲಯದಲ್ಲಿ ಕೇಸು ನಡೆದು ವಾದ-ಪ್ರತಿವಾದಗಳನ್ನು ಕೇಳಿಸಿಕೊಂಡ ನ್ಯಾಯಾಧೀಶ ಮೇಲ್ಜಾತಿಯ ಗಂಡಸರು ಒಬ್ಬ ಅಸ್ಪೃಶ್ಯ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿದ್ದಾರೆಂದರೆ ನಂಬಲು ಅಸಾಧ್ಯವೆಂದು ಹೇಳಿದ್ದಾರೆ. ದಲಿತರ ಮೇಲೆ ನಡೆದ ಪ್ರತಿಯೊಂದು ಪ್ರಕರಣಗಳನ್ನ ಅವಮಾನ ಅತ್ಯಾಚಾರದ ಕೇಸುಗಳು ನ್ಯಾಯಾಲಯಗಳಲ್ಲಿ ನಂಬಲು ಸಾಧ್ಯವೇ ಇಲ್ಲ, ಏಕೆಂದರೆ ನ್ಯಾಯಾಧೀಶನ ಜಾತಿವಾದಿ ಮನಸ್ಸು ಒಪ್ಪಿಕೊಳ್ಳುವುದಿಲ್ಲ, ಇನ್ನು ಶಿಕ್ಷೆ ವಿಧಿಸುವುದಂತೂ ಕನಸಿನ ಮಾತೇ ಸರಿ. ಇದುವರೆಗೂ ಒಂದೇ ಒಂದು ದೌರ್ಜನ್ಯದ ಕೇಸುಗಳಲ್ಲಿ ಶಿಕ್ಷೆಯಾದ ಉದಾಹರಣೆಗಳೇ ಇಲ್ಲ, ಕಾರಂಚೇಡು, ಕಂಬಾಲಪಲ್ಲಿ, ವಣೇನೂರು, ನಾಗಲಾಪಲ್ಲಿ, ಬದನವಾಳ, ತತ್ತೂರು, ಬೆಂಡಿಗೆರೆ ಒಂದೇ, ಎರಡೇ ? ನ್ಯಾಯಾಲಯಗಳಲ್ಲಿ ನ್ಯಾಯವೇ ದೊರೆಯದೇ ಹೋದರೆ ದಮನಿತರು ನಂಬುವುದಾದರೂ ಯಾರನ್ನ?

ರಾಜಾಸ್ತಾನದಲ್ಲಿ ಬನವಾರಿ ದೇವಿ ಎಂಬ ಗ್ರಾಮ ಸೇವಕಿಯಾದ ದಲಿತ ಮಹಿಳೆ ಮೇಲ್ಜಾತಿಯವರ ಮನೆಯಲ್ಲಿ ನಡೆಯುತ್ತಿದ್ದ ಬಾಲ್ಯ ವಿವಾಹವನ್ನು ಕುರಿತು ಅಧಿಕಾರಿಗಳಿಗೆ ತಿಳಿಸಿದ ಕಾರಣಕ್ಕೆ ಸಾಮೂಹಿಕ ಅತ್ಯಾಚಾರಕ್ಕೆ ಗುರಿಯಾಗಿದ್ದಾರೆ. ನ್ಯಾಯಾಲಯದಲ್ಲಿ ಕೇಸು ನಡೆದು ವಾದ-ಪ್ರತಿವಾದಗಳನ್ನು ಕೇಳಿಸಿಕೊಂಡ ನ್ಯಾಯಾಧೀಶ ಮೇಲ್ಜಾತಿಯ ಗಂಡಸರು ಒಬ್ಬ ಅಸ್ಪೃಶ್ಯ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿದ್ದಾರೆಂದರೆ ನಂಬಲು ಅಸಾಧ್ಯವೆಂದು ಹೇಳಿದ್ದಾರೆ. ದಲಿತರ ಮೇಲೆ ನಡೆದ ಪ್ರತಿಯೊಂದು ಪ್ರಕರಣಗಳನ್ನ ಅವಮಾನ ಅತ್ಯಾಚಾರದ ಕೇಸುಗಳು ನ್ಯಾಯಾಲಯಗಳಲ್ಲಿ ನಂಬಲು ಸಾಧ್ಯವೇ ಇಲ್ಲ. ಏಕೆಂದರೆ ನ್ಯಾಯಾಧೀಶನ ಜಾತಿವಾದಿ ಮನಸ್ಸು ಒಪ್ಪಿಕೊಳ್ಳುವುದಿಲ್ಲ.

ದಲಿತರು ಮತ್ತು ಮೀಸಲಾತಿ

೧೯೨೦ರಿಂದ ನಮ್ಮ ದೇಶದ ಕೆಲ ಪ್ರಾಂತ್ಯಗಳಲ್ಲಿ ಹಿಂದುಳಿದ ಜಾತಿಗಳಿಗೆ ಮೀಸಲಾತಿ ಆರಂಭವಾಗಿದೆ. ೧೯೪೩ರಲ್ಲಿ ದಮನಿತ ಜಾತಿಗಳಿಗೆ ವಿದ್ಯೆ ಉದ್ಯೋಗಗಳಲ್ಲಿ ಮೀಸಲಾತಿ ಕಲ್ಪಿಸಿದ್ದಾರೆ. ನಮ್ಮ ಸಂವಿಧಾನದ ಕಾಯ್ದೆ ೨೪೩ರ ಅಡಿ ಪರಿಶಿಷ್ಟ ಜಾತಿಗಳಿಗೆ ಉದ್ಯೋಗ, ವಿದ್ಯಾರಂಗಗಳಲ್ಲಿ ಮೀಸಲಾತಿಯನ್ನು ಕಲ್ಪಿಸಿದ್ದಾರೆ. ಅದರಿಂದಾಗಿ ಅನೇಕ ಜನ ದಲಿತರು, ಆದಿವಾಸಿಗಳು ವಿದ್ಯೆ, ಉದ್ಯೋಗಾವಕಾಶಗಳು ಸಿಕ್ಕಿವೆ. ಆ ಕಾನೂನು ಬದ್ಧವಾದ ಹಕ್ಕುಗಳನ್ನೂ ಸಹ ನಿರಾಕರಿಸುತ್ತಿರುವ ಮೇಲ್ಜಾತಿಯ ಅಧಿಕಾರಿಗಳು ಮೀಸಲಾತಿಯನ್ನು ಕಣ್ಮರೆಯಾಗಿಸುವ ವಿವಿಧ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ.

ಅನೇಕ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿ ವ್ಯಕ್ತಿಗಳಿಗೆ ನೀಡುವುದು, ಬಿಡಿಗಾಸಿಗೆ ಮಾರುವುದು ನಡೆಯುತ್ತಿದೆ. ಸರ್ಕಾರಗಳ ಅಧೀನದಲ್ಲಿದ್ದ ವಿದ್ಯಾ ಸಂಸ್ಥೆಗಳು ಕಾಲೇಜುಗಳನ್ನು ಸಹ, ಸಹಕಾರದ ಆಧಾರದ ಮೇಲೆ ಖಾಸಗೀ ಸಂಸ್ಥೆಗಳಿಗೆ ನೀಡಿ ವಿದ್ಯೆಯನ್ನು ಕೊಳ್ಳಲಾಗದ ಎಸ್.ಸಿ, ಎಸ್.ಟಿ, ಓ.ಬಿ.ಸಿ ಗಳನ್ನು ವಿದ್ಯೆ, ಉದ್ಯೋಗಾವಕಾಶಗಳಿಂದಲೂ ದೂರವಾಗಿಸುತ್ತಿದ್ದಾರೆ.

೧೯೯೨ರಲ್ಲಿ ಮಂಡಲ್ ಕಮಿಷನ್ ಜಾರಿಗೆ ಬಂದಾಗ ಓ.ಬಿ.ಸಿಗಳಿಗೆ ಸಿಕ್ಕ ಮೀಸಲಾತಿಯನ್ನು ಸಹಿಸದ ಬಿಜೆಪಿ ಪರಿವಾರದ ಎಬಿವಿಪಿ ದೇಶವ್ಯಾಪಿಯಾಗಿ ದಲಿತ ಹಿಂದುಳಿದ ಜಾತಿಗಳ ಮೇಲೆ ಅನೇಕ ದೌರ್ಜನ್ಯಗಳನ್ನು ನಡೆಸಿದ್ದಾರೆ. ಮಂಡಲ್ ಆಯೋಗ ಜಾರಿಗೆ ಬರದಂತೆ ತಡೆಯಲು ಅಡ್ವಾಣಿ ರಥ ಯಾತ್ರೆಯನ್ನು ಆರಂಭಿಸಿ ದೇಶದಲ್ಲಿ ಜಾತಿಮತಗಳ ನಡುವೆ ಕೋಮುಜ್ವಾಲೆಯ ಗಲಭೆಗಳನ್ನು ಸೃಷ್ಟಿಸಿದ್ದಾರೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳಿಂದಾಗಿ ಮೀಸಲಾತಿ ಎಂಬ ಮಾಯಾ ಮರೀಚಿಕೆ ಮರೀಚಿಕೆಯಾಗಿಯೇ ಉಳಿದಿದೆ.

ದಲಿತರು ಮತ್ತು ಜಾಗತೀಕರಣ

ವಿದೇಶೀ ಕೃಪಾಪೋಷಿತ ಕೇಂದ್ರ-ರಾಜ್ಯ ಸರ್ಕಾರಗಳ ಆಳುವವರು ಗುಡಿ, ಗೃಹ ಕೈಗಾರಿಕೆಗಳಿಗೆ ಕುಲ ಕಸುಬುಗಳಿಗೆ ನೀಡುತ್ತಿದ್ದ ಸಬ್ಸಿಡಿಗಳನ್ನು ತೆಗೆದುಹಾಕಿ ಬಹುರಾಷ್ಟ್ರೀಯ ಕಂಪನಿಗಳ ಸ್ವಾಗತಕ್ಕೆ ಕೆಂಪು ಹಾಸು ಹಾಸುತ್ತಿದ್ದಾರೆ. ಇದರ ಫಲವಾಗಿ ಗುಡಿ, ಗೃಹ ಕೈಗಾರಿಕೆ ನಡೆಸುತ್ತಿದ್ದ ಜನರಿಗೆ ಅರೆ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ವೃತ್ತಿಗಳೂ ಸಹ ಇಲ್ಲವಾಗಿವೆ. ಹಸಿವಿನ ಸಾವುಗಳಿಗೆ, ಆತ್ಮಹತ್ಯೆಗಳಿಗೆ ಬಲಿಯಾಗುತ್ತಿದ್ದಾರೆ.

ಗುಡಿ, ಗೃಹ ಕೈಗಾರಿಕೆಯಲ್ಲಿ ತಯಾರಾದ ವಸ್ತುಗಳು ಸಾಮ್ರಾಜ್ಯಶಾಹಿ ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸಲಾಗದೆ ಸಬ್ಸಿಡಿಗಳಿಲ್ಲದೆ ನಲುಗುತ್ತಿವೆ. ಇಪ್ಪತ್ತು ಕೋಟಿಗೂ ಅಧಿಕ ಸಂಖ್ಯೆಯ ಜನ ಸೂರಿಲ್ಲದೆ ಬೀದಿಯಲ್ಲೇ ಇದ್ದಾರೆ. ೨೫ ಕೋಟಿ ಜನರಿಗೆ ಮೂರು ಹೊತ್ತಿಗೆ ಕೂಳಿಲ್ಲ. ಶೇ ೫೦ಕ್ಕಿಂತ ಅಧಿಕ ಸಂಖ್ಯೆಯ ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. ಇದಲ್ಲದೇ ಕರ್ನಾಟಕ ರಾಜ್ಯವೊಂದರಲ್ಲೇ ಸುಮಾರು ೩ ಲಕ್ಷಕ್ಕೂ ಅಧಿಕ ಕೈಮಗ್ಗಗಳು ಕಣ್ಣು ಮುಚ್ಚಿಕೊಂಡಿವೆ. ಉದಾರೀಕರಣ ಆರ್ಥಿಕ ನೀತಿಯಿಂದಾಗಿ ಸ್ವದೇಶಿ ಕೈಗಾರಿಕೆಗಳು ನಾಶವಾಗಿ ವಿದೇಶೀ ದಣಿಗಳ ಕೈಕೆಳಗೆ ಕೆಲಸ ಮಾಡಬೇಕಾಗಿದೆ.

ಜೀತದಾಳುಗಳಾಗಿ ಹಸಿವಿನ ಬಾಧೆಯಿಂದ ಸಾಯಬೇಕಾಗಿದೆ. ೫೦ ಲಕ್ಷಕ್ಕೂ ಅಧಿಕ ಅಗಸರು ಬಟ್ಟೆ

ತೊಳೆಯುವ ಕಾಯಕದಿಂದ ಜೀವನ ನಡೆಸುತ್ತಿದ್ದರು. ಆದರೆ ಇಂದು ನೀರು, ಮೂಲಭೂತ ಸೌಕರ್ಯಗಳಾದ ದೋಬಿಘಾಟ್‌ಗಳಿಲ್ಲದೆ ಕೆಲಸ ನಡೆಯದೆ ಇನ್ನೊಬ್ಬರ ಕೈಕೆಳಗೆ ಜೀವಿಸಬೇಕಾಗಿದೆ. ವಾಷಿಂಗ್ ಮಿಷನ್ ಅಗಸರ ಹೊಟ್ಟೆಯನ್ನು ಹೊಡೆದಿದೆ. ಇನ್ನೊಂದು ಕಡೆ ನಗರಗಳಲ್ಲಿ ಲಕ್ಷಾಂತರ ರೂ ಖರ್ಚು ಮಾಡಿ ಹಣವಂತರು ನಡೆಸುವ ಹೈಟೆಕ್ ಡ್ರೈಕ್ಲೀನರ್ ಶಾಪ್, ಎಲೆಕ್ಟ್ರಿಕಲ್ ಡ್ರೈ ಕ್ಲೀನರ್ ಅಂಗಡಿಗಳ ಫ್ಯಾಷನ್ ಪೈಪೋಟಿಯಲ್ಲಿ ಕಡಿಮೆ ಕೂಲಿಗೆ ಬಟ್ಟೆ ಒಗೆಯುವ ಕೆಲಸ ಮಾಡಬೇಕಿದೆ. ಇದಲ್ಲದೇ ಕುಂಬಾರಿಕೆ, ಕಂಬಾರಿಕೆ, ನೇಕಾರಿಕೆ, ಚಪ್ಪಲಿ ಹೊಲೆಯುವುದು, ಪೊರಕೆ ತಯಾರಿಸುವುದು, ಬುಟ್ಟಿ ಹೆಣೆಯುವುದು, ಕ್ಷೌರಿಕರಲ್ಲದ ಮತ್ತಿತರ ವೃತ್ತಿಯ ಜನರು ಜಾಗತೀಕರಣದ ಅಡಿಯಲ್ಲಿ ಇಂದು ನಲುಗುತ್ತಿದ್ದಾರೆ.

ಇವು ನಮ್ಮ ಕಣ್ಣ ಮುಂದಿನ ಕೆಲವು ಸ್ಯಾಂಪಲ್‌ಗಳು ಮಾತ್ರ. ಅದೆಷ್ಟೋ ಅಗಣಿತ ಸತ್ಯಗಳು ಕಣ್ಣಿಗೆ ಕಾಣುವುದೇ ಇಲ್ಲ. ದಲಿತ ದಮನಿತರಿಗೆ ಸಂಕಷ್ಟಗಳ ಮೇಲೆ ಸಂಕಷ್ಟಗಳು ಬರುತ್ತಲೇ ಇವೆ, ಬಡವರ ಬದುಕು ಬರಡಾಗುತ್ತಿವೆ. ದಮನಿತರಿಗೆ ಬದುಕುವ ಆಸೆಗಳೇ ಕಮರಿಹೋಗುತ್ತಿವೆ. ಎಲ್ಲಾ ಕ್ಷೇತ್ರಗಳಲ್ಲೂ ಎಲ್ಲೆ ಮೀರಿದ ದೌರ್ಜನ್ಯಗಳು ನಡೆಯುತ್ತಿವೆ. ದಮನಿತರ ಆಶಾಕಿರಣಗಳು ವಿಕಿರಣಗಳಾಗಿ ನಮ್ಮ ವಿರುದ್ಧವೇ ನಿಂತು ವ್ಯವಸ್ಥೆಯೊಳಗೆ ಅವಿತುಕೊಳ್ಳುತ್ತಿವೆ.

> ದಲಿತ ದಮನಿತರಿಗೆ ಸಂಕಷ್ಟಗಳ ಮೇಲೆ ಸಂಕಷ್ಟಗಳು ಬರುತ್ತಲೇ ಇವೆ, ಬಡವರ ಬದುಕು ಬರಡಾಗುತ್ತಿವೆ. ದಮನಿತರಿಗೆ ಬದುಕುವ ಆಸೆಗಳೇ ಕಮರಿಹೋಗುತ್ತಿವೆ. ಎಲ್ಲಾ ಕ್ಷೇತ್ರಗಳಲ್ಲೂ ಎಲ್ಲೆ ಮೀರಿದ ದೌರ್ಜನ್ಯಗಳು ನಡೆಯುತ್ತಿವೆ. ಹಿರಿಯ ಚೇತನಗಳು ಕನಸಿದ ಆಶಯಗಳೇ ನಾಶವಾಗುತ್ತಿವೆ. ಆಕಾಶವನ್ನೇ ಭೂಮಿಗಿಳಿಸುವ ಕಾಯಕದಲ್ಲಿ ಸ್ವಯಂ ಸೇವಾ ಸಂಸ್ಥೆಗಳು, ಸಮುದಾಯದ ಸೇವೆಗಿಂತ ಸ್ವಯಂಗೇ ಒತ್ತು ನೀಡುತ್ತಿರುವುದು ಹಗಲಿನಷ್ಟೇ ಸತ್ಯ. ಕ್ರಾಂತಿ ಬದಲಾವಣೆ ಬಯಸಿ ಧಿಕ್ಕಾರ ಕೂಗುತ್ತಿದ್ದ ನಾಯಕರ ಬಾಯಲ್ಲೀಗ ಸುಧಾರಣೆಗಳ ಪುರಾಣಗಳು ಪುಂಕಾನುಪುಂಕವಾಗಿ ಹರಿಯುತ್ತಿದೆ.

ಹಿರಿಯ ಚೇತನಗಳು ಕನಸಿದ ಆಶಯಗಳೇ ನಾಶವಾಗುತ್ತಿವೆ. ಆಕಾಶವನ್ನೇ ಭೂಮಿಗಿಳಿಸುವ ಕಾಯಕದಲ್ಲಿ ಸ್ವಯಂ ಸೇವಾ ಸಂಸ್ಥೆಗಳು, ಸಮುದಾಯದ ಸೇವೆಗಿಂತ ಸ್ವಯಂಗೇ ಒತ್ತು ನೀಡುತ್ತಿರುವುದು ಹಗಲಿನಷ್ಟೇ ಸತ್ಯ. ಕ್ರಾಂತಿ ಬದಲಾವಣೆ ಬಯಸಿ ಧಿಕ್ಕಾರ ಕೂಗುತ್ತಿದ್ದ ನಾಯಕರ ಬಾಯಲ್ಲೀಗ ಸುಧಾರಣೆಗಳ ಪುರಾಣಗಳು ಪುಂಕಾನು ಪುಂಕವಾಗಿ ಹರಿಯುತ್ತಿದೆ. ಅನ್ನವಿಲ್ಲದೇ ಹಸಿವಿನ ಬಾಧೆ ತಾಳಲಾರದೆ ಆತ್ಮಹತ್ಯೆಗೆ ಮುಂದಾಗುತ್ತಿರುವ ಜನರ ಮೇಲಿಂದು ಎಲ್ಲೆ ಮೀರಿ ದೌರ್ಜನ್ಯಗಳು ನಡೆಯುತ್ತಿವೆ. ಸಾವು ಬದುಕಿನ ನಡುವೆ ಹೋರಾಟದ ಜೀವನೋತ್ಸಾಹದೊಂದಿಗೆ. □



ಕಂಗಾಲು

ಬೇಡವೇ ಬೇಡವೆಂದರೂ
ಕಟ್ಟೆಚ್ಚರ ಪದ್ಯದಲ್ಲಿ
ತುರುಕಿಕೊಳ್ಳುವ ಅವಳು
ಈಚೆಗೆ ನಿದ್ದೆಗೆಡಿಸಿ
ಕಾಡುವುದು ಕಮ್ಮಿ

ಹಗಲ ಬೇಸರದುದ್ದ
ಸರೀಹೊತ್ತಿನ ತನಕ
ಮಾತಾಗುವ ಇವಳು
ಪಿಸು ಪಿಸುವೆ
ಸ್ಖಲನಕ್ಕೆ ಆಯವ್ಯಯ
ದನಿಯುತ್ತಾಳೆ

ಖುದ್ದು ಮೊಕ್ಕಾಮು ಸಿಕ್ಕಾಗ
ಇವಳ ತೆಕ್ಕೆಯ ಕಿವಿಗೆ
ಅವಳ ಹೆಸರನ್ನುಸುರಿ
ತಡವರಿಸಿದರೂ
ತುಸು ಉಮ್ಮಳ ತೋರದೆ
ಮನ್ನಿಸುತ್ತಾಳೆ

ಎದೆಗಾನಿಸಿ ರಮಿಸಿ
ಒಮ್ಮೆ ತಾನೂ
ಒಂದು
ಸಾಲೋ
ಪದವೋ
ಅದೇನೆಂದು ನಂಬಿ
ಹಾತೊರೆಯುತ್ತಾಳೆ

ಈ ನಡುವೆ
ಪ್ರೀತಿ ಅಂದರೆ
ತಂತಾನೇ ನುಸುಳುವ ಅವಳೋ
ಆಗಾಗ್ಗೆ ಆಗಬಯಸುವ ಇವಳೋ -
ಅಂತ ದ್ವಂದ್ವದಲ್ಲಿ ಕಂಗಾಲಿಡುತ್ತದೆ ಮನಸ್ಸು

○ ನಾಗರಾಜ ವಸ್ತಾರೆ

ಹೊಸ ಪುಸ್ತಕ



ಬಂಡಾಯ (ಮುಸ್ಲಿಂ ಸಂವೇದನೆ)

ಲೇ. ಕೆ. ಷರೀಫಾ

ಬೆಲೆ : ರೂ. ೮೦/-

ಆಧುನಿಕ ಕನ್ನಡ ಸಾಹಿತ್ಯದ ಪರಿಕಲ್ಪನೆಗಳಲ್ಲಿ ಮುಸ್ಲಿಂ ಸಂವೇದನೆಯೂ ಒಂದು. ಆ ಮುಸ್ಲಿಂ ಸಂವೇದನೆಯ ಆಳವಾದ ಒಳನೋಟ ಈ ಕೃತಿಯಲ್ಲಿದೆ.

ನಾಡಿನಲ್ಲಿ ಹಾಗೂ ನಾಡಿನಾಚೆ ಎದುರಿಸಿದ ಸಂಕಷ್ಟಗಳು, ಅಲ್ಪಸಂಖ್ಯಾತರು ಅನುಭವಿಸಿದ ಸಂದಿಗ್ಧಗಳು, ಮುಜುಗರದ ಸನ್ನಿವೇಶಗಳು ಹಾಗೂ ಅವರ ಸಾಹಿತ್ಯ ಲೋಕದಲ್ಲಿ ದಾಖಲಾದ ಸಾಂಸ್ಕೃತಿಕ ಲೋಕದ ಬಗ್ಗೆ, ಬದುಕಿನ ಬಗ್ಗೆ ಇಲ್ಲಿಯ ಲೇಖನಗಳು ಚರ್ಚಿಸಿವೆ.

ಪ್ರಕಾಶಕರು : ಸಿ.ವಿ.ಜಿ. ಪಬ್ಲಿಕೇಷನ್, ನಂ. ೭೦, ೨ನೇ ಮುಖ್ಯರಸ್ತೆ, ಜಬ್ಬಾರ್ ಬ್ಲಾಕ್, ವೈಯಾಲಿಕಾವಲ್, ಬೆಂಗಳೂರು - ೦೩.

ವಿಜಲುಗಳು

ಲೇ. ಡಾ|| ಜಾಜಿ ದೇವೇಂದ್ರಪ್ಪ

ಬೆಲೆ : ರೂ. ೪೦/-

'ವಿಜಲುಗಳು' ಕವಿ ಜಾಜಿ ದೇವೇಂದ್ರಪ್ಪನವರ ಒಂದು ಕವನ ಸಂಕಲನ.

ಇಲ್ಲಿಯ ಕವಿತೆಗಳ ನಾಯಕನು ಬರಿಯ ಪ್ರೇಮಿಯಲ್ಲ, ಒಂದು ಬಗೆಯ ಹಠವಾದಿ ಕೂಡ. ಪ್ರಿಯತಮೆ ನಿರಾಕರಿಸಿರುವ ಸ್ಥಿತಿಯಲ್ಲಿಯೂ ಅವಳನ್ನು ಬಗೆಬಗೆಯ ಭಾವಗಳಲ್ಲಿ, ಬಗೆಯ ವಿಧಗಳಲ್ಲಿ ನೆನೆಯುತ್ತಾನೆ. ತನ್ನ ಪ್ರಿಯತಮೆಯನ್ನು ಕುರಿತು ಅವನು ಆಡುವ ಮಾತುಗಳಲ್ಲಿ ಬಹಳ ಹೊಸತಾದ ಕಲ್ಪನೆಗಳಿವೆ. ಕವಿತೆಯ ಸಾಲುಗಳು ಸಹಜ, ಸರಳವಾಗಿದ್ದರೂ ಅವುಗಳಲ್ಲಿ ಪ್ರೇಮದ ಹೊಸ ಪರಿಭಾಷೆಯಿದೆ.

ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕ, ಸಿರುಗುಪ್ಪ



ಮುತ್ತೆತ್ತೂರಿನ ದರ್ಗಾ

ಲೇ. ಕಿದೂರು ವೇಣುಗೋಪಾಲ ಶೆಟ್ಟಿ

ಬೆಲೆ : ರೂ. ೪೫/-

ಕತೆಗಾರ ವೇಣುಗೋಪಾಲರು ತಮ್ಮ ಬದುಕಿನಲ್ಲಿ ಕಂಡುಂಡ ನೋವು-ನಲಿವುಗಳು ಇಲ್ಲಿನ ಕತೆಗಳನ್ನು ರೂಪಿಸಿವೆ.

ಈ ಕತೆಗಳಲ್ಲಿ ಜೀವನ ಪ್ರೀತಿ ಇದೆ; ಪ್ರಗತಿಪರ ಚಿಂತನೆ ಇದೆ.

ಹದಗೆಡುತ್ತಿರುವ ಕೋಮುಸೌಹಾರ್ದ 'ಮುಸ್ಲಿಯಾರ್', 'ಮುತ್ತೆತ್ತೂರಿನ ದರ್ಗಾ' ಕತೆಗಳ ವಸ್ತು. ಕೋಮು ಸಂಬಂಧಗಳು ಹಾಳಾಗುತ್ತಿರುವುದನ್ನು ಕುರಿತ ವಿಷಾದ ಈ ಎರಡು ಕತೆಗಳಲ್ಲಿ ಕಾಣಬಹುದು.

ಪ್ರಕಾಶಕರು : ಪುಸ್ತಕ ನಿಧಿ, ಗಾವಳಿ, ಕುಂದಾಪುರ ತಾಲ್ಲೂಕು



ಗೊಂಗಡಿ

ಲೇ. ಉತ್ತನೂರು ರಾಜಮ್ಮ ವಿ. ಶೆಟ್ಟಿ

ಬೆಲೆ : ರೂ. ೮೦/-

ಹಳ್ಳಿ ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿರುವ ಬಡತನ, ಕ್ಷಾಮ, ಹಬ್ಬ-ಹರಿದಿನ, ಜಾತ್ರೆ, ಜಾನಪದ ಹೇಳಿಕೆ, ಹದಿಹರೆಯದವರ ಪ್ರೀತಿ ಪ್ರೇಮ, ತಲೆಮಾರುಗಳ ಅಂತರ ಇತ್ಯಾದಿಯನ್ನು ತಮ್ಮ ವಿಶೇಷ ಗ್ರಾಮ್ಯ ಭಾಷೆಯಲ್ಲಿ ಲೇಖಕರು ಸೆರೆ ಹಿಡಿದಿರುವುದನ್ನು ಈ ಕಾದಂಬರಿಯಲ್ಲಿ ನೋಡಬಹುದು.

ಹಳ್ಳಿ ಸಂಸ್ಕೃತಿ ನಶಿಸಿ ಹೋಗುತ್ತಿರುವ ಈ ಹೊತ್ತಿನಲ್ಲಿ ಅಂತರ್ಯದ ಮಿಡಿತಗಳು ಈ ಕೃತಿಯಲ್ಲಿ ವಿಶೇಷವಾಗಿ ಅನಾವರಣಗೊಂಡಿವೆ. ರಾಜಮ್ಮನವರ ಸಾಹಿತ್ಯಶಕ್ತಿ ಮತ್ತು ಈ ಕೃತಿಯ ಜೀವಾಳವೂ ಅದೇ ಆಗಿದೆ.

ಪ್ರಕಾಶಕರು : ಅಂಗಳ ಪ್ರಕಾಶನ, ಅಂಜನಿ ಬಡಾವಣೆ, ಚಿಂತಾಮಣಿ - ೫೬೩ ೧೨೫



ಅನೇಕ

ಲೇ. ಡಿ.ಎಸ್. ನಾಗಭೂಷಣ

ಬೆಲೆ : ರೂ. ೧೨೫/-

ನಮ್ಮ ನಡುವಿನ ಅಪರೂಪದ ಚಿಂತಕ-ವಿಮರ್ಶಕ ಡಿ.ಎಸ್.ನಾಗಭೂಷಣ ಅವರು ಬಹುಕಾಲದ ನಂತರ ತಂದಿರುವ ಪುಸ್ತಕ ಇದು. ಸಾಹಿತ್ಯ ವಿಮರ್ಶೆ ಮತ್ತು ಸಾಮಾಜಿಕ ವಿಚಾರಗಳ ವಿಶ್ಲೇಷಣೆ ಇಲ್ಲಿನ ಲೇಖನಗಳಲ್ಲಿ ಇದೆ. ಬಹುತೇಕ ಲೇಖನಗಳು ಆಯಾ ಸಂದರ್ಭದಲ್ಲಿ ಬರೆದವುಗಳಾಗಿದ್ದರೂ, ಸಾರ್ವಕಾಲಿಕ ಆಯಾಮವನ್ನು ಹೊಂದಿವೆ. ಸಾಹಿತ್ಯ ಮತ್ತು ಸಾಮಾಜಿಕ ಚಿಂತಕರಿಗೆ ಇದೊಂದು ಆಕರ ಗ್ರಂಥ.

ಪ್ರಕಾಶಕರು : ಲೋಹಿಯಾ ಪ್ರಕಾಶನ, ಬಳ್ಳಾರಿ.

ಕುವೆಂಪು

ಸಂ. ಡಿ.ಎಸ್.ನಾಗಭೂಷಣ

ಬೆಲೆ : ರೂ. ೧೫೦/-

ಹೊಸಗನ್ನಡ ಲೇಖಕರಲ್ಲಿ ಅಗ್ರಗಣ್ಯರಾದ ದಾರ್ಶನಿಕ ಕವಿ ಕುವೆಂಪು ಸಮಾಜದ ಮೇಲೆ ಉಂಟುಮಾಡಿದ ಸಾಹಿತ್ಯದ- ಸಾಮಾಜಿಕ ಹಾಗೂ ಸಂಸ್ಕೃತಿ ತಲ್ಲಣಗಳು ಅಪಾರ. ಅವರ ಆದರ್ಶ-ಕನಸುಗಳು ಈಗಲೂ ಕ್ರಿಯಾಶೀಲವಾಗಿದ್ದು ನಾಡು-ನುಡಿ ಕಟ್ಟುವ ಕ್ರಿಯಾಶೀಲರ ಚೇತನವಾಗಿವೆ. ಕುವೆಂಪು ಅವರ ಮಹಾನ್ ವ್ಯಕ್ತಿತ್ವವನ್ನು ಪರಿಚಯಿಸುವ ವಿಶ್ಲೇಷಿಸುವ ವಿವಿಧ ಲೇಖಕರ ಲೇಖನಗಳ ಅನನ್ಯ ಸಂಗ್ರಹ ಇದು.

ಪ್ರಕಾಶಕರು : ಲೋಹಿಯಾ ಪ್ರಕಾಶನ, ಬಳ್ಳಾರಿ.



'SAMVADA' Kannada Monthly. MAY. 2005 RNI-KAR KAN/2002/9246 CPMG/KA/BGW-706/2003-05

ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಸಮರ್ಥ ವಿಶ್ಲೇಷಣೆಗಾಗಿ

ವಿಚಾರಶೂನ್ಯವಾಗುತ್ತಿರುವ ಸಮಾಜದ ಜಾಗೃತಿಗಾಗಿ

ಎಲ್ಲ ಜನವರ್ಗಗಳ ಅಭಿವ್ಯಕ್ತಿ ವೇದಿಕೆಯಾಗಿ

ಇಂದೇ ಚಂದಾದಾರರಾಗಿ

ಸಂವಾದ

ಶೋಷಣೆ ಮುಕ್ತ ಸಮಾಜಕ್ಕಾಗಿ

'ಸಂವಾದ' ಮಾಸಪತ್ರಿಕೆ, ಸ್ಫೂರ್ತಿಧಾಮ, ಅಂಜನಾನಗರ, ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧